# ರಾಷ್ಟ್ರೀಯ ಶಿಕ್ಷಣ ನೀತಿ – 2020

## (ಕನ್ನಡ ಅವತರಣಿಕೆ)

**ಸಮಗ್ರ ಶಿಕ್ಷಣ ಕರ್ನಾಟಕ**


ರಾಜ್ಯ ಯೋಜನಾ ನಿರ್ದೇಶಕರ ಕಛೇರಿ

ನೃಪತುಂಗ ರಸ್ತೆ, ಬೆಂಗಳೂರು– 560 001

# ಸಲಹೆ ಮತ್ತು ಮಾರ್ಗದರ್ಶನ



**ಮಾನ್ಯ ಶ್ರೀ. ನರೇಂದ್ರ ಮೋದಿ**
ಪ್ರಧಾನ ಮಂತ್ರಿಗಳು
ಭಾರತ ಸರ್ಕಾರ



**ಮಾನ್ಯ ಶ್ರೀ. ಬಸವರಾಜ ಬೊಮ್ಮಾಯಿ**
ಮುಖ್ಯ ಮಂತ್ರಿಗಳು
ಕರ್ನಾಟಕ ಸರ್ಕಾರ


## ಕೃತಜ್ಞತೆಗಳು

**ಶ್ರೀ. ಪುಟ್ಟು ಕುಲಕರ್ಣಿ**
ಸಂಪಾದಕರು, ಅಖಿಲ ಭಾರತ ಪತ್ರಿಕೆ,
ಅರಬಿಂದೋ ಆಶ್ರಮ, ಕುಮಟಾ.

**ಶ್ರೀ. ನಿರಂಜನ್ ವಾನಳ್ಳಿ, ಪ್ರಾಧ್ಯಾಪಕರು**
ಡಿಪಾರ್ಟ್‌ಮೆಂಟ್ ಆಫ್ ಜರ್ನಲಿಸಂ
ಮತ್ತು ಮಾಸ್ ಕಮ್ಯುನಿಕೇಶನ್,
ಮೈಸೂರು ವಿಶ್ವವಿದ್ಯಾಲಯ, ಮೈಸೂರು.

**ಡಾ. ಮೋಹನ ಕುಂಜಾರ್ ಎ.**
ಪ್ರಾಧ್ಯಾಪಕರು & ಮುಖ್ಯಸ್ಥರು, ಭಾಷಾಂತರ ವಿಭಾಗ,
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.


**ಡಾ. ತೇಜಸ್ವಿನಿ ಯಕ್ಕುಂಡಿಮಠ,**
ವಿಶೇಷಾಧಿಕಾರಿ,
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್.

**ಡಾ. ವೀಣಾ ಎಂ.ಎಸ್,**
ಉಪನ್ಯಾಸಕರು, ಸರ್ವಜ್ಞ ಬಿ.ಎಡ್ ಕಾಲೇಜು, ಬೆಂಗಳೂರು.

**ಶ್ರೀ. ಗುರುಸ್ವಾಮಿ ಹಿರೇಮಠ,**
ಸಹಾಯಕ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.

**ಶ್ರೀಮತಿ. ರಾಧಾಮಣಿ,**
ನಿವೃತ್ತ ಪ್ರಾಂಶುಪಾಲರು, ಟಿಟಿಐ,ಬೆಂಗಳೂರು.

ಮಾನ್ಯ ಶಿಕ್ಷಣ ಸಚಿವರ ಕಾರ್ಯಾಲಯ
ವಿಧಾನ ಸೌಧ,
ಕೊಠಡಿ ಸಂಖ್ಯೆ : 262, 262ಎ,



**ಶ್ರೀ. ಬಿ.ಸಿ. ನಾಗೇಶ್**
ಪ್ರಾಥಮಿಕ, ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು
ಕರ್ನಾಟಕ ಸರ್ಕಾರ, ಬೆಂಗಳೂರು.

# ಸಂದೇಶ

ದೇಶದ ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆ ತರುವ ಉದ್ದೇಶದಿಂದ ಜಾರಿಗೊಳಿಸುತ್ತಿರುವ 'ರಾಷ್ಟ್ರೀಯ ಶಿಕ್ಷಣ ನೀತಿ-2020' ಯಲ್ಲಿರುವ ಅಂಶಗಳನ್ನು ನಾವೆಲ್ಲರೂ ಸಮರ್ಪಕವಾಗಿ ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಮೂಲ ಉದ್ದೇಶದಂತೆ ಅನುಷ್ಠಾನಗೊಳಿಸುವ ಜವಾಬ್ದಾರಿಯು ಅದರ ಪಾಲುದಾರರಾಗಿರುವ ನಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಕನ್ನಡ ಅವತರಣಿಕೆಯನ್ನು ಹೊರ ತರಲಾಗಿದೆ.

ದಿನದಿಂದ ದಿನಕ್ಕೆ ಹೊಸ ತಂತ್ರಜ್ಞಾನಗಳ ಆವಿಷ್ಕಾರ, ಸಂಶೋಧನೆಗಳು ನಡೆಯುತ್ತಿವೆ. ಮನುಷ್ಯನ ದೈನಂದಿನ ಜೀವನವನ್ನು ಉತ್ತಮಗೊಳಿಸುವ ಹಾಗೂ ಸರಳಗೊಳಿಸುವ ಪ್ರಯತ್ನಗಳು ನಡೆಯುತ್ತಲೇ ಇವೆ. ವಿಜ್ಞಾನ-ತಂತ್ರಜ್ಞಾನ ಒಳಗೊಂಡ ಭವಿಷ್ಯದ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಮೌಲ್ಯಾಧಾರಿತ ಶಿಕ್ಷಣವನ್ನು ನೀಡಬೇಕು. ಶಿಕ್ಷಣವು ಮನುಷ್ಯನನ್ನು ಉತ್ತಮ ಪ್ರಜೆಯಾಗಿ ರೂಪಿಸಬೇಕು. ಉತ್ತಮ ಸಮಾಜದ ನಿರ್ಮಾಣದೊಂದಿಗೆ, ದೇಶ ಪ್ರಗತಿ ಕಾಣಬೇಕು.

ಮುಂದಿನ 10 ವರ್ಷಗಳಲ್ಲಿ ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಬೇಕಿದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯದಂತೆ ಪಠ್ಯಕ್ರಮ ರಚನೆ, ಪಠ್ಯಪುಸ್ತಕಗಳ ಮುದ್ರಣ, ಬೋಧನೆ, ಮೌಲ್ಯಮಾಪನ ಪದ್ಧತಿಗಳಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ತರುವ ಮೂಲಕ ವಿದ್ಯಾರ್ಥಿಗಳ ಭವಿಷ್ಯ ನಿರ್ಮಾಣ ಮಾಡುವ ನಿಟ್ಟಿನಲ್ಲಿ ನಾವೆಲ್ಲರೂ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಅಗತ್ಯತೆಯಿದೆ.

ಶಿಕ್ಷಕರು, ಶಿಕ್ಷಕರನ್ನು ಸಿದ್ಧಪಡಿಸುವವರು, ಮುಖ್ಯ ಗುರುಗಳು, ಡಯಟ್ ಪ್ರಾಂಶುಪಾಲರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು, ಸಹ ನಿರ್ದೇಶಕರು, ನಿರ್ದೇಶಕರು ಸೇರಿದಂತೆ ಎಲ್ಲ ವರ್ಗದ ಅಧಿಕಾರಿ ಮತ್ತು ಸಿಬ್ಬಂದಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಓದಿ ಅರಿತುಕೊಳ್ಳಬೇಕು. ಪಾಲಕರಿಗೂ ಸಹ ನೀತಿಯ ಪ್ರಮುಖಾಂಶಗಳನ್ನು ಹಂಚಿಕೊಳ್ಳಬೇಕು. ಈ ನಿಟ್ಟಿನಲ್ಲಿ ಹೊರ ತಂದಿರುವ ಕನ್ನಡ ಅವತರಣಿಕೆಯ ಸಂಪೂರ್ಣ ಪ್ರಯೋಜನವನ್ನು ಎಲ್ಲರೂ ಹೊಂದುತ್ತಾರೆಂದು ಆಶಿಸುತ್ತೇನೆ.

ಸರ್ವರಿಗೂ ಶುಭಾಶಯಗಳು.

**ಬಿ.ಸಿ. ನಾಗೇಶ್**
ಪ್ರಾಥಮಿಕ, ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು
ಕರ್ನಾಟಕ ಸರ್ಕಾರ
ಬೆಂಗಳೂರು.

# ಪರಿವಿಡಿ


| ಕ್ರ.ಸಂ. | ವಿಷಯ ಸೂಚಿ | ಪುಟ ಸಂಖ್ಯೆ |
|---|---|---|
| | **ಭಾಗ – 1 : ಶಾಲಾ ಶಿಕ್ಷಣ** | |
| 1. | ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣ: ಕಲಿಕೆಯ ಬುನಾದಿ | 06 |
| 2. | ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನ: ಕಲಿಕೆಗೆ ತುರ್ತು ಮತ್ತು ಅವಶ್ಯಕವಿರುವ ಅಪೇಕ್ಷಿತ ಅಂಶಗಳು | 08 |
| 3. | ಶಾಲೆಬಿಟ್ಟ ಮಕ್ಕಳ ದರವನ್ನು ಕಡಿಮೆಗೊಳಿಸುವುದು ಮತ್ತು ಎಲ್ಲಾ ಹಂತಗಳಲ್ಲಿ ಶಿಕ್ಷಣದ ಸಾರ್ವತ್ರಿಕ ಲಭ್ಯತೆಯನ್ನು ಖಚಿತಪಡಿಸುವುದು. | 10 |
| 4. | ಶಾಲೆಗಳಲ್ಲಿ ಪಠ್ಯಕ್ರಮ ಮತ್ತು ಬೋಧನಾ ವಿಧಾನ:<br>ಕಲಿಕೆಯು ಸಂಪೂರ್ಣ, ಸಮಗ್ರ, ಆಹ್ಲಾದಕರ ಮತ್ತು ಭಾಗವಹಿಸುವಿಕೆಯಿಂದ ಕೂಡಿರಬೇಕು. | 12 |
| 5. | ಶಿಕ್ಷಕರು | 24 |
| 6. | ಸಮಾನ ಮತ್ತು ಸಮನ್ವಯ ಶಿಕ್ಷಣ : ಎಲ್ಲರಿಗಾಗಿ ಕಲಿಕೆ | 30 |
| 7. | ಶಾಲಾ ಸಂಕೀರ್ಣ/ಸಮೂಹಗಳ ಮೂಲಕ ಸಂಪನ್ಮೂಲಗಳ ಸದುಪಯೋಗ<br>ಮತ್ತು ಪರಿಣಾಮಕಾರಿ ಆಡಳಿತ ನಡೆಸುವುದು | 36 |
| 8. | ಶಾಲಾ ಶಿಕ್ಷಣಕ್ಕಾಗಿ ಮಾನಕಗಳ ನಿರ್ಧಾರ ಮತ್ತು ಅಂಗೀಕರಣ | 39 |
| | **ಭಾಗ – 2 : ಉನ್ನತ ಶಿಕ್ಷಣ** | |
| 9. | ಗುಣಮಟ್ಟದ ವಿಶ್ವವಿದ್ಯಾನಿಲಯಗಳು ಮತ್ತು ಮಹಾವಿದ್ಯಾಲಯಗಳು :<br>ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯ ಕುರಿತು ಒಂದು ನವೀನ ಹಾಗೂ ದೂರದರ್ಶಿತ್ವದ ದೃಷ್ಟಿಕೋನ | 42 |
| 10. | ಸಾಂಸ್ಥಿಕ ಪುನರ್‌ರಚನೆ ಮತ್ತು ಕ್ರೋಢೀಕರಣ | 44 |
| 11. | ಸಮಗ್ರ ಮತ್ತು ಬಹುಶಿಸ್ತೀಯ ಅಧ್ಯಯನದತ್ತ ಚಲನೆ | 47 |
| 12. | ಉತ್ತಮ ಕಲಿಕಾ ಪರಿಸರ ಹಾಗೂ ವಿದ್ಯಾರ್ಥಿಗಳಿಗೆ ನೆರವು | 51 |
| 13. | ಪ್ರೇರಣಾಪೂರ್ಣ, ಜ್ಞಾನಸಂಪನ್ನ ಮತ್ತು ಸಮರ್ಥ ಬೋಧಕ ಸಿಬ್ಬಂದಿ | 54 |
| 14. | ಉನ್ನತ ಶಿಕ್ಷಣದಲ್ಲಿ ಸಮಾನತೆ ಮತ್ತು ಒಳಗೊಳ್ಳುವಿಕೆ | 56 |
| 15. | ಶಿಕ್ಷಕರ ಶಿಕ್ಷಣ | 58 |
| 16. | ವೃತ್ತಿಪರ ಶಿಕ್ಷಣದ ಪುನರ್ ಸಂಯೋಜನೆ | 60 |
| 17. | ನೂತನ ರಾಷ್ಟ್ರೀಯ ಸಂಶೋಧನಾ ಸಂಸ್ಥೆಯ ಸ್ಥಾಪನೆ, ಶೈಕ್ಷಣಿಕ, ಗುಣಾತ್ಮಕ ಸಂಶೋಧನೆಗಳ ವೇಗವರ್ಧನೆ | 62 |
| 18. | ಉನ್ನತ ಶಿಕ್ಷಣದ ನಿಬಂಧನಾ ನೀತಿಯ ರೂಪಾಂತರಣ | 65 |
| 19. | ಉನ್ನತ ಶಿಕ್ಷಣದ ಸಂಸ್ಥೆಗಳಿಗಾಗಿ ಪರಿಣಾಮಕಾರಿ ಆಡಳಿತ ಮತ್ತು ನೇತೃತ್ವ | 70 |
| | **ಭಾಗ – 3 : ಇತರೆ ಪ್ರಮುಖ ಕ್ಷೇತ್ರಗಳು** | |
| 20. | ವೃತ್ತಿಪರ ಶಿಕ್ಷಣ | 72 |
| 21. | ವಯಸ್ಕರ ಶಿಕ್ಷಣ ಮತ್ತು ಜೀವನ ಪರ್ಯಂತ ಕಲಿಕೆ | 74 |
| 22. | ಭಾರತೀಯ ಭಾಷೆಗಳು, ಕಲೆ ಮತ್ತು ಸಂಸ್ಕೃತಿಯ ಅಭಿವೃದ್ಧಿ | 77 |
| 23. | ತಂತ್ರಜ್ಞಾನದ ಬಳಕೆ ಮತ್ತು ಸಂಯೋಜನೆ | 83 |
| 24. | ಆನ್‌ಲೈನ್ ಮತ್ತು ಡಿಜಿಟಲ್ ಶಿಕ್ಷಣ : ತಂತ್ರಜ್ಞಾನದ ಸಮರ್ಪಕ ಬಳಕೆಯ ಖಾತ್ರಿಗೊಳಿಸುವಿಕೆ | 86 |
| | **ಭಾಗ – 4 : ಕಾರ್ಯಗತಗೊಳಿಸುವುದು** | |
| 25. | ಕೇಂದ್ರೀಯ ಶೈಕ್ಷಣಿಕ ಸಲಹಾ ಮಂಡಳಿ(CABE)ಯ ಬಲವರ್ಧನೆ | 89 |
| 26. | ಹಣಕಾಸು ನಿರ್ವಹಣೆ : ಎಲ್ಲರಿಗೂ ಲಭ್ಯವಾಗುವಂತಹ ಗುಣಮಟ್ಟದ ಶಿಕ್ಷಣ | 89 |
| 27. | ಅನುಷ್ಠಾನಗೊಳಿಸುವುದು | 91 |

# ರಾಷ್ಟ್ರೀಯ ಶಿಕ್ಷಣ ನೀತಿ – 2020

ಶಿಕ್ಷಣವು ಮಾನವನ ಸಾಮರ್ಥ್ಯವನ್ನು ಸಂಪೂರ್ಣವಾಗಿ ವಿಕಸಿಸುವ, ಸಮಾನ ಮತ್ತು ನ್ಯಾಯಯುತ ಸಮಾಜವನ್ನು ನಿರ್ಮಿಸುವ ಮತ್ತು ರಾಷ್ಟ್ರೀಯ ಅಭಿವೃದ್ಧಿಯನ್ನು ಉತ್ತೇಜಿಸುವ ಮೂಲಭೂತ ಅಂಶವಾಗಿದೆ. ಗುಣಮಟ್ಟ ಶಿಕ್ಷಣದ ಸಾರ್ವತ್ರಿಕ ಲಭ್ಯತೆಯು ಆರ್ಥಿಕ ವಲಯದಲ್ಲಿ ಜಾಗತಿಕ ವೇದಿಕೆಯಲ್ಲಿ ಭಾರತದ ಚಿರಂತರ ಪ್ರಗತಿ ಮತ್ತು ನಾಯಕತ್ವಕ್ಕೆ, ಸಾಮಾಜಿಕ ನ್ಯಾಯ ಮತ್ತು ಸಮಾನತೆ, ವೈಜ್ಞಾನಿಕ ಪ್ರಗತಿ, ರಾಷ್ಟ್ರೀಯ ಭಾವೈಕ್ಯತೆ ಮತ್ತು ಸಾಂಸ್ಕೃತಿಕ ಸಂರಕ್ಷಣೆಗಳ ವಿಷಯಕ್ಕೆ ಸಂಬಂಧಿಸಿದಂತೆ ಪ್ರಮುಖ ಆಧಾರವಾಗಿದೆ. ವ್ಯಕ್ತಿ, ಸಮಾಜ, ದೇಶ ಮತ್ತು ಪ್ರಪಂಚದ ಒಳಿತಿಗಾಗಿ ನಮ್ಮ ದೇಶದ ಶ್ರೀಮಂತ ಪ್ರತಿಭೆ ಮತ್ತು ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಮತ್ತು ಗರಿಷ್ಠಗೊಳಿಸಲು ಸಾರ್ವತ್ರಿಕ ಉತ್ತಮ ಗುಣಮಟ್ಟದ ಶಿಕ್ಷಣವು ಉತ್ತಮ ಮಾರ್ಗವಾಗಿದೆ. ಮುಂದಿನ ದಶಕದಲ್ಲಿ ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಯುವಜನರನ್ನು ಹೊಂದಿರುತ್ತದೆ. ಇವರಿಗೆ ಉತ್ತಮ ಗುಣಮಟ್ಟದ ಶೈಕ್ಷಣಿಕ ಅವಕಾಶಗಳನ್ನು ಒದಗಿಸುವ ನಮ್ಮ ಸಾಮರ್ಥ್ಯವೇ ದೇಶದ ಭವಿಷ್ಯವನ್ನು ನಿರ್ಧರಿಸುತ್ತದೆ.

ಭಾರತವು 2015ರಲ್ಲಿ ಅಂಗೀಕರಿಸಿದ, 2030ರ ಸುಸ್ಥಿರ ಅಭಿವೃದ್ಧಿ ಕಾರ್ಯಸೂಚಿಯ ಗುರಿ 4 (SDG 4) ರಲ್ಲಿ ಪ್ರತಿಬಿಂಬಿತವಾದ ಜಾಗತಿಕ ಶಿಕ್ಷಣ ಅಭಿವೃದ್ಧಿ ಕಾರ್ಯಸೂಚಿಯು, 2030ರ ವೇಳೆಗೆ "ಎಲ್ಲರಿಗೂ ಸಮನ್ವಯಿತ ಮತ್ತು ಸಮಾನ ಗುಣಮಟ್ಟದ ಶಿಕ್ಷಣವನ್ನು ಖಚಿತಪಡಿಸಿಕೊಳ್ಳಲು ಮತ್ತು ಆಜೀವ ಕಲಿಕೆಯ ಅವಕಾಶಗಳನ್ನು ಉತ್ತೇಜಿಸಲು" ಪ್ರಯತ್ನಿಸುತ್ತದೆ. ಅಂತಹ ಉನ್ನತ ಗುರಿಯನ್ನು ಸಾಧಿಸಲು, ಕಲಿಕೆಯ ಬೆಂಬಲಿಸುವ ರೀತಿಯಲ್ಲಿ ಇಡೀ ಶಿಕ್ಷಣ ವ್ಯವಸ್ಥೆಯನ್ನು ಪುನರ್ ರಚಿಸುವ ಅಗತ್ಯವಿದೆ. ಹಾಗಾದಾಗ ಮಾತ್ರ ಸುಸ್ಥಿರ ಅಭಿವೃದ್ಧಿಗಾಗಿ 2030ರ ಕಾರ್ಯಸೂಚಿಯ ಎಲ್ಲಾ ಮಹತ್ವದ ಉದ್ದೇಶ ಮತ್ತು ಗುರಿಗಳನ್ನು (SDG) ಸಾಧಿಸಬಹುದಾಗಿದೆ.

ಇಂದು ಜಗತ್ತಿನ ಜ್ಞಾನ ಕ್ಷೇತ್ರದಲ್ಲಿ ತ್ವರಿತ ಬದಲಾವಣೆಗಳಾಗುತ್ತಿವೆ. 'ಬೃಹತ್ ದತ್ತಾಂಶ', ಯಂತ್ರ ಕಲಿಕೆ ಮತ್ತು ಕೃತಕ ಬುದ್ಧಿಮತ್ತೆಯಂತಹ ವಿವಿಧ ಪ್ರಕಾರದ ಉತ್ತೇಜಕ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯೊಂದಿಗೆ, ವಿಶ್ವಾದ್ಯಂತ ಅನೇಕ ಕೌಶಲ್ಯರಹಿತ ಉದ್ಯೋಗಗಳನ್ನು ಯಂತ್ರಗಳೇ ನಿರ್ವಹಿಸಬಹುದು, ಅದೇ ಸಮಯದಲ್ಲಿ ವಿಜ್ಞಾನ, ಸಾಮಾಜಿಕ ವಿಜ್ಞಾನ ಮತ್ತು ಮಾನವಿಕ ವಿಷಯಗಳಲ್ಲಿನ ಸಾಮರ್ಥ್ಯಗಳನ್ನೊಳಗೊಂಡಂತೆ ಗಣಿತ, ಗಣಕಯಂತ್ರ ವಿಜ್ಞಾನ ಮತ್ತು ದತ್ತಾಂಶ ವಿಜ್ಞಾನಗಳಲ್ಲಿ ನುರಿತ ಕಾರ್ಯಪಡೆಗೆ ಬೇಡಿಕೆ ಹೆಚ್ಚುತ್ತದೆ. ಹವಾಮಾನದ ವಿಪರೀತ ಬದಲಾವಣೆ, ಹೆಚ್ಚುತ್ತಿರುವ ಮಾಲಿನ್ಯ ಮತ್ತು ನೈಸರ್ಗಿಕ ಸಂಪನ್ಮೂಲಗಳ ಕ್ಷೀಣತೆಯೊಂದಿಗೆ, ನಾವು ಇಂಧನ, ಶಕ್ತಿ, ನೀರು, ಆಹಾರ ಮತ್ತು ನೈರ್ಮಲ್ಯದ ಅಗತ್ಯಗಳನ್ನು ಹೇಗೆ ಪೂರೈಸುತ್ತೇವೆ ಎಂಬುದರಲ್ಲಿ ಗಮನಾರ್ಹ ಬದಲಾವಣೆಯಾಗಲಿದೆ. ಇದರ ಪರಿಣಾಮವಾಗಿ ವಿಶೇಷವಾಗಿ ಜೀವಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ, ಕೃಷಿ, ಹವಾಮಾನ ವಿಜ್ಞಾನ ಮತ್ತು ಸಾಮಾಜಿಕ ವಿಜ್ಞಾನಗಳಲ್ಲಿ ಹೊಸ ನುರಿತ ಕಾರ್ಮಿಕರ ಅವಶ್ಯಕತೆಯುಂಟಾಗಲಿದೆ. ಸಾಂಕ್ರಾಮಿಕ ರೋಗಗಳು ಮತ್ತು ಪಿಡುಗುಗಳ ಹರಡುವಿಕೆಯಿಂದಾಗಿ ಸಾಂಕ್ರಾಮಿಕ ರೋಗ ನಿರ್ವಹಣೆ ಮತ್ತು ಲಸಿಕೆಗಳ ಅಭಿವೃದ್ಧಿಯಲ್ಲಿ ಸಹಯೋಗಾತ್ಮಕ ಸಂಶೋಧನೆಯ ಅಗತ್ಯತೆ ಕಂಡುಬರುತ್ತದೆ ಮತ್ತು ಇದರ ಪರಿಣಾಮವಾಗಿ ಉಂಟಾಗುವ ಸಾಮಾಜಿಕ ಸಮಸ್ಯೆಗಳು ಬಹುಶಿಸ್ತೀಯ ಕಲಿಕೆಯ ಅಗತ್ಯವನ್ನು ಹೆಚ್ಚಿಸುತ್ತವೆ. ಭಾರತವು ಅಭಿವೃದ್ಧಿ ಹೊಂದಿದ ದೇಶವಾಗುವುದರ ಜೊತೆಗೆ ವಿಶ್ವದ ಮೂರನೇ ದೊಡ್ಡ ಆರ್ಥಿಕ ರಾಷ್ಟ್ರವಾಗುವತ್ತ ಸಾಗುತ್ತಿರುವುದರಿಂದ ಮಾನವಿಕ ಮತ್ತು ಕಲಾ ವಿಷಯಗಳಿಗೆ ಬೇಡಿಕೆ ಹೆಚ್ಚುತ್ತದೆ.

ಉದ್ಯೋಗ ವಲಯದ ಮತ್ತು ಜಾಗತಿಕ ವ್ಯವಸ್ಥೆಯಲ್ಲಿ ಆಗುತ್ತಿರುವ ತ್ವರಿತವಾದ ಬದಲಾವಣೆಗಳಿಂದಾಗಿ ಮಕ್ಕಳು ಕಲಿಯುವುದು ಮಾತ್ರವಲ್ಲ, ಹೇಗೆ ಕಲಿಯಬೇಕೆಂಬುದನ್ನು ಕಲಿಯುವುದು ಹೆಚ್ಚು ನಿರ್ಣಾಯಕವಾಗುತ್ತಿದೆ. ಆದ್ದರಿಂದ, ಶಿಕ್ಷಣವು ಕನಿಷ್ಠ ಪಠ್ಯವನ್ನು ಹೊಂದಿದ್ದು, ವಿಮರ್ಶಾತ್ಮಕವಾಗಿ ಚಿಂತಿಸುವುದು ಮತ್ತು ಸಮಸ್ಯೆಗಳನ್ನು ಪರಿಹರಿಸುವ ಕ್ಷಮತೆ, ಸೃಜನಶೀಲತೆ, ಬಹುಮುಖಿ ತಿಳುವಳಿಕೆ ಮತ್ತು ಹೊಸ ಹಾಗೂ ಬದಲಾಗುತ್ತಿರುವ ಕ್ಷೇತ್ರಗಳಿಗೆ ಅನುಗುಣವಾಗಿ ಆವಿಷ್ಕರಿಸುವ, ಗ್ರಹಿಸುವ, ಹೊಂದಿಕೊಳ್ಳುವಿಕೆಯನ್ನು ಕಲಿಸುವ ಕಡೆಗೆ ಹೆಚ್ಚು ಒತ್ತು ನೀಡಬೇಕಾಗಿದೆ. ಶಿಕ್ಷಣವನ್ನು ಹೆಚ್ಚು ಪ್ರಾಯೋಗಿಕ, ಸಮಗ್ರ, ಸಂಪೂರ್ಣ, ಅನ್ವೇಷಣಾ–ಚಾಲಿತ, ಆವಿಷ್ಕಾರ–ಆಧಾರಿತ, ಕಲಿಕಾರ್ಥಿ–ಕೇಂದ್ರಿತ, ಚರ್ಚಾ–ಆಧಾರಿತ, ನಮ್ಯ ಮತ್ತು ಆನಂದದಾಯಕವಾಗಿಸುವಂತೆ ಬೋಧನಾಶಾಸ್ತ್ರವು ವಿಕಸನವಾಗಬೇಕಾಗಿದೆ. ವಿದ್ಯಾರ್ಥಿಯ ಸರ್ವಾಂಗೀಣ ವಿಕಾಸಕ್ಕಾಗಿ, ಸಮಗ್ರ ಸಾಮರ್ಥ್ಯದ ವೃದ್ಧಿಗಾಗಿ, ಶಿಕ್ಷಣವನ್ನು ಹೆಚ್ಚು ಉಪಯುಕ್ತವನ್ನಾಗಿಸಲು, ಕಾಲ ಸುಸಂಗತವಾಗಿಸಲು, ಅವಶ್ಯಕತೆಗಳನ್ನು ಪೂರೈಸುವಂತೆ ಮಾಡಲು ವಿಜ್ಞಾನ ಮತ್ತು ಗಣಿತದ ಜೊತೆಗೆ ಮೂಲ ಕಲೆಗಳು, ಕರಕುಶಲ ಮಾನವಿಕ ವಿಷಯಗಳು, ಆಟಗಳು, ಕ್ರೀಡೆ ಮತ್ತು ದೈಹಿಕ ಕ್ಷಮತೆ, ಭಾಷೆಗಳು, ಸಾಹಿತ್ಯ, ಸಂಸ್ಕೃತಿ ಮತ್ತು ಮೌಲ್ಯಗಳನ್ನು ಒಳಗೊಂಡಿರಬೇಕು. ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಉತ್ತಮ ಚಾರಿತ್ರ್ಯವನ್ನು ನಿರ್ಮಿಸಬೇಕು, ಕಲಿಯುವವರು ನೈತಿಕ, ತರ್ಕಬದ್ಧ, ಸಹಾನುಭೂತಿ ಮತ್ತು ಕಾಳಜಿಯುಳ್ಳವರಾಗಿರುವಂತೆ ಮಾಡುವುದರೊಂದಿಗೆ ಅವರನ್ನು ಸೂಕ್ತ ಲಾಭದಾಯಕ ಉದ್ಯೋಗಕ್ಕಾಗಿ ಸಿದ್ಧಪಡಿಸಬೇಕು.

ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣ ಹಂತದಿಂದ ಉನ್ನತ ಶಿಕ್ಷಣದ ಹಂತದವರೆಗೆ ವ್ಯವಸ್ಥೆಯಲ್ಲಿ ಅತ್ಯುನ್ನತ ಗುಣಮಟ್ಟ, ಸಮಾನತೆ ಮತ್ತು ಸಮಗ್ರತೆಯನ್ನು ತರುವ ಪ್ರಮುಖ ಸುಧಾರಣೆಗಳನ್ನು ಕೈಗೊಳ್ಳುವ ಮೂಲಕ ಅಪೇಕ್ಷಿತ ಗುರಿ ಮತ್ತು ವಾಸ್ತವದ ನಡುವೆ ಇರುವ ಅಂತರವನ್ನು ಕಡಿಮೆಗೊಳಿಸಬೇಕು.

ಭಾರತವು 2040ರ ವೇಳೆಗೆ ಸಾಮಾಜಿಕ ಅಥವಾ ಆರ್ಥಿಕ ಹಿನ್ನೆಲೆಯನ್ನು ಲೆಕ್ಕಿಸದೆ, ಎಲ್ಲಾ ಮಕ್ಕಳಿಗೆ ಉನ್ನತ ಗುಣಮಟ್ಟದ ಶಿಕ್ಷಣ ಸಮಾನವಾಗಿ ಲಭ್ಯವಾಗುವಂತೆ ವ್ಯವಸ್ಥೆಯನ್ನು ರೂಪಿಸುವುದೇ ಪ್ರಮುಖ ಗುರಿಯಾಗಿರಬೇಕು.

ಈ ರಾಷ್ಟ್ರೀಯ ಶಿಕ್ಷಣ ನೀತಿಯು 21 ನೇ ಶತಮಾನದ ಮೊದಲ ಶಿಕ್ಷಣ ನೀತಿಯಾಗಿದೆ ಮತ್ತು ನಮ್ಮ ದೇಶದ ಅನೇಕ ಅಭಿವೃದ್ಧಿ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸುವ ಗುರಿಯನ್ನು ಹೊಂದಿದೆ. ಈ ನೀತಿಯು ಭಾರತದ ಸಂಪ್ರದಾಯಗಳು ಮತ್ತು ಮೌಲ್ಯ ಬಲಗೊಳಿಸುತ್ತಾ, SDG ಗುರಿ 4 ಸೇರಿದಂತೆ 21 ನೇ ಶತಮಾನದ ಶಿಕ್ಷಣದ ಮಹತ್ವಾಕಾಂಕ್ಷೆಯ ಗುರಿಗಳಿಗೆ ಹೊಂದಿಕೆಯಾಗುವ ಹೊಸ ವ್ಯವಸ್ಥೆಯನ್ನು ರಚಿಸಲು, ನಿಯಂತ್ರಣ ಮತ್ತು ಆಡಳಿತ ಸೇರಿದಂತೆ ಶಿಕ್ಷಣ ವ್ಯವಸ್ಥೆಯ ಎಲ್ಲಾ ಅಂಶಗಳನ್ನು ಪರಿಷ್ಕರಿಸಲು ಪ್ರಸ್ತಾಪಿಸಿದೆ. ರಾಷ್ಟ್ರೀಯ ಶಿಕ್ಷಣ ನೀತಿಯು, ಪ್ರತಿಯೊಬ್ಬ ವ್ಯಕ್ತಿಯ ಸೃಜನಶೀಲ ಸಾಮರ್ಥ್ಯದ ಅಭಿವೃದ್ಧಿಗೆ ನಿರ್ದಿಷ್ಟ ಒತ್ತು ನೀಡುತ್ತದೆ. ಈ ನೀತಿಯು ಶಿಕ್ಷಣವು ಅಕ್ಷರ ಜ್ಞಾನ, ಗಣಿತ ಕೌಶಲ್ಯವನ್ನು ಒಳಗೊಂಡ 'ಬುನಾದಿ ಸಾಮರ್ಥ್ಯಗಳು' ಮತ್ತು ವಿಮರ್ಶಾತ್ಮಕ ಚಿಂತನೆ ಹಾಗೂ ಸಮಸ್ಯಾ ಪರಿಹಾರದಂತಹ ಉನ್ನತ ಹಂತದ ಜ್ಞಾನಾತ್ಮಕ ಸಾಮರ್ಥ್ಯಗಳನ್ನು ಮಾತ್ರವಲ್ಲದೆ ಸಾಮಾಜಿಕ, ನೈತಿಕ ಮತ್ತು ಭಾವನಾತ್ಮಕ ಸಾಮರ್ಥ್ಯಗಳನ್ನೂ ಸಹ ಅಭಿವೃದ್ಧಿಪಡಿಸಬೇಕು ಎಂಬ ತತ್ವವನ್ನು ಆಧರಿಸಿದೆ.

ಅತ್ಯುನ್ನತ ಭಾರತೀಯ ಜ್ಞಾನ ಮತ್ತು ಚಿಂತನೆಯ ಶ್ರೀಮಂತ ಪ್ರಾಚೀನ ಪರಂಪರೆಯು ಈ ನೀತಿಗೆ ದಾರಿದೀಪವಾಗಿದೆ. ಜ್ಞಾನದ ಅನ್ವೇಷಣೆ (ಜ್ಞಾನ), ಬುದ್ಧಿವಂತಿಕೆ (ಪ್ರಜ್ಞಾ) ಮತ್ತು ಸತ್ಯಗಳ ಅನ್ವೇಷಣೆಯನ್ನು ಯಾವಾಗಲೂ ಭಾರತೀಯ ಚಿಂತನೆ ಮತ್ತು ತತ್ವಶಾಸ್ತ್ರದಲ್ಲಿ ಅತ್ಯುನ್ನತ ಮಾನವ ಗುರಿಯೆಂದು ಪರಿಗಣಿಸಲಾಗಿದೆ. ಪ್ರಾಚೀನ ಭಾರತದಲ್ಲಿ ಶಿಕ್ಷಣದ ಗುರಿಯು ಕೇವಲ ಪ್ರಸ್ತುತ ಜೀವನಕ್ಕೆ ಅಥವಾ ಶಾಲಾ ಶಿಕ್ಷಣದ ನಂತರದ ಜೀವನಕ್ಕೆ ಸಿದ್ಧಪಡಿಸಲು ಜ್ಞಾನವನ್ನು ಪಡೆಯುವುದಾಗಿರಲಿಲ್ಲ, ಬದಲಾಗಿ ಆತ್ಮ ಸಾಕ್ಷಾತ್ಕಾರ ಮತ್ತು ಸ್ವಯಂ ವಿಮೋಚನೆಗಾಗಿ ಸಿದ್ಧಪಡಿಸುವುದಾಗಿತ್ತು. ತಕ್ಷಶಿಲಾ, ನಳಂದ, ವಿಕ್ರಮಶಿಲಾ, ವಲ್ಲಭಿಯಂತಹ ಪ್ರಾಚೀನ ಭಾರತದ ವಿಶ್ವ ದರ್ಜೆಯ ಸಂಸ್ಥೆಗಳು ಬಹುವಿಷಯದ ಬೋಧನೆ ಮತ್ತು ಸಂಶೋಧನೆಯ ಉನ್ನತ ಗುಣಮಟ್ಟವನ್ನು ಸಾಧಿಸುವುದರೊಂದಿಗೆ ವಿವಿಧ ಹಿನ್ನೆಲೆಯುಳ್ಳ ಮತ್ತು ವಿವಿಧ ದೇಶಗಳ ವಿದ್ವಾಂಸರು ಮತ್ತು ವಿದ್ಯಾರ್ಥಿಗಳಿಗೆ ಆಶ್ರಯ ನೀಡಿದ್ದವು. ಭಾರತೀಯ ಶಿಕ್ಷಣ ವ್ಯವಸ್ಥೆಯು ಚರಕ, ಸುಶ್ರುತ, ಆರ್ಯಭಟ, ವರಾಹ ಮಿಹಿರ, ಭಾಸ್ಕರಾಚಾರ್ಯ, ಬ್ರಹ್ಮಗುಪ್ತ, ಚಾಣಕ್ಯ, ಚಕ್ರಪಾಣಿ ದತ್ತ, ಮಾಧವ, ಪಾಣಿನಿ, ಪತಂಜಲಿ, ನಾಗಾರ್ಜುನ, ಗೌತಮ, ಪಿಂಗಳ, ಶಂಕರದೇವ, ಮೈತ್ರೇಯಿ, ಗಾರ್ಗಿ ಮತ್ತು ತಿರುವಳ್ಳುವರ್‌ರಂತಹ ಶ್ರೇಷ್ಠ ವಿದ್ವಾಂಸರನ್ನು ರೂಪಿಸಿದೆ. ಗಣಿತ, ಖಗೋಳವಿಜ್ಞಾನ, ಲೋಹಶಾಸ್ತ್ರ, ವೈದ್ಯಕೀಯ ವಿಜ್ಞಾನ ಮತ್ತು ಶಸ್ತ್ರಚಿಕಿತ್ಸೆ, ಸಿವಿಲ್ ಇಂಜಿನಿಯರಿಂಗ್, ವಾಸ್ತುಶಿಲ್ಪ, ಹಡಗು ನಿರ್ಮಾಣ, ಯೋಗ, ಲಲಿತಕಲೆಗಳು, ಚದುರಂಗ ಮತ್ತು ಇನ್ನಿತರೆ ಕ್ಷೇತ್ರಗಳಲ್ಲಿ ಅವರು ಜ್ಞಾನ ಪ್ರಪಂಚಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಭಾರತೀಯ ಸಂಸ್ಕೃತಿ ಮತ್ತು ತತ್ವಶಾಸ್ತ್ರವು ಪ್ರಪಂಚದ ಮೇಲೆ ಬಲವಾದ ಪ್ರಭಾವ ಹೊಂದಿತ್ತು. ವಿಶ್ವ ಪರಂಪರೆಗೆ ಕೊಡುಗೆ ನೀಡಿದ ಈ ಶ್ರೀಮಂತ ಪರಂಪರೆಗಳನ್ನು ಸಂರಕ್ಷಿಸುವುದು ಮಾತ್ರವಲ್ಲದೆ, ನಮ್ಮ ಶಿಕ್ಷಣ ವ್ಯವಸ್ಥೆಯ ಮೂಲಕ ಸಂಶೋಧಿಸಬೇಕಾಗಿದೆ, ಅಭಿವೃದ್ಧಿಪಡಿಸಬೇಕಾಗಿದೆ ಮತ್ತು ಹೊಸ ರೀತಿಯಲ್ಲಿ ಉಪಯೋಗಿಸಬೇಕಾಗಿದೆ.

ಶಿಕ್ಷಕರು ಶಿಕ್ಷಣ ವ್ಯವಸ್ಥೆಯಲ್ಲಿನ ಮೂಲಭೂತ ಸುಧಾರಣೆಗಳ ಕೇಂದ್ರ ಬಿಂದುವಾಗಿರಬೇಕು. ಹೊಸ ಶಿಕ್ಷಣ ನೀತಿಯು ಶಿಕ್ಷಕರನ್ನು ಎಲ್ಲಾ ಹಂತಗಳಲ್ಲಿ ನಮ್ಮ ಸಮಾಜದ ಅತ್ಯಂತ ಗೌರವಾನ್ವಿತ ಮತ್ತು ಅತ್ಯಗತ್ಯ ಸದಸ್ಯರಾಗಿ ಪುನಃ ಸ್ಥಾಪಿಸಲು ಸಹಾಯ ಮಾಡಬೇಕು, ಏಕೆಂದರೆ ನಿಜವಾಗಿಯೂ ಅವರೇ ನಮ್ಮ ಮುಂದಿನ ಪೀಳಿಗೆಯ ನಾಗರಿಕರನ್ನು ರೂಪಿಸುವವರಾಗಿರುತ್ತಾರೆ. ಶಿಕ್ಷಕರನ್ನು ಸಬಲರನ್ನಾಗಿಸಲು ಮತ್ತು ಅವರು ತಮ್ಮ ಕೆಲಸವನ್ನು ಸಾಧ್ಯವಾದಷ್ಟು ಪರಿಣಾಮಕಾರಿಯಾಗಿ ಮಾಡಲು ಸಹಾಯ ಮಾಡಬೇಕು. ಹೊಸ ಶಿಕ್ಷಣ ನೀತಿಯು ಜೀವನೋಪಾಯ, ಗೌರವ, ಘನತೆ ಮತ್ತು ಸ್ವಾಯತ್ತತೆಯನ್ನು ಖಾತರಿಪಡಿಸುವ ಮೂಲಕ ಎಲ್ಲಾ ಹಂತಗಳಲ್ಲಿ ಬೋಧನಾ ವೃತ್ತಿಗಾಗಿ ಅತ್ಯುತ್ತಮ ಮತ್ತು ಪ್ರತಿಭಾವಂತರನ್ನು ನೇಮಿಸಿಕೊಳ್ಳಲು ಸಹಾಯ ಮಾಡಬೇಕು ಮತ್ತು ವ್ಯವಸ್ಥೆಯಲ್ಲಿ ಗುಣಮಟ್ಟದ ನಿಯಂತ್ರಣ ಮತ್ತು ಹೊಣೆಗಾರಿಕೆಯ ಮೂಲ ವಿಧಾನಗಳನ್ನು ಅಳವಡಿಸುವಂತಾಗಬೇಕು.

ಹೊಸ ಶಿಕ್ಷಣ ನೀತಿಯು ಹಿಂದುಳಿದ, ಅವಕಾಶ ವಂಚಿತ ಗುಂಪುಗಳಿಗೆ ವಿಶೇಷ ಗಮನ ನೀಡುವುದರೊಂದಿಗೆ ಎಲ್ಲಾ ವಿದ್ಯಾರ್ಥಿಗಳಿಗೆ, ಅವರ ವಾಸಸ್ಥಳವನ್ನು ಪರಿಗಣಿಸದೇ, ಗುಣಮಟ್ಟದ ಶಿಕ್ಷಣ ವ್ಯವಸ್ಥೆಯನ್ನು ಒದಗಿಸಬೇಕು. ಶಿಕ್ಷಣವು ಆರ್ಥಿಕ ಮತ್ತು ಸಾಮಾಜಿಕ ಚಲನಶೀಲತೆ ಒಳಗೊಳ್ಳುವಿಕೆ ಮತ್ತು ಸಮಾನತೆಯನ್ನು ಸಾಧಿಸುವ ಅತ್ಯುತ್ತಮ ಸಾಧನವಾಗಿದೆ. ಅಂತರ್ ನಿರ್ಮಿತಗೊಂಡಿರುವ ಅಡೆತಡೆಗಳ ಹೊರತಾಗಿಯೂ ಅಂತಹ ಗುಂಪುಗಳ ಎಲ್ಲಾ ವಿದ್ಯಾರ್ಥಿಗಳಿಗೆ, ಶೈಕ್ಷಣಿಕ ವ್ಯವಸ್ಥೆಯನ್ನು

ಪ್ರವೇಶಿಸಲು ಮತ್ತು ಉತ್ಕೃಷ್ಟ ಸಾಧನೆ ಕೈಗೊಳ್ಳಲು ವಿವಿಧ ಅವಕಾಶಗಳನ್ನು ಒದಗಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಸೂಕ್ತ ಉಪಕ್ರಮಗಳು ಜಾರಿಯಲ್ಲಿರಬೇಕು.

ಈ ಅಂಶಗಳನ್ನು, ದೇಶದ ಶ್ರೀಮಂತ ವೈವಿಧ್ಯತೆ ಮತ್ತು ಸಂಸ್ಕೃತಿಯನ್ನು ಗೌರವಿಸುತ್ತಾ, ಸ್ಥಳೀಯ ಮತ್ತು ಜಾಗತಿಕ ಅಗತ್ಯಗಳನ್ನು ಗಣನೆಗೆ ತೆಗೆದುಕೊಂಡು ಸೇರ್ಪಡೆ ಮಾಡಿಕೊಳ್ಳಬೇಕು. (1) ಭಾರತದ ಯುವ ಜನತೆಯಲ್ಲಿ ನಮ್ಮ ದೇಶದ ಸಾಮಾಜಿಕ, ಸಾಂಸ್ಕೃತಿಕ ಮತ್ತು ತಾಂತ್ರಿಕ ಅಗತ್ಯಗಳ ಬಗ್ಗೆ ಜಾಗೃತಿ ಕಲೆ, ಭಾಷೆ ಮತ್ತು ಜ್ಞಾನ ಪರಂಪರೆಗಳ ಬಗ್ಗೆ ಹೆಮ್ಮೆ ಮತ್ತು ಸುಭದ್ರವಾದ ನೈತಿಕ ಅಂಶಗಳನ್ನು ಬೆಳೆಸುವುದು ಅತ್ಯವಶ್ಯ. ಇದು ರಾಷ್ಟ್ರ ಗೌರವ, ಆತ್ಮ ವಿಶ್ವಾಸ, ಸ್ವತ್ವದ ಜಾಗೃತಿ, ಸಹಕಾರಿ ತತ್ತ್ವ ಮತ್ತು ಭಾವೈಕ್ಯತೆಯ ಸಾಧನೆಗೆ ನಿರ್ಣಾಯಕ.

**ಹಿಂದಿನ ನೀತಿಗಳು :**

ಶಿಕ್ಷಣದ ಹಿಂದಿನ ನೀತಿಗಳ ಅನುಷ್ಠಾನವು ಮುಖ್ಯವಾಗಿ ಲಭ್ಯತೆ ಮತ್ತು ಸಮಾನತೆಯ ವಿಷಯಗಳ ಮೇಲೆ ಕೇಂದ್ರೀಕೃತವಾಗಿತ್ತು. ರಾಷ್ಟ್ರೀಯ ಶಿಕ್ಷಣ ನೀತಿ 1986 ರ ಅಪೂರ್ಣ ಕಾರ್ಯಸೂಚಿಯನ್ನು 1992 ರಲ್ಲಿ ಮಾರ್ಪಡಿಸಿದ (NPE 1986/92) ನೀತಿಯು ಸೂಕ್ತವಾಗಿ ಗಮನಿಸಿದೆ. 1986/92 ರ ನೀತಿಯ ನಂತರದ ಒಂದು ಪ್ರಮುಖ ಬೆಳವಣಿಗೆಯೆಂದರೆ, ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ 2009 ಆಗಿದ್ದು, ಇದು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಸಾಧಿಸಲು ಅವಶ್ಯವಾದ ಕಾನೂನು ಆಧಾರಗಳನ್ನು ರೂಪಿಸಿತು.

**ಪ್ರಸ್ತುತ ನೀತಿಯ ತತ್ವಗಳು:**

ತಾರ್ಕಿಕ ಚಿಂತನೆ ಮತ್ತು ನಿರ್ವಹಣೆಯಲ್ಲಿ ಸಮರ್ಥರಾಗಿರುವ, ನೈತಿಕ ಮೌಲ್ಯಗಳು, ಸಹಾನುಭೂತಿ ಮತ್ತು ಅನುಭೂತಿ, ಧೈರ್ಯ, ಸೃಜನಶೀಲತೆ, ವೈಜ್ಞಾನಿಕ ಮನೋಭಾವವನ್ನು ಹೊಂದಿರುವ ಉತ್ತಮ ವ್ಯಕ್ತಿಗಳನ್ನು ರೂಪಿಸುವುದು ಶಿಕ್ಷಣ ವ್ಯವಸ್ಥೆಯ ಉದ್ದೇಶವಾಗಿದೆ. ನಮ್ಮ ಸಂವಿಧಾನದಲ್ಲಿ ಅಡಕವಾಗಿರುವಂತೆ, ಸರ್ವಸಮಾವೇಶಕ, ಸಮಾನತೆಯುಳ್ಳ, ಬಹುತ್ವದಿಂದೊಡಗೂಡಿದ ಸಮಾಜವನ್ನು ನಿರ್ಮಿಸಲು ಬದ್ಧರಾಗಿರುವ, ವಿಸ್ತಾರವಾದ ಬಹುಮುಖ್ಯ ಮತ್ತು ತಮ್ಮದೇ ಆದ ಕೊಡುಗೆ ನೀಡುವ ನಾಗರಿಕರನ್ನು ರೂಪಿಸುವ ಗುರಿಯನ್ನು ಇದು ಹೊಂದಿದೆ.

ಎಲ್ಲಿ ಸುರಕ್ಷಿತ ಮತ್ತು ಪ್ರೇರಣಾದಾಯಕವಾಗಿರುವ ಕಲಿಕಾ ವಾತಾವರಣವು ಇರುವುದೋ, ಎಲ್ಲಿ ಕಲಿಕೆಗಾಗಿ ಅಪಾರ ವಿನ್ಯಾಸಗಳ ಅನುಭವವು ಒದಗಿಸಲ್ಪಡುವುದೋ, ಎಲ್ಲಿ ಮೂಲಸೌಲಭ್ಯಗಳು ಸಹಜವಾಗಿ ಸುಸಜ್ಜಿತವಾಗಿ ಲಭ್ಯವಾಗುವುವೋ ಮತ್ತು ಸೂಕ್ತವಾಗಿರುವ ಹಾಗೂ ಕಲಿಕೆಗೆ ಅನುಕೂಲವಾಗಿರುವ ಈ ಸೌಲಭ್ಯಗಳು ಎಲ್ಲರಿಗೂ ದೊರೆಯುವುವೋ, ಅಂತಹ ಸಂಸ್ಥೆಯು ಒಂದು ಉತ್ತಮ ಶಿಕ್ಷಣ ಸಂಸ್ಥೆಯಾಗಿರುತ್ತದೆ. ಆದ್ದರಿಂದ ಈ ಎಲ್ಲ ಗುಣಾತ್ಮಕ ಅಂಶಗಳನ್ನು ಹೊಂದುವುದೇ ಪ್ರತಿಯೊಂದು ಶಿಕ್ಷಣ ಸಂಸ್ಥೆಯ ಖಚಿತ ಗುರಿಯಾಗಿರಬೇಕಿದೆ. ಅದೇ ಸಮಯದಲ್ಲಿ, ಸಂಸ್ಥೆಗಳಲ್ಲಿ ಮತ್ತು ಶಿಕ್ಷಣದ ಎಲ್ಲಾ ಹಂತಗಳಲ್ಲಿನ ಇತರೆ ಎಲ್ಲ ಸಂಸ್ಥೆಗಳ ಜೊತೆಗೂ ಸಮನ್ವಯ ಮತ್ತು ಸಹಕಾರ ಇರಬೇಕು.

**ಪ್ರಮುಖವಾಗಿ ಶಿಕ್ಷಣ ವ್ಯವಸ್ಥೆಗೆ ಮತ್ತು ಅದರೊಳಗಿನ ಸಂಸ್ಥೆಗಳಿಗೆ ಮಾರ್ಗದರ್ಶನ ಮಾಡುವ ಮೂಲಭೂತ ತತ್ವಗಳು:**

- ಶೈಕ್ಷಣಿಕ ಮತ್ತು ಶೈಕ್ಷಣಿಕೇತರ ಕ್ಷೇತ್ರಗಳೆರಡರಲ್ಲಿ ಪ್ರತಿ ವಿದ್ಯಾರ್ಥಿಯ ಸಂಪೂರ್ಣ ಬೆಳವಣಿಗೆಯನ್ನು ಉತ್ತೇಜಿಸಲು ಶಿಕ್ಷಕರು ತಾವು ಮತ್ತು ಪೋಷಕರಿಗೆ ಅರಿವು ಮೂಡಿಸುವ ಮೂಲಕ **ಪ್ರತಿ ವಿದ್ಯಾರ್ಥಿಯ ವಿಶಿಷ್ಟ ಸಾಮರ್ಥ್ಯಗಳನ್ನು ಮಾನ್ಯ ಮಾಡುವುದು ಮತ್ತು ಬೆಳೆಸುವುದು;**

- 3ನೇ ತರಗತಿಯ ವೇಳೆಗೆ ಎಲ್ಲಾ ವಿದ್ಯಾರ್ಥಿಗಳು **ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾಜ್ಞಾನವನ್ನು** ಹೊಂದಲು ಹೆಚ್ಚಿನ ಆದ್ಯತೆಯನ್ನು ನೀಡುವುದು;

- ನಮ್ಯತೆ, ಇದರಿಂದಾಗಿ ಕಲಿಯುವವರು ತಮ್ಮ ಕಲಿಕೆಯ ಪಥವನ್ನು ಮತ್ತು ಕಾರ್ಯಕ್ರಮಗಳನ್ನು ಆಯ್ಕೆ ಮಾಡುವ ಅವಕಾಶವನ್ನು ಹೊಂದಿರುತ್ತಾರೆ ಮತ್ತು ಆ ಮೂಲಕ ಅವರ ಪ್ರತಿಭೆ ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ಜೀವನದಲ್ಲಿ ತಮ್ಮದೇ ಆದ ಮಾರ್ಗಗಳನ್ನು ಆಯ್ಕೆಮಾಡಿಕೊಳ್ಳುತ್ತಾರೆ.

- ಕಲಿಕೆಯ ವಿವಿಧ ವಿಷಯಗಳ ನಡುವಿನ ಹಾನಿಕಾರಕ ಶ್ರೇಣೀಕರಣ ಮತ್ತು ವ್ಯತ್ಯಾಸಗಳನ್ನು ಹೋಗಲಾಡಿಸಲು ಕಲೆ ಮತ್ತು ವಿಜ್ಞಾನಗಳ ನಡುವೆ, ಪಠ್ಯಕ್ರಮ ಮತ್ತು ಪಠ್ಯೇತರ ಚಟುವಟಿಕೆಗಳ ನಡುವೆ, ವೃತ್ತಿಪರ ಮತ್ತು ಶೈಕ್ಷಣಿಕ ವಿಷಯಗಳ ನಡುವೆ **ಬಿಗಿಯಾದ ವಿಭಜನೆಗಳಿಲ್ಲದ ಶಿಕ್ಷಣ ವ್ಯವಸ್ಥೆಯ ರೂಪಣೆ**.

- ಜ್ಞಾನದ ಏಕತೆ ಮತ್ತು ಸಮಗ್ರತೆಯನ್ನು ಖಚಿತಪಡಿಸಿಕೊಳ್ಳಲು ಬಹುವಿಷಯಗಳ ಕ್ಷೇತ್ರಕ್ಕಾಗಿ ವಿಜ್ಞಾನ, ಸಮಾಜಿಕ ವಿಜ್ಞಾನ, ಕಲೆ, ಮಾನವಿಕ ವಿಷಯಗಳು ಮತ್ತು ಕ್ರೀಡೆಗಳನ್ನು ಒಳಗೊಂಡ **ಬಹುಮುಖಿ, ಸಮಗ್ರ ಶಿಕ್ಷಣ**.

- ಪರೀಕ್ಷೆಗಾಗಿ ಕಲಿಕೆ ಮತ್ತು ಯಾಂತ್ರಿಕ ಕಲಿಕೆಗಿಂತ **ಪರಿಕಲ್ಪನಾ ತಿಳುವಳಿಕೆಗೆ ಒತ್ತು;**

- ತಾರ್ಕಿಕ ನಿರ್ಧಾರ ಮತ್ತು ನಾವೀನ್ಯತೆಯನ್ನು ಉತ್ತೇಜಿಸಲು **ಸೃಜನಶೀಲ ಮತ್ತು ವಿಮರ್ಶಾತ್ಮಕ ಚಿಂತನೆ;**

- ನೈತಿಕತೆ, ಮಾನವೀಯ ಹಾಗೂ ಸಾಂವಿಧಾನಿಕ ಮೌಲ್ಯಗಳಾದ ಸಹಾನುಭೂತಿ, ಇತರರಿಗೆ ಗೌರವ, ಸ್ವಚ್ಛತೆ, ಸೌಜನ್ಯ, ಪ್ರಜಾಪ್ರಭುತ್ವ ಮನೋಭಾವ, ಸೇವಾ ಮನೋಭಾವ, ಸಾರ್ವಜನಿಕ ಆಸ್ತಿಗೆ ಗೌರವ, ವೈಜ್ಞಾನಿಕ ಮನೋಭಾವ, ಸ್ವಾತಂತ್ರ್ಯ, ಜವಾಬ್ದಾರಿ, ಬಹುತ್ವ, ಸಮಾನತೆ ಮತ್ತು ನ್ಯಾಯ;

- ಬೋಧನೆ ಮತ್ತು ಕಲಿಕೆಯಲ್ಲಿ ಬಹುಭಾಷೀಯತೆ ಮತ್ತು ಭಾಷಾ ಸಾಮರ್ಥ್ಯವನ್ನು ಹೆಚ್ಚಿಸುವುದು;

- ಸಂವಹನ, ಸಹಕಾರ, **ತಂಡದ ಮನೋಭಾವ, ವಿಜಗೀಷು ಪ್ರವೃತ್ತಿಯಂತಹ ಮತ್ತು ನಮ್ಯತೆಯಂತಹ** ಜೀವನ ಕೌಶಲ್ಯಗಳು;

- ಇಂದಿನ **'ಕೋಚಿಂಗ್** ಸಂಸ್ಕೃತಿಯನ್ನು' ಪ್ರೋತ್ಸಾಹಿಸುವ ಸಂಕಲನಾತ್ಮಕ ಮೌಲ್ಯಮಾಪನದ ಬದಲಾಗಿ ನಿಯಮಿತ ರಚನಾತ್ಮಕ ಮೌಲ್ಯಮಾಪನದತ್ತ ಗಮನ ಹರಿಸುವುದು;

- ಬೋಧನೆ ಮತ್ತು ಕಲಿಕೆಯಲ್ಲಿ ಭಾಷೆಯ ಅಡೆತಡೆಗಳನ್ನು ತೆಗೆದುಹಾಕುವಲ್ಲಿ, ವಿಕಲಚೇತನ ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ಹೆಚ್ಚಿಸುವಲ್ಲಿ ಮತ್ತು ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯಲ್ಲಿ ತಂತ್ರಜ್ಞಾನದ ವ್ಯಾಪಕ ಬಳಕೆ,

- ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿನ ವಿಷಯವಾಗಿದೆ ಎಂಬುದನ್ನು ಯಾವಾಗಲೂ ಗಮನದಲ್ಲಿಟ್ಟುಕೊಳ್ಳುತ್ತಾ, ಎಲ್ಲಾ ಪಠ್ಯಕ್ರಮ, ಬೋಧನಾ ವಿಧಾನ ಮತ್ತು ನೀತಿಯಲ್ಲಿ ಸ್ಥಳೀಯ ಸಂದರ್ಭಕ್ಕೆ ಮತ್ತು ವೈವಿಧ್ಯತೆಗೆ ಗೌರವ ನೀಡುವುದು.

- ಎಲ್ಲಾ ವಿದ್ಯಾರ್ಥಿಗಳು ಶಿಕ್ಷಣ ವ್ಯವಸ್ಥೆಯಲ್ಲಿ ಅಭಿವೃದ್ಧಿ ಹೊಂದಲು ಸಮರ್ಥರಾಗಿದ್ದಾರೆ ಎಂದು ಖಚಿತಪಡಿಸಿಕೊಳ್ಳಲು ಎಲ್ಲಾ ಶೈಕ್ಷಣಿಕ ನಿರ್ಧಾರಗಳ ಮೂಲಾಧಾರವಾಗಿ ಪೂರ್ಣ ಸಮಾನತೆ ಮತ್ತು ಸಮನ್ವಯತೆ.

- ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣ ಹಂತದಿಂದ ಶಾಲಾ ಶಿಕ್ಷಣದದವರೆಗೆ ಎಲ್ಲಾ ಹಂತದ ಶಿಕ್ಷಣದ ಪಠ್ಯಕ್ರಮದಲ್ಲಿ ಯೋಜನಾಬದ್ಧ ಸಮನ್ವಯ.

- ಶಿಕ್ಷಕರು ಮತ್ತು ಸಿಬ್ಬಂದಿಯು ಕಲಿಕಾ ಪ್ರಕ್ರಿಯೆಯ ಕೇಂದ್ರಬಿಂದು – ಅವರ ನೇಮಕಾತಿ, ನಿರಂತರ ವೃತ್ತಿಪರ ಅಭಿವೃದ್ಧಿ, ಸಕಾರಾತ್ಮಕ ಕೆಲಸದ ವಾತಾವರಣ ಮತ್ತು ಸೇವಾ ಪರಿಸ್ಥಿತಿಗಳು;

- ಸ್ವಾಯತ್ತತೆ, ಉತ್ತಮ ಆಡಳಿತ ಮತ್ತು ಸಬಲೀಕರಣದ ಮೂಲಕ ನಾವೀನ್ಯತೆ ಮತ್ತು ಸೃಜನಶೀಲ ಆಲೋಚನೆಗಳನ್ನು ಉತ್ತೇಜಿಸುತ್ತಾ, ಲೆಕ್ಕಪರಿಶೋಧನೆ ಮತ್ತು ಪಾರದರ್ಶಕತೆಯ ಮೂಲಕ ಶೈಕ್ಷಣಿಕ ವ್ಯವಸ್ಥೆಯ ಸಮಗ್ರತೆ, ಪಾರದರ್ಶಕತೆ ಮತ್ತು ಸಂಪನ್ಮೂಲ ದಕ್ಷತೆಯನ್ನು ಖಚಿತಪಡಿಸಿಕೊಳ್ಳಲು 'ಹಗುರಾದ ಆದರೆ ಬಿಗಿಯಾದ' ನಿಯಂತ್ರಕ ಚೌಕಟ್ಟು;

- ಅತ್ಯುತ್ತಮ ಶಿಕ್ಷಣ ಮತ್ತು ಅಭಿವೃದ್ಧಿಗೆ ಪೂರಕ ಮತ್ತು ಅಗತ್ಯವಾಗಿ ಅತ್ಯುತ್ತಮ ಸಂಶೋಧನೆ;

- ಶೈಕ್ಷಣಿಕ ತಜ್ಞರಿಂದ ನಿರಂತರ ಸಂಶೋಧನೆ ಮತ್ತು ನಿಯಮಿತ ಮೌಲ್ಯಮಾಪನದ ಆಧಾರದ ಮೇಲೆ ಪ್ರಗತಿಯ ನಿರಂತರ ವಿಮರ್ಶೆ;

- ಭಾರತೀಯತೆಯಲ್ಲಿ ಭದ್ರವಾದ ನಂಬಿಕೆ, ಭಾರತದ ಶ್ರೀಮಂತ, ವೈವಿಧ್ಯಮಯ, ಪ್ರಾಚೀನ ಮತ್ತು ಆಧುನಿಕ ಸಂಸ್ಕೃತಿ, ಜ್ಞಾನ ವ್ಯವಸ್ಥೆಗಳು ಮತ್ತು ಸಂಪ್ರದಾಯಗಳ ಬಗ್ಗೆ ಹೆಮ್ಮೆ;

- ಶಿಕ್ಷಣವು ಸಾರ್ವಜನಿಕ ಸೇವೆಯಾಗಿದೆ; ಗುಣಮಟ್ಟದ ಶಿಕ್ಷಣವನ್ನು ಪಡೆಯುವುದು ಪ್ರತಿ ಮಗುವಿನ ಮೂಲಭೂತ ಹಕ್ಕು ಎಂದು ಪರಿಗಣಿಸಬೇಕು;


- ಸುಭದ್ರವಾದ ಮತ್ತು ಚಲನಶೀಲ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಗಣನೀಯ ಹೂಡಿಕೆ ಮತ್ತು ಸಾರ್ವಜನಿಕ ಸೇವೆಯ ನೈಜ ಉದ್ದೇಶ ಹಾಗೂ ಸೇವಾ ಮನೋಭಾವವುಳ್ಳ ಉದ್ದೇಶದ ಖಾಸಗಿ ವ್ಯಕ್ತಿ/ಸಂಸ್ಥೆಗಳ ಮತ್ತು ಸಮುದಾಯದ ಭಾಗವಹಿಸುವಿಕೆಗೆ ಪ್ರೋತ್ಸಾಹ.

**ನೀತಿಯ ದೃಷ್ಟಿಕೋನ:**

ಈ ಶಿಕ್ಷಣ ನೀತಿಯು, ಎಲ್ಲರಿಗೂ ಉನ್ನತ ಗುಣಮಟ್ಟದ ಶಿಕ್ಷಣವನ್ನು ಕೊಡುವುದರ ಮೂಲಕ ಭಾರತವನ್ನು ಸಮತೆಯುಳ್ಳ ಮತ್ತು ಚಲನಶೀಲ ಜ್ಞಾನ ಸಮಾಜವನ್ನಾಗಿ ಪರಿವರ್ತಿಸುವುದರೊಂದಿಗೆ ಜ್ಞಾನ ಜಗತ್ತಿನ ಬಲಶಾಲಿ ರಾಷ್ಟ್ರವನ್ನಾಗಿಸಲು ಕೊಡುಗೆ ನೀಡುವ, ಭಾರತೀಯ ಮೌಲ್ಯಗಳಲ್ಲಿ ಬೇರೂರಿದ ಶಿಕ್ಷಣ ವ್ಯವಸ್ಥೆಯನ್ನು ನಿರ್ಮಿಸುವ ಆಶಯವನ್ನು ಹೊಂದಿದೆ. ಈ ನೀತಿಯು, ನಮ್ಮ ಶಿಕ್ಷಣ ಸಂಸ್ಥೆಗಳ ಪಠ್ಯಕ್ರಮ ಮತ್ತು ಬೋಧನಾ ವಿಧಾನವು ವಿದ್ಯಾರ್ಥಿಗಳಲ್ಲಿ ಮೂಲಭೂತ ಕರ್ತವ್ಯಗಳು ಮತ್ತು ಸಾಂವಿಧಾನಿಕ ಮೌಲ್ಯಗಳ ಬಗ್ಗೆ ಆಳವಾದ ಗೌರವ, ದೇಶದೊಂದಿಗೆ ಬಾಂಧವ್ಯ ಮತ್ತು ಬದಲಾಗುತ್ತಿರುವ ಜಗತ್ತಿನಲ್ಲಿ ತಮ್ಮ ಪಾತ್ರಗಳು ಮತ್ತು ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸುವ ದೃಷ್ಟಿಕೋನ ಹೊಂದಿದೆ. ಅಲ್ಲದೇ, ಕಲಿಕಾರ್ಥಿಗಳ ಆಲೋಚನೆಯಲ್ಲಿ ಮಾತ್ರವಲ್ಲದೇ ಭಾವನಾತ್ಮಕವಾಗಿ, ಬೌದ್ಧಿಕತೆ ಮತ್ತು ಕಾರ್ಯಗಳಲ್ಲಿಯೂ ಸಹ ಆಳವಾಗಿ ಬೇರೂರಿದ ಭಾರತೀಯತೆಯ ಹೆಮ್ಮೆಯನ್ನು ಬಿತ್ತುವುದು ಮತ್ತು ಮಾನವ ಹಕ್ಕುಗಳ ಕುರಿತು ಜವಾಬ್ದಾರಿಯುತ ಬದ್ಧತೆ, ಸುಸ್ಥಿರ ಅಭಿವೃದ್ಧಿ ಮತ್ತು ಜೀವನ ಹಾಗೂ ಜಾಗತಿಕ ಕಲ್ಯಾಣವನ್ನು ಬೆಂಬಲಿಸುವುದರೊಂದಿಗೆ ವಾಸ್ತವದಲ್ಲಿ ಜಾಗತಿಕ ನಾಗರಿಕರನ್ನಾಗಿಸುವ ದೃಷ್ಟಿಕೋನ ಹೊಂದಿದೆ.

# ಭಾಗ – 1 : ಶಾಲಾ ಶಿಕ್ಷಣ

ಈ ನೀತಿಯು ತಿಳಿಸುವಂತೆ ಶಾಲಾ ಶಿಕ್ಷಣದಲ್ಲಿ ಪ್ರಸ್ತುತ ಇರುವ 10 + 2 ರಚನೆಯನ್ನು 3–18 ವಯಸ್ಸಿನವರನ್ನು ಒಳಗೊಂಡ, ಹೊಸ ಬೋಧನಾ ವಿಧಾನ ಮತ್ತು ಪಠ್ಯಕ್ರಮದ ಪುನಾರಚನೆಯೊಂದಿಗೆ 5 + 3 + 3 + 4 ರ ಸಂರಚನೆಯಾಗಿ ಕೆಳಗಿನ ಚಿತ್ರದಲ್ಲಿ ತೋರಿಸಿರುವಂತೆ ಮಾರ್ಪಡಿಸಲಾಗುತ್ತದೆ ಮತ್ತು ಅಧ್ಯಾಯ 4 ರಲ್ಲಿ ಇದನ್ನು ವಿವರಿಸಲಾಗಿದೆ.




ಪ್ರಸ್ತುತ, 6ನೇ ವಯಸ್ಸಿನಿಂದ 1 ನೇ ತರಗತಿ ಪ್ರಾರಂಭವಾಗುವುದರಿಂದ 3–6 ವರ್ಷದ ಮಕ್ಕಳು, 10 + 2 ಸಂರಚನೆಯಲ್ಲಿ ಒಳಗೊಂಡಿರುವುದಿಲ್ಲ. ನೂತನ 5 + 3 + 3 + 4 ಸಂರಚನೆಯಲ್ಲಿ, 3ನೇ ವಯಸ್ಸಿನಿಂದ ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಸುಭದ್ರ ತಳಹದಿಯಾದ (ECCE) ಶಿಕ್ಷಣದ ಸಹ ಸೇರಿದ್ದು, ಇದು ಮಕ್ಕಳಲ್ಲಿ ಒಟ್ಟಾರೆ ಉತ್ತಮ ಕಲಿಕೆ, ಅಭಿವೃದ್ಧಿ ಮತ್ತು ಸ್ವಾಸ್ಥ್ಯವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.

## 1. ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣ: ಕಲಿಕೆಯ ಬುನಾದಿ

1.1. ಮಗುವಿನ ಮೆದುಳಿನ ಶೇಕಡಾ 85ರಷ್ಟು ಸಂಚಿತ ಬೆಳವಣಿಗೆಯು, 6 ವರ್ಷ ವಯಸ್ಸಿಗಿಂತ ಮುಂಚೆಯೇ ಸಂಭವಿಸುತ್ತದೆ. ಆರೋಗ್ಯಕರ ಮೆದುಳಿನ ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳಲು, ಆರಂಭಿಕ ವರ್ಷಗಳಲ್ಲಿ ಮೆದುಳಿನ ಸೂಕ್ತ ಆರೈಕೆ ಮತ್ತು ಪ್ರಚೋದನೆ ಅತ್ಯಂತ ಮಹತ್ವದ್ದಾಗಿದೆ. ಪ್ರಸ್ತುತ ಕೋಟ್ಯಂತರ ಚಿಕ್ಕ ಮಕ್ಕಳಿಗೆ, ಅದರಲ್ಲೂ ವಿಶೇಷವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಗುಣಮಟ್ಟದ ಪೂರ್ವ ಬಾಲ್ಯಾವಸ್ಥೆ ಪೋಷಣೆ ಮತ್ತು ಶಿಕ್ಷಣ ECCE ಲಭ್ಯವಿರುವುದಿಲ್ಲ. ECCE ಕ್ಷೇತ್ರದಲ್ಲಿ ಮಾಡುವ ಸಮರ್ಥ ಹೂಡಿಕೆಯು, ಎಲ್ಲಾ ಚಿಕ್ಕ ಮಕ್ಕಳಿಗೆ ಅಂತಹ ಸೌಲಭ್ಯವನ್ನು ನೀಡುವ ಸಾಮರ್ಥ್ಯವನ್ನು ಹೊಂದಿದ್ದು, ಅವರ ಜೀವನದುದ್ದಕ್ಕೂ ಶಿಕ್ಷಣ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಮತ್ತು ಅಭಿವೃದ್ಧಿ ಸಾಧಿಸಲು ಸಮರ್ಥರನ್ನಾಗಿಸುತ್ತದೆ. ಒಂದನೇ ತರಗತಿಗೆ ಪ್ರವೇಶ ಪಡೆಯುವ ಎಲ್ಲಾ ಮಕ್ಕಳು ಶಾಲಾ ವ್ಯವಸ್ಥೆಗೆ ಸಿದ್ಧರಾಗಿರುವುದನ್ನು ಖಚಿತಪಡಿಸಿಕೊಳ್ಳಲು, ಗುಣಮಟ್ಟದ ಪೂರ್ವ ಬಾಲ್ಯಾವಸ್ಥೆಯ ಬೆಳವಣಿಗೆ, ಆರೈಕೆ ಮತ್ತು ಶಿಕ್ಷಣದ ಸಾರ್ವತ್ರಿಕ ಲಭ್ಯತೆಯನ್ನು 2030 ರೊಳಗಾಗಿ ಸಾಧ್ಯವಿದ್ದಷ್ಟು ಬೇಗ ಸಾಧಿಸಲೇಬೇಕಾಗಿದೆ.

1.2. ECCE ಶಿಕ್ಷಣವು ಸಾಮಾನ್ಯವಾಗಿ ವರ್ಣಮಾಲೆಗಳು, ಭಾಷೆಗಳು, ಸಂಖ್ಯೆಗಳು, ಎಣಿಕೆ, ಬಣ್ಣಗಳು, ಆಕಾರಗಳು, ಒಳಾಂಗಣ ಮತ್ತು ಹೊರಾಂಗಣ ಆಟ, ಒಗಟುಗಳು ಮತ್ತು ತಾರ್ಕಿಕ ಚಿಂತನೆ, ಸಮಸ್ಯಾ ಪರಿಹಾರ, ಚಿತ್ರಕಲೆ, ಬಣ್ಣಹಚ್ಚುವುದು ಮತ್ತು ಇತರ ದೃಶ್ಯ ಕಲೆ, ಕರಕುಶಲ ಕಲೆ, ನಾಟಕ ಮತ್ತು ಕೈಗೊಂಬೆ, ಸಂಗೀತ ಮತ್ತು ಚಲನೆಯಂತಹ ಚಟುವಟಿಕೆಗಳನ್ನು ಒಳಗೊಂಡಂತೆ, ನಮ್ಯವಾದ, ಬಹುಮುಖಿ, ಬಹು–ಹಂತದ, ಆಟ–ಆಧಾರಿತ, ಚಟುವಟಿಕೆ–ಆಧಾರಿತ ಮತ್ತು ಅನ್ವೇಷಣಾ–ಆಧಾರಿತ ಕಲಿಕೆಯನ್ನು ಒಳಗೊಂಡಿರುತ್ತದೆ. ಇದಲ್ಲದೇ ಸಾಮಾಜಿಕ ಸಾಮರ್ಥ್ಯಗಳು, ಸೂಕ್ಷ್ಮತೆ, ಉತ್ತಮ ನಡವಳಿಕೆ, ಸೌಜನ್ಯ, ನೈತಿಕತೆ, ವೈಯಕ್ತಿಕ ಮತ್ತು ಸಾರ್ವಜನಿಕ ಸ್ವಚ್ಛತೆ, ತಂಡದಲ್ಲಿ ಕಾರ್ಯ ಮತ್ತು ಸಹಕಾರದಂತಹ ವರ್ತನೆಗಳನ್ನು ಸಹ ಬೆಳೆಸುವುದರ ಕುರಿತು ಗಮನಹರಿಸುತ್ತದೆ. ECCE ಯ ಒಟ್ಟಾರೆ ಗುರಿಯೆಂದರೆ, ಶಾರೀರಿಕ ಮತ್ತು ಗತ್ಯಾತ್ಮಕ ಬೆಳವಣಿಗೆ, ಜ್ಞಾನಾತ್ಮಕ ಬೆಳವಣಿಗೆ ಸಾಮಾಜಿಕ–ಭಾವನಾತ್ಮಕ–ನೈತಿಕ ಬೆಳವಣಿಗೆ, ಸಾಂಸ್ಕೃತಿಕ / ಕಲಾತ್ಮಕ ಬೆಳವಣಿಗೆ, ಸಂವಹನ ಸಾಮರ್ಥ್ಯ ಹಾಗೂ ಆರಂಭಿಕ ಭಾಷೆ, ಅಕ್ಷರ ಜ್ಞಾನ ಮತ್ತು ಗಣಿತ ಕೌಶಲ್ಯ ಕ್ಷೇತ್ರಗಳಲ್ಲಿ ಗರಿಷ್ಠ ಫಲಿತಾಂಶಗಳನ್ನು ಪಡೆಯುವುದಾಗಿದೆ.

1.3. NCERT ಯು, 0–3 ವರ್ಷ ವಯಸ್ಸಿನ ಮಕ್ಕಳಿಗೆ ಒಂದು ಉಪ–ಚೌಕಟ್ಟು, ಮತ್ತು 3–8 ವರ್ಷ ವಯಸ್ಸಿನ ಮಕ್ಕಳಿಗೆ ಮತ್ತೊಂದು ಹಾಗೂ ಉಪ–ಚೌಕಟ್ಟನ್ನು ಒಳಗೊಂಡಂತೆ ಎರಡು ಭಾಗಗಳಲ್ಲಿ ಮೇಲಿನ ಮಾರ್ಗಸೂಚಿಗಳೊಂದಿಗೆ, ECCE ಕುರಿತು ಇತ್ತೀಚಿನ ಸಂಶೋಧನೆ ಮತ್ತು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಅತ್ಯುತ್ತಮ ಅಭ್ಯಾಸಗಳನ್ನು ಆಧರಿಸಿ, 8 ವರ್ಷ ವಯಸ್ಸಿನ ಮಕ್ಕಳಿಗಾಗಿ ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಮತ್ತು ಬೋಧನಾ ಚೌಕಟ್ಟು (NCPFECCE) ಅನ್ನು ಅಭಿವೃದ್ಧಿಪಡಿಸುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ ಕಲೆ, ಕಥೆಗಳು, ಪದ್ಯ, ಆಟಗಳು, ಹಾಡುಗಳನ್ನು ಒಳಗೊಂಡಂತೆ, ECCE ಯಲ್ಲಿ ಸಾವಿರಾರು ವರ್ಷಗಳಿಂದ ಅಭಿವೃದ್ಧಿಪಡಿಸಿದ ಭಾರತದ ಶ್ರೀಮಂತ ಸ್ಥಳೀಯ ಸಂಪ್ರದಾಯಗಳನ್ನೂ ಸಹ ಸೂಕ್ತವಾಗಿ ಸಂಯೋಜಿಸಲಾಗುವುದು. ಈ ಚೌಕಟ್ಟು ಪೋಷಕರಿಗೆ ಮತ್ತು ಪೂರ್ವ ಬಾಲ್ಯಾವಸ್ಥೆ ಪೋಷಣೆ ಮತ್ತು ಶಿಕ್ಷಣ ಒದಗಿಸುವ ಸಂಸ್ಥೆಗಳಿಗೆ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತದೆ.

1.4. ದೇಶಾದ್ಯಂತ ಹಂತಹಂತವಾಗಿ ಉನ್ನತ ಗುಣಮಟ್ಟದ ECCE ಶಿಕ್ಷಣದ ಲಭ್ಯತೆಯನ್ನು ಖಚಿತಪಡಿಸುವುದು ಮಹತ್ತರ ಗುರಿಯಾಗಿದೆ. ವಿಶೇಷವಾಗಿ ಸಾಮಾಜಿಕವಾಗಿ–ಆರ್ಥಿಕವಾಗಿ ಹಿಂದುಳಿದಿರುವ ಜಿಲ್ಲೆಗಳು ಮತ್ತು ಸ್ಥಳಗಳಿಗೆ ವಿಶೇಷ ಗಮನ ಮತ್ತು ಆದ್ಯತೆ ನೀಡಲಾಗುವುದು. ECCE ಶಿಕ್ಷಣವನ್ನು a) ಪ್ರತ್ಯೇಕವಾಗಿರುವ ಅಂಗನವಾಡಿಗಳು b) ಪ್ರಾಥಮಿಕ ಶಾಲಾ ಆವರಣದಲ್ಲಿರುವ ಅಂಗನವಾಡಿಗಳು c) ಪ್ರಸ್ತುತ ಇರುವ ಪ್ರಾಥಮಿಕ ಶಾಲೆಗಳಲ್ಲಿರುವ 5 ಅಥವಾ 6 ವರ್ಷಗಳ ಮಕ್ಕಳಿರುವ ಶಾಲೆಗಳ ಪೂರ್ವ ಪ್ರಾಥಮಿಕ ವಿಭಾಗಗಳು ಮತ್ತು d) ಪ್ರತ್ಯೇಕವಾಗಿರುವ ಪೂರ್ವ ಪ್ರಾಥಮಿಕ ಶಾಲೆಗಳು ಸೇರಿದಂತೆ, ವಿಸ್ತರಿಸಿದ ಮತ್ತು ಬಲಪಡಿಸಿದ ಪೂರ್ವ ಬಾಲ್ಯಾವಸ್ಥೆ ಶಿಕ್ಷಣ ಸಂಸ್ಥೆಗಳ ECCE ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರದಲ್ಲಿ ವಿಶೇಷ ತರಬೇತಿ ಪಡೆದ ಶಿಕ್ಷಕರು/ಕಾರ್ಯಕರ್ತರನ್ನು ನೇಮಕ ಮಾಡಿಕೊಂಡು ಅವರ ಮೂಲಕ ತರಬೇತಿ ಒದಗಿಸಲಾಗುತ್ತದೆ.

1.5. ECCE ಗೆ ಸಾರ್ವತ್ರಿಕ ಲಭ್ಯತೆಗಾಗಿ ಉತ್ತಮ ಗುಣಮಟ್ಟದ ಮೂಲಸೌಕರ್ಯ, ಆಟದ ಉಪಕರಣಗಳು ಮತ್ತು ಸುಶಿಕ್ಷಿತ ಅಂಗನವಾಡಿ ಕಾರ್ಯಕರ್ತರು / ಶಿಕ್ಷಕರನ್ನು ಒದಗಿಸುವ ಮೂಲಕ ಅಂಗನವಾಡಿ ಕೇಂದ್ರಗಳನ್ನು ಬಲಪಡಿಸಲಾಗುತ್ತದೆ. ಪ್ರತಿ ಅಂಗನವಾಡಿಯು ಉತ್ತಮ ಗಾಳಿ, ಬೆಳಕಿನ ವ್ಯವಸ್ಥೆ, ಉತ್ತಮವಾಗಿ ವಿನ್ಯಾಸಗೊಳಿಸಲಾದ ಮಕ್ಕಳ ಸ್ನೇಹಿ ಮತ್ತು ಸುಸಜ್ಜಿತ ಕಲಿಕೆಯ ವಾತಾವರಣದೊಂದಿಗೆ ಉತ್ತಮವಾಗಿ ನಿರ್ಮಿಸಲಾದ ಕಟ್ಟಡವನ್ನು ಹೊಂದಿರುತ್ತದೆ. ಅಂಗನವಾಡಿ ಕೇಂದ್ರಗಳಲ್ಲಿನ ಮಕ್ಕಳು ಚಟುವಟಿಕೆಯಿಂದ ಕೂಡಿದ ಪ್ರವಾಸಗಳನ್ನು ಕೈಗೊಳ್ಳಬೇಕು. ಒಟ್ಟಾರೆ ಸ್ಥಳೀಯ ಪ್ರಾಥಮಿಕ ಶಾಲೆಗಳ ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಭೇಟಿ ಮಾಡಬೇಕು ಮತ್ತು ಅಂಗನವಾಡಿ ಕೇಂದ್ರಗಳಿಂದ ಪ್ರಾಥಮಿಕ ಶಾಲೆಗಳಿಗೆ ಸೇರುವಿಕೆ ಸುಲಭವಾಗಬೇಕು. ಅಂಗನವಾಡಿಗಳನ್ನು ಶಾಲಾ ಸಂಕೀರ್ಣಗಳು / ಸಮೂಹ ಸಂಪನ್ಮೂಲ ಕೇಂದ್ರಗಳೊಂದಿಗೆ ಸಂಪೂರ್ಣವಾಗಿ ಸಂಯೋಜಿಸಲಾಗುವುದು ಮತ್ತು ಅಂಗನವಾಡಿ ಮಕ್ಕಳು, ಪೋಷಕರು ಮತ್ತು ಶಿಕ್ಷಕರನ್ನು ಶಾಲೆ / ಶಾಲಾ ಸಂಕೀರ್ಣದ ಕಾರ್ಯಕ್ರಮಗಳಲ್ಲಿ ಪರಸ್ಪರ ಭಾಗವಹಿಸಲು ಆಹ್ವಾನಿಸಲಾಗುತ್ತದೆ.

1.6. ಐದು ವರ್ಷಕ್ಕಿಂತ ಮೊದಲು ಪ್ರತಿ ಮಗುವು ECCE ತರಗತಿಗಳಲ್ಲಿ ಬೋಧಿಸಲು ಅರ್ಹತೆಯುಳ್ಳ ಶಿಕ್ಷಕರನ್ನು ಹೊಂದಿರುವ "ಪೂರ್ವಸಿದ್ಧತಾ ತರಗತಿ" ಅಥವಾ "ಬಾಲವಾಟಿಕಾ" (ಅಂದರೆ 1 ನೇ ತರಗತಿಗೆ ಮುಂಚಿತವಾಗಿ) ಗೆ ಹೋಗುತ್ತದೆ ಎಂದು ಭಾವಿಸಲಾಗಿದೆ. ಪೂರ್ವಸಿದ್ಧತಾ ತರಗತಿಯಲ್ಲಿನ ಕಲಿಕೆಯು ಮುಖ್ಯವಾಗಿ ಜ್ಞಾನಾತ್ಮಕ, ಭಾವನಾತ್ಮಕ ಮತ್ತು ಮನೋಗತ್ಯಾತ್ಮಕ ಸಾಮರ್ಥ್ಯಗಳು ಮತ್ತು ಆರಂಭಿಕ ಅಕ್ಷರ ಜ್ಞಾನ ಹಾಗೂ ಗಣಿತ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವತ್ತ ಗಮನಹರಿಸುತ್ತದೆ ಮತ್ತು ಆಟ–ಆಧಾರಿತ ಕಲಿಕಾ ಸ್ವರೂಪವನ್ನು ಹೊಂದಿದೆ. ಮಧ್ಯಾಹ್ನದ ಬಿಸಿ ಊಟ ಕಾರ್ಯಕ್ರಮವನ್ನು ಪ್ರಾಥಮಿಕ ಶಾಲೆಗಳಲ್ಲಿನ ಪೂರ್ವಸಿದ್ಧತಾ ತರಗತಿಗಳಿಗೂ ವಿಸ್ತರಿಸಲಾಗುವುದು. ಅಂಗನವಾಡಿ ವ್ಯವಸ್ಥೆಯಲ್ಲಿ ಲಭ್ಯವಿರುವ ಆರೋಗ್ಯ ತಪಾಸಣೆ ಮತ್ತು ಮೇಲ್ವಿಚಾರಣೆ ವ್ಯವಸ್ಥೆಯನ್ನು ಅಂಗನವಾಡಿಯ ಪೂರ್ವಸಿದ್ಧತಾ ತರಗತಿಯ ಮತ್ತು ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೂ ಲಭ್ಯಗೊಳಿಸಲಾಗುವುದು.

1.7. ಅಂಗನವಾಡಿಯಲ್ಲಿ ಉನ್ನತ–ಗುಣಮಟ್ಟದ ECCE ಶಿಕ್ಷಕರ ವೃಂದವನ್ನು ಸಿದ್ಧಪಡಿಸಲು, ಪ್ರಸ್ತುತ ಇರುವ ಅಂಗನವಾಡಿ ಕಾರ್ಯಕರ್ತೆ / ಶಿಕ್ಷಕರಿಗೆ NCERT ಅಭಿವೃದ್ಧಿಪಡಿಸಿದ ಪಠ್ಯಕ್ರಮ / ಶಿಕ್ಷಣ ಚೌಕಟ್ಟಿನ ಅನುಸಾರ ವ್ಯವಸ್ಥಿತ ಪ್ರಯತ್ನದ ಮೂಲಕ ತರಬೇತಿ ನೀಡಲಾಗುವುದು. 10 + 2 ಮತ್ತು ಅದಕ್ಕಿಂತ ಹೆಚ್ಚಿನ ಅರ್ಹತೆ ಹೊಂದಿರುವ ಅಂಗನವಾಡಿ ಕಾರ್ಯಕರ್ತೆಯರು/ಶಿಕ್ಷಕರಿಗೆ ಇಅಅಇ ಯಲ್ಲಿ 6 ತಿಂಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗುವುದು; ಮತ್ತು ಕಡಿಮೆ ಶೈಕ್ಷಣಿಕ ಅರ್ಹತೆ ಹೊಂದಿರುವವರಿಗೆ ಪ್ರಾರಂಭಿಕ ಅಕ್ಷರ ಜ್ಞಾನ, ಗಣಿತ ಕೌಶಲ್ಯ ಮತ್ತು ECCE ಯ ಇತರೇ ಸಂಬಂಧಿತ ಅಂಶಗಳನ್ನು ಒಳಗೊಂಡ ಒಂದು ವರ್ಷದ ಡಿಪ್ಲೋಮಾ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಶಿಕ್ಷಕರ ಪ್ರಸ್ತುತ ಕೆಲಸಕ್ಕೆ ಯಾವುದೇ ಅಡ್ಡಿಯಾಗದಂತೆ, ಅವರು ECCE ಗೆ ಬೇಕಾದ ಅರ್ಹತೆಗಳನ್ನು ಪಡೆಯಲು

ಅನುಕೂಲ ಮಾಡಿಕೊಡುವುದರೊಂದಿಗೆ ಈ ಕಾರ್ಯಕ್ರಮಗಳನ್ನು ಡಿಟಿಎಚ್ ಚಾನೆಲ್‌ಗಳು ಮತ್ತು ಸ್ಮಾರ್ಟ್‌ಫೋನ್‌ಗಳನ್ನು ಬಳಸಿಕೊಂಡು ಡಿಜಿಟಲ್ / ದೂರ ಶಿಕ್ಷಣ ವಿಧಾನದ ಮೂಲಕ ಕೈಗೊಳ್ಳಬಹುದು. ಅಂಗನವಾಡಿ ಕಾರ್ಯಕರ್ತರ / ಶಿಕ್ಷಕರ ECCE ತರಬೇತಿಯನ್ನು ಶಾಲಾ ಶಿಕ್ಷಣ ಇಲಾಖೆಯ ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳ ಮಾರ್ಗದರ್ಶನದಲ್ಲಿ ನಡೆಸಬಹುದಾಗಿದ್ದು, ಈ ಕೇಂದ್ರಗಳು ನಿರಂತರ ಮೌಲ್ಯಮಾಪನಕ್ಕಾಗಿ ತಿಂಗಳಲ್ಲಿ ಕನಿಷ್ಠ ಒಂದು ಸಂಪರ್ಕ ತರಬೇತಿಯನ್ನು ಕೈಗೊಳ್ಳಬಹುದಾಗಿದೆ. ದೀರ್ಘಾವಧಿಯಲ್ಲಿ ನಿರ್ದಿಷ್ಟ ವೃತ್ತಿಪರ ತರಬೇತಿ, ಮಾರ್ಗದರ್ಶನ ಕಾರ್ಯವಿಧಾನಗಳು ಮತ್ತು ವೃತ್ತಿ ವಿನ್ಯಾಸದ ಮೂಲಕ ರಾಜ್ಯ ಸರ್ಕಾರಗಳು ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣಕ್ಕಾಗಿ ವೃತ್ತಿಪರವಾಗಿ ಅರ್ಹ ಶಿಕ್ಷಕರನ್ನು ಸಿದ್ಧಪಡಿಸಬೇಕು. ಈ ಶಿಕ್ಷಕರ ಆರಂಭಿಕ ವೃತ್ತಿಪರ ಸಿದ್ಧತೆ ಮತ್ತು ಅವರ ನಿರಂತರ ವೃತ್ತಿಪರ ಅಭಿವೃದ್ಧಿ (CPD) ಗೆ ಅಗತ್ಯವಾದ ಸೌಲಭ್ಯಗಳನ್ನೂ ಸಹ ಒದಗಿಸಲಾಗುವುದು.

**1.8.** ಬುಡಕಟ್ಟು ಪ್ರಾಬಲ್ಯದ ಪ್ರದೇಶಗಳಲ್ಲಿನ ಆಶ್ರಮ ಶಾಲೆಗಳಲ್ಲಿ ಮತ್ತು ಪರ್ಯಾಯ ಶಾಲಾ ಶಿಕ್ಷಣದ ಎಲ್ಲಾ ಸ್ವರೂಪಗಳಲ್ಲಿಯೂ ಹಂತ ಹಂತವಾಗಿ ECCE ಶಿಕ್ಷಣವನ್ನು ಪರಿಚಯಿಸಲಾಗುವುದು. ಆಶ್ರಮ ಶಾಲೆ ಮತ್ತು ಪರ್ಯಾಯ ಶಾಲಾ ಶಿಕ್ಷಣದಲ್ಲಿ ECCE ಯ ಸಮನ್ವಯ ಮತ್ತು ಅನುಷ್ಠಾನದ ಪ್ರಕ್ರಿಯೆಯು ಮೇಲೆ ವಿವರಿಸಿದಂತೆಯೇ ಇರುತ್ತದೆ.

**1.9.** ಪೂರ್ವ–ಪ್ರಾಥಮಿಕ ಶಾಲೆಯಿಂದ ಪ್ರಾಥಮಿಕ ಶಾಲೆಯವರೆಗೆ ಅದರ ನಿರಂತರತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಶಿಕ್ಷಣದ ಬುನಾದಿ ಅಂಶಗಳ ಬಗ್ಗೆ ಸೂಕ್ತ ಗಮನ ನೀಡಲು, ECCE ಪಠ್ಯಕ್ರಮ ಮತ್ತು ಬೋಧನಾ ವಿಧಾನಗಳನ್ನು ರೂಪಿಸುವ ಜವಾಬ್ದಾರಿಯ ಶಿಕ್ಷಣ ಇಲಾಖೆಯದಾಗಿರುತ್ತದೆ. ಪೂರ್ವ ಬಾಲ್ಯಾವಸ್ಥೆ ಮತ್ತು ಶಿಕ್ಷಣ ಪಠ್ಯಕ್ರಮದ ಯೋಜನೆ ಮತ್ತು ಅನುಷ್ಠಾನವನ್ನು ಮಾನವ ಸಂಪನ್ಮೂಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ (WCD), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಬುಡಕಟ್ಟು ವ್ಯವಹಾರಗಳ ಸಚಿವಾಲಯಗಳು ಜಂಟಿಯಾಗಿ ನಿರ್ವಹಿಸುತ್ತವೆ. ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣವನ್ನು ಶಾಲಾ ಶಿಕ್ಷಣದೊಂದಿಗೆ ಸುಗಮವಾಗಿ ಸಂಯೋಜಿಸಲು ನಿರಂತರ ಮಾರ್ಗದರ್ಶನಕ್ಕಾಗಿ ವಿಶೇಷ ಜಂಟಿ ಕಾರ್ಯಪಡೆಯನ್ನು ರಚಿಸಲಾಗುವುದು.

## 2. ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನ : ಕಲಿಕೆಗೆ ತುರ್ತು ಮತ್ತು ಅವಶ್ಯಕವಿರುವ ಅಪೇಕ್ಷಿತ ಅಂಶಗಳು

**2.1.** ಓದುವ ಮತ್ತು ಬರೆಯುವ ಹಾಗೂ ಸಂಖ್ಯೆಗಳೊಂದಿಗೆ ಗಣಿತದ ಮೂಲ ಕ್ರಿಯೆಗಳನ್ನು ನಿರ್ವಹಿಸುವ ಸಾಮರ್ಥ್ಯವು, ಭವಿಷ್ಯದ ಎಲ್ಲಾ ಶಾಲಾ ಶಿಕ್ಷಣ ಮತ್ತು ಜೀವನ ಪರ್ಯಂತ ಕಲಿಕೆಗೆ ಅಗತ್ಯವಾದ ಅಡಿಪಾಯ ಮತ್ತು ಅನಿವಾರ್ಯವಾದ ಪೂರ್ವಾರ್ಹತೆಯಾಗಿದೆ. ಆದರೆ ವಿವಿಧ ಸರ್ಕಾರಿ ಮತ್ತು ಸರ್ಕಾರೇತರ ಸಮೀಕ್ಷೆಗಳು, ನಾವು ಪ್ರಸ್ತುತ ಕಲಿಕಾ ಬಿಕ್ಕಟ್ಟಿನಲ್ಲಿದ್ದೇವೆ ಎಂದು ಸೂಚಿಸುತ್ತವೆ: ದೇಶದಲ್ಲಿ ಪ್ರಸ್ತುತ ಪ್ರಾಥಮಿಕ ಶಾಲೆಯಲ್ಲಿನ ಅಂದಾಜು 5 ಕೋಟಿಗಿಂತ ಅಧಿಕ ವಿದ್ಯಾರ್ಥಿಗಳು ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾಜ್ಞಾನವನ್ನು, ಅಂದರೆ ಮೂಲಪಠ್ಯವನ್ನು ಓದುವ ಮತ್ತು ಗ್ರಹಿಸುವ ಸಾಮರ್ಥ್ಯ ಮತ್ತು ಅಂಕಿ–ಅಂಶಗಳೊಂದಿಗೆ ಮೂಲ ಕ್ರಿಯೆಗಳಾದ ಸಂಕಲನ ಮತ್ತು ವ್ಯವಕಲನವನ್ನು ಕೈಗೊಳ್ಳುವ ಸಾಮರ್ಥ್ಯವನ್ನು ಪಡೆದಿರುವುದಿಲ್ಲ ಎಂದು ಅಂದಾಜಿಸಲಾಗಿದೆ.

**2.2.** ಎಲ್ಲಾ ಮಕ್ಕಳು ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನವನ್ನು ಪಡೆಯುವಂತೆ ಮಾಡುವುದು, ಅನೇಕ ವಿಷಯಗಳಲ್ಲಿ ತಕ್ಷಣದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿರುವ ಮತ್ತು ಅಲ್ಪಾವಧಿಯಲ್ಲಿ ಸಾಧಿಸಬಹುದಾದ ಸ್ಪಷ್ಟ ಗುರಿಗಳೊಂದಿಗೆ (ಪ್ರತಿಯೊಬ್ಬ ವಿದ್ಯಾರ್ಥಿಯು 3 ನೇ ತರಗತಿಯ ಹೊತ್ತಿಗೆ ಬುನಾದಿ ಅಕ್ಷರ ಜ್ಞಾನ ಮತ್ತು ಗಣಿತ ಕೌಶಲ್ಯವನ್ನು ಪಡೆಯುವುದನ್ನು ಒಳಗೊಂಡಂತೆ) ತುರ್ತು ರಾಷ್ಟ್ರೀಯ ಮಿಷನ್ (ಅಭಿಯಾನ) ಆಗಿರುತ್ತದೆ. 2025 ರ ವೇಳೆಗೆ ಪ್ರಾಥಮಿಕ ಶಾಲೆಯಲ್ಲಿನ ಎಲ್ಲಾ ವಿದ್ಯಾರ್ಥಿಗಳು ಸಾರ್ವತ್ರಿಕ ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನವನ್ನು ಸಾಧಿಸುವುದು ಶಿಕ್ಷಣ ವ್ಯವಸ್ಥೆಯ ಪ್ರಥಮ ಆದ್ಯತೆಯಾಗಿದೆ. ಈ ಮೂಲಭೂತ ಕಲಿಕೆಯ ಅವಶ್ಯಕತೆಯನ್ನು (ಅಂದರೆ, ಬುನಾದಿ ಹಂತದಲ್ಲಿ ಓದುವಿಕೆ, ಬರೆಯುವಿಕೆ ಮತ್ತು ಅಂಕಗಣಿತ) ಮೊದಲು ಸಾಧಿಸಿದರೆ ಮಾತ್ರ ಈ ನೀತಿಯ ಉಳಿದ ಭಾಗವು ನಮ್ಮ ವಿದ್ಯಾರ್ಥಿಗಳಿಗೆ ಪ್ರಸ್ತುತವಾಗುತ್ತದೆ. ಈ ನಿಟ್ಟಿನಲ್ಲಿ, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಆದ್ಯತೆಯ ಮೇರೆಗೆ ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನದ ರಾಷ್ಟ್ರೀಯ ಮಿಷನ್ ಅನ್ನು ಸ್ಥಾಪಿಸುತ್ತದೆ. ಅಂತೆಯೇ, ಎಲ್ಲಾ ರಾಜ್ಯ ಸರ್ಕಾರಗಳು, ಕೇಂದ್ರಾಡಳಿತ ಪ್ರದೇಶಗಳು ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಸಾರ್ವತ್ರಿಕ ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನವನ್ನು ಸಾಧಿಸಲು, 2025ರ ವೇಳೆಗೆ ಸಾಧಿಸಬೇಕಾದ ಹಂತವಾರು ಗುರಿಗಳನ್ನು ಗುರುತಿಸಲು ಮತ್ತು ಅದರ ಪ್ರಗತಿಯನ್ನು ಸೂಕ್ಷ್ಮವಾಗಿ ಪತ್ತೆ ಹಚ್ಚಲು ಮತ್ತು ಮೇಲ್ವಿಚಾರಣೆ ಮಾಡಲು ಅನುಷ್ಠಾನ ಯೋಜನೆಯನ್ನು ತಕ್ಷಣ ಸಿದ್ಧಪಡಿಸುತ್ತವೆ.

**2.3.** ಮೊದಲನೆಯದಾಗಿ, ಶಿಕ್ಷಕರ ಖಾಲಿ ಹುದ್ದೆಗಳನ್ನು ವಿಶೇಷವಾಗಿ ಅನನುಕೂಲಕರ ಪ್ರದೇಶಗಳು ಮತ್ತು ಅಧಿಕ ವಿದ್ಯಾರ್ಥಿ–ಶಿಕ್ಷಕ ಅನುಪಾತವಿರುವ ಅಥವಾ ಹೆಚ್ಚಿನ ಪ್ರಮಾಣದ ಅನಕ್ಷರತೆ ಇರುವ ಪ್ರದೇಶಗಳಲ್ಲಿ ಶೀಘ್ರವಾಗಿ, ನಿಗದಿತ ಸಮಯದಲ್ಲಿ ಭರ್ತಿ ಮಾಡಲಾಗುತ್ತದೆ. ಸ್ಥಳೀಯ ಶಿಕ್ಷಕರನ್ನು ಅಥವಾ ಸ್ಥಳೀಯ ಭಾಷೆಗಳ ಪರಿಚಯವಿರುವವರನ್ನು ನೇಮಿಸಿಕೊಳ್ಳಲು ವಿಶೇಷ ಗಮನ ನೀಡಲಾಗುವುದು. ಪ್ರತಿ ಶಾಲಾ ಹಂತದಲ್ಲಿ 30: 1 ವಿದ್ಯಾರ್ಥಿ–ಶಿಕ್ಷಕ ಅನುಪಾತ ಇರುವುದರಿಂದ (PTR) ಖಾತ್ರಿಪಡಿಸಲಾಗುತ್ತದೆ; ಹೆಚ್ಚಿನ ಸಂಖ್ಯೆಯ ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳನ್ನು ಹೊಂದಿರುವ ಪ್ರದೇಶಗಳು 25: 1 PTR ಅನ್ನು ಹೊಂದಬಹುದಾಗಿದೆ. ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನವನ್ನು ಕಲಿಸಲು ಶಿಕ್ಷಕರಿಗೆ ನಿರಂತರ ವೃತ್ತಿಪರ ಅಭಿವೃದ್ಧಿಯೊಂದಿಗೆ ತರಬೇತಿ, ಪ್ರೋತ್ಸಾಹ ಮತ್ತು ಬೆಂಬಲವನ್ನು ನೀಡಲಾಗುವುದು.

**2.4.** ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ, ಪೂರ್ವಸಿದ್ಧತಾ ಮತ್ತು ಮಧ್ಯಮ ಹಂತದ ಶಾಲಾ ಪಠ್ಯಕ್ರಮದಾದ್ಯಂತ ವಿದ್ಯಾರ್ಥಿಯ ಸಾಧನೆಯನ್ನು ಗಮನಿಸಲು, ನಿರಂತರ ಸಂಕಲಾನಾತ್ಮಕ ಮೌಲ್ಯಮಾಪನದೊಂದಿಗೆ, ಪ್ರತಿ ವಿದ್ಯಾರ್ಥಿಯ ಕಲಿಕೆಯನ್ನು ಖಚಿತಪಡಿಸಲು, ಸಾಮಾನ್ಯವಾಗಿ ಓದುವುದು, ಬರೆಯುವುದು, ಮಾತನಾಡುವುದು, ಎಣಿಸುವುದು, ಅಂಕಗಣಿತ ಮತ್ತು ಗಣಿತದ ಚಿಂತನೆಗಳಿಗೆ ಮೇಲೆ ಮತ್ತು ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನಕ್ಕೆ ಹೆಚ್ಚಿನ ಗಮನ ನೀಡಲಾಗುತ್ತದೆ. ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಮತ್ತು ಉತ್ತೇಜಿಸಲು ಪ್ರತಿದಿನ ನಿರ್ದಿಷ್ಟ ಸಮಯದಲ್ಲಿ ಮತ್ತು ಈ ವಿಷಯಗಳನ್ನು ಒಳಗೊಂಡಂತೆ ವರ್ಷಪೂರ್ತಿ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತದೆ. ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನಕ್ಕೆ ಹೆಚ್ಚು ಒತ್ತು ನೀಡುವಂತೆ ಶಿಕ್ಷಕರ ಶಿಕ್ಷಣ ಮತ್ತು ಪ್ರಾರಂಭಿಕ ತರಗತಿಗಳ ಪಠ್ಯಕ್ರಮವನ್ನು ಮರು ವಿನ್ಯಾಸಗೊಳಿಸಲಾಗುತ್ತದೆ.

**2.5.** ಪ್ರಸ್ತುತ ECCE ಶಿಕ್ಷಣವು ಸಾರ್ವತ್ರಿಕವಾಗಿ ಲಭ್ಯವಿಲ್ಲದಿರುವುದರಿಂದ 1ನೇ ತರಗತಿಯ ಮೊದಲ ಕೆಲವು ವಾರಗಳಲ್ಲಿ ಈಗಾಗಲೇ ಹೆಚ್ಚಿನ ಸಂಖ್ಯೆಯ ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿರುತ್ತಾರೆ. ಆದ್ದರಿಂದ, ಎಲ್ಲಾ ವಿದ್ಯಾರ್ಥಿಗಳು ಶಾಲಾ ಶಿಕ್ಷಣ ಪಡೆಯಲು ಸಿದ್ಧರಾಗಿದ್ದಾರೆ ಎನ್ನುವುದನ್ನು ಖಚಿತಪಡಿಸಿಕೊಳ್ಳಲು, 1ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ವರ್ಣಮಾಲೆಗಳು, ಶಬ್ದಗಳು, ಪದಗಳು, ಬಣ್ಣಗಳು, ಆಕಾರಗಳ ಕಲಿಕೆಯ ಕುರಿತಂತೆ ಚಟುವಟಿಕೆಗಳು ಮತ್ತು ಅಭ್ಯಾಸ ಪುಸ್ತಕಗಳನ್ನು ಸಹಪಾಠಿಗಳು ಮತ್ತು ಪೋಷಕರ ಸಹಕಾರದೊಂದಿಗೆ, ಮಧ್ಯಂತರ 3 ತಿಂಗಳ ಆಟ–ಆಧಾರಿತ 'ಶಾಲಾ ತಯಾರಿ ಮಾಡ್ಯೂಲ್' ಗಳನ್ನು NCERT ಮತ್ತು SCERT ಗಳು ಅಭಿವೃದ್ಧಿಪಡಿಸುತ್ತವೆ.

**2.6.** ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನ ಕುರಿತಂತೆ ಉನ್ನತ–ಗುಣಮಟ್ಟದ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರವು DIKSHA ಡಿಜಿಟಲ್ ವೇದಿಕೆಯಲ್ಲಿ ಲಭ್ಯವಾಗುವಂತೆ ಕ್ರಮವಹಿಸಲಾಗುವುದು. ಶಿಕ್ಷಕರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸಲು ಮತ್ತು ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ನಡುವೆ ಇರುವ ಯಾವುದೇ ಭಾಷೆಯ ಅಡೆತಡೆಗಳನ್ನು ನಿವಾರಿಸಲು ತಾಂತ್ರಿಕ ಸಹಯೋಗವನ್ನು ಪ್ರಾಯೋಗಿಕವಾಗಿ ಪರೀಕ್ಷಿಸಲಾಗುತ್ತದೆ ಮತ್ತು ಅನುಷ್ಠಾನಗೊಳಿಸಲಾಗುತ್ತದೆ.

**2.7.** ಪ್ರಸ್ತುತ ಕಲಿಕೆಯ ಬಿಕ್ಕಟ್ಟಿನ ಪ್ರಮಾಣದಿಂದಾಗಿ ಸಾರ್ವತ್ರಿಕ ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನವನ್ನು ಸಾಧಿಸುವ ಉದ್ದೇಶದಿಂದ ಶಿಕ್ಷಕರನ್ನು ಬೆಂಬಲಿಸಲು ಎಲ್ಲಾ ಕಾರ್ಯಸಾಧ್ಯ ವಿಧಾನಗಳನ್ನು ಪರಿಶೋಧಿಸಲಾಗುತ್ತದೆ. ವಿದ್ಯಾರ್ಥಿಗಳು ಪರಸ್ಪರ ಒಬ್ಬರಿಗೊಬ್ಬರು ಬೋಧಿಸುವುದರಿಂದ ಕಲಿಯುವವರಿಗೆ ಮಾತ್ರವಲ್ಲ, ಕಲಿಸುವವರಿಗೂ ಕಲಿಯಲು ಅತ್ಯಂತ ಪರಿಣಾಮಕಾರಿ ಎಂದು ಪ್ರಪಂಚದಾದ್ಯಂತ ಕೈಗೊಳ್ಳಲಾದ ಅಧ್ಯಯನಗಳು ತಿಳಿಸುತ್ತವೆ. ಆದ್ದರಿಂದ ತರಬೇತಿ ಪಡೆದ ಶಿಕ್ಷಕರ ಮೇಲ್ವಿಚಾರಣೆಯಲ್ಲಿ ಮತ್ತು ಸುರಕ್ಷತಾ ಅಂಶಗಳನ್ನು ಅನುಸರಿಸುವುದರೊಂದಿಗೂ ಸಹ ವಿದ್ಯಾರ್ಥಿಗಳಿಗಾಗಿ ಸಹಪಾಠಿ ಬೋಧನೆಯನ್ನು ಸ್ವಯಂಪ್ರೇರಿತ ಮತ್ತು ಸಂತೋಷದಾಯಕ ಚಟುವಟಿಕೆಯಾಗಿ ತೆಗೆದುಕೊಳ್ಳಬಹುದು. ಇದರೊಂದಿಗೆ ಸ್ಥಳೀಯ ಮತ್ತು ಅದರಾಚೆಯ ಸಮುದಾಯದಿಂದ ತರಬೇತಿ ಪಡೆದ ಸ್ವಯಂಸೇವಕರಿಗೆ ಈ ದೊಡ್ಡ ಪ್ರಮಾಣದ ಅಭಿಯಾನದಲ್ಲಿ ಭಾಗವಹಿಸಲು ಇದು ತುಂಬಾ ಸುಲಭವಾಗುತ್ತದೆ. ಸಮುದಾಯದ ಪ್ರತಿಯೊಬ್ಬ ಸಾಕ್ಷರ ಸದಸ್ಯರು ಒಬ್ಬ ವಿದ್ಯಾರ್ಥಿ / ವ್ಯಕ್ತಿಗೆ ಹೇಗೆ ಓದುವುದು ಎಂದು ಕಲಿಸಲು ಬದ್ಧರಾಗಬಹುದು ಮತ್ತು ಅದರಿಂದ ದೇಶದ ಚಿತ್ರಣ ಬಹಳ ಬೇಗನೆ ಬದಲಾಗಬಹುದಾಗಿದೆ. ರಾಜ್ಯಗಳು ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನವನ್ನು ಉತ್ತೇಜಿಸುವ ಈ ರಾಷ್ಟ್ರವ್ಯಾಪಿ ಅಭಿಯಾನದಲ್ಲಿ, ಇಂತಹ ಸಹಪಾಠಿ ಬೋಧನೆ ಮತ್ತು ಸ್ವಯಂಸೇವಾ ಚಟುವಟಿಕೆಗಳನ್ನು ಹಾಗೂ ಕಲಿಯುವವರನ್ನು ಬೆಂಬಲಿಸುವ ಸಲುವಾಗಿ ಇತರ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ನವೀನ ಮಾದರಿಗಳನ್ನು ಪರಿಗಣಿಸಬಹುದಾಗಿದೆ.

**2.8.** ಎಲ್ಲಾ ಸ್ಥಳೀಯ ಮತ್ತು ಭಾರತೀಯ ಭಾಷೆಗಳಲ್ಲಿ ಉತ್ತಮ–ಗುಣಮಟ್ಟದ ಅನುವಾದ (ಅಗತ್ಯವಿದ್ದರೆ, ತಂತ್ರಜ್ಞಾನದ ನೆರವು ಪಡೆದು) ಸೇರಿದಂತೆ ಎಲ್ಲಾ ಹಂತದ ವಿದ್ಯಾರ್ಥಿಗಳಿಗೆ ಆನಂದದಾಯಕ ಮತ್ತು ಸ್ಫೂರ್ತಿದಾಯಕ ಪುಸ್ತಕಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ ಮತ್ತು ಈ ಪುಸ್ತಕಗಳು ಶಾಲಾ ಮತ್ತು ಸ್ಥಳೀಯ ಸಾರ್ವಜನಿಕ ಗ್ರಂಥಾಲಯಗಳಲ್ಲಿ

ವ್ಯಾಪಕವಾಗಿ ಲಭ್ಯವಾಗುವಂತೆ ನೋಡಿಕೊಳ್ಳಲಾಗುತ್ತದೆ. ದೇಶಾದ್ಯಂತ ಓದುವ ಸಂಸ್ಕೃತಿಯನ್ನು ಬೆಳೆಸಲು ಸಾರ್ವಜನಿಕ ಮತ್ತು ಶಾಲಾ ಗ್ರಂಥಾಲಯಗಳನ್ನು ವಿಸ್ತರಿಸಲಾಗುವುದು. ಡಿಜಿಟಲ್ ಗ್ರಂಥಾಲಯಗಳನ್ನೂ ಸಹ ಸ್ಥಾಪಿಸಲಾಗುವುದು. ಶಾಲಾ ನಂತರ ಸಮಯದಲ್ಲಿ ಸಮುದಾಯಕ್ಕೆ ಸೇವೆ ಸಲ್ಲಿಸಲು ವಿಶೇಷವಾಗಿ ಹಳ್ಳಿಗಳಲ್ಲಿ ಶಾಲಾ ಗ್ರಂಥಾಲಯಗಳನ್ನು ಸ್ಥಾಪಿಸಲಾಗುವುದು ಮತ್ತು ವ್ಯಾಪಕ ಓದುವಿಕೆಯನ್ನು ಮತ್ತಷ್ಟು ಸುಗಮಗೊಳಿಸಲು ಮತ್ತು ಉತ್ತೇಜಿಸಲು ಸಾರ್ವಜನಿಕ / ಶಾಲಾ ಗ್ರಂಥಾಲಯಗಳಲ್ಲಿ ಪುಸ್ತಕ ಕ್ಲಬ್ ಗಳನ್ನು ತೆರೆಯಲಾಗುವುದು. ರಾಷ್ಟ್ರೀಯ ಪುಸ್ತಕ ಪ್ರಚಾರ ನೀತಿಯನ್ನು ರೂಪಿಸಲಾಗುವುದು ಮತ್ತು ವಿವಿಧ ಪ್ರದೇಶ, ಭಾಷೆಗಳು, ಹಂತಗಳು ಮತ್ತು ಪ್ರಕಾರಗಳಲ್ಲಿ ಪುಸ್ತಕಗಳ ಲಭ್ಯತೆ, ಗುಣಮಟ್ಟ ಮತ್ತು ಓದುಗರ ಪ್ರಮಾಣವನ್ನು ಖಚಿತಪಡಿಸಿಕೊಳ್ಳಲು ವ್ಯಾಪಕ ಉಪಕ್ರಮಗಳನ್ನು ಕೈಗೊಳ್ಳಲಾಗುವುದು.

**2.9.** ಮಕ್ಕಳು ಅಪೌಷ್ಟಿಕತೆಯಿಂದ ಅಥವಾ ಅನಾರೋಗ್ಯದಿಂದ ಬಳಲುತ್ತಿರುವಾಗ ಉತ್ತಮವಾಗಿ ಕಲಿಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಮಕ್ಕಳ ಪೋಷಣೆ ಮತ್ತು ಆರೋಗ್ಯವನ್ನು (ಮಾನಸಿಕ ಆರೋಗ್ಯವನ್ನು ಒಳಗೊಂಡಂತೆ) ಆರೋಗ್ಯಕರ ಊಟ ಒದಗಿಸುವುದರ ಮೂಲಕ ಮತ್ತು ಸುಶಿಕ್ಷಿತ ಸಾಮಾಜಿಕ ಕಾರ್ಯಕರ್ತರು, ಸಲಹೆಗಾರರು ಮತ್ತು ಶಾಲಾ ವ್ಯವಸ್ಥೆಯಲ್ಲಿ ಸಮುದಾಯದ ಒಳಗೊಳ್ಳುವಿಕೆಯ ಮೂಲಕ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು. ಇದಲ್ಲದೆ ಬೆಳಗಿನ ಪೌಷ್ಠಿಕ ಉಪಾಹಾರದ ನಂತರದ ಸಮಯವು ಜ್ಞಾನಾತ್ಮಕವಾಗಿ ಹೆಚ್ಚು ಬೇಡಿಕೆಯಿರುವ ವಿಷಯಗಳ ಅಧ್ಯಯನಕ್ಕೆ ಸೂಕ್ತವಾಗಿರುತ್ತದೆ ಎಂದು ಸಂಶೋಧನೆಯಿಂದ ತಿಳಿದು ಬಂದ ಸಂಗತಿಯಾಗಿದೆ. ಆದ್ದರಿಂದ ಮಧ್ಯಾಹ್ನದ ಊಟಕ್ಕೆ ಹೆಚ್ಚುವರಿಯಾಗಿ, ಸರಳವಾದ ಆದರೆ ಶಕ್ತಿಯುತವಾದ ಉಪಾಹಾರವನ್ನು ಒದಗಿಸುವ ಮೂಲಕ ಈ ಸಮಯವನ್ನು ಬಳಸಿಕೊಳ್ಳಬಹುದು. ಬಿಸಿಯಾದ ಊಟ ಒದಗಿಸಲು ಸಾಧ್ಯವಿರದ ಸ್ಥಳಗಳಲ್ಲಿ, ಸರಳವಾದ ಆದರೆ ಪೌಷ್ಟಿಕ ಊಟ, ಅಂದರೆ ನೆಲಗಡಲೆ / ಚಿಕ್ಕಿ / ಅಥವಾ ಸ್ಥಳೀಯವಾಗಿ ಲಭ್ಯವಿರುವ ಹಣ್ಣುಗಳು ಇತ್ಯಾದಿಗಳನ್ನು ಕೊಡಬಹುದಾಗಿದೆ. ಶಾಲೆಗಳಲ್ಲಿ ಎಲ್ಲಾ ಮಕ್ಕಳು ವಿಶೇಷವಾಗಿ 100% ರೋಗನಿರೋಧಕತೆಯನ್ನು ಸಾಧಿಸಲು ನಿಯಮಿತವಾಗಿ ಆರೋಗ್ಯ ತಪಾಸಣೆಗೆ ಒಳಗಾಗಬೇಕು ಮತ್ತು ಅದನ್ನು ಮೇಲ್ವಿಚಾರಣೆ ಮಾಡಲು ಆರೋಗ್ಯ ಕಾರ್ಡ್‌ಗಳನ್ನು ನೀಡಲಾಗುವುದು.

## 3. ಶಾಲೆಬಿಟ್ಟ ಮಕ್ಕಳ ದರವನ್ನು ಕಡಿಮೆಗೊಳಿಸುವುದು ಮತ್ತು ಎಲ್ಲಾ ಹಂತಗಳಲ್ಲಿ ಶಿಕ್ಷಣದ ಸಾರ್ವತ್ರಿಕ ಲಭ್ಯತೆಯನ್ನು ಖಚಿತಪಡಿಸುವುದು

**3.1.** ಮಕ್ಕಳು ಶಾಲೆಗೆ ದಾಖಲಾಗಿದ್ದಾರೆಯೇ ಮತ್ತು ಹಾಜರಾಗುತ್ತಿದ್ದಾರೆಯೇ ಎಂದು ಖಚಿತಪಡಿಸಿಕೊಳ್ಳುವುದು ಶಾಲಾ ವ್ಯವಸ್ಥೆಯ ಪ್ರಾಥಮಿಕ ಗುರಿಗಳಲ್ಲಿ ಒಂದಾಗಿರಬೇಕು. ಸರ್ವ ಶಿಕ್ಷಣ ಅಭಿಯಾನ (ಈಗ ಸಮಗ್ರ ಶಿಕ್ಷಣ) ಮತ್ತು ಶಿಕ್ಷಣ ಹಕ್ಕು ಕಾಯ್ದೆಯಂತಹ ಉಪಕ್ರಮಗಳ ಮೂಲಕ ಭಾರತವು ಇತ್ತೀಚಿನ ವರ್ಷಗಳಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಸಾರ್ವತ್ರಿಕ ದಾಖಲಾತಿಯನ್ನು ಸಾಧಿಸುವಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. ಆದಾಗ್ಯೂ, ನಂತರದ ತರಗತಿಗಳ ದತ್ತಾಂಶವು ಮಕ್ಕಳನ್ನು ಶಾಲಾ ವ್ಯವಸ್ಥೆಯಲ್ಲಿ ಉಳಿಸಿಕೊಳ್ಳುವಲ್ಲಿ ಎದುರಿಸುತ್ತಿರುವ ಕೆಲವು ಗಂಭೀರ ಸಮಸ್ಯೆಗಳನ್ನು ಸೂಚಿಸುತ್ತವೆ. 6–8ನೇ ತರಗತಿಗಳಿಗೆ GER (ದಾಖಲಾತಿ ಅನುಪಾತ) 90.9% ಆಗಿದ್ದರೆ, 9–10 ಮತ್ತು 11–12 ತರಗತಿಗಳಿಗೆ ಇದು ಕ್ರಮವಾಗಿ 79.3% ಮತ್ತು 56.5% ಮಾತ್ರವಾಗಿದ್ದು, ದಾಖಲಾದ ವಿದ್ಯಾರ್ಥಿಗಳಲ್ಲಿ ಗಮನಾರ್ಹ ಪ್ರಮಾಣದ ವಿದ್ಯಾರ್ಥಿಗಳು 5 ನೇ ತರಗತಿಯ ನಂತರ ಮತ್ತು ವಿಶೇಷವಾಗಿ 8 ನೇ ತರಗತಿಯ ನಂತರ ಶಾಲೆಯಿಂದ ಹೊರಗುಳಿಯುತ್ತಾರೆ ಎಂದು ಸೂಚಿಸುತ್ತದೆ. 2017–18ರಲ್ಲಿ NSSO ನಡೆಸಿದ 75 ನೇ ಸುತ್ತಿನ ಗೃಹ ಸಮೀಕ್ಷೆಯ ಪ್ರಕಾರ, 6 ರಿಂದ 17 ವರ್ಷದೊಳಗಿನ ಶಾಲಾ ಮಕ್ಕಳ ಸಂಖ್ಯೆ 3.22 ಕೋಟಿ ಆಗಿರುತ್ತದೆ. 2030 ರ ವೇಳೆಗೆ ಪೂರ್ವ ಪ್ರಾಥಮಿಕದಿಂದ ಮಾಧ್ಯಮಿಕ ಹಂತದವರೆಗೆ 100% ಒಟ್ಟು ದಾಖಲಾತಿ ಅನುಪಾತವನ್ನು ಸಾಧಿಸುವ ಗುರಿಯೊಂದಿಗೆ ಈ ಮಕ್ಕಳನ್ನು ಸಾಧ್ಯವಾದಷ್ಟು ಬೇಗ ಪುನಃ ಶೈಕ್ಷಣಿಕ ಕ್ಷೇತ್ರಕ್ಕೆ ಕರೆತರುವುದು ಮತ್ತು ಹೆಚ್ಚಿನ ವಿದ್ಯಾರ್ಥಿಗಳು ಹೊರಗುಳಿಯುವುದನ್ನು ತಡೆಯುವುದು ಮೊದಲ ಆದ್ಯತೆಯಾಗಿದೆ. ಶಾಲಾ ಪೂರ್ವ ಹಂತದಿಂದ 12 ನೇ ತರಗತಿಯವರೆಗೆ ಸಾರ್ವತ್ರಿಕ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಮತ್ತು ವೃತ್ತಿಪರ ಶಿಕ್ಷಣ ಸೇರಿದಂತೆ ಗುಣಮಟ್ಟದ ಸಮಗ್ರ ಶಿಕ್ಷಣವನ್ನು ಪಡೆಯಲು ದೇಶದ ಎಲ್ಲ ಮಕ್ಕಳಿಗೆ ಅವಕಾಶವನ್ನು ಒದಗಿಸಲು ಸಮಗ್ರವಾದ ಪ್ರಯತ್ನವನ್ನು ರಾಷ್ಟ್ರ ಮಟ್ಟದಲ್ಲಿ ಮಾಡಲಾಗುವುದು.

**3.2.** ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು ಮತ್ತು ಇನ್ನು ಮುಂದೆ ಹೆಚ್ಚಿನ ಮಕ್ಕಳು ಶಾಲೆ ಬಿಡದಂತೆ ತಡೆಯಲು ಒಟ್ಟಾರೆ ಎರಡು ಉಪಕ್ರಮಗಳನ್ನು ಕೈಗೊಳ್ಳಲಾಗುವುದು. ಮೊದಲನೆಯ ಉಪಕ್ರಮವೆಂದರೆ, ಎಲ್ಲಾ ವಿದ್ಯಾರ್ಥಿಗಳಿಗೆ ಪೂರ್ವ ಪ್ರಾಥಮಿಕ ಶಾಲೆಯಿಂದ 12 ನೇ ತರಗತಿಯವರೆಗೆ ಎಲ್ಲಾ ಹಂತಗಳಲ್ಲಿ ಸುರಕ್ಷಿತ ಮತ್ತು ಗುಣಮಟ್ಟದ ಶಾಲಾ ಶಿಕ್ಷಣ ದೊರಕುವಂತೆ ಮಾಡಲು ಪರಿಣಾಮಕಾರಿ ಮತ್ತು ಸಾಕಷ್ಟು ಪ್ರಮಾಣದ ಮೂಲಸೌಕರ್ಯಗಳನ್ನು

ಒದಗಿಸುವುದು. ಪ್ರತಿ ಹಂತದಲ್ಲೂ ನಿಯಮಿತವಾಗಿ ತರಬೇತಿ ಪಡೆದ ಶಿಕ್ಷಕರನ್ನು ಒದಗಿಸುವುದರ ಜೊತೆಗೆ, ಯಾವುದೇ ಶಾಲೆಗೆ ಮೂಲಸೌಕರ್ಯಗಳ ಕೊರತೆಯಾಗದಂತೆ ವಿಶೇಷ ಕಾಳಜಿ ವಹಿಸಬೇಕು. ಸರ್ಕಾರಿ ಶಾಲೆಗಳ ಮೇಲಿನ ವಿಶ್ವಾಸಾರ್ಹತೆಯನ್ನು ಪುನಃ ಸ್ಥಾಪಿಸಲಾಗುವುದು ಮತ್ತು ಎಲ್ಲಾ ಮಕ್ಕಳು ಗುಣಮಟ್ಟದ ಶಾಲೆಗೆ ಹಾಜರಾಗಲು ಮತ್ತು ಸೂಕ್ತ ಹಂತದಲ್ಲಿ ಕಲಿಯಲು ಅವಕಾಶವಿರುವಂತೆ ಈಗಾಗಲೇ ಅಸ್ತಿತ್ವದಲ್ಲಿರುವ ಶಾಲೆಗಳನ್ನು ನವೀಕರಿಸುವ ಮತ್ತು ವಿಸ್ತರಿಸುವ ಮೂಲಕ, ಶಾಲೆಗಳಿಲ್ಲದ ಪ್ರದೇಶಗಳಲ್ಲಿ ಹೆಚ್ಚುವರಿ ಗುಣಮಟ್ಟದ ಶಾಲೆಗಳನ್ನು ನಿರ್ಮಿಸುವ ಮೂಲಕ ಮತ್ತು ವಿಶೇಷವಾಗಿ ಹೆಣ್ಣು ಮಕ್ಕಳಿಗೆ, ಸುರಕ್ಷಿತ ಮತ್ತು ಪ್ರಾಯೋಗಿಕವಾದ ಸಂಚಾರಿ ಸೌಲಭ್ಯವನ್ನು ಮತ್ತು ವಸತಿ ಶಾಲೆಗಳನ್ನು ಒದಗಿಸುವ ಮೂಲಕ ಇದನ್ನು ಸಾಧಿಸಲಾಗುತ್ತದೆ. ವಲಸೆ ಕಾರ್ಮಿಕರ ಮಕ್ಕಳು ಮತ್ತು ವಿವಿಧ ಸನ್ನಿವೇಶಗಳಿಂದಾಗಿ ಶಾಲೆಯಿಂದ ಹೊರಗುಳಿಯುತ್ತಿರುವ ಇತರ ಮಕ್ಕಳನ್ನು ಶಿಕ್ಷಣದ ಮುಖ್ಯವಾಹಿನಿಗೆ ಮರಳಿ ತರಲು ನಾಗರಿಕ ಸಮಾಜದ ಸಹಕಾರದೊಂದಿಗೆ ಪರ್ಯಾಯ ಮತ್ತು ನವೀನ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

3.3. ಎರಡನೆಯ ಉಪಕ್ರಮವೆಂದರೆ, ವಿದ್ಯಾರ್ಥಿಗಳು (ಎ) ಶಾಲೆಗೆ ದಾಖಲಾಗಿದ್ದಾರೆ ಮತ್ತು ಶಾಲೆಗೆ ಹಾಜರಾಗುತ್ತಾರೆ. (ಬಿ) ಅವರು ಕಲಿಕೆಯಲ್ಲಿ ಹಿಂದುಳಿದಿದ್ದರೆ ಅಥವಾ ಶಾಲೆಯಿಂದ ಹೊರಗುಳಿದಿದ್ದರೆ, ಶಾಲೆಗೆ ಪುನಃ ಪ್ರವೇಶಿಸಲು ಸೂಕ್ತ ಅವಕಾಶಗಳನ್ನು ಹೊಂದಿದ್ದಾರೆ ಎಂದು ಖಚಿತಪಡಿಸಿಕೊಳ್ಳಲು ವಿದ್ಯಾರ್ಥಿಗಳನ್ನು ಮತ್ತು ಅವರ ಕಲಿಕೆಯ ಮಟ್ಟವನ್ನು ಎಚ್ಚರಿಕೆಯಿಂದ ಕಂಡುಕೊಳ್ಳುವ ಮೂಲಕ ಶಾಲೆಯಲ್ಲಿ ಸಾರ್ವತ್ರಿಕ ಭಾಗವಹಿಸುವಿಕೆಯನ್ನು ಸಾಧಿಸುವುದು. ಬುನಾದಿ ಹಂತದಿಂದ 12ನೇ ತರಗತಿಯವರೆಗೆ, 18 ವರ್ಷ ವಯಸ್ಸಿನವರೆಗಿನ ಎಲ್ಲ ಮಕ್ಕಳಿಗೆ ಸಮಾನ ಮತ್ತು ಗುಣಮಟ್ಟದ ಶಿಕ್ಷಣವನ್ನು ಒದಗಿಸಲು, ಸೂಕ್ತವಾದ ಸೌಲಭ್ಯಯುಕ್ತ ವ್ಯವಸ್ಥೆಗಳನ್ನು ಜಾರಿಗೆ ತರಬೇಕು. ಶಾಲೆಗಳು / ಶಾಲಾ ಸಂಕೀರ್ಣಗಳು ಮತ್ತು ಶಿಕ್ಷಕರರೊಂದಿಗೆ ಸಂಪರ್ಕ ಹೊಂದಿರುವ ಆಪ್ತ ಸಲಹೆಗಾರರು ಅಥವಾ ತರಬೇತಿ ಪಡೆದ ಸಾಮಾಜಿಕ ಕಾರ್ಯಕರ್ತರು, ವಿದ್ಯಾರ್ಥಿಗಳು ಮತ್ತು ಅವರ ಪೋಷಕರೊಂದಿಗೆ ನಿರಂತರವಾಗಿ ಕೆಲಸ ಮಾಡುತ್ತಾರೆ ಮತ್ತು ಎಲ್ಲಾ ಶಾಲಾ–ವಯಸ್ಸಿನ ಮಕ್ಕಳು ಶಾಲೆಯಲ್ಲಿ ದಾಖಲಾಗಿದ್ದಾರೆ ಮತ್ತು ಕಲಿಯುತ್ತಿದ್ದಾರೆ ಎಂದು ಖಚಿತಪಡಿಸಿಕೊಳ್ಳಲು ಸಮುದಾಯಗಳೊಂದಿಗೆ ಸಂಪರ್ಕದಲ್ಲಿರುತ್ತಾರೆ. ನಾಗರಿಕ ಸಮಾಜ ಸಂಸ್ಥೆಗಳು / ಸಾಮಾಜಿಕ ನ್ಯಾಯ ಮತ್ತು ಸಬಲೀಕರಣದ ಇಲಾಖೆಗಳಿಂದ ತರಬೇತಿ ಪಡೆದ ಮತ್ತು ಅರ್ಹ ಸಾಮಾಜಿಕ ಕಾರ್ಯಕರ್ತರು ಹಾಗೂ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ವಿಕಲಚೇತನರ ಸಬಲೀಕರಣವನ್ನು ನಿರ್ವಹಿಸುವ ಸರ್ಕಾರಿ ಅಧಿಕಾರಿಗಳನ್ನು, ರಾಜ್ಯ ಸರ್ಕಾರಗಳು ಅಳವಡಿಸಿಕೊಂಡ ವಿವಿಧ ನವೀನ ಕಾರ್ಯವಿಧಾನಗಳ ಮೂಲಕ ಈ ಪ್ರಮುಖ ಕೆಲಸವನ್ನು ನಿರ್ವಹಿಸಲು ಸಹಾಯ ಮಾಡಲು ಶಾಲೆಗಳೊಂದಿಗೆ ಜೋಡಿಸಬಹುದು.

3.4. ಶಿಕ್ಷಣ ವ್ಯವಸ್ಥೆಗೆ ಮೂಲಸೌಕರ್ಯಗಳನ್ನು ಒದಗಿಸುವುದು ಮತ್ತು ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಖಾತರಿಪಡಿಸಿದ ನಂತರ, ವಿದ್ಯಾರ್ಥಿಗಳನ್ನು ಉಳಿಸಿಕೊಳ್ಳುವಲ್ಲಿ ಕಲಿಕಾ ಗುಣಮಟ್ಟ ಪ್ರಮುಖ ಪಾತ್ರ ವಹಿಸುತ್ತದೆ. ಇದರಿಂದ ಅವರು (ವಿಶೇಷವಾಗಿ ಬಾಲಕಿಯರು ಮತ್ತು ಇತರ ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ಗುಂಪುಗಳ ವಿದ್ಯಾರ್ಥಿಗಳು) ಶಾಲೆಗೆ ಹಾಜರಾಗುವ ಆಸಕ್ತಿಯನ್ನು ಖಚಿತಪಡಿಸಿಕೊಳ್ಳುವುದು. ಸ್ಥಳೀಯ ಭಾಷೆಯ ಜ್ಞಾನವನ್ನು ಹೊಂದಿರುವ ಶಿಕ್ಷಕರನ್ನು ಹೆಚ್ಚಿನ ಶಾಲೆ ಬಿಡುವ ದರವನ್ನು ಹೊಂದಿರುವ ಪ್ರದೇಶಗಳಿಗೆ ನಿಯೋಜಿಸಲು, ಜೊತೆಗೆ ಪಠ್ಯಕ್ರಮವನ್ನು ಹೆಚ್ಚು ಆಕರ್ಷಕವಾಗಿ ಮತ್ತು ಉಪಯುಕ್ತವಾಗಿಸಲು ಅದನ್ನು ಕೂಲಂಕಷವಾಗಿ ಪರಿಶೀಲಿಸಲು ಪ್ರೋತ್ಸಾಹಕ ವ್ಯವಸ್ಥೆಯ ಅಗತ್ಯವಿರುತ್ತದೆ.

3.5. ಎಲ್ಲಾ ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲವಾಗುವಂತೆ, ಸಾಮಾಜಿಕ ಆರ್ಥಿಕವಾಗಿ ಹಿಂದುಳಿದ ಗುಂಪುಗಳಿಗೆ (SEDG) ವಿಶೇಷ ಒತ್ತು ನೀಡುವುದರೊಂದಿಗೆ, ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ವಿಧಾನಗಳನ್ನು ಒಳಗೊಂಡಂತೆ, ಕಲಿಕೆಯ ಅನೇಕ ಮಾರ್ಗಗಳನ್ನು ಸುಲಭಗೊಳಿಸಲು ಶಾಲಾ ಶಿಕ್ಷಣದ ವ್ಯಾಪ್ತಿಯನ್ನು ವಿಸ್ತರಿಸಲಾಗುವುದು. ರಾಷ್ಟ್ರೀಯ ಮುಕ್ತ ಶಾಲಾ ಸಂಸ್ಥೆ (NIOS) ಮತ್ತು ರಾಜ್ಯ ಮುಕ್ತ ಶಾಲಾ ಸಂಸ್ಥೆ ನೀಡುವ ಮುಕ್ತ ಮತ್ತು ದೂರಶಿಕ್ಷಣ (ODL) ಕಾರ್ಯಕ್ರಮಗಳನ್ನು ಭೌತಿಕ ಶಾಲೆಯಲ್ಲಿ ವ್ಯಾಸಂಗ ಮಾಡಲು ಸಾಧ್ಯವಾಗದ ಭಾರತದ ಯುವಜನರ ಕಲಿಕೆಯ ಅಗತ್ಯಗಳನ್ನು ಪೂರೈಸಲು ವಿಸ್ತರಿಸಲಾಗುವುದು ಮತ್ತು ಬಲಪಡಿಸಲಾಗುವುದು. ಪ್ರಸ್ತುತ ಇರುವ ಕಾರ್ಯಕ್ರಮಗಳಿಗೆ ಹೆಚ್ಚುವರಿಯಾಗಿ, NIOS ಮತ್ತು ರಾಜ್ಯ ಮುಕ್ತ ಶಾಲಾ ಸಂಸ್ಥೆಗಳು ಈ ಕೆಳಗಿನ ಕಾರ್ಯಕ್ರಮಗಳನ್ನು ನೀಡುತ್ತವೆ: ಔಪಚಾರಿಕ ಶಾಲಾ ವ್ಯವಸ್ಥೆಯ 3, 5 ಮತ್ತು 8 ನೇ ತರಗತಿಗಳಿಗೆ ಸಮಾನವಾದ ಎ, ಬಿ ಮತ್ತು ಸಿ ಹಂತಗಳು; 10 ಮತ್ತು 12 ತರಗತಿಗಳಿಗೆ ಸಮಾನವಾದ ಮಾಧ್ಯಮಿಕ ಶಿಕ್ಷಣ ಕಾರ್ಯಕ್ರಮಗಳು; ವೃತ್ತಿಪರ ಮತ್ತು ಶಿಕ್ಷಣ ಕಾರ್ಯಕ್ರಮಗಳು; ಮತ್ತು ವಯಸ್ಕರ ಸಾಕ್ಷರತೆ ಮತ್ತು ಜೀವನ–ಪುಷ್ಟೀಕರಣ ಕಾರ್ಯಕ್ರಮಗಳು. ಅಸ್ತಿತ್ವದಲ್ಲಿರುವ ರಾಜ್ಯ ಶಾಲೆಗಳ ಸಂಸ್ಥೆಗಳನ್ನು (SIOS) ಬಲಪಡಿಸುವ ಅಥವಾ ಹೊಸ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಪ್ರಾದೇಶಿಕ ಭಾಷೆಗಳಲ್ಲಿ ಈ ಯೋಜನೆಗಳನ್ನು ಅಭಿವೃದ್ಧಿಪಡಿಸಲು ರಾಜ್ಯಗಳನ್ನು ಪ್ರೋತ್ಸಾಹಿಸಲಾಗುತ್ತದೆ.

**3.6.** ಸರ್ಕಾರಿ ಮತ್ತು ಸರ್ಕಾರೇತರ ಸಾರ್ವಜನಿಕ ಸೇವಾ ಮನೋಭಾವದ ಸಂಸ್ಥೆಗಳು ಶಾಲೆಗಳನ್ನು ಸ್ಥಾಪಿಸಲು, ಸಂಸ್ಕೃತಿ, ಭೌಗೋಳಿಕತೆ ಮತ್ತು ಜನಸಂಖ್ಯಾ ವಿನ್ಯಾಸದ ಕಾರಣದಿಂದಾಗಿ ಸ್ಥಳೀಯ ವೈವಿಧ್ಯತೆಯನ್ನು ಉತ್ತೇಜಿಸಲು ಮತ್ತು ಶಿಕ್ಷಣದ ಪರ್ಯಾಯ ಮಾದರಿಗಳನ್ನು ಅನುಮತಿಸಲು ಸುಲಭವಾಗುವಂತೆ ಮಾಡಲು, ಶಾಲೆಗಳ ಸ್ಥಾಪನೆಗೆ ಇರಬೇಕಾದ ಅವಶಕತೆಗಳ ನಿರ್ಭಂಧಗಳನ್ನು ಕಡಿಮೆ ಮಾಡಲಾಗುವುದು. ಅಪೇಕ್ಷಿತ ಕಲಿಕೆಯ ಫಲಿತಾಂಶಗಳಿಗೆ ಸಂಬಂಧಿಸಿದ ಸಾಮರ್ಥ್ಯಗಳಿಗೆ ಹೆಚ್ಚಿನ ಒತ್ತು ನೀಡಲಾಗುವುದು. ಅಧ್ಯಾಯ 8 ರಲ್ಲಿ ನಮೂದಿಸಿರುವಂತೆ ಅವಶ್ಯಕ ಅಂಶಗಳ ಕುರಿತಾದ ನಿಯಮಗಳನ್ನು ಕೆಲವು ಕ್ಷೇತ್ರಗಳಿಗೆ ಸೀಮಿತಗೊಳಿಸಲಾಗುತ್ತದೆ. ಸಾರ್ವಜನಿಕ ಸೇವಾ ಮನೋಭಾವ ಹೊಂದಿರುವ ವ್ಯಕ್ತಿ ಅಥವಾ ಸಂಸ್ಥೆಗಳ ಸಹಭಾಗಿತ್ವ ಹೊಂದಿರುವರ ಶಾಲೆಗಳ ಇತರ ಮಾದರಿಗಳನ್ನೂ ಸಹ ಪ್ರಾಯೋಗಿಕವಾಗಿ ನಡೆಸಲಾಗುತ್ತದೆ.

**3.7.** ಶಾಲೆಗಳಲ್ಲಿ ವೈಯಕ್ತಿಕ (one on one) ಬೋಧನೆ; ಅಕ್ಷರ ಜ್ಞಾನದ ಬೋಧನೆ ಮತ್ತು ಹೆಚ್ಚುವರಿ ಸಹಾಯಕ ಅವಧಿಗಳನ್ನು ತೆಗೆದುಕೊಳ್ಳುವುದು; ಬೋಧಕರಿಗೆ ಬೆಂಬಲ ಮತ್ತು ಮಾರ್ಗದರ್ಶನ; ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ; ಇತ್ಯಾದಿ ಸೌಲಭ್ಯಗಳನ್ನು ಒದಗಿಸುವ ಮೂಲಕ ಕಲಿಕೆಯನ್ನು ಹೆಚ್ಚಿಸುವ ಸ್ವಯಂ–ಸೇವಕ ಪ್ರಯತ್ನಗಳಲ್ಲಿ ಸಮುದಾಯ ಮತ್ತು ಹಳೆಯ ವಿದ್ಯಾರ್ಥಿಗಳು ಪಾಲ್ಗೊಳ್ಳುವಂತೆ ಪ್ರಯತ್ನಿಸಲಾಗುವುದು. ಈ ನಿಟ್ಟಿನಲ್ಲಿ, ಸಕ್ರಿಯ ಮತ್ತು ಆರೋಗ್ಯವಂತ ಹಿರಿಯ ನಾಗರಿಕರು, ಶಾಲೆಯ ಹಳೆಯ ವಿದ್ಯಾರ್ಥಿಗಳು ಮತ್ತು ಸ್ಥಳೀಯ ಸಮುದಾಯದ ಸದಸ್ಯರ ಬೆಂಬಲವನ್ನು ಸೂಕ್ತವಾಗಿ ಪಡೆಯಲಾಗುವುದು. ಈ ಉದ್ದೇಶಕ್ಕಾಗಿ ಸಾಕ್ಷರ ಸ್ವಯಂಸೇವಕರು, ನಿವೃತ್ತ ವಿಜ್ಞಾನಿಗಳು / ಸರ್ಕಾರಿ / ಅರೆ ಸರ್ಕಾರಿ ನೌಕರರು, ಹಳೆಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ದತ್ತಾಂಶವನ್ನು ಸಂಗ್ರಹಿಸಲಾಗುವುದು.

## 4. ಶಾಲೆಗಳಲ್ಲಿ ಪಠ್ಯಕ್ರಮ ಮತ್ತು ಬೋಧನಾ ವಿಧಾನ: ಕಲಿಕೆಯು ಸಂಪೂರ್ಣ, ಸಮಗ್ರ, ಆಹ್ಲಾದಕರ ಮತ್ತು ಭಾಗವಹಿಸುವಿಕೆಯಿಂದ ಕೂಡಿರಬೇಕು

### ಹೊಸ 5 + 3 + 3 + 4 ವಿನ್ಯಾಸದಲ್ಲಿ ಶಾಲಾ ಪಠ್ಯಕ್ರಮ ಮತ್ತು ಬೋಧನಾ ವಿಧಾನವನ್ನು ಪುನರಚಿಸುವುದು

**4.1.** ಶಾಲಾ ಶಿಕ್ಷಣದ ಪಠ್ಯಕ್ರಮ ಮತ್ತು ಬೋಧನಾ ವಿಧಾನದ ರಚನೆಯನ್ನು 3–8, 8–11, 11–14 ಮತ್ತು 14–18 ವರ್ಷಗಳ ವಯಸ್ಸಿಗೆ ಅನುಗುಣವಾಗಿ, ವಿವಿಧ ಬೆಳವಣಿಗೆಯ ಹಂತಗಳಲ್ಲಿ ಕಲಿಕಾರ್ಥಿಯ ಅಭಿವೃದ್ಧಿಯ ಅಗತ್ಯತೆಗಳು ಮತ್ತು ಆಸಕ್ತಿಗಳಿಗೆ ಸ್ಪಂದಿಸುವಂತೆ ಮತ್ತು ಸೂಕ್ತವಾಗಿರುವಂತೆ ಪುನಾರಚಿಸಲಾಗುತ್ತದೆ. ಆದ್ದರಿಂದ ಪಠ್ಯಕ್ರಮ ಮತ್ತು ಬೋಧನಾ ವಿಧಾನದ ರಚನೆ ಮತ್ತು ಶಾಲಾ ಶಿಕ್ಷಣದ ಪಠ್ಯಕ್ರಮದ ಚೌಕಟ್ಟನ್ನು 5 + 3 + 3 + 4 ವಿನ್ಯಾಸದಲ್ಲಿ ರೂಪಿಸಲಾಗುತ್ತಿದ್ದು, ಇದು ಬುನಾದಿ ಹಂತವನ್ನು (ಎರಡು ಭಾಗಗಳಲ್ಲಿ, ಅಂದರೆ 3 ವರ್ಷಗಳ ಅಂಗನವಾಡಿ / ಶಾಲಾಪೂರ್ವ + ಪ್ರಾಥಮಿಕ ಶಾಲೆಯಲ್ಲಿ 2 ವರ್ಷಗಳ 1–2 ನೇ ತರಗತಿಗಳು, ಎರಡೂ ಸೇರಿ 3–8 ವಯಸ್ಸನ್ನು ಒಳಗೊಳ್ಳುವಂತೆ), ಪೂರ್ವಸಿದ್ಧತಾ ಹಂತವನ್ನು (3–5 ನೇ ತರಗತಿಗಳು, 8–11 ವಯಸ್ಸಿನವರನ್ನು ಒಳಗೊಳ್ಳುತ್ತದೆ), ಮಾಧ್ಯಮಿಕ ಹಂತವನ್ನು (6–8 ನೇ ತರಗತಿಗಳು, 11–14 ವಯಸ್ಸಿನವರನ್ನು ಒಳಗೊಳ್ಳುತ್ತದೆ), ಪ್ರೌಢ ಹಂತವನ್ನು (ಎರಡು ಹಂತಗಳಲ್ಲಿ 9–12 ತರಗತಿಗಳು, ಅಂದರೆ, ಮೊದಲ ಹಂತವು 9 ಮತ್ತು 10, ಹಾಗೂ ಎರಡನೆಯದರಲ್ಲಿ 11 ಮತ್ತು 12, 14–18 ವಯಸ್ಸಿನವರನ್ನು ಒಳಗೊಂಡಿರುತ್ತದೆ) ಒಳಗೊಂಡಿರುತ್ತದೆ.

**4.2.** ಬುನಾದಿ ಹಂತವು ಪ್ಯಾರಾ 1.2 ರಲ್ಲಿ ಉಲ್ಲೇಖಿಸಿರುವಂತೆ ಐದು ವರ್ಷಗಳ ECCE ಯ ನಮ್ಯವಾದ, ಬಹುಹಂತದ, ಆಟ / ಚಟುವಟಿಕೆ ಆಧಾರಿತ ಕಲಿಕೆ ಮತ್ತು ಪಠ್ಯಕ್ರಮ ಹಾಗೂ ಬೋಧನಾ ವಿಧಾನವನ್ನು ಒಳಗೊಂಡಿರುತ್ತದೆ. ಪೂರ್ವ ಸಿದ್ಧತಾ ಹಂತವು ಬುನಾದಿ ಹಂತದ ನಾಟಕ, ಅನ್ವೇಷಣೆ ಮತ್ತು ಚಟುವಟಿಕೆ ಆಧಾರಿತ ಬೋಧನಾ ವಿಧಾನ ಮತ್ತು ಪಠ್ಯಕ್ರಮದ ಶೈಲಿಯಲ್ಲಿ ರೂಪಿಸಲಾದ ಮೂರು ವರ್ಷಗಳ ಶಿಕ್ಷಣವನ್ನು ಒಳಗೊಂಡಿರುತ್ತದೆ ಮತ್ತು ಈ ಹಂತದಲ್ಲಿ ಓದುವುದು, ಬರೆಯುವುದು, ಮಾತನಾಡುವುದು, ದೈಹಿಕ ಶಿಕ್ಷಣ, ಕಲೆ, ಭಾಷೆಗಳು, ವಿಜ್ಞಾನ ಮತ್ತು ಗಣಿತ ಸೇರಿದಂತೆ ವಿವಿಧ ವಿಷಯಗಳು ದೃಢವಾದ ಅಡಿಪಾಯವನ್ನು ಹಾಕುವ ಸಲುವಾಗಿ ಕೆಲವು ಲಘು ಪಠ್ಯ ಪುಸ್ತಕಗಳನ್ನು ಮತ್ತು ಹೆಚ್ಚು ಔಪಚಾರಿಕ ಆದರೆ, ಸಂವಹನಾತ್ಮಕ ತರಗತಿ ಕಲಿಕೆಯ ಅಂಶಗಳನ್ನು ಸಂಯೋಜಿಸಲು ಪ್ರಾರಂಭಿಸಲಾಗುತ್ತದೆ. ಮಾಧ್ಯಮಿಕ ಹಂತವು ಪೂರ್ವ ಸಿದ್ಧತಾ ಹಂತದ ಬೋಧನಾ ವಿಧಾನ ಮತ್ತು ಪಠ್ಯಕ್ರಮದ ಶೈಲಿಯ ಮೇಲೆ ರೂಪಿಸಲಾದ ಮೂರು ವರ್ಷಗಳ ಶಿಕ್ಷಣವನ್ನು ಒಳಗೊಂಡಿರುತ್ತದೆ, ಆದರೆ ಈ ಹಂತದಲ್ಲಿ ವಿಜ್ಞಾನ, ಗಣಿತ, ಕಲೆ, ಸಾಮಾಜಿಕ ವಿಜ್ಞಾನ ಮತ್ತು ಮಾನವಿಕ ವಿಷಯಗಳಲ್ಲಿ ವಿದ್ಯಾರ್ಥಿಗಳು ಹೆಚ್ಚು ಅಮೂರ್ತ ಪರಿಕಲ್ಪನೆಗಳನ್ನು ವಿಷಯ ಶಿಕ್ಷಕರ ಮೂಲಕ ಕಲಿಯಲು ಮತ್ತು ಚರ್ಚಿಸಲು ಪ್ರಾರಂಭಿಸಲಾಗುತ್ತದೆ. ವಿಶೇಷ ವಿಷಯಗಳು ಮತ್ತು ವಿಷಯ ಶಿಕ್ಷಕರ ಮೂಲಕ ಬೋಧನೆಯ

ಹೊರತಾಗಿಯೂ ಪ್ರತಿ ವಿಷಯದೊಳಗಿನ ಅನುಭವಾತ್ಮಕ ಕಲಿಕೆ ಮತ್ತು ವಿವಿಧ ವಿಷಯಗಳ ನಡುವಿನ ಸಂಬಂಧಗಳ ಪರಿಶೋಧನೆಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಪ್ರೌಢ ಹಂತವು ಬೋಧನಾಶಾಸ್ತ್ರ ಮತ್ತು ಪಠ್ಯಕ್ರಮದ ಶೈಲಿಯ ಮೇಲೆ ರೂಪಿಸಲಾದ ನಾಲ್ಕು ವರ್ಷಗಳ ಬಹುವಿಷಯದ ಅಧ್ಯಯನವನ್ನು ಒಳಗೊಂಡಿರುತ್ತದೆ, ಆದರೆ ಹೆಚ್ಚಿನ ಆಳ, ಹೆಚ್ಚಿನ ವಿಮರ್ಶಾತ್ಮಕ ಚಿಂತನೆ, ಜೀವನ ಆಕಾಂಕ್ಷೆಗಳಿಗೆ ಹೆಚ್ಚಿನ ಗಮನ, ಹೆಚ್ಚಿನ ನಮ್ಯತೆ ಮತ್ತು ವಿದ್ಯಾರ್ಥಿಗಳ ಆಯ್ಕೆಯ ವಿಷಯಗಳನ್ನು ಒಳಗೊಂಡಿರುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ, 10 ನೇ ತರಗತಿಯ ನಂತರ ನಿರ್ಗಮಿಸುವ ಆಯ್ಕೆಯನ್ನು ಮತ್ತು ವಿದ್ಯಾರ್ಥಿಗಳು ಬಯಸಿದಲ್ಲಿ, ವಿಶೇಷ ಶಾಲೆಯೂ ಸೇರಿದಂತೆ 11– 12 ನೇ ತರಗತಿಯಲ್ಲಿ ಲಭ್ಯವಿರುವ ವೃತ್ತಿಪರ ಅಥವಾ ಇನ್ನಾವುದೇ ಕೋರ್ಸ್‌ಗಳನ್ನು ಮುಂದುವರಿಸಲು ಮತ್ತು ಮುಂದಿನ ಹಂತದಲ್ಲಿ ಪುನಃ ಪ್ರವೇಶಿಸುವ ಆಯ್ಕೆಯನ್ನೂ ಸಹ ವಿದ್ಯಾರ್ಥಿಗಳು ಹೊಂದಿರುತ್ತಾರೆ.

4.3. ಮೇಲೆ ವಿವರಿಸಿದ ಹಂತಗಳು ಸಂಪೂರ್ಣವಾಗಿ ಪಠ್ಯಕ್ರಮ ಮತ್ತು ಬೋಧನೆಗೆ ಸೀಮಿತವಾಗಿದ್ದು, ಮಕ್ಕಳ ಜ್ಞಾನಾತ್ಮಕ ಬೆಳವಣಿಗೆಯ ಆಧಾರದ ಮೇಲೆ ವಿದ್ಯಾರ್ಥಿಗಳ ಕಲಿಕೆಯನ್ನು ಅತ್ಯುತ್ತಮವಾಗಿಸಲು ವಿನ್ಯಾಸಗೊಳಿಸಲಾಗಿದೆ; ಪ್ರತಿ ಹಂತದಲ್ಲಿ ಅನುಸರಿಸಬೇಕಾದ ರಾಷ್ಟ್ರೀಯ ಮತ್ತು ರಾಜ್ಯ ಪಠ್ಯಕ್ರಮ ಅಭಿವೃದ್ಧಿ ಮತ್ತು ಬೋಧನಾ–ಕಲಿಕಾ ಕಾರ್ಯತಂತ್ರಗಳ ಕುರಿತು ವಿವರಣೆ ನೀಡುತ್ತದೆ ಆದರೆ ಅದಕ್ಕೆ ಸಮಾನಾಂತರವಾಗಿ ಭೌತಿಕ ಮೂಲಸೌಕರ್ಯಗಳಲ್ಲಿ ಬದಲಾವಣೆ ಮಾಡುವ ಅಗತ್ಯವಿರುವುದಿಲ್ಲ.

**ಕಲಿಕಾರ್ಥಿಗಳ ಸರ್ವತೋಮುಖ ಬೆಳವಣಿಗೆ:**

4.4. ಎಲ್ಲಾ ಹಂತಗಳಲ್ಲಿನ ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರದಲ್ಲಿ ಮಾಡಲಾಗುವ ಸುಧಾರಣೆಯ ಪ್ರಮುಖ ಉದ್ದೇಶವೆಂದರೆ, ಶಿಕ್ಷಣ ವ್ಯವಸ್ಥೆಯನ್ನು ನೈಜ ತಿಳುವಳಿಕೆಯತ್ತ ಮತ್ತು ಕಲಿಯುವುದು ಹೇಗೆ ಎಂದು ಕಲಿಯುವ ಕಡೆಗೆ ತೆಗೆದುಕೊಂಡು ಹೋಗುವುದು ಮತ್ತು ಇಂದು ಹೆಚ್ಚಾಗಿ ಕಂಡುಬರುವ ಯಾಂತ್ರಿಕ ಕಲಿಕೆಯ ಪದ್ಧತಿಯಿಂದ ದೂರಗೊಳಿಸುವುದು. ಶಿಕ್ಷಣದ ಗುರಿಯೆಂದರೆ ಜ್ಞಾನಾತ್ಮಕ ಬೆಳವಣಿಗೆಯಷ್ಟೇ ಅಲ್ಲ, ಚಾರಿತ್ರ್ಯ ನಿರ್ಮಾಣ ಮತ್ತು 21 ನೇ ಶತಮಾನದ ಪ್ರಮುಖ ಕೌಶಲ್ಯಗಳನ್ನು ರೂಢಿಸಿಕೊಂಡಿರುವ ಸಂಪೂರ್ಣ ಮತ್ತು ಸರ್ವತೋಮುಖ ವ್ಯಕ್ತಿತ್ವ ಹೊಂದಿರುವ ವ್ಯಕ್ತಿಗಳನ್ನು ಸಿದ್ಧಪಡಿಸುವುದಾಗಿದೆ. ಅಂತಿಮವಾಗಿ, ಜ್ಞಾನವು ಆಳವಾಗಿ ಹುದುಗಿರುವ ನಿಧಿಯಾಗಿದೆ ಮತ್ತು ಶಿಕ್ಷಣವು ಈಗಾಗಲೇ ವ್ಯಕ್ತಿಯೊಳಗೆ ಆಂತರಿಕವಾಗಿ ಅಡಕವಾಗಿರುವ ಪರಿಪೂರ್ಣತೆಯ ಜ್ಞಾನದ ಅಭಿವ್ಯಕ್ತಿಗೆ ಸಹಾಯ ಮಾಡುತ್ತದೆ. ಈ ನಿರ್ಣಾಯಕ ಗುರಿಗಳನ್ನು ಸಾಧಿಸಲು ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರದ ಎಲ್ಲಾ ಅಂಶಗಳನ್ನು ಮರು ಹೊಂದಾಣಿಕೆ ಮಾಡಲಾಗುತ್ತದೆ ಮತ್ತು ಪರಿಷ್ಕರಿಸಲಾಗುತ್ತದೆ. ಶಾಲಾ ಪೂರ್ವ ಹಂತದಿಂದ ಉನ್ನತ ಶಿಕ್ಷಣದವರೆಗೆ ಕಲಿಕೆಯ ಪ್ರತಿಯೊಂದು ಹಂತದಲ್ಲೂ ಅಳವಡಿಸಲು ವಿವಿಧ ಕ್ಷೇತ್ರಗಳಾದ್ಯಂತ ನಿರ್ದಿಷ್ಟ ಕೌಶಲ ಮತ್ತು ಮೌಲ್ಯಗಳನ್ನು ಗುರುತಿಸಲಾಗುತ್ತದೆ. ಬೋಧನೆ ಮತ್ತು ಕಲಿಕೆಯ ಸಹಭಾಗಿತ್ವ ಪ್ರಕ್ರಿಯೆಗಳ ಮೂಲಕ ಈ ಕೌಶಲಗಳು ಮತ್ತು ಮೌಲ್ಯಗಳನ್ನು ಅಳವಡಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಪಠ್ಯಕ್ರಮದ ಚೌಕಟ್ಟು ಮತ್ತು ಬೋಧನಾ ವಿಧಾನಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಪೂರ್ವ ಬಾಲ್ಯಾವಸ್ಥೆ ಮತ್ತು ಶಾಲಾ ಶಿಕ್ಷಣಕ್ಕಾಗಿ ಅಗತ್ಯವಿರುವ ಕೌಶಲ್ಯಗಳನ್ನು NCERT ಗುರುತಿಸುತ್ತದೆ ಮತ್ತು ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನಲ್ಲಿ ಅವುಗಳ ಬೋಧನೆಗೆ ಸೂಕ್ತ ಕಾರ್ಯವಿಧಾನಗಳನ್ನು ಸೇರ್ಪಡೆ ಮಾಡುತ್ತದೆ.

**ಅಗತ್ಯ ಕಲಿಕೆ ಮತ್ತು ವಿಮರ್ಶಾತ್ಮಕ ಚಿಂತನೆಯನ್ನು ಹೆಚ್ಚಿಸಲು ಪಠ್ಯಕ್ರಮದ ವಿಷಯವನ್ನು ಕಡಿಮೆ ಮಾಡುವುದು:**

4.5. ವಿಮರ್ಶಾತ್ಮಕ ಚಿಂತನೆ ಮತ್ತು ಹೆಚ್ಚು ಸಮಗ್ರ, ವಿಚಾರಣಾ–ಆಧಾರಿತ, ಆವಿಷ್ಕಾರ–ಆಧಾರಿತ, ಚರ್ಚಾ–ಆಧಾರಿತ ಮತ್ತು ವಿಶ್ಲೇಷಣೆ–ಆಧಾರಿತ ಕಲಿಕೆಗೆ ಅವಕಾಶ ಕಲ್ಪಿಸಲು ಪ್ರತಿ ವಿಷಯದಲ್ಲೂ ಪಠ್ಯಕ್ರಮದ ವಸ್ತು ವಿಷಯವನ್ನು ಅದರಲ್ಲಿನ ಪ್ರಮುಖ ಅಂಶಗಳಿಗೆ ಸೀಮಿತಗೊಳಿಸಿ, ಕಡಿಮೆ ಮಾಡಲಾಗುತ್ತದೆ. ಕಡ್ಡಾಯಗೊಳಿಸುವ ವಿಷಯವು ಪ್ರಮುಖ ಪರಿಕಲ್ಪನೆಗಳು, ಚಿಂತನೆಗಳು, ಅನ್ವಯಿಕಗಳು ಮತ್ತು ಸಮಸ್ಯಾ ಪರಿಹಾರದ ಮೇಲೆ ಗಮನ ಕೇಂದ್ರೀಕರಿಸುತ್ತದೆ. ಬೋಧನೆ ಮತ್ತು ಕಲಿಕೆಯನ್ನು ಹೆಚ್ಚು ಸಂವಹನಾತ್ಮಕ ರೀತಿಯಲ್ಲಿ ನಡೆಸಲಾಗುವುದು; ಪ್ರಶ್ನೆಗಳನ್ನು ಪ್ರೋತ್ಸಾಹಿಸಲಾಗುತ್ತದೆ ಮತ್ತು ವಿದ್ಯಾರ್ಥಿಗಳಲ್ಲಿ ಆಳವಾದ ಮತ್ತು ಹೆಚ್ಚು ಅನುಭವಾತ್ಮಕ ಕಲಿಕೆಗಾಗಿ ತರಗತಿಯ ಅವಧಿಗಳು ನಿಯಮಿತವಾಗಿ ಹೆಚ್ಚು ಆನಂದದ, ಸೃಜನಶೀಲ, ಸಹಕಾರಿ ಮತ್ತು ಪರಿಶೋಧನಾ ಚಟುವಟಿಕೆಗಳನ್ನು ಒಳಗೊಂಡಿರುತ್ತವೆ.

**ಅನುಭವಾತ್ಮಕ ಕಲಿಕೆ:**

4.6. ಎಲ್ಲಾ ಹಂತಗಳಲ್ಲಿಯೂ, ಪ್ರತಿ ವಿಷಯದ ಪ್ರಮಾಣಿತ ಬೋಧನಾ ವಿಧಾನವಾಗಿ ಮತ್ತು ವಿವಿಧ ವಿಷಯಗಳ ನಡುವಿನ ಸಂಬಂಧಗಳ ಪರಿಶೋಧನೆಯೊಂದಿಗೆ ಕಲಿಕೆ, ಕಲೆ–ಸಂಯೋಜಿತ ಮತ್ತು ಕ್ರೀಡಾ–ಸಂಯೋಜಿತ ಶಿಕ್ಷಣ, ಕಥೆ

ಹೇಳುವಿಕೆಯನ್ನು ಆಧರಿಸಿದ ವಿಧಾನವನ್ನು ಒಳಗೊಂಡಂತೆ ಅನುಭವಾತ್ಮಕ ಕಲಿಕೆಯನ್ನು ಅಳವಡಿಸಿಕೊಳ್ಳಲಾಗುವುದು. ಕಲಿಕಾ ಫಲಗಳ ಸಾಧನೆಯಲ್ಲಿನ ಅಂತರವನ್ನು ಕಡಿಮೆ ಮಾಡಲು ತರಗತಿಯ ಪ್ರಕ್ರಿಯೆಗಳು, ಸಾಮರ್ಥ್ಯ ಆಧಾರಿತ ಕಲಿಕೆ ಮತ್ತು ಶಿಕ್ಷಣದ ಕಡೆಗೆ ಬದಲಾಗುತ್ತವೆ. ಒಂದು ನಿರ್ದಿಷ್ಟ ವರ್ಗದ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದ ಸಹ ಕಲಿಕಾ ಫಲಗಳು ಮೌಲ್ಯಮಾಪನ ಪರಿಕರಗಳನ್ನು ("ಕಲಿಕೆಯಾಗಿ ಮೌಲ್ಯಮಾಪನ", "ಕಲಿಕೆಯ ಮೌಲ್ಯಮಾಪನ", "ಕಲಿಕೆಗಾಗಿ ಮೌಲ್ಯಮಾಪನ", ಸೇರಿದಂತೆ) ಸಾಮರ್ಥ್ಯಗಳನ್ನು ಆಧರಿಸಿ ಹೊಂದಿಕೆ ಮಾಡಲಾಗುವುದು.

**4.7.** ಕಲೆ ಸಂಯೋಜನೆ ವಿವಿಧ ವಿಷಯಗಳಲ್ಲಿ ಸೇರ್ಪಡೆಯಾದ ಪಠ್ಯಕ್ರಮದ ಬೋಧನಾ ವಿಧಾನವಾಗಿದ್ದು, ಎಲ್ಲಾ ವಿಷಯಗಳಲ್ಲಿನ ಪರಿಕಲ್ಪನೆಗಳನ್ನು ಕಲಿಯಲು ಇದು ಕಲೆ ಮತ್ತು ಸಂಸ್ಕೃತಿಯ ವಿವಿಧ ಅಂಶಗಳನ್ನು ಮತ್ತು ಸ್ವರೂಪಗಳನ್ನು ಆಧಾರವಾಗಿ ಬಳಸಿಕೊಳ್ಳುತ್ತದೆ. ಅನುಭವಾತ್ಮಕ ಕಲಿಕೆಯ ಒಂದು ಭಾಗವಾಗಿ, ಪ್ರತಿಯೊಂದು ಹಂತದಲ್ಲೂ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಭಾರತೀಯ ಕಲೆ ಮತ್ತು ಸಂಸ್ಕೃತಿಯನ್ನು ಜೋಡಿಸುವ ಮೂಲಕ ಕಲಾ–ಸಂಯೋಜಿತ ಶಿಕ್ಷಣವು ತರಗತಿಯ ಪ್ರಕ್ರಿಯೆಯಲ್ಲಿ ಸಂತೋಷದಾಯಕ ತರಗತಿ ಕೋಣೆಗಳನ್ನು ನಿರ್ಮಿಸುವುದಕ್ಕಾಗಿ ಮಾತ್ರವಲ್ಲದೆ, ಭಾರತೀಯ ತತ್ತ್ವಗಳನ್ನು ಅಳವಡಿಸಿಕೊಳ್ಳುವುದಕ್ಕೂ ಸಹಕಾರಿಯಾಗುತ್ತದೆ. ಈ ಕಲಾ–ಸಂಯೋಜಿತ ವಿಧಾನವು ಶಿಕ್ಷಣ ಮತ್ತು ಸಂಸ್ಕೃತಿಯ ನಡುವಿನ ಸಂಪರ್ಕವನ್ನು ಬಲಪಡಿಸುತ್ತದೆ.

**4.8.** ಕ್ರೀಡಾ ಸಂಯೋಜನೆಯು ಮತ್ತೊಂದು ಅಂತಹ ವಿಧಾನವಾಗಿದ್ದು ಸಹಯೋಗ, ಸ್ವ–ಉಪಕ್ರಮ, ಸ್ವ–ನಿರ್ದೇಶನ, ಸ್ವಯಂ–ಶಿಸ್ತು, ತಂಡದ ಕಾರ್ಯ, ಜವಾಬ್ದಾರಿ, ಪೌರತ್ವ ಇತ್ಯಾದಿ ಕೌಶಲ್ಯಗಳನ್ನು ಬೆಳೆಸಲು, ಬೋಧನಾ ವಿಧಾನಗಳಲ್ಲಿ ಸ್ಥಳೀಯ ಕ್ರೀಡೆಗಳು ಸೇರಿದಂತೆ ಇತರ ದೈಹಿಕ ಚಟುವಟಿಕೆಗಳನ್ನು ಅಳವಡಿಸಲಾಗುವುದು. ವಿದ್ಯಾರ್ಥಿಗಳು ತಮ್ಮ ದೈಹಿಕ ದೃಢತೆಯನ್ನು ಕಾಪಾಡಿಕೊಳ್ಳುವುದನ್ನು ಜೀವಪರ್ಯಂತ ಮನೋಭಾವವಾಗಿ ಅಳವಡಿಸಿಕೊಳ್ಳಲು ಮತ್ತು 'ಫಿಟ್ ಇಂಡಿಯಾ' ಆಂದೋಲನದಲ್ಲಿ ಹೇಳಲಾದ ದೈಹಿಕ ದೃಢತೆಯ ಹಂತಗಳ ಜೊತೆಗೆ ಸಂಬಂಧಿತವಾದ ಜೀವನ ಕೌಶಲಗಳ ಸಾಧನೆಗೆ ಸಹಾಯ ಮಾಡಲು, ತರಗತಿ ಬೋಧನೆಯಲ್ಲಿ ಕ್ರೀಡಾ–ಸಂಯೋಜಿತ ಕಲಿಕೆಯನ್ನು ಅನುಸರಿಸಲಾಗುವುದು. ಜ್ಞಾನಾತ್ಮಕ ಸಾಮರ್ಥ್ಯಗಳನ್ನು ಹೆಚ್ಚಿಸುವುದರೊಂದಿಗೆ ದೈಹಿಕ ಮತ್ತು ಮಾನಸಿಕ ಯೋಗಕ್ಷೇಮವನ್ನು ಉತ್ತೇಜಿಸುವ ಮೂಲಕ ಸಮಗ್ರ ಅಭಿವೃದ್ಧಿಯನ್ನು ಸಾಧಿಸಲು ಸಹಾಯ ಮಾಡುವುದರಿಂದ ಶಿಕ್ಷಣದಲ್ಲಿ ಕ್ರೀಡೆಗಳನ್ನು ಸಂಯೋಜಿಸುವ ಅಗತ್ಯವನ್ನು ಗುರುತಿಸಲಾಗಿದೆ.

### ವಿದ್ಯಾರ್ಥಿಗಳಿಗೆ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡುವುದು:

**4.9.** ವಿದ್ಯಾರ್ಥಿಗಳಿಗೆ, ಅದರಲ್ಲೂ ನಿರ್ದಿಷ್ಟವಾಗಿ ಮಾಧ್ಯಮಿಕ ಹಂತದಲ್ಲಿ ದೈಹಿಕ ಶಿಕ್ಷಣ, ಕಲೆ ಮತ್ತು ಕರಕೌಶಲ್ಯ ಹಾಗೂ ವೃತ್ತಿಪರ ಕೌಶಲಗಳನ್ನು ಒಳಗೊಂಡಂತೆ, ಹೆಚ್ಚಿನ ನಮ್ಯತೆಯನ್ನು ಮತ್ತು ಅಧ್ಯಯನಕ್ಕಾಗಿ ವಿಷಯಗಳ ಆಯ್ಕೆಯನ್ನು ನೀಡಲಾಗುವುದು. ಇದರಿಂದ ಅವರು ತಮ್ಮದೇ ಆದ ಅಧ್ಯಯನ ಮಾರ್ಗಗಳು ಮತ್ತು ಜೀವನಕ್ಕಾಗಿ ಯೋಜನೆಗಳನ್ನು ರೂಪಿಸಿಕೊಳ್ಳಬಹುದು. ವರ್ಷದಿಂದ ವರ್ಷಕ್ಕೆ ಸಮಗ್ರ ಅಭಿವೃದ್ಧಿ ಮತ್ತು ವ್ಯಾಪಕವಾದ ವಿಷಯಗಳು ಮತ್ತು ಕೋರ್ಸಗಳ ಪರಿಚಯ ಮಾಡುವುದು ಮಾಧ್ಯಮಿಕ ಶಾಲಾ ಶಿಕ್ಷಣದ ಹೊಸ ವಿಶಿಷ್ಟ ಲಕ್ಷಣವಾಗಿದೆ. 'ಪಠ್ಯ', 'ಪಠ್ಯೇತರ' ಅಥವಾ 'ಸಹ–ಪಠ್ಯಕ್ರಮ'ಗಳ ನಡುವೆ, 'ಕಲೆಗಳು', 'ಮಾನವಿಕ ವಿಷಯಗಳು' ಮತ್ತು 'ವಿಜ್ಞಾನಗಳ' ನಡುವೆ ಅಥವಾ 'ವೃತ್ತಿಪರ' ಅಥವಾ 'ಶೈಕ್ಷಣಿಕ' ವಿಭಾಗಗಳ ನಡುವೆ ಬಿಗಿಯಾದ ಪ್ರತ್ಯೇಕತೆ ಇರುವುದಿಲ್ಲ. ಪ್ರತಿ ವಯಸ್ಸಿಗೆ ಸೂಕ್ತವಾದ ಆಸಕ್ತಿದಾಯಕ ಮತ್ತು ಸುರಕ್ಷಿತ ಅಂಶಗಳನ್ನು ಪರಿಗಣಿಸುತ್ತಾ ವಿಜ್ಞಾನ, ಮಾನವಿಕ ವಿಷಯಗಳು ಮತ್ತು ಗಣಿತಶಾಸ್ತ್ರದ ಜೊತೆಗೆ ದೈಹಿಕ ಶಿಕ್ಷಣ, ಕಲೆ ಮತ್ತು ಕರಕೌಶಲ್ಯ ವಸ್ತುಗಳು ಹಾಗೂ ವೃತ್ತಿಪರ ಕೌಶಲ್ಯಗಳನ್ನು ಶಾಲಾ ಪಠ್ಯಕ್ರಮದಲ್ಲಿ ಸಂಯೋಜಿಸಲಾಗುವುದು.

**4.10.** ಶಾಲಾ ಶಿಕ್ಷಣದ ನಾಲ್ಕು ಹಂತಗಳಲ್ಲಿ ಪ್ರತಿಯೊಂದು ಹಂತವು, ವಿವಿಧ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲು ಹೇಗೆ ಸಾಧ್ಯವಾಗುತ್ತದೆಯೋ ಅದಕ್ಕೆ ಅನುಗುಣವಾಗಿ, ಹೆಚ್ಚಿನ ವಿಷಯಗಳ ಅನುಭವಗಳನ್ನು ಮತ್ತು ಹೆಚ್ಚಿನ ನಮ್ಯತೆಯನ್ನು ಒದಗಿಸಲು, ಪರ್ಯಾಯ ದಿನಗಳಲ್ಲಿ ಕಲಿಸಬಹುದಾದ ಚಿಕ್ಕ ಮಾಡ್ಯೂಲ್‌ಗಳನ್ನು ಅಥವಾ ಕೋರ್ಸ್‌ಗಳನ್ನು ಒಳಗೊಂಡಂತೆ ಸೆಮಿಸ್ಟರ್ ಅಥವಾ ಇತರ ಯಾವುದೇ ವ್ಯವಸ್ಥೆಯಾಗಿ ಬದಲಾಗಬಹುದು. ಕಲೆಗಳು, ವಿಜ್ಞಾನಗಳು, ಮಾನವಿಕ ವಿಷಯಗಳು, ಭಾಷೆಗಳು, ಕ್ರೀಡೆಗಳು ಮತ್ತು ವೃತ್ತಿಪರ ವಿಷಯಗಳು ಸೇರಿದಂತೆ ವಿವಿಧ ವಿಷಯಗಳಿಗೆ ಹೆಚ್ಚಿನ ನಮ್ಯತೆ ಮತ್ತು ಅನುಭವ ಒದಗಿಸಲು ಮತ್ತು ಆ ವಿಷಯಗಳನ್ನು ಉಲ್ಲಸಿತವಾಗಿ ಕಲಿಯುವ ಗುರಿಗಳನ್ನು ಸಾಧಿಸಲು ರಾಜ್ಯಗಳು ನವೀನ ವಿಧಾನಗಳನ್ನು ಅಳವಡಿಸಿಕೊಳ್ಳಬಹುದಾಗಿದೆ.

**ಬಹುಭಾಷೀಯತೆ ಮತ್ತು ಭಾಷೆಯ ಶಕ್ತಿ :**

**4.11.** ಚಿಕ್ಕ ಮಕ್ಕಳು ಸಣ್ಣ ಸಣ್ಣ ಪರಿಕಲ್ಪನೆಗಳನ್ನು ತಮ್ಮ ಮಾತೃಭಾಷೆಯಲ್ಲಿ / ಮನೆಯ ಭಾಷೆಯಲ್ಲಿ ತ್ವರಿತವಾಗಿ ಕಲಿಯುತ್ತಾರೆ ಮತ್ತು ಗ್ರಹಿಸುತ್ತಾರೆ ಎಂಬುದು ತಿಳಿದಿರುವ ಸಂಗತಿಯಾಗಿದೆ. ಮನೆ ಭಾಷೆ ಸಾಮಾನ್ಯವಾಗಿ ಮಾತೃಭಾಷೆಯಾಗಿರುತ್ತದೆ ಅಥವಾ ಸ್ಥಳೀಯ ಸಮುದಾಯಗಳು ಮಾತನಾಡುವ ಭಾಷೆಯಾಗಿರುತ್ತದೆ. ಆದಾಗ್ಯೂ, ಬಹುಭಾಷಾ ಕುಟುಂಬಗಳಲ್ಲಿ ಕೆಲವೊಮ್ಮೆ, ಕುಟುಂಬದ ಇತರ ಸದಸ್ಯರು ಮಾತನಾಡುವ ಮಾತೃಭಾಷೆ ಅಥವಾ ಸ್ಥಳೀಯ ಭಾಷೆಯಿಂದ ಭಿನ್ನವಾಗಿರಬಹುದಾದ ಮನೆ ಭಾಷೆ ಇರಬಹುದು. ಸಾಧ್ಯವಾದಲ್ಲೆಲ್ಲಾ, ಕನಿಷ್ಠ 5 ನೇ ತರಗತಿಯವರೆಗೆ, (ಆದರೆ 8 ನೇ ತರಗತಿಯವರೆಗೆ ಮತ್ತು ನಂತರದ ಹಂತಗಳವರೆಗೆ ಮಾಡಿದರೆ ಉತ್ತಮ) ಬೋಧನಾ ಮಾಧ್ಯಮವು ಮನೆ ಭಾಷೆ / ಮಾತೃಭಾಷೆ / ಸ್ಥಳೀಯ ಭಾಷೆ / ಪ್ರಾದೇಶಿಕ ಭಾಷೆಯಾಗಿರುತ್ತದೆ. ಅದರ ನಂತರ, ಮನೆ / ಸ್ಥಳೀಯ ಭಾಷೆಯನ್ನು ಸಾಧ್ಯವಾದಲ್ಲೆಲ್ಲಾ ಒಂದು ಭಾಷೆಯಾಗಿ ಕಲಿಸಲಾಗುತ್ತದೆ. ಸರ್ಕಾರಿ ಮತ್ತು ಖಾಸಗಿ ಎರಡೂ ಪ್ರಕಾರದ ಶಾಲೆಗಳು ಈ ಕ್ರಮವನ್ನು ಅನುಸರಿಸಲಿವೆ. ವಿಜ್ಞಾನ ಸೇರಿದಂತೆ ಎಲ್ಲಾ ವಿಷಯಗಳ ಉನ್ನತ–ಗುಣಮಟ್ಟದ ಪಠ್ಯಪುಸ್ತಕಗಳನ್ನು ಮನೆ ಭಾಷೆಗಳಲ್ಲಿ / ಮಾತೃಭಾಷೆಯಲ್ಲಿ ಒದಗಿಸಲಾಗುವುದು. ಮಗು ಮಾತನಾಡುವ ಭಾಷೆ ಮತ್ತು ಬೋಧನಾ ಮಾಧ್ಯಮದ ನಡುವೆ ಇರುವ ಯಾವುದೇ ಅಂತರವನ್ನು ನಿವಾರಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಎಲ್ಲಾ ಪ್ರಯತ್ನಗಳನ್ನು ಮೊದಲೇ ಮಾಡಲಾಗುವುದು. ಮನೆ ಭಾಷೆ / ಮಾತೃಭಾಷೆಯ ಪಠ್ಯಪುಸ್ತಕಗಳು ಲಭ್ಯವಿಲ್ಲದ ಸಂದರ್ಭಗಳಲ್ಲಿ, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಂವಹನದ ಭಾಷೆ ಸಾಧ್ಯವಾದಲ್ಲೆಲ್ಲಾ ಇನ್ನೂ ಮಾತೃಭಾಷೆಯಾಗಿಯೇ ಇರುತ್ತದೆ. ಬೋಧನಾ ಮಾಧ್ಯಮಕ್ಕಿಂತ ಭಿನ್ನವಾಗಿರುವ ಮನೆ ಭಾಷೆಯನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ದ್ವಿಭಾಷಾ ಬೋಧನಾ–ಕಲಿಕಾ ಸಾಮಗ್ರಿಗಳು ಸೇರಿದಂತೆ ದ್ವಿಭಾಷಾ ವಿಧಾನವನ್ನು ಬಳಸಲು ಶಿಕ್ಷಕರನ್ನು ಪ್ರೋತ್ಸಾಹಿಸಲಾಗುತ್ತದೆ. ಎಲ್ಲಾ ಭಾಷೆಗಳನ್ನು ಉತ್ತಮ ಗುಣಮಟ್ಟದೊಂದಿಗೆ ಎಲ್ಲಾ ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತದೆ; ಒಂದು ಭಾಷೆಯನ್ನು ಕಲಿಸಲು ಮತ್ತು ಚೆನ್ನಾಗಿ ಕಲಿಯಲು ಆ ಭಾಷೆಯು ಬೋಧನಾ ಮಾಧ್ಯಮವಾಗಿರುವ ಅವಶ್ಯಕತೆ ಇಲ್ಲ.

**4.12.** 2 ರಿಂದ 8 ವರ್ಷದೊಳಗಿನ ಮಕ್ಕಳು ಭಾಷೆಗಳನ್ನು ತ್ವರಿತಗತಿಯಿಂದ ಕಲಿತುಕೊಳ್ಳುತ್ತಾರೆ ಮತ್ತು ಬಹುಭಾಷಾ ಸಿದ್ಧಾಂತವು ಯುವ ವಿದ್ಯಾರ್ಥಿಗಳಿಗೆ ಉತ್ತಮ ಜ್ಞಾನಾತ್ಮಕ ಪ್ರಯೋಜನಗಳನ್ನು ಹೊಂದಿದೆ ಎಂದು ಸಂಶೋಧನೆಗಳು ಸ್ಪಷ್ಟವಾಗಿ ತಿಳಿಯಪಡಿಸಿದಂತೆ ಬುನಾದಿ ಹಂತದಿಂದಲೇ ಮಕ್ಕಳಿಗೆ ವಿವಿಧ ಭಾಷೆಗಳನ್ನು ಪರಿಚಯಿಸಲಾಗುತ್ತದೆ. (ಆದರೆ ಮಾತೃಭಾಷೆಗೆ ನಿರ್ದಿಷ್ಟ ಮಹತ್ವ ನೀಡಲಾಗುತ್ತದೆ). 3 ನೇ ತರಗತಿ ಮತ್ತು ನಂತರದಲ್ಲಿ, ಸಾಕಷ್ಟು ಸಂವಹನಾತ್ಮಕ ಸಂಭಾಷಣೆಯೊಂದಿಗೆ ಮತ್ತು ಆರಂಭಿಕ ವರ್ಷಗಳಲ್ಲಿ ಮಾತೃಭಾಷೆಯಲ್ಲಿ ಆರಂಭಿಕ ಓದುವಿಕೆಯನ್ನು ಕಲಿಸುವುದು ಮತ್ತು ನಂತರ ಬರೆಯುವುದನ್ನು ಕಲಿಸುವುದು ಮತ್ತು ಇತರ ಭಾಷೆಗಳಲ್ಲಿ ಓದಲು ಮತ್ತು ಬರೆಯಲು ಅಭಿವೃದ್ಧಿಪಡಿಸಿದ ಕೌಶಲಗಳೊಂದಿಗೆ, ಎಲ್ಲಾ ಭಾಷೆಗಳನ್ನು ಆಹ್ಲಾದಿಸಬಹುದಾದ ರೀತಿಯಲ್ಲಿ ಮತ್ತು ಸಂವಹನಾತ್ಮಕ ಶೈಲಿಯಲ್ಲಿ ಕಲಿಸಲಾಗುತ್ತದೆ. ದೇಶದ ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ಮತ್ತು ನಿರ್ದಿಷ್ಟವಾಗಿ ಭಾರತದ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಉಲ್ಲೇಖಿಸಲಾದ ಎಲ್ಲಾ ಭಾಷೆಗಳಲ್ಲಿ ಹೆಚ್ಚಿನ ಸಂಖ್ಯೆಯ ಭಾಷಾ ಶಿಕ್ಷಕರನ್ನು ನೇಮಕ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಮುಖ ಪ್ರಯತ್ನ ಕೈಗೊಳ್ಳಲಿವೆ. ಎಲ್ಲಾ ರಾಜ್ಯಗಳು, ವಿಶೇಷವಾಗಿ ಭಾರತದ ವಿವಿಧ ಪ್ರದೇಶಗಳ ರಾಜ್ಯಗಳು, ಪರಸ್ಪರ ಹೆಚ್ಚಿನ ಸಂಖ್ಯೆಯಲ್ಲಿ ಬೇರೆ ಭಾಷೆಯ ಶಿಕ್ಷಕರನ್ನು ನೇಮಿಸಿಕೊಳ್ಳಲು, ಆಯಾ ರಾಜ್ಯಗಳಲ್ಲಿ ತ್ರಿ–ಭಾಷಾ ಸೂತ್ರವನ್ನು ಅನುಸರಿಸಲು ಮತ್ತು ದೇಶಾದ್ಯಂತ ಭಾರತೀಯ ಭಾಷೆಗಳ ಅಧ್ಯಯನವನ್ನು ಉತ್ತೇಜಿಸಲು ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಳ್ಳಬಹುದು. ವಿವಿಧ ಭಾಷೆಗಳ ಬೋಧನೆ ಮತ್ತು ಕಲಿಕೆಗಾಗಿ ಮತ್ತು ಭಾಷಾ ಕಲಿಕೆಯನ್ನು ಜನಪ್ರಿಯಗೊಳಿಸಲು ತಂತ್ರಜ್ಞಾನದ ವ್ಯಾಪಕ ಬಳಕೆಯನ್ನು ಮಾಡಲಾಗುವುದು.

**4.13.** ಸಾಂವಿಧಾನಿಕ ನಿಬಂಧನೆಗಳು, ಜನರು, ಪ್ರದೇಶಗಳು, ಒಕ್ಕೂಟದ ಆಕಾಂಕ್ಷೆಗಳು ಮತ್ತು ಬಹುಭಾಷಾ ಸಿದ್ಧಾಂತವನ್ನು ಉತ್ತೇಜಿಸುವ ಜೊತೆಗೆ ರಾಷ್ಟ್ರೀಯ ಏಕತೆಯನ್ನು ಉತ್ತೇಜಿಸುವ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು, ತ್ರಿ–ಭಾಷಾ ಸೂತ್ರವನ್ನು ಜಾರಿಗೆ ತರಲಾಗುವುದು. ಆದಾಗ್ಯೂ, ತ್ರಿ–ಭಾಷಾ ಸೂತ್ರದಲ್ಲಿ ಹೆಚ್ಚಿನ ನಮ್ಯತೆ ಇರುತ್ತದೆ ಮತ್ತು ಯಾವುದೇ ರಾಜ್ಯದ ಮೇಲೆ ಯಾವುದೇ ಭಾಷೆಯನ್ನು ಒತ್ತಾಯಪೂರ್ವಕವಾಗಿ ಹೇರಲಾಗುವುದಿಲ್ಲ. ಮೂರು ಭಾಷೆಗಳಲ್ಲಿ ಕನಿಷ್ಠ ಎರಡು ಭಾಷೆಗಳು ಭಾರತದ ಸ್ಥಳೀಯ ಭಾಷೆಗಳಾಗಿರುವಂತೆ ಮಕ್ಕಳು ಕಲಿಯುವ ಮೂರು ಭಾಷೆಗಳನ್ನು ರಾಜ್ಯಗಳು, ಪ್ರದೇಶಗಳು ಮತ್ತು ಸಹಜವಾಗಿ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಬಹುದಾಗಿದೆ, ನಿರ್ದಿಷ್ಟವಾಗಿ ಹೇಳುವುದಾದರೆ, ಮಾಧ್ಯಮಿಕ ಶಾಲೆಯ ಕೊನೆಯಲ್ಲಿ ವಿದ್ಯಾರ್ಥಿಗಳು ಮೂರೂ ಭಾಷೆಗಳಲ್ಲಿ ಮೂಲಭೂತ ಪ್ರಾವೀಣ್ಯತೆಯನ್ನು ಪ್ರದರ್ಶಿಸಲು ಸಾಧ್ಯವಿರುವವರೆಗೆ, (ಸಾಹಿತ್ಯ ಹಂತದಲ್ಲಿ ಭಾರತದ ಒಂದು ಭಾಷೆ ಸೇರಿದಂತೆ) ಅವರು ಇಚ್ಛಿಸಿದ್ದಲ್ಲಿ 6 ಅಥವಾ 7 ನೇ ತರಗತಿಯಲ್ಲಿ ತಾವು ಕಲಿಯುತ್ತಿರುವ ಮೂರು ಭಾಷೆಗಳಲ್ಲಿ ಒಂದು ಅಥವಾ ಹೆಚ್ಚಿನದನ್ನು ಬದಲಾಯಿಸಬಹುದಾಗಿದೆ.

**4.14.** ಉನ್ನತ ಗುಣಮಟ್ಟದ ದ್ವಿಭಾಷಾ ಪಠ್ಯಪುಸ್ತಕಗಳು ಮತ್ತು ವಿಜ್ಞಾನ ಮತ್ತು ಗಣಿತದಲ್ಲಿ ಬೋಧನಾ–ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸುವ ಕುರಿತು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು. ಇದರಿಂದಾಗಿ ವಿದ್ಯಾರ್ಥಿಗಳು ಎರಡೂ ವಿಷಯಗಳ ಬಗ್ಗೆ ತಮ್ಮ ಮಾತೃಭಾಷೆ ಮತ್ತು ಇಂಗ್ಲೀಷ್‌ನಲ್ಲಿ ಯೋಚಿಸಲು ಮತ್ತು ಮಾತನಾಡಲು ಸಾಧ್ಯವಾಗುತ್ತದೆ.

**4.15.** ಪ್ರಪಂಚದಾದ್ಯಂತದ ಅನೇಕ ಅಭಿವೃದ್ಧಿ ಹೊಂದಿದ ದೇಶಗಳ ಅನುಭವಗಳನ್ನು ಗಮನಿಸಿದಾಗ, ತಮ್ಮ ಭಾಷೆ, ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಕುರಿತು ಶಿಕ್ಷಣ ಪಡೆಯುವುದರಿಂದ, ಯಾವುದೇ ರೀತಿಯ ಹಾನಿಯಾಗದೇ, ಅದರ ಬದಲಾಗಿ ಶೈಕ್ಷಣಿಕ, ಸಾಮಾಜಿಕ ಮತ್ತು ತಾಂತ್ರಿಕ ಪ್ರಗತಿಗೆ ಸಾಕಷ್ಟು ಪ್ರಯೋಜನವಾಗಿರುವುದು ಕಂಡುಬಂದಿದೆ. ಭಾರತದ ರಾಷ್ಟ್ರೀಯ ಗುರುತು ಮತ್ತು ಸಂಪತ್ತನ್ನು ರೂಪಿಸಲು ಸಹಾಯ ಮಾಡುವ ಪ್ರಾಚೀನ ಮತ್ತು ಆಧುನಿಕ ಸಾಹಿತ್ಯ (ಗದ್ಯ ಮತ್ತು ಕವನ ಎರಡೂ), ಚಲನಚಿತ್ರ ಮತ್ತು ಸಂಗೀತದೊಂದಿಗೆ ಭಾರತದ ಭಾಷೆಗಳು ವಿಶ್ವದ ಅತ್ಯಂತ ಶ್ರೀಮಂತ, ಅತ್ಯಂತ ವೈಜ್ಞಾನಿಕ, ಅತ್ಯಂತ ಸುಂದರವಾದ ಮತ್ತು ಹೆಚ್ಚು ಅಭಿವ್ಯಕ್ತಿಶೀಲ ಭಾಷೆಗಳಲ್ಲಿ ಒಂದಾಗಿವೆ. ಸಾಂಸ್ಕೃತಿಕ ಪುಷ್ಟೀಕರಣ ಮತ್ತು ರಾಷ್ಟ್ರೀಯ ಭಾವೈಕ್ಯತೆಯ ಉದ್ದೇಶಗಳಿಗಾಗಿ, ಎಲ್ಲಾ ಯುವ ಭಾರತೀಯರು ತಮ್ಮ ದೇಶದ ಶ್ರೀಮಂತ ಮತ್ತು ವಿಶಾಲವಾದ ಭಾಷೆಗಳ ಬಗ್ಗೆ ಮತ್ತು ಆ ಭಾಷೆಗಳು ಒಳಗೊಂಡಿರುವ ಸಾಹಿತ್ಯ ಸಂಪತ್ತಿನ ಬಗ್ಗೆ ತಿಳಿದಿರಬೇಕು.

**4.16.** ಹೀಗಾಗಿ, ದೇಶದ ಪ್ರತಿಯೊಬ್ಬ ವಿದ್ಯಾರ್ಥಿಯು 6–8ನೇ ತರಗತಿಗಳಲ್ಲಿರುವಾಗ ಯಾವಾಗಲಾದರೂ 'ಭಾರತೀಯ ಭಾಷೆ'ಗಳ ಕುರಿತು ಒಂದು ಮೋಜಿನ ಯೋಜನೆ / ಚಟುವಟಿಕೆಯಲ್ಲಿ ಭಾಗವಹಿಸುತ್ತಾನೆ, ಉದಾಹರಣೆಗೆ, 'ಏಕ್ ಭಾರತ್ ಶ್ರೇಷ್ಠ ಭಾರತ್' ಉಪಕ್ರಮದಡಿಯಲ್ಲಿ ಇದನ್ನು ಆಯೋಜಿಸಬಹುದು. ಈ ಯೋಜನೆ / ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು, ಸಾಮಾನ್ಯ ಉಚ್ಚಾರಣೆ ಮತ್ತು ವೈಜ್ಞಾನಿಕವಾಗಿ ಜೋಡಿಸಲಾದ ವರ್ಣಮಾಲೆಗಳು ಮತ್ತು ಲಿಪಿಗಳು, ಅವುಗಳ ಸಾಮಾನ್ಯ ವ್ಯಾಕರಣ ರಚನೆಗಳು, ಸಂಸ್ಕೃತ ಮತ್ತು ಇತರ ಶಾಸ್ತ್ರೀಯ ಶಬ್ದಕೋಶಗಳ ಮೂಲಗಳಿಂದ ಅವುಗಳ ಮೂಲ, ಜೊತೆಗೆ ಅವುಗಳ ಶ್ರೀಮಂತವಾದ ಅಂತರ್–ಪ್ರಭಾವಗಳು ಮತ್ತು ವ್ಯತ್ಯಾಸಗಳಿಂದ ಪ್ರಾರಂಭಿಸುತ್ತಾ, ಪ್ರಮುಖ ಭಾರತೀಯ ಭಾಷೆಗಳ ಗಮನಾರ್ಹವಾದ ಏಕತೆಯ ಬಗ್ಗೆ ಕಲಿಯುವರು. ಅಲ್ಲದೇ, ಯಾವ ಭೌಗೋಳಿಕ ಪ್ರದೇಶಗಳಲ್ಲಿ ಯಾವ ಭಾಷೆಗಳನ್ನು ಮಾತನಾಡಲಾಗುತ್ತದೆ ಎಂಬುದನ್ನು ಕಲಿಯುತ್ತಾರೆ, ಬುಡಕಟ್ಟು ಭಾಷೆಗಳ ಸ್ವರೂಪ ಮತ್ತು ರಚನೆಯ ಅರಿವನ್ನು ಪಡೆದುಕೊಳ್ಳುತ್ತಾರೆ, ಭಾರತದ ಪ್ರತಿಯೊಂದು ಪ್ರಮುಖ ಭಾಷೆಯಲ್ಲೂ ಸಾಮಾನ್ಯವಾಗಿ ಮಾತನಾಡುವ ನುಡಿಗಟ್ಟುಗಳು ಮತ್ತು ವಾಕ್ಯಗಳನ್ನು ಹೇಳಲು ಕಲಿಯುತ್ತಾರೆ ಮತ್ತು ಪ್ರತಿಯೊಂದೂ ಶ್ರೀಮಂತ ಸಾಹಿತ್ಯದ ಬಗ್ಗೆ ಸ್ವಲ್ಪ ಕಲಿಯುತ್ತಾರೆ. (ಅಗತ್ಯಕ್ಕೆ ಅನುಸಾರವಾಗಿ ಸೂಕ್ತ ಅನುವಾದಗಳ ಮೂಲಕ). ಅಂತಹ ಚಟುವಟಿಕೆಯು ವಿದ್ಯಾರ್ಥಿಗಳಿಗೆ ಐಕ್ಯತೆ ಮತ್ತು ಸುಂದರವಾದ ಸಾಂಸ್ಕೃತಿಕ ಪರಂಪರೆ ಹಾಗೂ ಭಾರತದ ವೈವಿಧ್ಯತೆಯ ಕುರಿತು ಪ್ರಜ್ಞೆಯನ್ನು ಮೂಡಿಸುತ್ತದೆ ಮತ್ತು ಅವರು ಮುಂದಿನ ದಿನಗಳಲ್ಲಿ ಭಾರತದ ಇತರ ಭಾಗಗಳ ಜನರನ್ನು ಭೇಟಿಯಾಗುವುದರಿಂದ, ಅವರ ಇಡೀ ಜೀವನದುದ್ದಕ್ಕೂ ಜನರೊಂದಿಗೆ ಸಂವಹನ ಮಾಡುವಾಗ ಈ ಜ್ಞಾನ ಸಹಾಯಕವಾಗುತ್ತದೆ. ಈ ಯೋಜನೆ / ಚಟುವಟಿಕೆಯು ಸಂತೋಷದಾಯಕ ಚಟುವಟಿಕೆಯಾಗಿದೆ ಮತ್ತು ಯಾವುದೇ ರೀತಿಯ ಮೌಲ್ಯಮಾಪನವನ್ನು ಒಳಗೊಂಡಿರುವುದಿಲ್ಲ.

**4.17.** ಭಾರತೀಯ ಶಾಸ್ತ್ರೀಯ ಭಾಷೆಗಳು ಮತ್ತು ಸಾಹಿತ್ಯದ ಪ್ರಾಮುಖ್ಯತೆ, ಪ್ರಸ್ತುತತೆ ಮತ್ತು ಸೌಂದರ್ಯವನ್ನೂ ಸಹ ಕಡೆಗಣಿಸಲಾಗುವುದಿಲ್ಲ. ಸಂಸ್ಕೃತವು ಭಾರತದ ಸಂವಿಧಾನದ ಎಂಟನೇ ಪರಿಚ್ಛೇಧದಲ್ಲಿ ಉಲ್ಲೇಖಿಸಲಾದ ಒಂದು ಪ್ರಮುಖ ಆಧುನಿಕ ಭಾಷೆಯಾಗಿದ್ದು, ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಶಾಸ್ತ್ರೀಯ ಸಾಹಿತ್ಯವನ್ನು ಹೊಂದಿದೆ. ಇದು ಸಾವಿರಾರು ವರ್ಷಗಳಿಂದ ವಿವಿಧ ಮತ ಪಂಥಗಳಿಗೆ ಸೇರಿದ ಜನರು ಹಾಗೂ ವೈವಿಧ್ಯಮಯ ಸಾಮಾಜಿಕ–ಆರ್ಥಿಕ ಹಿನ್ನೆಲೆಗಳ ಜನರು ಬರೆದಿರುವ ಗಣಿತ, ತತ್ವಶಾಸ್ತ್ರ, ವ್ಯಾಕರಣ, ಸಂಗೀತ, ರಾಜಕೀಯ, ವೈದ್ಯಕೀಯ, ವಾಸ್ತುಶಿಲ್ಪ, ಲೋಹಶಾಸ್ತ್ರ, ನಾಟಕ, ಕವನ, ಕಥೆ ಹೇಳುವಿಕೆ ಮತ್ತು ಇನ್ನೂ ಹೆಚ್ಚಿನ ಸಂಪತ್ತನ್ನು ('ಸಂಸ್ಕೃತ ಜ್ಞಾನ ವ್ಯವಸ್ಥೆಗಳು' ಎಂದು ಕರೆಯಲಾಗುತ್ತದೆ) ಒಳಗೊಂಡಿದೆ. ತ್ರಿ–ಭಾಷಾ ಸೂತ್ರದಲ್ಲಿನ ಒಂದು ಆಯ್ಕೆಯೂ ಸೇರಿದಂತೆ ವಿದ್ಯಾರ್ಥಿಗಳಿಗೆ ಒಂದು ಪ್ರಮುಖ, ಸಂಪದ್ಭರಿತ ಆಯ್ಕೆಯಾಗಿ ಶಾಲೆ ಮತ್ತು ಉನ್ನತ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಸಂಸ್ಕೃತವನ್ನು ಪರಿಚಯಿಸಲಾಗುವುದು. ಸಂಸ್ಕೃತ ಜ್ಞಾನ ವ್ಯವಸ್ಥೆಗಳ ಬಳಕೆಯ ಮೂಲಕ ಮತ್ತು ನಿರ್ದಿಷ್ಟವಾಗಿ ಧ್ವನಿಶಾಸ್ತ್ರ ಮತ್ತು ಉಚ್ಚಾರಣೆಯ ಮೂಲಕ ಕಲಿಸುವುದೂ ಸೇರಿದಂತೆ, ಆಸಕ್ತಿದಾಯಕ, ಅನುಭವಾತ್ಮಕ ಮತ್ತು ಸಮಕಾಲೀನವಾಗಿ ಪ್ರಸ್ತುತವಾಗುವ ರೀತಿಯಲ್ಲಿ ಇದನ್ನು ಕಲಿಸಲಾಗುತ್ತದೆ. ಸಂಸ್ಕೃತದ ಮೂಲಕ ಸಂಸ್ಕೃತವನ್ನು (STS) ಕಲಿಸಲು ಮತ್ತು ಅದರ ಅಧ್ಯಯನವನ್ನು ನಿಜವಾಗಿಯೂ ಆನಂದಿಸುವಂತೆ ಮಾಡಲು ಮತ್ತು ಮಾಧ್ಯಮಿಕ ಶಾಲಾ ಹಂತದಲ್ಲಿ ಸಂಸ್ಕೃತ ಪಠ್ಯಪುಸ್ತಕಗಳನ್ನು ಸರಳ, ಗುಣಮಟ್ಟದ ಸಂಸ್ಕೃತ (SSS) ದಲ್ಲಿ ಬರೆಯಬಹುದು.

**4.18.** ತಮಿಳು, ತೆಲುಗು, ಕನ್ನಡ, ಮಲಯಾಳಂ, ಒಡಿಯಾ ಸೇರಿದಂತೆ ಇತರ ಶಾಸ್ತ್ರೀಯ ಭಾಷೆಗಳಲ್ಲಿ ಭಾರತವು ಅತ್ಯಂತ ಶ್ರೀಮಂತ ಸಾಹಿತ್ಯವನ್ನು ಹೊಂದಿದೆ. ಈ ಶಾಸ್ತ್ರೀಯ ಭಾಷೆಗಳ ಜೊತೆಗೆ ಪಾಲಿ, ಪರ್ಷಿಯನ್ ಮತ್ತು ಪ್ರಾಕೃತ ಭಾಷೆಗಳು ಮತ್ತು ಆ ಭಾಷೆಗಳ ಸಾಹಿತ್ಯ ಕೃತಿಗಳನ್ನು ಅವುಗಳ ಶ್ರೀಮಂತಿಕೆಗಾಗಿ ಮತ್ತು ಸಂತೋಷ ಮತ್ತು ಪುಷ್ಟೀಕರಣಕ್ಕಾಗಿ ಸಂರಕ್ಷಿಸಬೇಕು. ಭಾರತವು ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿದ ದೇಶವಾಗುತ್ತಿದ್ದಂತೆ, ಮುಂದಿನ ಪೀಳಿಗೆಯು ಭಾರತದ ವ್ಯಾಪಕ ಮತ್ತು ಸುಂದರವಾದ ಶಾಸ್ತ್ರೀಯ ಸಾಹಿತ್ಯದಲ್ಲಿ ಪಾಲ್ಗೊಳ್ಳಲು ಮತ್ತು ಶ್ರೀಮಂತವಾಗಲು ಬಯಸುತ್ತದೆ. ಸಂಸ್ಕೃತದ ಜೊತೆಗೆ, ಇತರ ಭಾಷೆ ಮತ್ತು ಸಾಹಿತ್ಯವು ಜೀವಂತವಾಗಿ ಮತ್ತು ರೋಮಾಂಚಕವಾಗಿರುವುದನ್ನು ಖಚಿತಪಡಿಸಿಕೊಳ್ಳಲು ತಮಿಳು, ತೆಲುಗು, ಕನ್ನಡ, ಮಲಯಾಳಂ, ಒಡಿಯಾ, ಪಾಲಿ, ಪರ್ಷಿಯನ್ ಮತ್ತು ಪ್ರಾಕೃತ ಸೇರಿದಂತೆ, ಭಾರತದ ಇತರ ಶಾಸ್ತ್ರೀಯ ಭಾಷೆಗಳು ಮತ್ತು ಸಾಹಿತ್ಯಗಳು ಬಹುಶಃ ಅಂತರ್ಜಾಲದಲ್ಲಿ ಲಭ್ಯವಾಗುವ ಆಟಗಳಂತೆ (ಆನ್‌ಲೈನ್ ಮಾಡ್ಯೂಲ್) ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ಆಯ್ಕೆಗಳಾಗಿ, ಅನುಭವಾತ್ಮಕ ಮತ್ತು ನವೀನ ವಿಧಾನಗಳ ಮೂಲಕ ವ್ಯಾಪಕವಾಗಿ ಲಭ್ಯವಾಗಲಿವೆ. ಶ್ರೀಮಂತವಾದ ಮೌಖಿಕ ಮತ್ತು ಲಿಖಿತ ಸಾಹಿತ್ಯ, ಸಾಂಸ್ಕೃತಿಕ ಸಂಪ್ರದಾಯಗಳು ಮತ್ತು ಜ್ಞಾನವನ್ನು ಹೊಂದಿರುವ ಎಲ್ಲಾ ಭಾರತೀಯ ಭಾಷೆಗಳಿಗೂ ಇದೇ ರೀತಿಯ ಪ್ರಯತ್ನಗಳನ್ನು ಮಾಡಲಾಗುವುದು.

**4.19**. ಮಕ್ಕಳ ಜ್ಞಾನದ ಹೆಚ್ಚಳಕ್ಕಾಗಿ ಮತ್ತು ಈ ಶ್ರೀಮಂತ ಭಾಷೆಗಳು ಮತ್ತು ಅವುಗಳ ಕಲಾತ್ಮಕ ಸಂಪತ್ತಿನ ಸಂರಕ್ಷಣೆಗಾಗಿ, ಸಾರ್ವಜನಿಕ ಅಥವಾ ಖಾಸಗಿ ಸೇರಿದಂತೆ ಎಲ್ಲಾ ಶಾಲೆಗಳ ಎಲ್ಲಾ ವಿದ್ಯಾರ್ಥಿಗಳು, 6–12ನೇ ತರಗತಿಗಳಲ್ಲಿ, ಮಾಧ್ಯಮಿಕ ಹಂತದಿಂದ ಮಾಧ್ಯಮಿಕ ಹಂತ ಮತ್ತು ಅದಕ್ಕೂ ಮೀರಿ ಮುಂದುವರಿಯುವ ಆಯ್ಕೆಯೊಂದಿಗೆ, ತಂತ್ರಜ್ಞಾನದ ಸಂಯೋಜನೆ ಸೇರಿದಂತೆ ಅನುಭವಾತ್ಮಕ ಮತ್ತು ನವೀನ ವಿಧಾನಗಳ ಮೂಲಕ, ಕನಿಷ್ಠ ಎರಡು ವರ್ಷ ಭಾರತದ ಶಾಸ್ತ್ರೀಯ ಭಾಷೆ ಮತ್ತು ಅದಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಕಲಿಯುವ ಆಯ್ಕೆಯನ್ನು ಹೊಂದಿರುತ್ತಾರೆ.

**4.20**. ಭಾರತೀಯ ಭಾಷೆಗಳಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ಉತ್ತಮ ಗುಣಮಟ್ಟದ ಬೋಧನೆಯ ಜೊತೆಗೆ, ಪ್ರೌಢ ಹಂತದಲ್ಲಿ ವಿದ್ಯಾರ್ಥಿಗಳ ಆಸಕ್ತಿಗಳು ಮತ್ತು ಆಕಾಂಕ್ಷೆಗಳಿಗೆ ಅನುಗುಣವಾಗಿ ಪ್ರಪಂಚದ ಸಂಸ್ಕೃತಿಗಳ ಬಗ್ಗೆ ತಿಳಿಯಲು ಮತ್ತು ಅವರ ಜಾಗತಿಕ ಜ್ಞಾನ ಹಾಗೂ ಚಲನಶೀಲತೆಯನ್ನು ಉತ್ಕೃಷ್ಟಗೊಳಿಸಲು ವಿದೇಶಿ ಭಾಷೆಗಳಾದ ಕೊರಿಯನ್, ಜಪಾನೀಸ್, ಥಾಯ್, ಫ್ರೆಂಚ್, ಜರ್ಮನ್, ಸ್ಪ್ಯಾನಿಷ್, ಪೋರ್ಚುಗೀಸ್ ಮತ್ತು ರಷ್ಯನ್ ಮುಂತಾದ ಭಾಷೆಗಳನ್ನು ಕಲಿಸಲಾಗುವುದು.

**4.21**. ಎಲ್ಲಾ ಭಾಷೆಗಳ ಬೋಧನೆಯನ್ನು ಅಂತರ್ಜಾಲದ ಆಟ ಮತ್ತು ಆ್ಯಪ್‌ಗಳ ಮೂಲಕ ಮತ್ತು ಚಲನಚಿತ್ರಗಳು, ರಂಗಭೂಮಿ, ಕಥೆ ಹೇಳುವಿಕೆ, ಕವನ ಹಾಗೂ ಸಂಗೀತದಂತಹ ಭಾಷೆಗಳ ಸಾಂಸ್ಕೃತಿಕ ಅಂಶಗಳನ್ನು ಸಂಯೋಜಿಸುವ ಮೂಲಕ ಮತ್ತು ವಿವಿಧ ಸಂಬಂಧಿತ ವಿಷಯಗಳೊಂದಿಗೆ ಮತ್ತು ನಿಜ ಜೀವನದ ಅನುಭವಗಳೊಂದಿಗೆ ಸಂಪರ್ಕಗಳನ್ನು ಸಾಧಿಸುವ ನವೀನ ಮತ್ತು ಪ್ರಾಯೋಗಿಕ ವಿಧಾನಗಳ ಮೂಲಕ ಮಾಡಲಾಗುವುದು. ಹೀಗಾಗಿ, ಭಾಷೆಗಳ ಬೋಧನೆಯೂ ಸಹ ಅನುಭವಾತ್ಮಕ ಕಲಿಕೆಯ ಬೋಧನಾ ವಿಧಾನವನ್ನು ಆಧರಿಸಿರುತ್ತದೆ.

**4.22.** ಶ್ರವಣದೋಷವುಳ್ಳ ವಿದ್ಯಾರ್ಥಿಗಳ ಬಳಕೆಗಾಗಿ ಭಾರತೀಯ ಸಂಕೇತ ಭಾಷೆ (ISL) ಯನ್ನು ದೇಶಾದ್ಯಂತ ಪ್ರಮಾಣೀಕರಿಸಲ್ಪಡುತ್ತದೆ ಮತ್ತು ರಾಷ್ಟ್ರೀಯ ಹಾಗೂ ರಾಜ್ಯ ಪಠ್ಯಕ್ರಮದ ಪುಸ್ತಕಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಸಾಧ್ಯವಾದರೆ ಮತ್ತು ಸಂಬಂಧಪಟ್ಟಿದ್ದರೆ, ಸ್ಥಳೀಯ ಸಂಕೇತ ಭಾಷೆಗಳನ್ನು ಗೌರವಿಸಲಾಗುತ್ತದೆ ಮತ್ತು ಕಲಿಸಲಾಗುತ್ತದೆ.

### ಪಠ್ಯಕ್ರಮದಲ್ಲಿ ಅಗತ್ಯ ವಿಷಯಗಳು, ಕೌಶಲ್ಯಗಳು ಮತ್ತು ಸಾಮರ್ಥ್ಯಗಳ ಸಂಯೋಜನೆ:

**4.23.** ವಿದ್ಯಾರ್ಥಿಗಳು ತಮಗೆ ಬೇಕಾದಂತೆ ಪಠ್ಯಕ್ರಮವನ್ನು ಆಯ್ಕೆಮಾಡುವಲ್ಲಿ ಹೆಚ್ಚಿನ ಪ್ರಮಾಣದ ನಮ್ಯತೆಯನ್ನು ಹೊಂದಿರಲೇಬೇಕು, ಆದರೆ ಇಂದಿನ ವೇಗವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ ಉತ್ತಮ, ಯಶಸ್ವಿ, ನವೀನ, ಹೊಂದಿಕೊಳ್ಳಬಲ್ಲ ಮತ್ತು ಉತ್ಪಾದಕ ವ್ಯಕ್ತಿಗಳಾಗಲು, ಎಲ್ಲಾ ವಿದ್ಯಾರ್ಥಿಗಳು ಕೆಲವು ವಿಷಯಗಳು, ಕೌಶಲಗಳು ಮತ್ತು ಸಾಮರ್ಥ್ಯಗಳನ್ನು ಕಲಿಯಬೇಕಾಗಿದೆ. ಭಾಷೆಗಳಲ್ಲಿ ಪ್ರಾವೀಣ್ಯತೆಯ ಜೊತೆಗೆ, ಈ ಕೌಶಲಗಳಲ್ಲಿ: ವೈಜ್ಞಾನಿಕ ಮನೋಭಾವ ಮತ್ತು ಸಾಕ್ಷ್ಯಾಧಾರಿತ ಚಿಂತನೆ; ಸೃಜನಶೀಲತೆ ಮತ್ತು ನವೀನತೆ; ಸೌಂದರ್ಯ ಮತ್ತು ಕಲೆಯ ಪ್ರಜ್ಞೆ; ಮೌಖಿಕ ಮತ್ತು ಲಿಖಿತ ಸಂವಹನ; ಆರೋಗ್ಯ ಮತ್ತು ಪೋಷಣೆ; ದೈಹಿಕ ಶಿಕ್ಷಣ, ಕ್ಷಮತೆ, ಕ್ಷೇಮ ಮತ್ತು ಕ್ರೀಡೆ; ಸಹಯೋಗ ಮತ್ತು ತಂಡ ಮನೋಭಾವ, ಸಮಸ್ಯೆ ಪರಿಹಾರ ಮತ್ತು ತಾರ್ಕಿಕ ನಿರ್ಣಯ; ವೃತ್ತಿಪರ ಅನುಭವ ಮತ್ತು ಕೌಶಲಗಳು; ಡಿಜಿಟಲ್ ಸಾಕ್ಷರತೆ, ಕೋಡಿಂಗ್ ಮತ್ತು ಲೆಕ್ಕಾಚಾರದ ಚಿಂತನೆ; ನೈತಿಕ ನಿರ್ಣಯ; ಮಾನವಿಕ ಮತ್ತು ಸಾಂವಿಧಾನಿಕ ಮೌಲ್ಯಗಳ ಜ್ಞಾನ ಮತ್ತು ಅಭ್ಯಾಸ; ಲಿಂಗ ಸಂವೇದನೆ; ಮೂಲಭೂತ ಕರ್ತವ್ಯಗಳು; ಪೌರತ್ವ ಕೌಶಲ ಮತ್ತು ಮೌಲ್ಯಗಳು;

ಭಾರತದ ಜ್ಞಾನ; ನೀರು ಮತ್ತು ಸಂಪನ್ಮೂಲ ಸಂರಕ್ಷಣೆ, ನೈರ್ಮಲ್ಯ ಮತ್ತು ಸ್ವಚ್ಛತೆ ಸೇರಿದಂತೆ ಪರಿಸರ ಜಾಗೃತಿ; ಪ್ರಸ್ತುತ ವ್ಯವಹಾರಗಳು ಮತ್ತು ಸ್ಥಳೀಯ ಸಮುದಾಯಗಳು, ರಾಜ್ಯಗಳು, ದೇಶ ಮತ್ತು ಪ್ರಪಂಚವು ಎದುರಿಸುತ್ತಿರುವ ನಿರ್ಣಾಯಕ ವಿಷಯಗಳ ಜ್ಞಾನವು ಸೇರಿರುತ್ತದೆ.

**4.24.** ಸಮಕಾಲೀನ ವಿಷಯಗಳಾದ ಕೃತಕ ಬುದ್ಧಿಮತ್ತೆ, Design Thinking ಎಂದು ಹೆಸರಾದ ಚಿಂತನ ಪ್ರಕ್ರಿಯೆ, ವಿನ್ಯಾಸ ಚಿಂತನೆ, ಸಂಪೂರ್ಣ ಆರೋಗ್ಯ, ಸಾವಯವ ಜೀವನ, ಪರಿಸರ ಶಿಕ್ಷಣ, ಜಾಗತಿಕ ಪೌರತ್ವ ಶಿಕ್ಷಣ (GCED) ಇತ್ಯಾದಿಗಳನ್ನು ಸೂಕ್ತ ಹಂತಗಳಲ್ಲಿ ಪರಿಚಯಿಸುವುದು ಸೇರಿದಂತೆ, ಎಲ್ಲಾ ಹಂತದ ವಿದ್ಯಾರ್ಥಿಗಳಲ್ಲಿ ಈ ವಿವಿಧ ಪ್ರಮುಖ ಕೌಶಲಗಳನ್ನು ಬೆಳೆಸಲು, ಸಂಯೋಜಿತ ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರ ಉಪಕ್ರಮಗಳನ್ನು ಕೈಗೊಳ್ಳಲಾಗುವುದು.

**4.25.** ಕೃತಕ ಬುದ್ಧಿಮತ್ತೆ, ಯಂತ್ರ ಕಲಿಕೆ ಮತ್ತು ದತ್ತಾಂಶ ವಿಜ್ಞಾನ ಇತ್ಯಾದಿಗಳನ್ನು ಒಳಗೊಂಡಿರುವ ಹಲವಾರು ಭವಿಷ್ಯದ ಕ್ಷೇತ್ರಗಳು ಮತ್ತು ವೃತ್ತಿಗಳಲ್ಲಿ ಭಾರತದ ಭವಿಷ್ಯ ಮತ್ತು ಭಾರತದ ನಾಯಕತ್ವದ ಪಾತ್ರಕ್ಕೆ ಗಣಿತ ಮತ್ತು ಗಣಿತೀಯ ಚಿಂತನೆ ಬಹಳ ಮುಖ್ಯ ಎಂದು ಗುರುತಿಸಲಾಗಿದೆ. ಹೀಗಾಗಿ, ಗಣಿತದ ಚಿಂತನೆಯನ್ನು ಹೆಚ್ಚು ಆಹ್ಲಾದಕರ ಮತ್ತು ಆಕರ್ಷಕವಾಗಿ ಮಾಡುವ ಪದಬಂಧಗಳು ಮತ್ತು ಆಟಗಳ ನಿಯಮಿತ ಬಳಕೆ ಸೇರಿದಂತೆ, ವಿವಿಧ ಪ್ರಕಾರದ ನವೀನ ವಿಧಾನಗಳ ಮೂಲಕ, ಹಂತದಿಂದ ಪ್ರಾರಂಭಿಸಿ, ಶಾಲಾ ಅವಧಿಯುದ್ದಕ್ಕೂ ಗಣಿತ ಮತ್ತು ಲೆಕ್ಕಾಚಾರದ ಚಿಂತನೆಯ ಮೇಲೆ ಹೆಚ್ಚಿನ ಒತ್ತು ನೀಡಲಾಗುವುದು. ಕೋಡಿಂಗ್ ಒಳಗೊಂಡ ಚಟುವಟಿಕೆಗಳನ್ನು ಮಾಧ್ಯಮಿಕ ಹಂತದಲ್ಲಿ ಪರಿಚಯಿಸಲಾಗುವುದು.

**4.26.** ಪ್ರತಿಯೊಬ್ಬ ವಿದ್ಯಾರ್ಥಿಯು 6 ರಿಂದ 8ನೇ ತರಗತಿಯ ಅವಧಿಯಲ್ಲಿ, ರಾಜ್ಯಗಳು ಮತ್ತು ಸ್ಥಳೀಯ ಸಮುದಾಯಗಳು ನಿರ್ಧರಿಸಿದಂತೆ ಮತ್ತು ಸ್ಥಳೀಯ ಕೌಶಲ ಅಗತ್ಯಗಳಿಗೆ ಜೋಡಿಸಲಾಗಿರುವಂತೆ ಮರಗೆಲಸ, ವಿದ್ಯುತ್ ಕೆಲಸ, ಲೋಹದ ಕೆಲಸ, ತೋಟಗಾರಿಕೆ, ಕುಂಬಾರಿಕೆ ಮುಂತಾದ ಪ್ರಮುಖ ವೃತ್ತಿಪರ ಕರಕೌಶಲ್ಯಗಳ ಸಮೀಕ್ಷೆ ಮತ್ತು ಮಾಡಿ ನೋಡುವ ಅನುಭವವನ್ನು ನೀಡುವ ಒಂದು ಮೋಜಿನ ಕೋರ್ಸ್ ಅನ್ನು ತೆಗೆದುಕೊಳ್ಳುತ್ತಾನೆ. NCFSE 2020–21ರ ಚೌಕಟ್ಟನ್ನು ರೂಪಿಸುವಾಗ 6–8ನೇ ತರಗತಿಗಳಿಗಾಗಿ ಅಭ್ಯಾಸ ಆಧಾರಿತ ಪಠ್ಯಕ್ರಮವನ್ನು NCERT ಸೂಕ್ತವಾಗಿ ವಿನ್ಯಾಸಗೊಳಿಸುತ್ತದೆ. 6–8 ನೇ ತರಗತಿಯ ಸಮಯದಲ್ಲಿ ಎಲ್ಲಾ ವಿದ್ಯಾರ್ಥಿಗಳು 10 ದಿನಗಳ ಬ್ಯಾಗ್ ರಹಿತ ಅವಧಿಯಲ್ಲಿ ಭಾಗವಹಿಸುತ್ತಾರೆ, ಅಲ್ಲಿ ಅವರು ಸ್ಥಳೀಯ ವೃತ್ತಿಪರ ತಜ್ಞರಾದ ಬಡಗಿಗಳು, ತೋಟಗಾರರು, ಕುಂಬಾರರು, ಕಲಾವಿದರು ಮುಂತಾದವರೊಂದಿಗೆ ತರಬೇತಿ ಪಡೆಯುತ್ತಾರೆ. ವೃತ್ತಿಪರ ವಿಷಯಗಳನ್ನು ಕಲಿಯಲು ಇದೇ ರೀತಿಯ ತರಬೇತಿ (internship) ಅವಕಾಶಗಳು, (ರಜಾ ಅವಧಿಗಳು ಸೇರಿದಂತೆ) 6–12ನೇ ತರಗತಿಗಳ ವಿದ್ಯಾರ್ಥಿಗಳಿಗೆ ಲಭ್ಯವಾಗುವಂತೆ ಮಾಡಬಹುದು. ಆನ್‌ಲೈನ್ ವಿಧಾನದಲ್ಲಿಯೂ ಸಹ ವೃತ್ತಿಪರ ಕೋರ್ಸ್‌ಗಳು ಲಭ್ಯವಾಗುವಂತೆ ಮಾಡಲಾಗುವುದು. ಕಲೆ, ರಸಪ್ರಶ್ನೆಗಳು, ಕ್ರೀಡೆಗಳು ಮತ್ತು ವೃತ್ತಿಪರ ಕರಕೌಶಲ್ಯವನ್ನು ಒಳಗೊಂಡ ವಿವಿಧ ರೀತಿಯ ಪುಷ್ಟೀಕರಣ ಚಟುವಟಿಕೆಗಳಿಗಾಗಿ ವರ್ಷವಿಡೀ ಬ್ಯಾಗ್ ರಹಿತ ದಿನಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಐತಿಹಾಸಿಕ, ಸಾಂಸ್ಕೃತಿಕ ಮತ್ತು ಪ್ರವಾಸಿ ಪ್ರಾಮುಖ್ಯತೆಯ ಸ್ಥಳಗಳು / ಸ್ಮಾರಕಗಳಿಗೆ ಭೇಟಿ ನೀಡುವುದು, ಸ್ಥಳೀಯ ಕಲಾವಿದರು ಮತ್ತು ಕುಶಲಕರ್ಮಿಗಳನ್ನು ಭೇಟಿ ಮಾಡುವುದು ಮತ್ತು ಅವರ ಗ್ರಾಮ / ತಹಸಿಲ್ / ಜಿಲ್ಲೆ / ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ನಿಯಮಿತವಾಗಿ ಭೇಟಿ ನೀಡುವ ಮೂಲಕ ಮಕ್ಕಳಿಗೆ ಶಾಲೆಯ ಹೊರಗಿನ ಚಟುವಟಿಕೆಗಳ ಅನುಭವ ಒದಗಿಸಲಾಗುವುದು.

**4.27.** "ಭಾರತದ ಜ್ಞಾನ" ವು ಪ್ರಾಚೀನ ಭಾರತೀಯ ಜ್ಞಾನ ಮತ್ತು ಆಧುನಿಕ ಭಾರತಕ್ಕೆ ಅದು ನೀಡಿದ ಕೊಡುಗೆಗಳು, ಅದರ ಯಶಸ್ಸು ಮತ್ತು ಸವಾಲುಗಳು ಹಾಗೂ ಶಿಕ್ಷಣ, ಆರೋಗ್ಯ, ಪರಿಸರ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಭಾರತದ ಭವಿಷ್ಯದ ಆಕಾಂಕ್ಷೆಗಳ ಕುರಿತು ಸ್ಪಷ್ಟ ಪ್ರಜ್ಞೆಯನ್ನು ಒಳಗೊಂಡಿರುತ್ತದೆ. ಸಂಬಂಧಪಟ್ಟಲ್ಲೆಲ್ಲಾ, ಶಾಲಾ ಪಠ್ಯಕ್ರಮದಾದ್ಯಂತ ಈ ಅಂಶಗಳನ್ನು ನಿಖರ ಮತ್ತು ವೈಜ್ಞಾನಿಕ ರೀತಿಯಲ್ಲಿ ಸಂಯೋಜಿಸಲಾಗುವುದು; ನಿರ್ದಿಷ್ಟವಾಗಿ ಹೇಳುವುದಾದರೆ, ಬುಡಕಟ್ಟು ಜ್ಞಾನ ಮತ್ತು ಸ್ಥಳೀಯ ಹಾಗೂ ಸಾಂಪ್ರದಾಯಿಕ ಕಲಿಕೆಯ ವಿಧಾನಗಳನ್ನು ಒಳಗೊಂಡಂತೆ, ಭಾರತೀಯ ಜ್ಞಾನ ವ್ಯವಸ್ಥೆಗಳನ್ನು ಗಣಿತ, ಖಗೋಳವಿಜ್ಞಾನ, ತತ್ತ್ವಶಾಸ್ತ್ರ, ಯೋಗ, ವಾಸ್ತುಶಿಲ್ಪ, ವೈದ್ಯಕೀಯಶಾಸ್ತ್ರ, ಕೃಷಿ, ಎಂಜಿನಿಯರಿಂಗ್, ಭಾಷಾಶಾಸ್ತ್ರ, ಸಾಹಿತ್ಯ, ಕ್ರೀಡೆ, ಆಟಗಳು, ಆಡಳಿತ, ರಾಜಕೀಯ, ಪರಿಸರ ಸಂರಕ್ಷಣೆಯಲ್ಲಿ ಸೇರ್ಪಡೆ ಮಾಡಲಾಗುವುದು. ಬುಡಕಟ್ಟು ಜನಾಂಗೀಯ– ವೈದ್ಯಕೀಯ ಅಭ್ಯಾಸಗಳು, ಅರಣ್ಯ ನಿರ್ವಹಣೆ, ಸಾಂಪ್ರದಾಯಿಕ ಕೃಷಿ, ನೈಸರ್ಗಿಕ ಕೃಷಿ ಇತ್ಯಾದಿ ನಿರ್ದಿಷ್ಟ ಕೋರ್ಸ್‌ಗಳನ್ನೂ ಸಹ ಪ್ರಾರಂಭಿಸಲಾಗುವುದು. ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಭಾರತೀಯ ಜ್ಞಾನ ವ್ಯವಸ್ಥೆಗಳ ಬಗ್ಗೆ ಒಂದು ಐಚ್ಛಿಕ ಕೋರ್ಸ್ ಲಭ್ಯವಿರುತ್ತದೆ. ಮೋಜಿನ ಮತ್ತು ಸ್ಥಳೀಯ ಆಟಗಳ ಮೂಲಕ

ವಿವಿಧ ಅಂಶಗಳು ಮತ್ತು ವಿಷಯಗಳನ್ನು ಕಲಿಯಲು ಶಾಲೆಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಬಹುದು. ಪ್ರಾಚೀನ ಮತ್ತು ಆಧುನಿಕ, ವಿಜ್ಞಾನ ಮತ್ತು ಅದರಾಚೆಗಿನ ಭಾರತದ ಸ್ಫೂರ್ತಿದಾಯಕ ವ್ಯಕ್ತಿಗಳ ಕುರಿತ ಸಾಕ್ಷ್ಯಚಿತ್ರಗಳನ್ನು ಶಾಲಾ ಪಠ್ಯಕ್ರಮದಾದ್ಯಂತ ಸೂಕ್ತ ಹಂತಗಳಲ್ಲಿ ತೋರಿಸಲಾಗುತ್ತದೆ. ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳ ಭಾಗವಾಗಿ ವಿವಿಧ ರಾಜ್ಯಗಳಿಗೆ ಭೇಟಿ ನೀಡಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಗುತ್ತದೆ.

**4.28.** “ಸರಿಯಾದದ್ದನ್ನು ಮಾಡುವ" ಕಾರ್ಯಕ್ಕೆ ಪ್ರಾಮುಖ್ಯತೆ ನೀಡುವುದನ್ನು ಚಿಕ್ಕ ವಯಸ್ಸಿನಲ್ಲಿಯೇ ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತದೆ ಮತ್ತು ನೈತಿಕ ನಿರ್ಧಾರಗಳನ್ನು ತೆಗೆದುಕೊಳ್ಳಲು ತಾರ್ಕಿಕ ಆಧಾರವನ್ನು ನೀಡಲಾಗುತ್ತದೆ. ನಂತರದ ವರ್ಷಗಳಲ್ಲಿ ಮಕ್ಕಳು ತಮ್ಮ ಜೀವನದಲ್ಲಿ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಲು, ನೈತಿಕ ವಿಷಯದ ಬಗ್ಗೆ ವಿವಿಧ ದೃಷ್ಟಿಕೋನಗಳಿಂದ ವಾದ/ನಿಲುವು ತಾಳಲು ಮತ್ತು ಎಲ್ಲಾ ಕೆಲಸಗಳಲ್ಲಿ ನೈತಿಕ ಅಭ್ಯಾಸಗಳನ್ನು ರೂಢಿಸಿಕೊಳ್ಳಲು ಅನುಕೂಲವಾಗುವಂತೆ ಮೋಸ, ಹಿಂಸೆ, ಕೃತಿಚೌರ್ಯ, ಮಲಿನಗೊಳಿಸುವಿಕೆ, ಸಹಿಷ್ಣುತೆ, ಸಮಾನತೆ, ಪರಾನುಭೂತಿ ಇತ್ಯಾದಿ ವಿಷಯಗಳೊಂದಿಗೆ ಮೌಲ್ಯ ಶಿಕ್ಷಣವನ್ನು ವಿಸ್ತರಿಸಲಾಗುವುದು. ಅಂತಹ ಮೂಲಭೂತ ನೈತಿಕ ತಾರ್ಕಿಕತೆಯ ಪರಿಣಾಮಗಳಾಗಿ, ಸಾಂಪ್ರದಾಯಿಕ ಭಾರತೀಯ ಮೌಲ್ಯಗಳು ಮತ್ತು ಎಲ್ಲಾ ಮೂಲಭೂತ ಮಾನವೀಯ ಮತ್ತು ಸಾಂವಿಧಾನಿಕ ಮೌಲ್ಯಗಳನ್ನು (ಉದಾಹರಣೆಗೆ ಸೇವೆ, ಅಹಿಂಸೆ, ಸ್ವಚ್ಛತೆ, ಸತ್ಯ, ನಿಷ್ಕಾಮ ಕರ್ಮ, ಶಾಂತಿ, ತ್ಯಾಗ, ಸಹನೆ, ವೈವಿಧ್ಯತೆ, ಬಹುತ್ವ, ನೀತಿವಂತ ನಡವಳಿಕೆ, ಲಿಂಗ ಸಂವೇದನೆ, ಹಿರಿಯರಿಗೆ ಗೌರವ, ಯಾವುದೇ ಹಿನ್ನೆಲೆಯನ್ನು ಪರಿಗಣಿಸದೇ ಎಲ್ಲ ಜನರು ಮತ್ತು ಅವರ ಅಂತರ್ಗತ ಸಾಮರ್ಥ್ಯಗಳನ್ನು ಗೌರವಿಸುವುದು, ಪರಿಸರವನ್ನು ಗೌರವಿಸುವುದು, ಸಹಾಯ ಮಾಡುವುದು, ಸೌಜನ್ಯ, ತಾಳ್ಮೆ, ಕ್ಷಮೆ, ಪರಾನುಭೂತಿ, ಸಹಾನುಭೂತಿ, ದೇಶಭಕ್ತಿ, ಪ್ರಜಾಪ್ರಭುತ್ವ ದೃಷ್ಟಿಕೋನ, ಸಮಗ್ರತೆ, ಜವಾಬ್ದಾರಿ, ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ) ಎಲ್ಲಾ ವಿದ್ಯಾರ್ಥಿಗಳಲ್ಲಿ ಬೆಳೆಸಲಾಗುವುದು. ಪಂಚತಂತ್ರ, ಜಾತಕ, ಹಿತೋಪದೇಶ ಮತ್ತು ಇತರ ಆನಂದದಾಯಕ ನೀತಿಕಥೆಗಳು ಮತ್ತು ಭಾರತೀಯ ಸಂಪ್ರದಾಯದ ಸ್ಫೂರ್ತಿದಾಯಕ ಮೂಲ ಕಥೆಗಳನ್ನು ಓದಲು ಮತ್ತು ಕಲಿಯಲು ಹಾಗೂ ಜಾಗತಿಕ ಸಾಹಿತ್ಯದ ಮೇಲೆ ಅವುಗಳ ಪ್ರಭಾವದ ಬಗ್ಗೆ ತಿಳಿಯಲು ಮಕ್ಕಳಿಗೆ ಅವಕಾಶವಿರುತ್ತದೆ. ಎಲ್ಲಾ ವಿದ್ಯಾರ್ಥಿಗಳು ಭಾರತೀಯ ಸಂವಿಧಾನದ ಆಯ್ದ ಭಾಗಗಳನ್ನು ಓದುವುದೂ ಸಹ ಅಗತ್ಯವಾಗಿದೆ ಎಂದು ಪರಿಗಣಿಸಲಾಗುತ್ತದೆ. ಮುನ್ನೆಚ್ಚರಿಕೆಯ ಆರೋಗ್ಯ ಕ್ರಮಗಳು, ಮಾನಸಿಕ ಆರೋಗ್ಯ, ಉತ್ತಮ ಪೋಷಣೆ, ವೈಯಕ್ತಿಕ ಮತ್ತು ಸಾರ್ವಜನಿಕ ನೈರ್ಮಲ್ಯ, ವಿಪತ್ತು ನಿರ್ವಹಣೆ ಮತ್ತು ಪ್ರಥಮ ಚಿಕಿತ್ಸೆ ಸೇರಿದಂತೆ ಆರೋಗ್ಯದ ಕುರಿತು ಮೂಲಭೂತ ತರಬೇತಿಯನ್ನು ಪಠ್ಯಕ್ರಮದಲ್ಲಿ ಸೇರಿಸಲಾಗುವುದು. ಜೊತೆಗೆ ಮದ್ಯಪಾನ, ತಂಬಾಕು ಮತ್ತು ಇತರ ಮಾದಕ ದ್ರವ್ಯಗಳ ಹಾನಿಕಾರಕ ಪರಿಣಾಮಗಳ ವೈಜ್ಞಾನಿಕ ವಿವರಣೆಗಳನ್ನೂ ಸಹ ಸೇರಿಸಲಾಗುವುದು.

**4.29.** ಶಿಕ್ಷಣವು ನಮ್ಮ ವಿದ್ಯಾರ್ಥಿಗಳಿಗೆ ಅತ್ಯಧಿಕವಾಗಿ, ಸಂಬಂಧಿತ, ಸೂಕ್ತ, ಆಸಕ್ತಿದಾಯಕ ಮತ್ತು ಪರಿಣಾಮಕಾರಿಯಾಗಿರುವುದನ್ನು ಖಚಿತಪಡಿಸಿಕೊಳ್ಳಲು ಬುನಾದಿ ಹಂತದಿಂದ ಎಲ್ಲಾ ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರವು ಸಂಸ್ಕೃತಿ, ಸಂಪ್ರದಾಯಗಳು, ಪರಂಪರೆ, ಪದ್ಧತಿಗಳು, ಭಾಷೆ, ತತ್ವಶಾಸ್ತ್ರ, ಭೌಗೋಳಿಕತೆ, ಪ್ರಾಚೀನ ಮತ್ತು ಸಮಕಾಲೀನ ಜ್ಞಾನ, ಸಾಮಾಜಿಕ ಮತ್ತು ವೈಜ್ಞಾನಿಕ ಅಗತ್ಯತೆಗಳು, ಸ್ಥಳೀಯ ಮತ್ತು ಸಾಂಪ್ರದಾಯಿಕ ಕಲಿಕೆಯ ವಿಧಾನಗಳು ಇತ್ಯಾದಿಗಳ ರೂಪದಲ್ಲಿ ಭಾರತೀಯ ಮತ್ತು ಸ್ಥಳೀಯ ಸನ್ನಿವೇಶ ಮತ್ತು ನೀತಿ ತತ್ವಗಳಲ್ಲಿ ಬಲವಾಗಿ ಬೇರೂರಿರುವಂತೆ ಪುನರ್ ವಿನ್ಯಾಸಗೊಳಿಸಲಾಗುವುದು. ಕಥೆಗಳು, ಕಲೆಗಳು, ಆಟಗಳು, ಕ್ರೀಡೆ, ಉದಾಹರಣೆಗಳು, ಸಮಸ್ಯೆಗಳು ಇತ್ಯಾದಿಗಳನ್ನು ಭಾರತೀಯ ಮತ್ತು ಸ್ಥಳೀಯ ಭೌಗೋಳಿಕ ಸನ್ನಿವೇಶಕ್ಕೆ ಸಾಧ್ಯವಾದಷ್ಟು ಸಂಬಂಧವಿರುವಂತೆ ಆಯ್ಕೆ ಮಾಡಲಾಗುತ್ತದೆ. ಕಲಿಕೆಯು ಹೀಗೆ ಬೇರೂರಿದಾಗ ಮಾತ್ರ ಆಲೋಚನೆಗಳು, ಅಮೂರ್ತತೆಗಳು ಮತ್ತು ಸೃಜನಶೀಲತೆಯು ಉತ್ತಮವಾಗಿ ಅಭಿವೃದ್ಧಿ ಹೊಂದುತ್ತವೆ.

## ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCFSE):

**4.30.** ಈ ರಾಷ್ಟ್ರೀಯ ಶಿಕ್ಷಣ ನೀತಿ 2020 ರಲ್ಲಿನ ತತ್ವಗಳು, ಪಠ್ಯಕ್ರಮದ ಪ್ರಮುಖ ಅಗತ್ಯತೆಗಳು ಮತ್ತು ರಾಜ್ಯ ಸರ್ಕಾರಗಳು, ಸಚಿವಾಲಯಗಳು, ಕೇಂದ್ರ ಸರ್ಕಾರದ ಸಂಬಂಧಿತ ಇಲಾಖೆಗಳು ಹಾಗೂ ಇತರ ತಜ್ಞ ಸಂಸ್ಥೆಗಳು ಸೇರಿದಂತೆ ಎಲ್ಲಾ ಭಾಗೀದಾರರೊಂದಿಗೆ ಚರ್ಚಿಸಿದ ನಂತರ ಶಾಲಾ ಶಿಕ್ಷಣಕ್ಕಾಗಿ ಹೊಸ ಮತ್ತು ಸಮಗ್ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು NCERT ಸಿದ್ಧಪಡಿಸುತ್ತದೆ ಮತ್ತು ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ಅದನ್ನು ಲಭ್ಯಗೊಳಿಸಲಾಗುವುದು. ಮುಂಚೂಣಿಯ ಪಠ್ಯಕ್ರಮವನ್ನು ಗಣನೆಗೆ ತೆಗೆದುಕೊಂಡು ಪಠ್ಯಕ್ರಮ ಚೌಕಟ್ಟನ್ನು ಇನ್ನು ಮುಂದೆ 5–10 ವರ್ಷಗಳಿಗೊಮ್ಮೆ ಮರುಪರಿಶೀಲಿಸಲಾಗುತ್ತದೆ ಮತ್ತು ನವೀಕರಿಸಲಾಗುತ್ತದೆ.

**ಸ್ಥಳೀಯ ವಿಷಯ ಮತ್ತು ವೈಶಿಷ್ಟ್ಯತೆಯೊಂದಿಗೆ ರಾಷ್ಟ್ರೀಯ ಪಠ್ಯಪುಸ್ತಕಗಳು:**

**4.31.** ವಸ್ತು ವಿಷಯದಲ್ಲಿ ಕಡಿತ ಮತ್ತು ಶಾಲಾ ಪಠ್ಯಕ್ರಮದಲ್ಲಿ ಹೆಚ್ಚಿನ ನಮ್ಯತೆ ಮತ್ತು ಯಾಂತ್ರಿಕ ಕಲಿಕೆಗಿಂತ ರಚನಾತ್ಮಕತೆಗೆ ಹೊಸ ಒತ್ತು ನೀಡುವಾಗ, ಶಾಲಾ ಪಠ್ಯಪುಸ್ತಕಗಳಲ್ಲಿ ಅದಕ್ಕೆ ತಕ್ಕಂತೆ ಸಮಾನಾಂತರ ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಎಲ್ಲಾ ಪಠ್ಯಪುಸ್ತಕಗಳು ರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖವೆಂದು ಪರಿಗಣಿಸಲಾದ ಅಗತ್ಯವಾದ ಪ್ರಮುಖ ವಿಷಯಗಳನ್ನು (ಚರ್ಚೆ, ವಿಶ್ಲೇಷಣೆ, ಉದಾಹರಣೆಗಳು ಮತ್ತು ಅನ್ವಯನದೊಂದಿಗೆ) ಒಳಗೊಳ್ಳುವ ಗುರಿಯನ್ನು ಹೊಂದಿರುತ್ತವೆ, ಆದರೆ ಅದೇ ಸಮಯದಲ್ಲಿ ಸ್ಥಳೀಯ ಸಂದರ್ಭಗಳು ಮತ್ತು ಅಗತ್ಯಗಳಿಗೆ ಅನುಗುಣವಾಗಿ ಯಾವುದೇ ಅಪೇಕ್ಷಿತ ಸೂಕ್ಷ್ಮ ವ್ಯತ್ಯಾಸಗಳು ಮತ್ತು ಪೂರಕ ವಿಷಯಗಳನ್ನೂ ಸಹ ಒಳಗೊಂಡಿರುತ್ತವೆ. ಸಾಧ್ಯವಾದರೆ, ರಾಷ್ಟ್ರೀಯ ಮತ್ತು ಸ್ಥಳೀಯ ವಿಷಯಗಳನ್ನು ಒಳಗೊಂಡಿರುವ ಪಠ್ಯಪುಸ್ತಕಗಳ ಗುಂಪಿನಿಂದ ಶಾಲೆಗಳು ಮತ್ತು ಶಿಕ್ಷಕರಿಗೆ ಅಗತ್ಯವಾದ ಪಠ್ಯಪುಸ್ತಕಗಳನ್ನು ಆಯ್ಕೆ ಮಾಡುವ ಅವಕಾಶ ಇರುತ್ತದೆ. ಇದರಿಂದಾಗಿ ಅವರು ತಮ್ಮದೇ ಆದ ಬೋಧನಾ ಶೈಲಿಗಳಿಗೆ ಸೂಕ್ತವಾದ ರೀತಿಯಲ್ಲಿ ಮತ್ತು ಅವರ ವಿದ್ಯಾರ್ಥಿಗಳು ಮತ್ತು ಸಮುದಾಯಗಳ ಅಗತ್ಯಗಳಿಗೆ ಅನುಗುಣವಾಗಿ ಕಲಿಸಬಹುದು.

**4.32.** ಪಠ್ಯಪುಸ್ತಕದ ಅತಿಯಾದ ಬೆಲೆಯ ಭಾರವು ವಿದ್ಯಾರ್ಥಿಗಳ ಮೇಲೆ ಮತ್ತು ಶೈಕ್ಷಣಿಕ ವ್ಯವಸ್ಥೆಯ ಮೇಲೆ ಆಗದಂತೆ ಪಠ್ಯಪುಸ್ತಕಗಳ ಬೆಲೆಯನ್ನು ತಗ್ಗಿಸುವ ಸಲುವಾಗಿ, ಗುಣಮಟ್ಟದ ಪಠ್ಯಪುಸ್ತಕಗಳನ್ನು ಉತ್ಪಾದನಾ / ಮುದ್ರಣ ವೆಚ್ಚದಲ್ಲಿ ಒದಗಿಸುವ ಉದ್ದೇಶವಿರುತ್ತದೆ. SCERT ಗಳ ಜೊತೆಯಲ್ಲಿ NCERT ಅಭಿವೃದ್ಧಿಪಡಿಸಿದ ಉತ್ತಮ–ಗುಣಮಟ್ಟದ ಪಠ್ಯಪುಸ್ತಕ ವಸ್ತುಗಳನ್ನು ಬಳಸುವ ಮೂಲಕ ಇದನ್ನು ಸಾಧಿಸಬಹುದು; ಹೆಚ್ಚುವರಿ ಪಠ್ಯಪುಸ್ತಕ ಸಾಮಗ್ರಿಗಳಿಗೆ ಸಾರ್ವಜನಿಕ ಸೇವಾ ಮನೋಭಾವದ ವ್ಯಕ್ತಿ/ಸಂಸ್ಥೆಗಳಿಂದ ಮತ್ತು ಸಾರ್ವಜನಿಕರಿಂದ (CROWD SOURCING) ಧನಸಹಾಯ ಪಡೆಯಬಹುದು, ಇದರಿಂದಾಗಿ ಅಂತಹ ಉತ್ತಮ–ಗುಣಮಟ್ಟದ ಪಠ್ಯಪುಸ್ತಕಗಳನ್ನು ಉತ್ಪಾದನಾ ವೆಚ್ಚದಲ್ಲಿ ಬರೆಯಲು ತಜ್ಞರನ್ನು ಪ್ರೇರೇಪಿಸಬಹುದಾಗಿದೆ. ರಾಜ್ಯಗಳು ಅಗತ್ಯಕ್ಕೆ ತಕ್ಕಂತೆ, ರಾಜ್ಯದ ಸ್ಥಳೀಯ ಸನ್ನಿವೇಶಗಳನ್ನು ಆಧರಿಸಿ ತಮ್ಮದೇ ಆದ ಪಠ್ಯಕ್ರಮವನ್ನು (ಇದು NCERT ಸಿದ್ಧಪಡಿಸಿದ NCFSE ಯನ್ನು ಆಧರಿಸಿರಬಹುದು) ಮತ್ತು ಪಠ್ಯಪುಸ್ತಕಗಳನ್ನು ಸಿದ್ಧಪಡಿಸುತ್ತವೆ. (ಇದು NCERT ಪಠ್ಯಪುಸ್ತಕ ಸಾಮಗ್ರಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಆಧರಿಸಿರಬಹುದು) ಹಾಗೆ ಮಾಡುವಾಗ, NCERT ಪಠ್ಯಕ್ರಮವನ್ನು ರಾಷ್ಟ್ರೀಯವಾಗಿ ಸ್ವೀಕಾರಾರ್ಹ ಮಾನದಂಡವಾಗಿ ಪರಿಗಣಿಸಬೇಕಾಗುತ್ತದೆ. ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ಅಂತಹ ಪಠ್ಯಪುಸ್ತಕಗಳ ಲಭ್ಯತೆಯು ಮೊದಲ ಆದ್ಯತೆಯಾಗಿದ್ದು, ಇದರಿಂದ ಎಲ್ಲಾ ವಿದ್ಯಾರ್ಥಿಗಳಿಗೆ ಉತ್ತಮ–ಗುಣಮಟ್ಟದ ಕಲಿಕೆಗೆ ಅವಕಾಶವಿರುತ್ತದೆ. ಶಾಲೆಗಳಲ್ಲಿ ಪಠ್ಯಪುಸ್ತಕಗಳ ಸಮಯೋಚಿತ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು. ಪರಿಸರವನ್ನು ಸಂರಕ್ಷಿಸಲು ಮತ್ತು ಸಾಗಾಣಿಕೆ ಹೊರೆ ಕಡಿಮೆ ಮಾಡಲು, ಎಲ್ಲಾ ರಾಜ್ಯಗಳು ಮತ್ತು NCERT ಯು ಎಲ್ಲಾ ಪಠ್ಯಪುಸ್ತಕಗಳ ಡೌನ್‌ಲೋಡ್ ಮಾಡಬಹುದಾದ ಮತ್ತು ಮುದ್ರಿಸಬಹುದಾದ ಆವೃತ್ತಿಗಳನ್ನು ಒದಗಿಸುತ್ತವೆ.

**4.33.** NCERT, SCERTಗಳು, ಶಾಲೆಗಳು ಮತ್ತು ಶಿಕ್ಷಣತಜ್ಞರೊಡನೆ ಸಮಾಲೋಚನೆ ಕೈಗೊಳ್ಳುವ ಮೂಲಕ ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರದಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡುವುದರೊಂದಿಗೆ ಶಾಲಾ ಬ್ಯಾಗ್ ಮತ್ತು ಪಠ್ಯಪುಸ್ತಕಗಳ ತೂಕವನ್ನು ಗಣನೀಯವಾಗಿ ಕಡಿಮೆ ಮಾಡಲು ಸಂಯೋಜಿತ ಪ್ರಯತ್ನಗಳನ್ನು ಮಾಡಲಾಗುವುದು.

**ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ಮೌಲ್ಯಮಾಪನದ ಸ್ವರೂಪದಲ್ಲಿ ಪರಿವರ್ತನೆ:**

**4.34.** ನಮ್ಮ ಶಾಲಾ ವ್ಯವಸ್ಥೆಯ ಸಂಸ್ಕೃತಿಯಲ್ಲಿ ಮೌಲ್ಯಮಾಪನದ ಗುರಿಯು, ಸಂಕಲನಾತ್ಮಕ ಮತ್ತು ಕಂಠಪಾಠ ಕೌಶಲ್ಯಗಳನ್ನು ಪರೀಕ್ಷಿಸುವ ವಿಧಾನದಿಂದ, ಹೆಚ್ಚು ನಿಯಮಿತ ಮತ್ತು ರಚನಾತ್ಮಕವಾದ, ಹೆಚ್ಚು ಸಾಮರ್ಥ್ಯ ಆಧಾರಿತವಾದ, ನಮ್ಮ ವಿದ್ಯಾರ್ಥಿಗಳ ಕಲಿಕೆ ಮತ್ತು ಬೆಳವಣಿಗೆಯನ್ನು ಉತ್ತೇಜಿಸುವ ಮತ್ತು ವಿಶ್ಲೇಷಣೆ, ವಿಮರ್ಶಾತ್ಮಕ ಚಿಂತನೆ ಹಾಗೂ ಪರಿಕಲ್ಪನಾ ಸ್ಪಷ್ಟತೆಯಂತಹ ಉನ್ನತ ಹಂತದ ಕೌಶಲ್ಯಗಳನ್ನು ಪರೀಕ್ಷಿಸುವ ವಿಧಾನಕ್ಕೆ ಬದಲಾಗಬೇಕಾಗಿದೆ. ಮೌಲ್ಯಮಾಪನದ ಪ್ರಾಥಮಿಕ ಉದ್ದೇಶ ನಿಜಕ್ಕೂ ಕಲಿಕೆಗಾಗಿ ಇರುತ್ತದೆ. ಇದು ಶಿಕ್ಷಕ, ವಿದ್ಯಾರ್ಥಿ ಮತ್ತು ಇಡೀ ಶಾಲಾ ವ್ಯವಸ್ಥೆಗೆ ಸಹಾಯ ಮಾಡುತ್ತದೆ, ಎಲ್ಲಾ ವಿದ್ಯಾರ್ಥಿಗಳ ಕಲಿಕೆ ಮತ್ತು ಬೆಳವಣಿಗೆಯನ್ನು ಅತ್ಯುತ್ತಮವಾಗಿಸಲು ಬೋಧನಾ–ಕಲಿಕಾ ಪ್ರಕ್ರಿಯೆಗಳನ್ನು ನಿರಂತರವಾಗಿ ಪರಿಷ್ಕರಿಸುತ್ತದೆ. ಶಿಕ್ಷಣದ ಎಲ್ಲಾ ಹಂತಗಳ ಮೌಲ್ಯಮಾಪನಕ್ಕೆ ಇದು ಆಧಾರವಾಗಿರುವ ತತ್ವವಾಗಿರುತ್ತದೆ.

**4.35.** ರಾಜ್ಯಗಳು ಶಾಲಾ–ಆಧಾರಿತ ಮೌಲ್ಯಮಾಪನಕ್ಕಾಗಿ, ಶಾಲೆಗಳಿಂದ ಪೋಷಕರಿಗೆ ನೀಡಲಾಗುವ ವಿದ್ಯಾರ್ಥಿಗಳ ಪ್ರಗತಿ ಪತ್ರವನ್ನು ಪ್ರಸ್ತಾವಿತ ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ, NCERT ಮತ್ತು SCERT ಗಳ ಮಾರ್ಗದರ್ಶನದಲ್ಲಿ

ಸಂಪೂರ್ಣವಾಗಿ ಮರುವಿನ್ಯಾಸಗೊಳಿಸುತ್ತವೆ. ಈ ಪ್ರಗತಿ ಪತ್ರವು ಸಮಗ್ರ, 360° ಯ ಬಹು ಆಯಾಮದ ವರದಿಯಾಗಿದ್ದು, ಇದು ಜ್ಞಾನಾತ್ಮಕ, ಭಾವನಾತ್ಮಕ ಮತ್ತು ಮನೋಗತ್ಯಾತ್ಮಕ ವಲಯಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯ ವಿಶಿಷ್ಟತೆಯನ್ನು ಹೆಚ್ಚು ವಿವರವಾಗಿ ಪ್ರತಿಬಿಂಬಿಸುತ್ತದೆ. ಇದು ಸ್ವಯಂ–ಮೌಲ್ಯಮಾಪನ, ಸಹಪಾಠಿ ಮೌಲ್ಯಮಾಪನ ಮತ್ತು ಶಿಕ್ಷಕರ ಮೌಲ್ಯಮಾಪನದೊಂದಿಗೆ ಯೋಜನಾ–ಆಧಾರಿತ ಮತ್ತು ವಿಚಾರಣೆ–ಆಧಾರಿತ ಕಲಿಕೆ, ರಸಪ್ರಶ್ನೆಗಳು, ಗುಂಪು ಕಾರ್ಯ ಇತ್ಯಾದಿ ಅಂಶಗಳಲ್ಲಿ ಮಗು ಸಾಧಿಸಿದ ಪ್ರಗತಿಯನ್ನು ಒಳಗೊಂಡಿರುತ್ತದೆ. ಈ ಸಮಗ್ರ ಪ್ರಗತಿ ಪತ್ರವು ಮನೆ ಮತ್ತು ಶಾಲೆಯ ನಡುವೆ ಒಂದು ಪ್ರಮುಖ ಕೊಂಡಿಯನ್ನು ರೂಪಿಸುತ್ತದೆ ಮತ್ತು ಪೋಷಕರು ತಮ್ಮ ಮಕ್ಕಳ ಸರ್ವತೋಮುಖ ಶಿಕ್ಷಣ ಮತ್ತು ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಸಲುವಾಗಿ ಪೋಷಕ–ಶಿಕ್ಷಕರ ಸಭೆಗಳಲ್ಲಿ ಇದರ ಕುರಿತು ಚರ್ಚಿಸಲಾಗುತ್ತದೆ. ಈ ಪ್ರಗತಿ ಪತ್ರವು, ಶಿಕ್ಷಕರು ಮತ್ತು ಪೋಷಕರಿಗೆ ತರಗತಿಯ ಒಳಗೆ ಮತ್ತು ಹೊರಗೆ ಪ್ರತಿ ವಿದ್ಯಾರ್ಥಿಯನ್ನು ಹೇಗೆ ಬೆಂಬಲಿಸಬೇಕು ಎಂಬುದರ ಕುರಿತು ಅಮೂಲ್ಯವಾದ ಮಾಹಿತಿಯನ್ನು ಒದಗಿಸುತ್ತದೆ. ವಿದ್ಯಾರ್ಥಿಗಳಿಗೆ ಅವರ ಸಾಮರ್ಥ್ಯ, ಆಸಕ್ತ ಕ್ಷೇತ್ರಗಳು ಮತ್ತು ಗಮನ ನೀಡಬೇಕಾದ ಕ್ಷೇತ್ರಗಳ ಬಗ್ಗೆ ಅಮೂಲ್ಯವಾದ ಮಾಹಿತಿಯನ್ನು ಒದಗಿಸುವುದರ ಮೂಲಕ ಅವರಿಗೆ ಸೂಕ್ತವಾದ ವೃತ್ತಿ ಆಯ್ಕೆಗಳನ್ನು ಮಾಡಲು ಮತ್ತು ಪೋಷಕರು, ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಕಲಿಕೆಯ ದತ್ತಾಂಶ ಮತ್ತು ಸಂವಹನಾತ್ಮಕ ಪ್ರಶ್ನಾವಳಿಗಳ ಆಧಾರದ ಮೇಲೆ ಶೈಕ್ಷಣಿಕ ವರ್ಷಗಳಲ್ಲಿ ಅವರ ಬೆಳವಣಿಗೆಯನ್ನು ತಿಳಿದುಕೊಳ್ಳಲು ಸಹಾಯ ಮಾಡುವ ಕೃತಕ ಬುದ್ಧಿಮತ್ತೆ (AI) ಆಧಾರಿತ ತಂತ್ರಾಂಶವನ್ನು ವಿದ್ಯಾರ್ಥಿಗಳಿಗಾಗಿ ಅಭಿವೃದ್ಧಿಪಡಿಸಿ, ಬಳಸಬಹುದು.

**4.36.** ಬೋರ್ಡ್ ಪರೀಕ್ಷೆಗಳು ಮತ್ತು ಪ್ರವೇಶ ಪರೀಕ್ಷೆಗಳು ಹಾಗೂ ಅವುಗಳ ಪರಿಣಾಮವಾಗಿ ಹುಟ್ಟಿಕೊಂಡ ಇಂದಿನ ಕೋಚಿಂಗ್ ಪದ್ಧತಿಯೂ ಸೇರಿದಂತೆ ಮಾಧ್ಯಮಿಕ ಶಾಲಾ ಪರೀಕ್ಷೆಗಳ ಪ್ರಸ್ತುತ ಸ್ವರೂಪವು ವಿಶೇಷವಾಗಿ ಮಾಧ್ಯಮಿಕ ಶಾಲಾ ಹಂತದಲ್ಲಿ ನಿಜವಾದ ಕಲಿಕೆಗೆ ನೀಡಬೇಕಾದ ಅಮೂಲ್ಯವಾದ ಸಮಯಕ್ಕೆ ಬದಲಾಗಿ, ಪರೀಕ್ಷಾ ತರಬೇತಿ ಮತ್ತು ಸಿದ್ಧತೆಗೆ ಅತೀವ ಸಮಯ ನೀಡುವುದರ ಮೂಲಕ ಹೆಚ್ಚಿನ ಹಾನಿಗೆ ಕಾರಣವಾಗುತ್ತಿವೆ. ಈ ಪರೀಕ್ಷೆಗಳು ಭವಿಷ್ಯದ ಶಿಕ್ಷಣ ವ್ಯವಸ್ಥೆಗೆ ತುಂಬಾ ಮಹತ್ವದ್ದಾಗಿರುವ ನಮ್ಯತೆ ಮತ್ತು ಆಯ್ಕೆಯ ಬದಲು, ಒಂದೇ ವಿಭಾಗದಲ್ಲಿ ಅತ್ಯಂತ ಸೀಮಿತ ವಿಷಯಗಳನ್ನು ಕಲಿಯಲು ವಿದ್ಯಾರ್ಥಿಗಳನ್ನು ಒತ್ತಾಯಿಸುತ್ತವೆ.

**4.37.** 10 ಮತ್ತು 12 ನೇ ತರಗತಿಗಳಿಗೆ ಮಂಡಳಿಯ ಪರೀಕ್ಷೆಗಳನ್ನು ಮುಂದುವರಿಸಲಾಗುತ್ತದೆಯಾದರೂ, ಈ ಪರೀಕ್ಷೆಗಳಿಗಾಗಿ ಕೋಚಿಂಗ್ ತೆಗೆದುಕೊಳ್ಳುವ ಅಗತ್ಯವನ್ನು ನಿವಾರಿಸಲು ಅಸ್ತಿತ್ವದಲ್ಲಿರುವ ಮಂಡಳಿ ಮತ್ತು ಪ್ರವೇಶ ಪರೀಕ್ಷೆಗಳ ವ್ಯವಸ್ಥೆಯಲ್ಲಿ ಸುಧಾರಣೆ ತರಲಾಗುವುದು. ಪ್ರಸ್ತುತ ಮೌಲ್ಯಮಾಪನ ವ್ಯವಸ್ಥೆಯ ಈ ಹಾನಿಕಾರಕ ಪರಿಣಾಮಗಳನ್ನು ಹೋಗಲಾಡಿಸಲು, ಸರ್ವತೋಮುಖ ಬೆಳವಣಿಗೆಯನ್ನು ಉತ್ತೇಜಿಸಲು ಮಂಡಳಿಯ ಪರೀಕ್ಷೆಗಳನ್ನು ಮರುವಿನ್ಯಾಸಗೊಳಿಸಲಾಗುತ್ತದೆ. ಇದರಿಂದಾಗಿ ವಿದ್ಯಾರ್ಥಿಗಳು ತಮ್ಮ ವೈಯಕ್ತಿಕ ಆಸಕ್ತಿಗಳಿಗೆ ಅನುಗುಣವಾಗಿ ಬೋರ್ಡ್ ಪರೀಕ್ಷೆಗಳಲ್ಲಿ ಅನೇಕ ವಿಷಯಗಳನ್ನು ಆಯ್ಕೆ ಮಾಡಲು ಸಾಧ್ಯವಾಗುತ್ತದೆ. ಬೋರ್ಡ್ ಪರೀಕ್ಷೆಗಳು ವರ್ಷಪೂರ್ತಿ ಪಡೆದ ತರಬೇತಿ ಮತ್ತು ಕಂಠಪಾಠಕ್ಕಿಂತ ಮುಖ್ಯವಾಗಿ ಪ್ರಮುಖ ಸಾಮರ್ಥ್ಯಗಳನ್ನು ಪರೀಕ್ಷಿಸುತ್ತವೆ ಎಂಬ ಅಂಶವನ್ನು ಆಧಾರವಾಗಿಟ್ಟುಕೊಂಡು ಅವುಗಳನ್ನೂ ಸಹ ಸರಳಗೊಳಿಸಲಾಗುವುದು.ಇದರಿಂದ ಶಾಲಾ ತರಗತಿಗೆ ಹಾಜರಾಗುವ ಮತ್ತು ಕನಿಷ್ಠ ಪ್ರಯತ್ನವನ್ನು ಮಾಡುವ ಯಾವುದೇ ವಿದ್ಯಾರ್ಥಿಯು ಹೆಚ್ಚುವರಿ ಶ್ರಮವಿಲ್ಲದೆ ಬೋರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಮತ್ತು ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳ ಅಪೇಕ್ಷೆಯ ಮೇರೆಗೆ, ಎಲ್ಲಾ ವಿದ್ಯಾರ್ಥಿಗಳಿಗೆ ಯಾವುದೇ ಶೈಕ್ಷಣಿಕ ವರ್ಷದಲ್ಲಿ ಒಂದು ಮುಖ್ಯ ಪರೀಕ್ಷೆ ಮತ್ತು ಇನ್ನೊಂದು ಸುಧಾರಣೆಗಾಗಿ ಸೇರಿದಂತೆ, ಎರಡು ಸಂದರ್ಭಗಳಲ್ಲಿ ಬೋರ್ಡ್ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶವಿರುತ್ತದೆ.

**4.38.** ಹೆಚ್ಚಿನ ನಮ್ಯತೆ, ವಿದ್ಯಾರ್ಥಿಗಳಿಗೆ ಆಯ್ಕೆಯ ಅವಕಾಶ ಮತ್ತು ಎರಡು ಅತ್ಯುತ್ತಮ ಪ್ರಯತ್ನಗಳ ವಿಧಾನವನ್ನು ಪರಿಚಯಿಸುವುದರ ಜೊತೆಗೆ, ಮುಖ್ಯವಾಗಿ ಪ್ರಮುಖ(ಕೋರ್) ಸಾಮರ್ಥ್ಯಗಳನ್ನು ಪರೀಕ್ಷಿಸುವ ಮೌಲ್ಯಮಾಪನ ಪ್ರಕ್ರಿಯೆಗಳನ್ನು ಅಳವಡಿಸಿಕೊಳ್ಳುವುದು ಎಲ್ಲಾ ಮಂಡಳಿಯ ಪರೀಕ್ಷೆಗಳಲ್ಲಿ ತರಬೇಕಾದ ತಕ್ಷಣದ ಪ್ರಮುಖ ಸುಧಾರಣೆಗಳಾಗಿರಬೇಕು. ಈ ಮಂಡಳಿಗಳು ಕಾಲಾನಂತರದಲ್ಲಿ ಒತ್ತಡ ಮತ್ತು ಕೋಚಿಂಗ್ ಪಿಡುಗನ್ನು ಕಡಿಮೆ ಮಾಡುವ ಬೋರ್ಡ್ ಪರೀಕ್ಷೆಗಳ ಮತ್ತಷ್ಟು ಕಾರ್ಯಸಾಧ್ಯವಾದ ಮಾದರಿಗಳನ್ನು ಅಭಿವೃದ್ಧಿಪಡಿಸಬಹುದು. ಇಂತಹ ಕೆಲವು ಸಾಧ್ಯತೆಗಳೆಂದರೆ: ಪ್ರತಿ ಪರೀಕ್ಷೆಯು ತೀರಾ ಕಡಿಮೆ ಪರೀಕ್ಷಾ ಪಠ್ಯವನ್ನು ಹೊಂದಿರುವಂತೆ ವಾರ್ಷಿಕ / ಸೆಮಿಸ್ಟರ್ / ಮಾಡ್ಯುಲರ್ ಬೋರ್ಡ್ ಪರೀಕ್ಷೆಗಳ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬಹುದು ಮತ್ತು ಇವುಗಳನ್ನು ಶಾಲೆಯಲ್ಲಿ ಅದಕ್ಕೆ ಅನುಗುಣವಾದ ಕೋರ್ಸ್ ಪೂರ್ಣವಾದ ಕೂಡಲೇ ನಡೆಸಬಹುದಾಗಿದ್ದು, ಇದರಿಂದಾಗಿ ಮಾಧ್ಯಮಿಕ ಹಂತದಲ್ಲಿ ಪರೀಕ್ಷೆಗಳ ಒತ್ತಡವು ಕಡಿಮೆಯಾಗಲು ಸಾಧ್ಯವಿದೆ; ಗಣಿತದೊಂದಿಗೆ ಪ್ರಾರಂಭಿಸಿ, ಎಲ್ಲಾ ವಿಷಯಗಳು ಮತ್ತು ಅವುಗಳಿಗೆ

ಅನುಗುಣವಾದ ಮೌಲ್ಯಮಾಪನಗಳನ್ನು ಎರಡು ಹಂತಗಳಲ್ಲಿ ಮಾಡಬಹುದು, ವಿದ್ಯಾರ್ಥಿಗಳು ಕೆಲವು ವಿಷಯಗಳಲ್ಲಿ ಪ್ರಮಾಣಿತ ಹಂತ ಮತ್ತು ಕೆಲವು ವಿಷಯಗಳಲ್ಲಿ ಉನ್ನತ ಹಂತದ ಸಾಧನೆ ಮಾಡುತ್ತಾರೆ; ಮತ್ತು ಕೆಲವು ವಿಷಯಗಳಲ್ಲಿ ಬೋರ್ಡ್ ಪರೀಕ್ಷೆಗಳನ್ನು ಎರಡು ಭಾಗಗಳಾಗಿ ಮರುವಿನ್ಯಾಸಗೊಳಿಸಬಹುದು, ಅವುಗಳೆಂದರೆ, ಬಹು–ಆಯ್ಕೆಯ ಪ್ರಶ್ನೆಗಳನ್ನು ಹೊಂದಿರುವ ವಸ್ತುನಿಷ್ಠ ಪ್ರಕಾರದ ಒಂದು ಭಾಗ ಮತ್ತು ವಿವರಣಾತ್ಮಕ ಪ್ರಕಾರದ ಇನ್ನೊಂದು ಭಾಗ.

**4.39.** ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ SCERT ಗಳು, ಮೌಲ್ಯಮಾಪನ ಮಂಡಳಿಗಳು (BOAಗಳು), ಪ್ರಸ್ತಾವಿತ ಹೊಸ ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ ಇತ್ಯಾದಿ ಪ್ರಮುಖ ಭಾಗೀದಾರರೊಂದಿಗೆ ಸಮಾಲೋಚನೆ ಕೈಗೊಳ್ಳುವ ಮೂಲಕ NCERT ಯಿಂದ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗುತ್ತದೆ ಮತ್ತು NCFSE 2020–21 ಕ್ಕೆ ಸಂವಾದಿಯಾಗಿ 2022–23ರ ಶೈಕ್ಷಣಿಕ ವರ್ಷದ ವೇಳೆಗೆ ಮೌಲ್ಯಮಾಪನ ವ್ಯವಸ್ಥೆಯಲ್ಲಿ ಪರಿವರ್ತನೆಗೆ ಶಿಕ್ಷಕರನ್ನು ಸಿದ್ಧಪಡಿಸಲಾಗುತ್ತದೆ.

**4.40.** ಶಾಲೆಗಳಿಗಾಗಿ ಮತ್ತು ಬೋಧನಾ–ಕಲಿಕಾ ಪ್ರಕ್ರಿಯೆಗಳಲ್ಲಿ ಸುಧಾರಣೆಗಾಗಿ ಯೋಜನೆಯನ್ನು ಸಿದ್ಧಪಡಿಸಲು ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು, ಪ್ರಾಂಶುಪಾಲರು ಮತ್ತು ಸಂಪೂರ್ಣ ಶಾಲಾ ವ್ಯವಸ್ಥೆಯ ಅನುಕೂಲಕ್ಕಾಗಿ 10 ಮತ್ತು 12 ನೇ ತರಗತಿಯ ಕೊನೆಯಲ್ಲಿ ಮಾತ್ರವಲ್ಲದೇ, ಶಾಲಾ ವರ್ಷದುದ್ದಕ್ಕೂ ಪ್ರಗತಿಯನ್ನು ಪರಿಶೀಲಿಸಲು ಎಲ್ಲಾ ವಿದ್ಯಾರ್ಥಿಗಳಿಗೆ 3, 5 ಮತ್ತು 8 ನೇ ತರಗತಿಗಳಲ್ಲಿ ಸೂಕ್ತ ಪ್ರಾಧಿಕಾರದ ಮೂಲಕ ಶಾಲಾ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಈ ಪರೀಕ್ಷೆಗಳು ಕಂಠಪಾಠಕ್ಕೆ ಒತ್ತು ನೀಡುವ ಬದಲು, ಸಂಬಂಧಿತ ಉನ್ನತ–ಹಂತದ ಕೌಶಲ್ಯಗಳು ಮತ್ತು ನೈಜ–ಜೀವನದ ಸಂದರ್ಭಗಳಲ್ಲಿ ಜ್ಞಾನದ ಅನ್ವಯನದ ಜೊತೆಗೆ, ರಾಷ್ಟ್ರೀಯ ಮತ್ತು ಸ್ಥಳೀಯ ಪಠ್ಯಕ್ರಮದ ಪ್ರಮುಖ ಪರಿಕಲ್ಪನೆಗಳನ್ನು ಮತ್ತು ಜ್ಞಾನದ ಮೌಲ್ಯಮಾಪನದ ಮೂಲಕ ಮೂಲ ಕಲಿಕಾ ಫಲಗಳ ಸಾಧನೆಯನ್ನು ಪರೀಕ್ಷಿಸುತ್ತವೆ. 3ನೇ ತರಗತಿಯ ಪರೀಕ್ಷೆಯು ನಿರ್ದಿಷ್ಟವಾಗಿ, ಮೂಲ ಅಕ್ಷರ ಜ್ಞಾನ, ಗಣಿತ ಕೌಶಲ್ಯ ಮತ್ತು ಇತರ ಬುನಾದಿ ಕೌಶಲ್ಯಗಳನ್ನು ಪರೀಕ್ಷಿಸುತ್ತದೆ. ಈ ಪರೀಕ್ಷೆಗಳ ಫಲಿತಾಂಶಗಳನ್ನು ಶಾಲೆಗಳು ಒಟ್ಟಾರೆ (ಅನಾಮಧೇಯ) ವಿದ್ಯಾರ್ಥಿ ಫಲಿತಾಂಶ ರೂಪದಲ್ಲಿ ಪ್ರಕಟಿಸುತ್ತವೆ ಮತ್ತು ಶಾಲಾ ವ್ಯವಸ್ಥೆಯ ನಿರಂತರ ಮೇಲ್ವಿಚಾರಣೆ ಮತ್ತು ಸುಧಾರಣೆಗೆ ಬಳಸಿಕೊಳ್ಳುವುದು ಸೇರಿದಂತೆ ಶಾಲಾ ಶಿಕ್ಷಣ ವ್ಯವಸ್ಥೆಯ ಅಭಿವೃದ್ಧಿ ಉದ್ದೇಶಗಳಿಗಾಗಿ ಮಾತ್ರ ಬಳಸಿಕೊಳ್ಳಲಾಗುತ್ತದೆ.

**4.41.** MHRD ಯ ಮಾರ್ಗದರ್ಶನದಲ್ಲಿ, ಭಾರತದ ಎಲ್ಲಾ ಮಾನ್ಯತೆ ಪಡೆದ ಶಾಲಾ ಮಂಡಳಿಗಳಡಿ ಓದುತ್ತಿರುವ ವಿದ್ಯಾರ್ಥಿಗಳ ಮೌಲ್ಯಾಂಕನ ಕೈಗೊಳ್ಳಲು ಮತ್ತು ಮೌಲ್ಯಮಾಪನಕ್ಕಾಗಿ ಮಾನಕಗಳು, ಮಾನದಂಡಗಳು ಮತ್ತು ಮಾರ್ಗಸೂಚಿಗಳನ್ನು ನಿಗದಿಪಡಿಸಲು, ರಾಜ್ಯ ಸಾಧನಾ ಸಮೀಕ್ಷೆಗೆ (SAS) ಮಾರ್ಗದರ್ಶನ ಮಾಡಲು ಮತ್ತು ರಾಷ್ಟ್ರೀಯ ಸಾಧನಾ ಸಮೀಕ್ಷೆ (NAS) ಕೈಗೊಳ್ಳಲು, ದೇಶದಲ್ಲಿ ಕಲಿಕಾ ಫಲಗಳ ಸಾಧನೆಯನ್ನು ಮೇಲ್ವಿಚಾರಣೆ ಮಾಡಲು ಮತ್ತು ಪ್ರೋತ್ಸಾಹಿಸಲು ಹಾಗೂ ಈ ನೀತಿಯಲ್ಲಿ ಹೇಳಲಾದ ಉದ್ದೇಶಗಳಿಗೆ ಅನುಗುಣವಾಗಿ 21 ನೇ ಶತಮಾನದ ಕೌಶಲ್ಯ ಅಗತ್ಯತೆಗಳನ್ನು ಪೂರೈಸುವ ಉದ್ದೇಶದಿಂದ ಎಲ್ಲಾ ಶಾಲಾ ಮಂಡಳಿಗಳು ತಮ್ಮ ಮೌಲ್ಯಮಾಪನ ವಿಧಾನಗಳಲ್ಲಿ ಬದಲಾವಣೆ ಮಾಡಿಕೊಳ್ಳಲು ಸಹಾಯ ಮಾಡುವ ಮಾನಕಗಳನ್ನು ನಿರ್ಧರಿಸಲು, ಒಂದು ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ PARAKH, (ಸಮಗ್ರ ಅಭಿವೃದ್ಧಿಗಾಗಿ ಕಾರ್ಯಕ್ಷಮತೆಯ ಮೌಲ್ಯಾಂಕನ, ಪುನರವಲೋಕನ ಮತ್ತು ಜ್ಞಾನದ ವಿಶ್ಲೇಷಣೆ) ನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಕೇಂದ್ರವು ಹೊಸ ಮೌಲ್ಯಮಾಪನ ಮಾದರಿಗಳು ಮತ್ತು ಇತ್ತೀಚಿನ ಸಂಶೋಧನೆಗಳ ಬಗ್ಗೆ ಶಾಲಾ ಮಂಡಳಿಗಳಿಗೆ ಸಲಹೆ ನೀಡುತ್ತದೆ, ಶಾಲಾ ಮಂಡಳಿಗಳ ನಡುವಿನ ಸಹಯೋಗವನ್ನು ಉತ್ತೇಜಿಸುತ್ತದೆ. ಇದು ವಿವಿಧ ಶಾಲಾ ಮಂಡಳಿಗಳ ನಡುವೆ ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲು ಮತ್ತು ಎಲ್ಲಾ ಶಾಲಾ ಮಂಡಳಿಗಳಲ್ಲಿನ ಶೈಕ್ಷಣಿಕ ಮಾನಕಗಳ ಸಮಾನತೆಯನ್ನು ಖಚಿತಪಡಿಸಿಕೊಳ್ಳಲು ಒಂದು ಸಾಧನವಾಗಿ ಪರಿಣಮಿಸುತ್ತದೆ.

**4.42.** ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆಯ ತತ್ವಗಳು ಇದೇ ರೀತಿಯಾಗಿರುತ್ತವೆ. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA) ಯು, ಪ್ರತಿ ವರ್ಷ ಎರಡು ಬಾರಿಯಾದರೂ ಉನ್ನತ–ಗುಣಮಟ್ಟದ ಸಾಮಾನ್ಯ ಕ್ಷಮತಾ ಪರೀಕ್ಷೆ ಮತ್ತು ವಿಜ್ಞಾನ, ಮಾನವಿಕ ವಿಷಯಗಳು, ಭಾಷೆ, ಕಲೆ ಮತ್ತು ವೃತ್ತಿಪರ ವಿಷಯಗಳಲ್ಲಿ ವಿಶೇಷ ಸಾಮಾನ್ಯ ವಿಷಯ ಪರೀಕ್ಷೆಗಳನ್ನು ಕೈಗೊಳ್ಳಲು ಕ್ರಮ ವಹಿಸುತ್ತದೆ. ಈ ಪರೀಕ್ಷೆಗಳು ಪರಿಕಲ್ಪನಾ ತಿಳುವಳಿಕೆ ಮತ್ತು ಜ್ಞಾನವನ್ನು ಅನ್ವಯಿಸುವ ಸಾಮರ್ಥ್ಯವನ್ನು ಪರೀಕ್ಷಿಸುತ್ತವೆ ಮತ್ತು ಈ ಪರೀಕ್ಷೆಗಳಿಗಾಗಿ ಕೋಚಿಂಗ್ ತೆಗೆದುಕೊಳ್ಳುವ ಅಗತ್ಯವನ್ನು ತೆಗೆದುಹಾಕುವ ಗುರಿಯನ್ನು ಹೊಂದಿರುತ್ತವೆ. ಪರೀಕ್ಷೆಯನ್ನು ತೆಗೆದುಕೊಳ್ಳುವಾಗ ವಿದ್ಯಾರ್ಥಿಗಳಿಗೆ ವಿಷಯಗಳನ್ನು ಆಯ್ಕೆ ಮಾಡಲು ಅವಕಾಶವಿರುತ್ತದೆ ಮತ್ತು ಪ್ರತಿ ವಿಶ್ವವಿದ್ಯಾನಿಲಯವು ಪ್ರತಿ ವಿದ್ಯಾರ್ಥಿಯ ವೈಯಕ್ತಿಕ ವಿಷಯಧಾರಿತ ಕೃತಿಸಂಪುಟವನ್ನು ನೋಡಲು ಸಾಧ್ಯವಾಗುತ್ತದೆ ಹಾಗೂ ವೈಯಕ್ತಿಕ ಆಸಕ್ತಿ ಮತ್ತು ಪ್ರತಿಭೆಗಳ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ತಮ್ಮ ಕಾರ್ಯಕ್ರಮಗಳಿಗಾಗಿ ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಪ್ರವೇಶ ಮತ್ತು

ಫೆಲೋಶಿಪ್‌ಗಳಿಗೆ ಪ್ರವೇಶ ಪರೀಕ್ಷೆಗಳನ್ನು ನಡೆಸಲು NTA ಪ್ರಮುಖ, ಪರಿಣಿತ ಮತ್ತು ಸ್ವಾಯತ್ತ ಪರೀಕ್ಷಾ ಸಂಸ್ಥೆಯಾಗಿ ಕಾರ್ಯನಿರ್ವಹಿಸಲಿದೆ. NTA ಪರೀಕ್ಷಾ ಸೇವೆಗಳ ಉತ್ತಮ ಗುಣಮಟ್ಟ, ಶ್ರೇಣಿ ಮತ್ತು ನಮ್ಯತೆಯಿಂದಾಗಿ ನೂರಾರು ವಿಶ್ವವಿದ್ಯಾನಿಲಯಗಳು ತಮ್ಮದೇ ಆದ ಪ್ರವೇಶ ಪರೀಕ್ಷೆಗಳನ್ನು ನಡೆಸುವ ಬದಲು ಈ ಸಾಮಾನ್ಯ ಪ್ರವೇಶ ಪರೀಕ್ಷೆಗಳ ಫಲಿತಾಂಶಗಳನ್ನೇ ಉಪಯೋಗಿಸಲು ಸಾಧ್ಯವಾಗುತ್ತದೆ. ಇದರಿಂದ ವಿದ್ಯಾರ್ಥಿಗಳ, ವಿಶ್ವವಿದ್ಯಾಲಯಗಳ, ಕಾಲೇಜುಗಳ ಮತ್ತು ಸಂಪೂರ್ಣ ಶಿಕ್ಷಣ ವ್ಯವಸ್ಥೆಯ ಮೇಲಿನ ಭಾರ ತೀವ್ರವಾಗಿ ಕಡಿಮೆಯಾಗುತ್ತದೆ. ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ತಮ್ಮ ಪ್ರವೇಶಕ್ಕಾಗಿ NTA ಮೌಲ್ಯಮಾಪನ ಫಲಿತಾಂಶವನ್ನು ಬಳಸುವ ಆಯ್ಕೆ ಹೊಂದಿರುತ್ತವೆ.

**ಪ್ರತಿಭಾವಂತ ವಿದ್ಯಾರ್ಥಿಗಳು/ವಿಶೇಷ ಪ್ರತಿಭೆಯ ವಿದ್ಯಾರ್ಥಿಗಳಿಗೆ ಬೆಂಬಲ:**

**4.43.** ಪ್ರತಿ ವಿದ್ಯಾರ್ಥಿಯಲ್ಲೂ ಸಹಜ ಪ್ರತಿಭೆಗಳಿದ್ದು, ಅವುಗಳನ್ನು ಗುರುತಿಸಿ, ಪ್ರೋತ್ಸಾಹಿಸಿ, ಪೋಷಿಸಿ, ಅಭಿವೃದ್ಧಿಪಡಿಸಬೇಕು. ವಿಭಿನ್ನ ಆಸಕ್ತಿಗಳು, ನಿಲುವುಗಳು ಮತ್ತು ಸಾಮರ್ಥ್ಯಗಳ ರೂಪದಲ್ಲಿ ಈ ಪ್ರತಿಭೆಗಳು ವ್ಯಕ್ತವಾಗಬಹುದಾಗಿದೆ. ನಿರ್ದಿಷ್ಟ ಕ್ಷೇತ್ರದಲ್ಲಿ ಬಲವಾದ ಆಸಕ್ತಿಗಳು ಮತ್ತು ಸಾಮರ್ಥ್ಯಗಳನ್ನು ವ್ಯಕ್ತಪಡಿಸುವ ವಿದ್ಯಾರ್ಥಿಗಳು, ಸಾಮಾನ್ಯ ಶಾಲಾ ಪಠ್ಯಕ್ರಮವನ್ನು ಮೀರಿ ಆ ಕ್ಷೇತ್ರದಲ್ಲಿ ಮುಂದುವರೆಯುವಂತೆ ಪ್ರೋತ್ಸಾಹಿಸಬೇಕು. ಶಿಕ್ಷಕರು ನೀಡುವ ಶಿಕ್ಷಣವು ಅಂತಹ ವಿದ್ಯಾರ್ಥಿಗಳ ಪ್ರತಿಭೆ ಮತ್ತು ಆಸಕ್ತಿಗಳನ್ನು ಗುರುತಿಸುವ ಮತ್ತು ಬೆಳೆಸುವ ವಿಧಾನಗಳನ್ನು ಒಳಗೊಂಡಿರಬೇಕು. ಪ್ರತಿಭಾವಂತ ಮಕ್ಕಳ ಶಿಕ್ಷಣಕ್ಕಾಗಿ NCERT ಮತ್ತು NCTE ಗಳು ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸುತ್ತವೆ. B.Ed ಕಾರ್ಯಕ್ರಮಗಳೂ ಸಹ ಪ್ರತಿಭಾವಂತ ಮಕ್ಕಳ ಶಿಕ್ಷಣದಲ್ಲಿ ವಿಶೇಷ ಕೋರ್ಸ ನೀಡಲು ಅನುಮತಿಸಬಹುದು.

**4.44.** ಶಿಕ್ಷಕರು ತರಗತಿಯಲ್ಲಿ ಆಸಕ್ತಿಗಳು ಮತ್ತು / ಅಥವಾ ಪ್ರತಿಭೆಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಪೂರಕ ಪುಷ್ಟೀಕರಣ ವಸ್ತು ಮತ್ತು ಮಾರ್ಗದರ್ಶನ ನೀಡುವ ಮೂಲಕ ಅವರನ್ನು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿರುತ್ತಾರೆ. ಶಾಲೆಗಳು, ಶಾಲಾ ಸಂಕೀರ್ಣಗಳು, ಜಿಲ್ಲೆಗಳು ಮತ್ತು ಅದಕ್ಕೂ ಉನ್ನತ ಹಂತದಲ್ಲಿ ವಿಷಯ ಕೇಂದ್ರಿತ ಮತ್ತು ಪ್ರಾಜೆಕ್ಟ್ ಆಧಾರಿತ ಕ್ಲಬ್‌ಗಳು ಮತ್ತು ವಲಯಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಲಾಗುತ್ತದೆ ಮತ್ತು ಬೆಂಬಲಿಸಲಾಗುತ್ತದೆ. ವಿಜ್ಞಾನ ವಲಯಗಳು, ಗಣಿತ ವಲಯಗಳು, ಸಂಗೀತ ಮತ್ತು ನೃತ್ಯ ಪ್ರದರ್ಶನ ವಲಯಗಳು, ಚೆಸ್ ವಲಯಗಳು, ಕಾವ್ಯ ವಲಯಗಳು, ಭಾಷಾ ವಲಯಗಳು, ನಾಟಕ ವಲಯಗಳು, ಚರ್ಚಾ ವಲಯಗಳು, ಕ್ರೀಡಾ ವಲಯಗಳು, ಪರಿಸರ ಕ್ಲಬ್‌ಗಳು, ಆರೋಗ್ಯ ಮತ್ತು ಸ್ವಾಸ್ಥ್ಯ ಕ್ಲಬ್‌ಗಳು / ಯೋಗ ಕ್ಲಬ್‌ಗಳು ಅವುಗಳಿಗೆ ಉದಾಹರಣೆಗಳಾಗಿವೆ. ಈ ದಿಶೆಯಲ್ಲಿ, ಸಾಮಾಜಿಕ–ಆರ್ಥಿಕವಾಗಿ ಅನನುಕೂಲಕರ ಗುಂಪುಗಳು ಸೇರಿದಂತೆ ದೇಶದಾದ್ಯಂತ ಅತ್ಯುತ್ತಮ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಆಕರ್ಷಿಸಲು, ಕಠಿಣ ಅರ್ಹತೆ ಆಧಾರಿತ ಆದರೆ ಸಮಾನ ಪ್ರವೇಶ ಪ್ರಕ್ರಿಯೆಯೊಂದಿಗೆ ವಿವಿಧ ವಿಷಯಗಳಲ್ಲಿ ಉನ್ನತ–ಗುಣಮಟ್ಟದ ರಾಷ್ಟ್ರಮಟ್ಟದ ವಸತಿ ಸಹಿತ ಬೇಸಿಗೆ ಕಾರ್ಯಕ್ರಮಗಳನ್ನೂ ಸಹ ಪ್ರೋತ್ಸಾಹಿಸಲಾಗುವುದು.

**4.45.** ಎಲ್ಲಾ ವಿದ್ಯಾರ್ಥಿಗಳು ತಾವು ಅರ್ಹರಿರುವ ಎಲ್ಲಾ ಹಂತಗಳಲ್ಲಿ ಭಾಗವಹಿಸುವುದನ್ನು ಖಚಿತಪಡಿಸಿಕೊಳ್ಳಲು ಶಾಲೆಯಿಂದ ಸ್ಥಳೀಯ ಹಂತಕ್ಕೆ, ಅಲ್ಲಿಂದ ರಾಜ್ಯ ಹಂತಕ್ಕೆ, ರಾಜ್ಯ ಹಂತದಿಂದ ರಾಷ್ಟ್ರೀಯ ಹಂತಕ್ಕೆ ಸ್ಪಷ್ಟ ಸಮನ್ವಯ ಮತ್ತು ಪ್ರಗತಿಯೊಂದಿಗೆ ದೇಶಾದ್ಯಂತ ವಿವಿಧ ವಿಷಯಗಳಲ್ಲಿ ಒಲಿಂಪಿಯಾಡ್‌ಗಳು ಮತ್ತು ಸ್ಪರ್ಧೆಗಳನ್ನು ನಡೆಸಲಾಗುವುದು. ಇವುಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಾಗುವಂತೆ ಮಾಡಲು ಪ್ರಯತ್ನಿಸಲಾಗುವುದು. ಐಐಟಿ ಗಳು ಮತ್ತು ಎನ್‌ಐಟಿ ಗಳಂತಹ ಪ್ರಧಾನ ಸಂಸ್ಥೆಗಳು ಸೇರಿದಂತೆ ಸಾರ್ವಜನಿಕ ಮತ್ತು ಖಾಸಗಿ ವಿಶ್ವವಿದ್ಯಾಲಯಗಳು ತಮ್ಮ ಪದವಿ ಕಾರ್ಯಕ್ರಮಗಳಿಗೆ ಪ್ರವೇಶದ ಮಾನದಂಡಗಳ ಭಾಗವಾಗಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಒಲಿಂಪಿಯಾಡ್‌ಗಳಿಂದ ಅರ್ಹತೆ ಆಧಾರಿತ ಫಲಿತಾಂಶಗಳನ್ನು ಮತ್ತು ಇತರ ಸಂಬಂಧಿತ ರಾಷ್ಟ್ರೀಯ ಕಾರ್ಯಕ್ರಮಗಳ ಫಲಿತಾಂಶಗಳನ್ನು ಬಳಸಲು ಪ್ರೋತ್ಸಾಹಿಸಲಾಗುವುದು.

**4.46.** ಎಲ್ಲಾ ಮನೆಗಳು ಮತ್ತು / ಅಥವಾ ಶಾಲೆಗಳಲ್ಲಿ ಅಂತರ್ಜಾಲ ಸಂಪರ್ಕಿತ ಸ್ಮಾರ್ಟ್ ಫೋನ್‌ಗಳು ಅಥವಾ ಟ್ಯಾಬ್ಲೆಟ್‌ಗಳು ಲಭ್ಯವಾದ ನಂತರ, ರಸಪ್ರಶ್ನೆಗಳು, ಸ್ಪರ್ಧೆಗಳು, ಮೌಲ್ಯಮಾಪನಗಳು, ಸಂಪದೀಕರಣ ಸಾಮಗ್ರಿಗಳು ಮತ್ತು ಆನ್‌ಲೈನ್ ಸಮುದಾಯಗಳನ್ನು ಒಳಗೊಂಡ ಆನ್‌ಲೈನ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ ಮತ್ತು ಪೋಷಕರು ಹಾಗೂ ಶಿಕ್ಷಕರ ಸೂಕ್ತ ಮೇಲ್ವಿಚಾರಣೆಯೊಂದಿಗೆ ಮೇಲೆ ತಿಳಿಸಲಾದ ಎಲ್ಲಾ ಉಪಕ್ರಮಗಳನ್ನು ವಿದ್ಯಾರ್ಥಿಗಳಿಗೆ ಗುಂಪು ಚಟುವಟಿಕೆಗಳ ರೂಪದಲ್ಲಿ ಪರಿಣಾಮಕಾರಿಯಾಗಿ ಆಯೋಜಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಶಾಲೆಗಳು ಡಿಜಿಟಲ್ ಶಿಕ್ಷಣವನ್ನು ಅನುಸರಿಸುವುದಕ್ಕಾಗಿ ಮತ್ತು ಆ ಮೂಲಕ ಆನ್‌ಲೈನ್ ಸಂಪನ್ಮೂಲಗಳು ಮತ್ತು ಸಹಯೋಗದೊಂದಿಗೆ ಬೋಧನಾ–ಕಲಿಕಾ ಪ್ರಕ್ರಿಯೆಯನ್ನು ಸಮೃದ್ಧಗೊಳಿಸಲು ಹಂತ ಹಂತವಾಗಿ ಸ್ಮಾರ್ಟ್ ತರಗತಿ ಕೊಠಡಿಗಳನ್ನು ಅಭಿವೃದ್ಧಿಪಡಿಸುತ್ತವೆ.

## 5. ಶಿಕ್ಷಕರು

5.1. ಶಿಕ್ಷಕರೇ ನಮ್ಮ ಮಕ್ಕಳ ಭವಿಷ್ಯವನ್ನು ರೂಪಿಸುವವರು ಮತ್ತು ಆ ಮೂಲಕ ದೇಶದ ಭವಿಷ್ಯವನ್ನೂ ಸಹ ರೂಪಿಸುತ್ತಾರೆ. ಶಿಕ್ಷಕರ ಈ ಉದಾತ್ತ ಪಾತ್ರದಿಂದಾಗಿಯೇ ಅವರು ಸಮಾಜದ ಅತ್ಯಂತ ಗೌರವಾನ್ವಿತ ಸದಸ್ಯರಾಗಿದ್ದರು. ಅತ್ಯಂತ ಉತ್ತಮ ಮತ್ತು ಹೆಚ್ಚು ಕಲಿತವರು ಮಾತ್ರ ಶಿಕ್ಷಕ ವೃತ್ತಿಯನ್ನು ಅನುಸರಿಸುತ್ತಿದ್ದರು. ಶಿಕ್ಷಕರು ತಮ್ಮ ಜ್ಞಾನ, ಕೌಶಲ್ಯ ಮತ್ತು ನೀತಿಗಳನ್ನು ವಿದ್ಯಾರ್ಥಿಗಳಿಗೆ ಅತ್ಯುತ್ತಮವಾಗಿ ಕಲಿಸಲು ಬೇಕಾಗಿರುವುದನ್ನೆಲ್ಲಾ ಸಮಾಜವು ನೀಡಿದೆ. ಆದರೆ ಇಂದು ಶಿಕ್ಷಕರ ಶಿಕ್ಷಣದ ಗುಣಮಟ್ಟ, ನೇಮಕಾತಿ, ನಿಯೋಜನೆ, ಸೇವಾ ಪರಿಸ್ಥಿತಿಗಳು ಮತ್ತು ಶಿಕ್ಷಕರ ಸಬಲೀಕರಣವು ಅಪೇಕ್ಷಿತ ರೀತಿಯಲ್ಲಿ ಇರುವುದಿಲ್ಲ ಮತ್ತು ಇದರ ಪರಿಣಾಮವಾಗಿ ಶಿಕ್ಷಕರ ಗುಣಮಟ್ಟ ಮತ್ತು ಪ್ರೇರಣೆಯು ಅಪೇಕ್ಷಿತ ಮಾನದಂಡಗಳನ್ನು ತಲುಪುತ್ತಿಲ್ಲ. ಬೋಧನಾ ವೃತ್ತಿಯಲ್ಲಿ ಉತ್ತಮ ವ್ಯಕ್ತಿಗಳು ಪ್ರವೇಶಿಸುವಂತೆ ಪ್ರೇರೇಪಿಸುವ ಸಲುವಾಗಿ ಶಿಕ್ಷಕರಿಗೆ ಹೆಚ್ಚಿನ ಗೌರವ ಮತ್ತು ಬೋಧನಾ ವೃತ್ತಿಯ ಉನ್ನತ ಸ್ಥಾನಮಾನವನ್ನು ಪುನಃ ಸ್ಥಾಪಿಸಬೇಕಾಗಿದೆ. ನಮ್ಮ ಮಕ್ಕಳಿಗೆ ಮತ್ತು ನಮ್ಮ ರಾಷ್ಟ್ರಕ್ಕೆ ಉತ್ತಮ ಭವಿಷ್ಯವನ್ನು ಖಾತ್ರಿಪಡಿಸಿಕೊಳ್ಳಲು ಶಿಕ್ಷಕರ ಪ್ರೇರಣೆ ಮತ್ತು ಸಬಲೀಕರಣ ಅಗತ್ಯವಾಗಿದೆ.

### ನೇಮಕಾತಿ ಮತ್ತು ನಿಯೋಜನೆ :

5.2. ಅತ್ಯುತ್ತಮ ವಿದ್ಯಾರ್ಥಿಗಳು, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಿಂದ ವಿದ್ಯಾರ್ಥಿಗಳು ಬೋಧನಾ ವೃತ್ತಿಗೆ ಪ್ರವೇಶಿಸುವುದನ್ನು ಖಚಿತಪಡಿಸಿಕೊಳ್ಳಲು, 4 ವರ್ಷದ ಗುಣಮಟ್ಟದ ಸಮಗ್ರ ಬಿ.ಎಡ್ ಅಧ್ಯಯನಕ್ಕಾಗಿ ದೇಶಾದ್ಯಂತ ಹೆಚ್ಚಿನ ಸಂಖ್ಯೆಯ ಅರ್ಹತೆ ಆಧಾರಿತ ವಿದ್ಯಾರ್ಥಿವೇತನ ನೀಡಲಾಗುವುದು. ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷ ಅರ್ಹತೆ ಆಧಾರಿತ ವಿದ್ಯಾರ್ಥಿವೇತನವನ್ನು ಪ್ರಾರಂಭಿಸಲಾಗುತ್ತಿದ್ದು ಅದರ ಉದ್ದೇಶ, ವಿದ್ಯಾರ್ಥಿಗಳು ಬಿ.ಎಡ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಸ್ಥಳೀಯ ಪ್ರದೇಶಗಳಲ್ಲಿ ಆದ್ಯತೆಯ ಮೇರೆಗೆ ಉದ್ಯೋಗವನ್ನು ಪಡೆಯುವುದಾಗಿರುತ್ತದೆ. ಅಂತಹ ವಿದ್ಯಾರ್ಥಿವೇತನಗಳು ಸ್ಥಳೀಯ ವಿದ್ಯಾರ್ಥಿಗಳಿಗೆ, ವಿಶೇಷವಾಗಿ ವಿದ್ಯಾರ್ಥಿನಿಯರಿಗೆ ಸ್ಥಳೀಯ ಉದ್ಯೋಗಾವಕಾಶಗಳನ್ನು ಒದಗಿಸುತ್ತಿದ್ದು, ಇದರಿಂದಾಗಿ ಈ ವಿದ್ಯಾರ್ಥಿಗಳು ಸ್ಥಳೀಯ–ಪ್ರದೇಶದ ಆದರ್ಶಗಳಾಗಿ ಮತ್ತು ಸ್ಥಳೀಯ ಭಾಷೆಯನ್ನು ಮಾತನಾಡುವ ಅರ್ಹ ಶಿಕ್ಷಕರಾಗಿ ಕಾರ್ಯನಿರ್ವಹಿಸಲು ಸಾಧ್ಯವಿದೆ. ಗ್ರಾಮೀಣ ಪ್ರದೇಶಗಳಲ್ಲಿ, ಅದರಲ್ಲೂ ವಿಶೇಷವಾಗಿ ಗುಣಮಟ್ಟದ ಶಿಕ್ಷಕರ ಕೊರತೆಯನ್ನು ಎದುರಿಸುತ್ತಿರುವ ಪ್ರದೇಶಗಳಲ್ಲಿ ಶಿಕ್ಷಕರಿಗೆ ಬೋಧನಾ ವೃತ್ತಿಯನ್ನು ಅನುಸರಿಸಲು ಪ್ರೋತ್ಸಾಹ ಧನ ನೀಡಲಾಗುವುದು. ಗ್ರಾಮೀಣ ಶಾಲೆಗಳಲ್ಲಿ ಬೋಧನೆ ಕೈಗೊಳ್ಳಲು ಇರುವ ಒಂದು ಪ್ರಮುಖ ಪ್ರೋತ್ಸಾಹವೆಂದರೆ, ಶಾಲಾ ಆವರಣದ ಬಳಿ ಅಥವಾ ಹತ್ತಿರದಲ್ಲಿ ಶಿಕ್ಷಕರಿಗೆ ಸ್ಥಳೀಯ ವಸತಿಗಳನ್ನು ಒದಗಿಸುವುದು ಅಥವಾ ವಸತಿ ಭತ್ಯೆಯನ್ನು ಹೆಚ್ಚಿಸುವುದು.

5.3. ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಕರ ವರ್ಗಾವಣೆ ಮಾಡುವ ಹಾನಿಕಾರಕ ಅಭ್ಯಾಸವನ್ನು ನಿಲ್ಲಿಸಲಾಗುವುದು, ಇದರಿಂದ ವಿದ್ಯಾರ್ಥಿಗಳು ಅನುಸರಿಸುವ ಆದರ್ಶ ಮಾದರಿಗಳು ಮತ್ತು ಶೈಕ್ಷಣಿಕ ಪರಿಸರದಲ್ಲಿ ನಿರಂತರತೆಯನ್ನು ಹೊಂದಬಹುದಾಗಿದೆ. ಬಹಳ ವಿಶೇಷ ಸಂದರ್ಭಗಳಲ್ಲಿ ರಾಜ್ಯ ಸರ್ಕಾರಗಳಿಂದ ರಚನಾತ್ಮಕ ರೀತಿಯಲ್ಲಿ ಸೂಕ್ತವಾಗಿ ರೂಪಿಸಲಾದ ವಿಧಾನದಲ್ಲಿ ವರ್ಗಾವಣೆಗಳನ್ನು ಮಾಡಲಾಗುತ್ತದೆ. ಇದಲ್ಲದೆ, ಪಾರದರ್ಶಕತೆಯನ್ನು ಖಚಿತಪಡಿಸುವ ಆನ್‌ಲೈನ್ ಗಣಕೀಕೃತ ವ್ಯವಸ್ಥೆಯ ಮೂಲಕ ವರ್ಗಾವಣೆಗಳನ್ನು ಮಾಡಲಾಗುತ್ತದೆ.

5.4. ವಿಷಯವಸ್ತು ಮತ್ತು ಬೋಧನಾಶಾಸ್ತ್ರಗಳೆರಡರ ದೃಷ್ಟಿಯಿಂದ ಉತ್ತಮ ಪರೀಕ್ಷಾ ಸಾಮಗ್ರಿಗಳನ್ನು ರೂಪಿಸಲು ಶಿಕ್ಷಕರ ಅರ್ಹತಾ ಪರೀಕ್ಷೆಗಳನ್ನು (TET) ಬಲಪಡಿಸಲಾಗುತ್ತದೆ. ಶಾಲಾ ಶಿಕ್ಷಣದ ಎಲ್ಲಾ ಹಂತಗಳ (ಬುನಾದಿ ಪೂರ್ವಸಿದ್ಧತಾ, ಮಾಧ್ಯಮಿಕ ಮತ್ತು ಪ್ರೌಢ) ಶಿಕ್ಷಕರ ನೇಮಕಾತಿಗಾಗಿ TET ಯನ್ನು ವಿಸ್ತರಿಸಲಾಗುವುದು. ವಿಷಯ ಶಿಕ್ಷಕರ ನೇಮಕಾತಿಗಾಗಿ, ಸಂಬಂಧಿತ ವಿಷಯಗಳಲ್ಲಿ ಪಡೆದ TET ಅಥವಾ NTA ಪರೀಕ್ಷಾ ಅಂಕಗಳನ್ನೂ ಸಹ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಶಾಲೆಗಳು ಮತ್ತು ಶಾಲಾ ಸಂಕೀರ್ಣಗಳಲ್ಲಿ ಶಿಕ್ಷಕರ ನೇಮಕ ಪ್ರಕ್ರಿಯೆಯಲ್ಲಿ, ಬೋಧನೆಯ ಕುರಿತು ಉತ್ಸಾಹ ಮತ್ತು ಪ್ರೇರಣೆಯನ್ನು ತಿಳಿದುಕೊಳ್ಳಲು, ಬೋಧನಾ ಪ್ರಾತ್ಯಕ್ಷಿತೆ ಅಥವಾ ಸಂದರ್ಶನ ವಿಧಾನವನ್ನು ಅನುಸರಿಸಲಾಗುತ್ತದೆ. ಈ ಸಂದರ್ಶನಗಳನ್ನು ಪ್ರತಿ ಶಾಲೆ / ಶಾಲಾ ಸಂಕೀರ್ಣವು ಸ್ಥಳೀಯ ಭಾಷೆಯಲ್ಲಿ ಅಥವಾ ವಿದ್ಯಾರ್ಥಿಗಳ ಮನೆ ಭಾಷೆಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಮಾತನಾಡುವ ಕೆಲವು ಶಿಕ್ಷಕರನ್ನಾದರೂ ಹೊಂದಿರುವುದನ್ನು ಖಚಿತಪಡಿಸಿಕೊಳ್ಳಲು ಅಗತ್ಯವಿರುವ ಸ್ಥಳೀಯ ಭಾಷೆಯಲ್ಲಿ ಬೋಧನಾ ಸಾಮರ್ಥ್ಯ ಮತ್ತು ಪ್ರಾವೀಣ್ಯತೆಯನ್ನು ನಿರ್ಣಯಿಸಲೂ ಸಹ ಬಳಸಲಾಗುತ್ತದೆ. ಖಾಸಗಿ ಶಾಲೆಗಳಲ್ಲಿನ ಶಿಕ್ಷಕರೂ ಸಹ ಇದೇ ರೀತಿ TET ಗಳ ಮೂಲಕ, ಪ್ರಾತ್ಯಕ್ಷಿತೆ / ಸಂದರ್ಶನ ಮತ್ತು ಸ್ಥಳೀಯ ಭಾಷೆ (ಗಳ) ಜ್ಞಾನದ ಅರ್ಹತೆ ಪಡೆದಿರಬೇಕು.

**5.5.** ಕಲೆ, ದೈಹಿಕ ಶಿಕ್ಷಣ, ವೃತ್ತಿಪರ ಶಿಕ್ಷಣ ಮತ್ತು ಭಾಷೆಗಳಂತಹ ವಿಷಯಗಳು ಸೇರಿದಂತೆ, ಎಲ್ಲಾ ವಿಷಯಗಳಲ್ಲಿ ಸಾಕಷ್ಟು ಸಂಖ್ಯೆಯ ಶಿಕ್ಷಕರು ಇರುವುದನ್ನು ಖಚಿತಪಡಿಸಿಕೊಳ್ಳಲು ಶಿಕ್ಷಕರನ್ನು ಶಾಲೆ ಅಥವಾ ಶಾಲಾ ಸಂಕೀರ್ಣಕ್ಕಾಗಿ ನೇಮಕ ಮಾಡಿಕೊಳ್ಳಬಹುದು ಮತ್ತು ರಾಜ್ಯ ಸರ್ಕಾರಗಳು ನಿರ್ಧರಿಸಿದ ಶಾಲೆಗಳ ಗುಂಪಿಗೆ ಅನುಸಾರವಾಗಿ ವಿವಿಧ ಶಾಲೆಗಳಿಗೆ ಶಿಕ್ಷಕರ ಹಂಚಿಕೆಯನ್ನು ಮಾಡಬಹುದು.

**5.6.** ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಮತ್ತು ಸ್ಥಳೀಯ ಜ್ಞಾನ ಮತ್ತು ವೃತ್ತಿಗಳನ್ನು ಸಂರಕ್ಷಿಸಲು, ಸಾಂಪ್ರದಾಯಿಕ ಸ್ಥಳೀಯ ಕಲೆಗಳು, ವೃತ್ತಿಪರ ಕರಕೌಶಲ್ಯ, ಉದ್ಯಮಶೀಲತೆ, ಕೃಷಿ, ಅಥವಾ ಸ್ಥಳೀಯ ಪರಿಣಿತಿ ಇರುವ ಯಾವುದೇ ವಿಷಯದಲ್ಲಿ ಸ್ಥಳೀಯ ಪ್ರಖ್ಯಾತ ವ್ಯಕ್ತಿಗಳನ್ನು ಅಥವಾ ತಜ್ಞರನ್ನು 'ಪ್ರಧಾನ ಬೋಧಕರನ್ನಾಗಿ' (Master Instrctors) ನೇಮಿಸಿಕೊಳ್ಳುವಂತೆ ಶಾಲೆಗಳು / ಶಾಲಾ ಸಂಕೀರ್ಣಗಳನ್ನು ಪ್ರೋತ್ಸಾಹಿಸಲಾಗುತ್ತದೆ.

**5.7.** ಮುಂದಿನ ಎರಡು ದಶಕಗಳಿಗೆ ಬೇಕಾದ ನಿರೀಕ್ಷಿತ ವಿಷಯವಾರು ಶಿಕ್ಷಕರ ಹುದ್ದೆಗಳ ಸಂಖೆಯನ್ನು ನಿರ್ಣಯಿಸಲು ತಂತ್ರಜ್ಞಾನ ಆಧಾರಿತ ಶಿಕ್ಷಕರ ಅಗತ್ಯತೆ ಯೋಜನೆಯನ್ನು ರೂಪಿಸುವ ಪ್ರಯತ್ನವನ್ನು ಪ್ರತಿ ರಾಜ್ಯವು ಕೈಗೊಳ್ಳುತ್ತದೆ. ಕೆಳಗೆ ವಿವರಿಸಿದಂತೆ ಎಲ್ಲಾ ಖಾಲಿ ಹುದ್ದೆಗಳನ್ನು ಸ್ಥಳೀಯ ಶಿಕ್ಷಕರು ಸೇರಿದಂತೆ ಅರ್ಹ ಶಿಕ್ಷಕರಿಂದ ಭರ್ತಿ ಮಾಡಲು, ವೃತ್ತಿ ನಿರ್ವಹಣೆ ಮತ್ತು ಪ್ರಗತಿಯ ಸೂಕ್ತ ಪ್ರೋತ್ಸಾಹದೊಂದಿಗೆ, ನೇಮಕಾತಿ ಮತ್ತು ನಿಯೋಜನೆಯಲ್ಲಿ ಮೇಲೆ ವಿವರಿಸಿದ ಉಪಕ್ರಮಗಳನ್ನು ಕಾಲ ಕ್ರಮೇಣ ಅಗತ್ಯಕ್ಕೆ ತಕ್ಕಂತೆ ವಿಸ್ತರಿಸಲಾಗುತ್ತದೆ. ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳೂ ಸಹ ಈ ರೀತಿಯಾಗಿ ಪ್ರತಿಫಲಿತವಾಗುವ ಖಾಲಿ ಹುದ್ದೆಗಳೊಂದಿಗೆ ಹೊಂದಿಕೊಳ್ಳುತ್ತವೆ.

### ಸೇವಾ ಪರಿಸರ ಮತ್ತು ಸಂಸ್ಕೃತಿ:

**5.8.** ಶಾಲೆಗಳ ಸೇವಾ ಪರಿಸರ ಮತ್ತು ಸಂಸ್ಕೃತಿಯನ್ನು ಕೂಲಂಕಷವಾಗಿ ಪರಿಶೀಲಿಸುವ ಪ್ರಾಥಮಿಕ ಗುರಿಯೆಂದರೆ, ತಮ್ಮ ಕೆಲಸಗಳನ್ನು ಪರಿಣಾಮಕಾರಿಯಾಗಿ ಮಾಡುವಂತೆ ಶಿಕ್ಷಕರ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಅವರು ಮಕ್ಕಳ ಕಲಿಕೆಯನ್ನು ಖಚಿತಪಡಿಸುವ ಸಾಮಾನ್ಯ ಗುರಿಯೊಂದಿಗೆ ವಿದ್ಯಾರ್ಥಿಗಳು, ಪೋಷಕರು, ಪ್ರಾಂಶುಪಾಲರು, ಮತ್ತು ಇತರ ಸಹಾಯಕ ಸಿಬ್ಬಂದಿಯನ್ನು ಒಳಗೊಂಡ ಸ್ಪಂದನಶೀಲ, ಕಾಳಜಿಯುತ ಸಮುದಾಯದ ಸದಸ್ಯರಾಗಿರುವುದನ್ನು ಖಚಿತಪಡಿಸಿಕೊಳ್ಳುವುದಾಗಿದೆ.

**5.9.** ಈ ದಿಕ್ಕಿನಲ್ಲಿ ಮೊದಲ ಅವಶ್ಯಕತೆಯೆಂದರೆ, ಶಾಲೆಗಳಲ್ಲಿ ಯೋಗ್ಯ ಮತ್ತು ಆಹ್ಲಾದಕರ ಸೇವಾ ಪರಿಸ್ಥಿತಿಗಳನ್ನು ಖಚಿತಪಡಿಸಿಕೊಳ್ಳುವುದು. ಶಿಕ್ಷಕರು ಮತ್ತು ವಿಶೇಷಚೇತನ ಮಕ್ಕಳು ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳು ಸುರಕ್ಷಿತ, ಸಮನ್ವಯಿತ ಮತ್ತು ಪರಿಣಾಮಕಾರಿ ಕಲಿಕೆಯ ವಾತಾವರಣವನ್ನು ಪಡೆಯುವುದನ್ನು ಮತ್ತು ತಮ್ಮ ಶಾಲೆಗಳಲ್ಲಿ ಶಿಕ್ಷಕರು ಕಲಿಸಲು ಮತ್ತು ವಿದ್ಯಾರ್ಥಿಗಳು ಕಲಿಯಲು ಪ್ರೇರಿತರಾಗಿರುವುದನ್ನು ಖಚಿತಪಡಿಸಿಕೊಳ್ಳಲು, ಎಲ್ಲಾ ಶಾಲೆಗಳಿಗೆ ಉತ್ತಮ ಶೌಚಾಲಯಗಳು, ಶುದ್ಧ ಕುಡಿಯುವ ನೀರು, ಸ್ವಚ್ಛ ಮತ್ತು ಮನರಂಜನಾತ್ಮಕ ವ್ಯವಸ್ಥೆಗಳು, ವಿದ್ಯುತ್ ಸೌಲಭ್ಯ, ಗಣಕಯಂತ್ರಗಳು, ಇಂಟರ್ನೆಟ್, ಗ್ರಂಥಾಲಯಗಳು ಮತ್ತು ಕ್ರೀಡೆ ಹಾಗೂ ಮನರಂಜನಾ ಸಂಪನ್ಮೂಲಗಳನ್ನು ಒಳಗೊಂಡಂತೆ ಸಾಕಷ್ಟು ಮತ್ತು ಸುರಕ್ಷಿತ ಮೂಲಸೌಕರ್ಯಗಳನ್ನು ಒದಗಿಸಲಾಗುವುದು. ಎಲ್ಲಾ ಶಿಕ್ಷಕರು ಈ ಸೌಲಭ್ಯಗಳ ಕುರಿತು ತಿಳಿದಿರುವುದ 'ನ್ನು ಖಚಿತಪಡಿಸಿಕೊಳ್ಳಲು, ಸೇವಾ ನಿರತ ತರಬೇತಿಯಲ್ಲಿ ಶಾಲೆಗಳಲ್ಲಿನ ಕೆಲಸದ ಸ್ಥಳದಲ್ಲಿ ಸುರಕ್ಷತೆ, ಆರೋಗ್ಯ ಮತ್ತು ಪರಿಸರದ ಕುರಿತು ಮಾಹಿತಿಯನ್ನು ನೀಡಲಾಗುತ್ತದೆ.

**5.10.** ಪರಿಣಾಮಕಾರಿ ಶಾಲಾ ಆಡಳಿತ, ಸಂಪನ್ಮೂಲ ಹಂಚಿಕೆ ಮತ್ತು ಸಮುದಾಯ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರಗಳು ಯಾವುದೇ ರೀತಿಯಲ್ಲಿಯೂ ದಾಖಲಾತಿಯಲ್ಲಿ ಕುಸಿತವಾಗದಂತೆ ಶಾಲಾ ಸಂಕೀರ್ಣ ಶಾಲೆಗಳನ್ನು ಯೋಜನಾಬದ್ಧಗೊಳಿಸುವಿಕೆಯಂತಹ ನವೀನ ವಿಧಾನಗಳನ್ನು ಅಳವಡಿಸಿಕೊಳ್ಳಬಹುದು. ಶಾಲಾ ಸಂಕೀರ್ಣಗಳ ರಚನೆಯು ಉತ್ಸಾಹಿ ಶಿಕ್ಷಕರ ಸಮುದಾಯಗಳನ್ನು ನಿರ್ಮಿಸಲು ಸಹಾಯಕವಾಗುತ್ತದೆ. ಶಾಲಾ ಸಂಕೀರ್ಣಗಳಿಗೆ ಶಿಕ್ಷಕರನ್ನು ನೇಮಿಸಿಕೊಳ್ಳುವುದರಿಂದ ಶಾಲಾ ಸಂಕೀರ್ಣದಾದ್ಯಂತ ಶಾಲೆಗಳ ನಡುವೆ ಸ್ವಯಂಚಾಲಿತವಾಗಿ ಸಂಬಂಧಗಳು ಸೃಷ್ಟಿಯಾಗುತ್ತವೆ; ಇದರಿಂದಾಗಿ ಹೆಚ್ಚು ಸ್ಪಂದನಶೀಲ ಶಿಕ್ಷಕರ ಜ್ಞಾನದ ನೆಲೆಯನ್ನು ಸೃಷ್ಟಿಸುವುದರೊಂದಿಗೆ, ಶಿಕ್ಷಕರ ಅತ್ಯುತ್ತಮ ವಿಷಯವಾರು ವಿತರಣೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಬಹಳ ಚಿಕ್ಕದಾದ ಶಾಲೆಗಳಲ್ಲಿನ ಶಿಕ್ಷಕರು ಇನ್ನು ಮುಂದೆ ಪ್ರತ್ಯೇಕವಾಗಿ ಉಳಿಯುವುದಿಲ್ಲ ಮತ್ತು ಎಲ್ಲಾ ಮಕ್ಕಳು ಕಲಿಯುತ್ತಿರುವುದನ್ನು ಖಚಿತಪಡಿಸಿಕೊಳ್ಳಲು, ಅಂತಹ ಶಾಲೆಗಳು ದೊಡ್ಡದಾದ ಶಾಲಾ ಸಂಕೀರ್ಣದ ಭಾಗವಾಗಬಹುದು ಮತ್ತು ಉತ್ತಮ ಅಭ್ಯಾಸಗಳನ್ನು ಪರಸ್ಪರ ಹಂಚಿಕೊಳ್ಳಬಹುದು ಹಾಗೂ ಸಹಭಾಗಿತ್ವದಲ್ಲಿ ಕೆಲಸ ಮಾಡಬಹುದು. ಶಾಲಾ ಸಂಕೀರ್ಣಗಳು ಶಿಕ್ಷಕರನ್ನು ಮತ್ತಷ್ಟು

ಬೆಂಬಲಿಸಲು ಮತ್ತು ಪರಿಣಾಮಕಾರಿ ಕಲಿಕೆಯ ವಾತಾವರಣವನ್ನು ಸೃಷ್ಟಿಸುವ ಕಾರ್ಯದಲ್ಲಿ ಸಹಾಯ ಮಾಡಲು ಸಲಹೆಗಾರರು, ತರಬೇತಿ ಪಡೆದ ಸಾಮಾಜಿಕ ಕಾರ್ಯಕರ್ತರು, ತಾಂತ್ರಿಕ ಮತ್ತು ನಿರ್ವಹಣಾ ಸಿಬ್ಬಂದಿ ಇತ್ಯಾದಿಗಳ ಸೇವೆಯನ್ನೂ ಸಹ ಹಂಚಿಕೊಳ್ಳಬಹುದು.

**5.11.** ಪೋಷಕರು ಮತ್ತು ಇತರ ಪ್ರಮುಖ ಸ್ಥಳೀಯ ಭಾಗೀದಾರರ ಸಹಯೋಗದೊಂದಿಗೆ ಶಿಕ್ಷಕರು, ಶಾಲೆಗಳು/ಶಾಲಾ ಸಂಕೀರ್ಣಗಳ ಆಡಳಿತದಲ್ಲಿ (ಶಾಲಾ ನಿರ್ವಹಣಾ ಸಮಿತಿಗಳು/ಶಾಲಾ ಸಂಕೀರ್ಣ ನಿರ್ವಹಣಾ ಸಮಿತಿಗಳ ಸದಸ್ಯರಾಗಿಯೂ ಸಹ) ಹೆಚ್ಚು ತೊಡಗಿಸಿಕೊಳ್ಳುತ್ತಾರೆ.

**5.12.** ಬೋಧಕೇತರ ಚಟುವಟಿಕೆಗಳಿಗಾಗಿ ಶಿಕ್ಷಕರ ಹೆಚ್ಚಿನ ಸಮಯ ವ್ಯಯವಾಗುತ್ತಿರುವುದನ್ನು ತಡೆಯಲು, ಶಿಕ್ಷಕರು ಬೋಧನೆಗೆ ನೇರವಾಗಿ ಸಂಬಂಧಿಸದ ಕೆಲಸದಲ್ಲಿ ಇನ್ನು ಮುಂದೆ ತೊಡಗಿಸಿಕೊಳ್ಳುವುದಿಲ್ಲ; ನಿರ್ದಿಷ್ಟವಾಗಿ ಹೇಳುವುದಾದರೆ, ಶಿಕ್ಷಕರು ಆಡಳಿತಾತ್ಮಕ ಮತ್ತು ಮಧ್ಯಾಹ್ನದ ಬಿಸಿ ಊಟ ಸಂಬಂಧಿತ ಕೆಲಸಕ್ಕೆ ಅಗತ್ಯವಾದ ಮತ್ತು ತರ್ಕಬದ್ಧವಾದ ಕನಿಷ್ಠ ಸಮಯಕ್ಕಿಂತ ಹೆಚ್ಚಿನ ಸಮಯ ಆ ಕಾರ್ಯಗಳಿಗಾಗಿ ವ್ಯಯಿಸುವುದಿಲ್ಲ. ಇದರಿಂದ ಅವರು ತಮ್ಮ ಬೋಧನೆ ಮತ್ತು ಕಲಿಕೆಯ ಕರ್ತವ್ಯಗಳ ಮೇಲೆ ಸಂಪೂರ್ಣವಾಗಿ ಗಮನಹರಿಸಬಹುದು.

**5.13.** ಪ್ರಾಂಶುಪಾಲರು ಮತ್ತು ಶಿಕ್ಷಕರ ಪಾತ್ರದ ನಿರೀಕ್ಷೆಗಳು, ತಮ್ಮ ಶಾಲೆಗಳಲ್ಲಿ ಕಾಳಜಿಯುತ ಮತ್ತು ಸಮನ್ವಯಿತ ಸಂಸ್ಕೃತಿಯನ್ನು ಸೃಷ್ಟಿಸುವ ಅಂಶಗಳನ್ನು ಒಳಗೊಂಡಿರುತ್ತವೆ, ಇದರಿಂದಾಗಿ ಪರಿಣಾಮಕಾರಿ ಕಲಿಕೆ ಮತ್ತು ಎಲ್ಲಾ ಭಾಗೀದಾರರ ಪ್ರಯೋಜನಕ್ಕಾಗಿ, ಶಾಲೆಗಳು ಸಕಾರಾತ್ಮಕ ಕಲಿಕೆಯ ವಾತಾವರಣ ಹೊಂದಿರುವುದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುತ್ತದೆ.

**5.14.** ಬೋಧನಾ ವಿಧಾನದ ಅಂಶಗಳನ್ನು ಆಯ್ಕೆಮಾಡಲು ಶಿಕ್ಷಕರಿಗೆ ಹೆಚ್ಚಿನ ಸ್ವಾಯತ್ತತೆ ನೀಡಲಾಗುವುದು, ಇದರಿಂದಾಗಿ ಅವರು ತಮ್ಮ ತರಗತಿ ಕೋಣೆಗಳಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚು ಪರಿಣಾಮಕಾರಿ ಎಂದು ಕಂಡುಕೊಳ್ಳುವ ರೀತಿಯಲ್ಲಿ ಕಲಿಸಬಹುದು. ಶಿಕ್ಷಕರು ಯಾವುದೇ ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆಯ ನಿರ್ಣಾಯಕ ಅಂಶವಾದ ಸಾಮಾಜಿಕ–ಭಾವನಾತ್ಮಕ ಕಲಿಕೆಯ ಮೇಲೆಯೂ ಸಹ ಗಮನ ನೀಡುತ್ತಾರೆ. ಕಲಿಕಾ ಫಲಗಳಲ್ಲಿ ಸುಧಾರಣೆಗಾಗಿ ತಮ್ಮ ತರಗತಿ ಕೋಣೆಗಳಲ್ಲಿನ ಬೋಧನೆಯಲ್ಲಿ ಹೊಸ ವಿಧಾನಗಳನ್ನು ಅನುಸರಿಸುವ ಶಿಕ್ಷಕರನ್ನು ಗುರುತಿಸಲಾಗುತ್ತದೆ.

### ನಿರಂತರ ವೃತ್ತಿಪರ ಅಭಿವೃದ್ಧಿ (ಸಿ.ಪಿ.ಡಿ):

**5.15.** ಶಿಕ್ಷಕರ ಸ್ವ–ಸುಧಾರಣೆಗೆ ಮತ್ತು ಅವರ ವೃತ್ತಿಗಳಲ್ಲಿನ ಇತ್ತೀಚಿನ ಆವಿಷ್ಕಾರಗಳು ಮತ್ತು ಬೆಳವಣಿಗೆಗಳ ಕುರಿತು ಕಲಿಯಲು ನಿರಂತರ ಅವಕಾಶಗಳನ್ನು ನೀಡಲಾಗುವುದು. ಸ್ಥಳೀಯ, ಪ್ರಾದೇಶಿಕ, ರಾಜ್ಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಾರ್ಯಾಗಾರಗಳು ಮತ್ತು ಆನ್‌ಲೈನ್ ಶಿಕ್ಷಕರ ತರಬೇತಿ ಯೋಜನೆಗಳು ಸೇರಿದಂತೆ ವಿವಿಧ ವಿಧಾನಗಳ ಮೂಲಕ ಇಂತಹ ಅವಕಾಶಗಳನ್ನು ನೀಡಬಹುದಾಗಿದೆ. ಶಿಕ್ಷಕರು ತಮ್ಮ ವಿಚಾರಗಳನ್ನು ಮತ್ತು ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲು ಸೂಕ್ತ ವೇದಿಕೆಗಳನ್ನು (ವಿಶೇಷವಾಗಿ ಆನ್‌ಲೈನ್ ವೇದಿಕೆಗಳು) ಅಭಿವೃದ್ಧಿಪಡಿಸಲಾಗುವುದು. ಪ್ರತಿಯೊಬ್ಬ ಶಿಕ್ಷಕರು ತಮ್ಮ ಆಸಕ್ತಿಗಳನ್ನು ಆಧರಿಸಿದ ವೃತ್ತಿಪರ ಅಭಿವೃದ್ಧಿಗಾಗಿ ಪ್ರತಿವರ್ಷ ಕನಿಷ್ಠ 50 ಗಂಟೆಗಳ 'ಸಿಪಿಡಿ' ಕಾರ್ಯಕ್ರಮಗಳಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಇಂತಹ ಸಿಪಿಡಿ ಕಾರ್ಯಕ್ರಮಗಳು ಬುನಾದಿ ಅಕ್ಷರ ಜ್ಞಾನ ಮತ್ತು ಗಣಿತ ಕೌಶಲ್ಯ, ಕಲಿಕಾ ಫಲಗಳ ರಚನಾತ್ಮಕ ಮತ್ತು ಹೊಂದಾಣಿಕೆಯ ಮೌಲ್ಯಮಾಪನ, ಸಾಮರ್ಥ್ಯ ಆಧಾರಿತ ಕಲಿಕೆ, ಅನುಭವಾತ್ಮಕ ಕಲಿಕೆ, ಕಲೆ–ಸಂಯೋಜಿತ, ಕ್ರೀಡಾ–ಸಂಯೋಜಿತ ಮತ್ತು ಕಥೆ ಹೇಳುವಿಕೆಯಂತಹ ಬೋಧನಾ ವಿಧಾನಗಳನ್ನು ಒಳಗೊಂಡಿರುತ್ತವೆ

**5.16.** ಶಾಲಾ ಪ್ರಾಂಶುಪಾಲರು ಮತ್ತು ಶಾಲಾ ಸಂಕೀರ್ಣದ ಪ್ರಮುಖರು ತಮ್ಮ ನಾಯಕತ್ವ ಮತ್ತು ನಿರ್ವಹಣಾ ಕೌಶಲಗಳನ್ನು ನಿರಂತರವಾಗಿ ಸುಧಾರಿಸಿಕೊಳ್ಳಲು, ಇದೇ ರೀತಿಯ ಯೋಜನೆಗಳನ್ನು ಆಧರಿಸಿದ ನಾಯಕತ್ವ / ನಿರ್ವಹಣಾ ಕಾರ್ಯಾಗಾರಗಳು ಮತ್ತು ಆನ್ ಲೈನ್ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಬಹುದಾಗಿದೆ ಮತ್ತು ಇದರಿಂದ ಅವರೂ ಸಹ ಉತ್ತಮ ಅಭ್ಯಾಸಗಳನ್ನು ಪರಸ್ಪರ ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ಅಂತಹ ಮುಖ್ಯಸ್ಥರು, ವರ್ಷಕ್ಕೆ 50 ಗಂಟೆಗಳ ಅಥವಾ ಅದಕ್ಕಿಂತ ಹೆಚ್ಚಿನ ನಿರಂತರ ವೃತಿಪರ ಅಭಿವೃದ್ಧಿ ಯೋಜನೆಗಳಲ್ಲಿ ಭಾಗವಹಿಸುವ ನಿರೀಕ್ಷೆಯಿದ್ದು, ಅಂತಹ ಯೋಜನೆಗಳನ್ನು ನಾಯಕತ್ವ ಮತ್ತು ನಿರ್ವಹಣಾ ಕೌಶಲ್ಯಗಳು, ಸಾಮರ್ಥ್ಯ ಆಧಾರಿತ ಬೋಧನಾ ವಿಧಾನಗಳ ಕುರಿತು ಯೋಜನೆಗಳನ್ನು ಸಿದ್ಧಪಡಿಸುವುದು ಮತ್ತು ವಿಷಯವಸ್ತು ಮತ್ತು ಬೋಧನಾ ವಿಧಾನಗಳನ್ನು ಆಧರಿಸಿ ಸಿದ್ಧಪಡಿಸಲಾಗುತ್ತದೆ.

**ವೃತ್ತಿ ನಿರ್ವಹಣೆ ಮತ್ತು ಪ್ರಗತಿ (ಸಿ.ಎಂ.ಪಿ):**

**5.17.** ಎಲ್ಲಾ ಶಿಕ್ಷಕರು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವಂತೆ ಪ್ರೋತ್ಸಾಹಿಸಲು, ಅತ್ಯುತ್ತಮವಾಗಿ ಕೆಲಸ ಮಾಡುವ ಶಿಕ್ಷಕರನ್ನು ಗುರುತಿಸಿ ಬಡ್ತಿ ನೀಡಬೇಕು ಮತ್ತು ಅವರ ಸಂಬಳದಲ್ಲಿ ಹೆಚ್ಚಳ ಮಾಡಬೇಕು. ಆದ್ದರಿಂದ, ಅತ್ಯುತ್ತಮ ಶಿಕ್ಷಕರನ್ನು ಗುರುತಿಸಲು ಮತ್ತು ಉತ್ತೇಜಿಸಲು ಅರ್ಹತೆಯನ್ನು ಆಧರಿಸಿದ ಸೇವಾವಧಿ, ಬಡ್ತಿ ಮತ್ತು ಸಂಬಳದ ವ್ಯವಸ್ಥೆಯನ್ನು ರೂಪಿಸಲಾಗುವುದು. ಶಿಕ್ಷಕರ ಕಾರ್ಯನಿರ್ವಹಣೆಯ ಸಮರ್ಪಕ ಮೌಲ್ಯಮಾಪನಕ್ಕಾಗಿ, ಸಹಪಾಠಿ ವಿಮರ್ಶೆಗಳು, ಹಾಜರಾತಿ, ಬದ್ಧತೆ, ನಿರಂತರ ವೃತ್ತಿಪರ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವ ಅವಧಿಗಳು ಮತ್ತು ಶಾಲೆ ಹಾಗೂ ಸಮುದಾಯಕ್ಕೆ ಇತರ ರೀತಿಯ ಸೇವೆಯನ್ನು ಆಧರಿಸಿದ ಅಥವಾ ಪ್ಯಾರಾ 5.20 ರಲ್ಲಿ ಹೇಳಿದಂತೆ NPST ಯ ಮಾನಕಗಳನ್ನು ಆಧರಿಸಿದ ಅನೇಕ ನಿಯತಾಂಕಗಳ ಒಂದು ವ್ಯವಸ್ಥೆಯನ್ನು ರಾಜ್ಯ ಸರ್ಕಾರಗಳು ಅಭಿವೃದ್ಧಿಪಡಿಸುತ್ತವೆ. ಇಲ್ಲಿ ಸೇವಾವಧಿ ಎಂದರೆ, ಶಿಕ್ಷಕರ ಕಾರ್ಯನಿರ್ವಹಣೆ ಮತ್ತು ಕೊಡುಗೆಗಳ ಸರಿಯಾದ ಮೌಲ್ಯಮಾಪನದ ನಂತರ, 'ಶಾಶ್ವತ ಉದ್ಯೋಗದ ದೃಢೀಕರಣವನ್ನು ಸೂಚಿಸುತ್ತದೆ, 'ಸೇವಾವಧಿಯ ದಾಖಲೆ' ಎಂದರೆ, ಸೇವಾವಧಿಯ ಹಿಂದಿನ ಪರೀಕ್ಷಾರ್ಥ ಅವಧಿಯನ್ನು ಸೂಚಿಸುತ್ತದೆ.

**5.18.** ಇದಲ್ಲದೆ, ಒಂದೇ ಶಾಲಾ ಹಂತದಲ್ಲಿ (ಅಂದರೆ, ಬುನಾದಿ ಪೂರ್ವಸಿದ್ಧತಾ, ಮಾಧ್ಯಮಿಕ ಅಥವಾ ಪ್ರೌಢ) ಶಿಕ್ಷಕರಿಗೆ ವೃತ್ತಿ ಬೆಳವಣಿಗೆ ಸೌಲಭ್ಯಗಳು (ಸೇವಾವಧಿ, ಬಡ್ತಿ, ವೇತನ ಹೆಚ್ಚಳ, ಇತ್ಯಾದಿ) ಲಭ್ಯವಾಗುವಂತೆ ಮತ್ತು ಆರಂಭಿಕ ಹಂತಗಳ ಶಿಕ್ಷಕರು ನಂತರದ ಹಂತಗಳಿಗೆ ಅಥವಾ ನಂತರದ ಹಂತಗಳ ಶಿಕ್ಷಕರು ಆರಂಭಿಕ ಹಂತಗಳಿಗೆ ಸಾಗಲು ವೃತ್ತಿ ಪ್ರಗತಿಗೆ ಸಂಬಂಧಿಸಿದ ಪ್ರೋತ್ಸಾಹಕಗಳು (ಶಿಕ್ಷಕರಿಗೆ ಅಂತಹ ಕ್ರಮಕ್ಕಾಗಿ ಬಯಕೆ ಮತ್ತು ಅರ್ಹತೆಗಳು ಇದ್ದಲ್ಲಿ, ಅಂತಹ ಚಲನೆಗಳನ್ನು ಅನುಮತಿಸಲಾಗುವುದು) ಇಲ್ಲದಿರುವಂತೆ ನೋಡಿಕೊಳ್ಳಲಾಗುವುದು. ಶಾಲಾ ಶಿಕ್ಷಣದ ಎಲ್ಲಾ ಹಂತಗಳಿಗೆ ಉನ್ನತ–ಗುಣಮಟ್ಟದ ಶಿಕ್ಷಕರ ಅಗತ್ಯವಿರುತ್ತದೆ ಮತ್ತು ಯಾವುದೇ ಹಂತವನ್ನು ಇತರ ಹಂತಗಳಿಗಿಂತ ಹೆಚ್ಚು ಮುಖ್ಯವೆಂದು ಪರಿಗಣಿಸಲಾಗುವುದಿಲ್ಲ ಎಂಬ ಅಂಶವನ್ನು ಬೆಂಬಲಿಸಲು ಇದು ಅಗತ್ಯವಾಗಿದೆ.

**5.19.** ಅರ್ಹತೆಯ ಆಧಾರದ ಮೇಲೆ ಶಿಕ್ಷಕರ ಮೇಲ್ಮುಖ ಚಲನೆಯೂ (Vertical Mobility) ಸಹ ಪ್ರಮುಖವಾಗಿರುತ್ತದೆ; ಶಾಲೆಗಳು, ಶಾಲಾ ಸಂಕೀರ್ಣಗಳು, CRC, BRC, BITE, DIET ಮತ್ತು ಸಂಬಂಧಿತ ಸರ್ಕಾರಿ ಇಲಾಖೆಗಳಲ್ಲಿ ಶೈಕ್ಷಣಿಕ ನಾಯಕತ್ವ ಪಾತ್ರ ನಿರ್ವಹಿಸಲು, ನಾಯಕತ್ವ ಮತ್ತು ನಿರ್ವಹಣಾ ಕೌಶಲ ಹೊಂದಿರುವ ಅತ್ಯುತ್ತಮ ಶಿಕ್ಷಕರಿಗೆ ಕಾಲಾನಂತರದಲ್ಲಿ ತರಬೇತಿ ನೀಡಲಾಗುವುದು.

**ಶಿಕ್ಷಕರಿಗೆ ವೃತ್ತಿಪರ ಮಾನಕಗಳು:**

**5.20.** ಶಿಕ್ಷಕರ ರಾಷ್ಟ್ರೀಯ ವೃತ್ತಿಪರ ಮಾನಕಗಳ (NPST) ಸಾಮಾನ್ಯ ಮಾರ್ಗದರ್ಶಿಯನ್ನು 2022 ರ ವೇಳೆಗೆ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಯು ಸಾಮಾನ್ಯ ಶಿಕ್ಷಣ ಮಂಡಳಿಯ (GEC) ಅಡಿಯಲ್ಲಿ NCTE ಯನ್ನು ವೃತ್ತಿಪರ ಮಾನಕಗಳ ನಿರ್ಧಾರಕ ಮಂಡಳಿಯಾಗಿ (PSSB) ಪುನರ್ ರಚಿಸಲಾಗುತ್ತದೆ. NCERT, SCERT ಗಳು, ವಿವಿಧ ಹಂತದ ಮತ್ತು ಪ್ರದೇಶಗಳ ಶಿಕ್ಷಕರು, ಶಿಕ್ಷಕರ ಸಿದ್ಧತೆ ಮತ್ತು ಅಭಿವೃದ್ಧಿಯಲ್ಲಿ ಪರಿಣಿತ ಸಂಸ್ಥೆಗಳು, ವೃತ್ತಿಪರ ಶಿಕ್ಷಣದಲ್ಲಿ ಪರಿಣಿತ ಸಂಸ್ಥೆಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳೊಂದಿಗೆ ಸಮಾಲೋಚನೆಯ ಮೂಲಕ ಅಭಿವೃದ್ಧಿಪಡಿಸುತ್ತದೆ. ಈ ಮಾನಕಗಳು, ವಿವಿಧ ಹಂತಗಳಲ್ಲಿ ಶಿಕ್ಷಕರ ಪಾತ್ರದ ನಿರೀಕ್ಷೆಗಳನ್ನು ಮತ್ತು ಆ ಹಂತಕ್ಕೆ ಅಗತ್ಯವಾದ ಸಾಮರ್ಥ್ಯಗಳನ್ನು ಒಳಗೊಂಡಿರುತ್ತವೆ. ಅಲ್ಲದೇ, ಪ್ರತಿ ಹಂತದಲ್ಲಿನ ಕಾರ್ಯನಿರ್ವಹಣೆಯ ಮೌಲ್ಯಮಾಪನಕ್ಕಾಗಿ ಇದು ಮಾನಕಗಳನ್ನೂ ಸಹ ಒಳಗೊಂಡಿದ್ದು, ಅದನ್ನು ನಿಯಮಿತವಾಗಿ ನಡೆಸಲಾಗುತ್ತದೆ. ಸೇವಾ ಪೂರ್ವ ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳ ವಿನ್ಯಾಸವನ್ನೂ NPST ತಿಳಿಸುತ್ತದೆ. ನಂತರದಲ್ಲಿ ಈ ಮಾರ್ಗದರ್ಶಿಯನ್ನು ರಾಜ್ಯಗಳು ಅಳವಡಿಸಿಕೊಳ್ಳಬಹುದು ಮತ್ತು ಸೇವಾವಧಿ, ವೃತ್ತಿಪರ ಅಭಿವೃದ್ಧಿ ಪ್ರಯತ್ನಗಳು, ಸಂಬಳ ಹೆಚ್ಚಳ, ಬಡ್ತಿ ಮತ್ತು ಇತರ ಮಾನ್ಯತೆಗಳನ್ನು ಒಳಗೊಂಡಂತೆ ಶಿಕ್ಷಕರ ವೃತ್ತಿ ನಿರ್ವಹಣೆಯ ಎಲ್ಲಾ ಅಂಶಗಳನ್ನು ನಿರ್ಧರಿಸಬಹುದು. ಸೇವಾವಧಿ ಅಥವಾ ಹಿರಿತನದ ಆಧಾರದ ಮೇಲೆ ಬಡ್ತಿ ಮತ್ತು ವೇತನ ಹೆಚ್ಚಳ ಮಾಡದೇ, ಕಾರ್ಯನಿರ್ವಹಣೆಯ ಮೌಲ್ಯಮಾಪನದ ಆಧಾರದ ಮೇಲೆ ಮಾತ್ರ ಮಾಡಲಾಗುತ್ತದೆ. ವೃತ್ತಿಪರ ಮಾನಕಗಳನ್ನು 2030 ರಲ್ಲಿ ಪರಿಶೀಲಿಸಲಾಗುತ್ತದೆ ಮತ್ತು ಪರಿಷ್ಕರಿಸಲಾಗುತ್ತದೆ, ಮತ್ತು ಅದರ ನಂತರ ಪ್ರತಿ ಹತ್ತು ವರ್ಷಗಳಿಗೊಮ್ಮೆ ವ್ಯವಸ್ಥೆಯ ಪರಿಣಾಮಕಾರಿತ್ವದ ಕಠಿಣ ಪ್ರಾಯೋಗಿಕ ವಿಶ್ಲೇಷಣೆಯ ಆಧಾರದ ಮೇಲೆ ಪರಿಷ್ಕರಿಸಲಾಗುತ್ತದೆ.

**ವಿಶೇಷ ಶಿಕ್ಷಕರು:**

**5.21.** ಶಾಲಾ ಶಿಕ್ಷಣದ ಕೆಲವು ಕ್ಷೇತ್ರಗಳಿಗೆ ಹೆಚ್ಚುವರಿ ವಿಶೇಷ ಶಿಕ್ಷಕರ ತುರ್ತು ಅವಶ್ಯಕತೆಯಿದೆ. ಮಾಧ್ಯಮಿಕ ಮತ್ತು ಪ್ರೌಢ ಶಾಲಾ ಹಂತದಲ್ಲಿ ನಿರ್ದಿಷ್ಟ ಕಲಿಕಾ ನ್ಯೂನತೆಗಳಿರುವ ವಿದ್ಯಾರ್ಥಿಗಳಿಗೆ ಮತ್ತು ವಿಶೇಷಚೇತನ ಮಕ್ಕಳಿಗೆ / ದಿವ್ಯಾಂಗ ಮಕ್ಕಳಿಗೆ ಕಲಿಸಲು ತಜ್ಞ ಶಿಕ್ಷಕರ ಅವಶ್ಯಕತೆ ಇರುತ್ತದೆ. ಅಂತಹ ಶಿಕ್ಷಕರಿಗೆ ವಿಷಯ–ಬೋಧನಾ ಜ್ಞಾನ ಮತ್ತು ಶಿಕ್ಷಣದ ವಿಷಯ–ಸಂಬಂಧಿತ ಗುರಿಗಳ ತಿಳುವಳಿಕೆ ಮಾತ್ರವಲ್ಲದೇ, ಮಕ್ಕಳ ವಿಶೇಷ ಅವಶ್ಯಕತೆಗಳನ್ನು ಪೂರೈಸಲು ಬೇಕಾದ ಸಂಬಂಧಿತ ಕೌಶಲ್ಯಗಳ ಅಗತ್ಯವೂ ಸಹ ಇರುತ್ತದೆ. ಆದ್ದರಿಂದ, ಸೇವಾ ಪೂರ್ವ ಮತ್ತು ಸೇವಾ ನಿರತ ಶಿಕ್ಷಕರ ತರಬೇತಿ ಕಾರ್ಯಕ್ರಮಗಳಲ್ಲಿ, ವಿಷಯ ಶಿಕ್ಷಕರು ಅಥವಾ ಸಾಮಾನ್ಯ ಶಿಕ್ಷಕರಿಗಾಗಿ ದ್ವಿತೀಯ ಹಂತದ ವಿಶೇಷತೆಗಳಾಗಿ ಅಂತಹ ತಜ್ಞತೆಯ ಕೋರ್ಸಗಳನ್ನು ಪ್ರಾರಂಭಿಸಬಹುದಾಗಿದೆ. ಅವುಗಳನ್ನು ಪೂರ್ಣ ಸಮಯ ಅಥವಾ ಅರೆಕಾಲಿಕ /ಸಂಯೋಜಿತ ಕೋರ್ಸಗಳ ರೂಪದಲ್ಲಿ ಪ್ರಮಾಣಪತ್ರ ಕೋರ್ಸಗಳಾಗಿ, ಸೇವಾ ಪೂರ್ವ ಮತ್ತು ಸೇವಾ ನಿರತ ವಿಧಾನದಲ್ಲಿ, ಬಹು ವಿಷಯದ ಕಾಲೇಜುಗಳು ಅಥವಾ ವಿಶ್ವವಿದ್ಯಾಲಯಗಳಲ್ಲಿ ನೀಡಲಾಗುವುದು. ವಿಷಯ ಬೋಧನೆಯನ್ನೂ ಸಹ ಸಮರ್ಪಕವಾಗಿ ನಿಭಾಯಿಸಬಲ್ಲ ಅರ್ಹ ವಿಶೇಷ ಶಿಕ್ಷಕರ ಸಮರ್ಪಕ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು, NCTE ಮತ್ತು RCI ನ ಪಠ್ಯಕ್ರಮದ ನಡುವೆ ಹೆಚ್ಚಿನ ಸಮತೋಲನ ಇರುವಂತೆ ನೋಡಿಕೊಳ್ಳಲಾಗುವುದು.

**ಶಿಕ್ಷಕರ ಶಿಕ್ಷಣದ ವಿಧಾನ:**

**5.22.** ಶಿಕ್ಷಕರಿಗೆ ವಿಷಯ ವಸ್ತು ಮತ್ತು ಬೋಧನಾ ವಿಧಾನಗಳಲ್ಲಿ ಉನ್ನತ–ಗುಣಮಟ್ಟದ ತರಬೇತಿಯ ಅಗತ್ಯವಿರುತ್ತದೆ ಎಂಬುದನ್ನು ಪರಿಗಣಿಸುತ್ತಾ, ಶಿಕ್ಷಕರ ಶಿಕ್ಷಣವನ್ನು ಕ್ರಮೇಣ 2030 ರ ವೇಳೆಗೆ ಬಹುಶಿಸ್ತೀಯ (Multi disciplinary) ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಸ್ಥಳಾಂತರಿಸಲಾಗುವುದು. ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳೆಲ್ಲವೂ ಬಹುಶಿಸ್ತೀಯದೆಡೆಗೆ (Multi disciplinary) ಸಾಗುತ್ತಿರುವಾಗ, ಅಲ್ಲಿ ಬಿ.ಇಡಿ, ಎಂ.ಇಡಿ, ಮತ್ತು ಪಿಎಚ್‌ಡಿ ಪದವಿಗಳನ್ನು ನೀಡುವ ಅತ್ಯುತ್ತಮ ಶಿಕ್ಷಣ ವಿಭಾಗಗಳನ್ನೂ ಸಹ ಸ್ಥಾಪಿಸಬೇಕಾಗುತ್ತದೆ.

**5.23.** 2030ರ ವೇಳೆಗೆ, 4 ವರ್ಷಗಳ ಸಂಯೋಜಿತ ಬಿ.ಎಡ್. ಪದವಿಯು ಬೋಧನಾ ವೃತ್ತಿ ಕೈಗೊಳ್ಳಲು ಬೇಕಾದ ಕನಿಷ್ಠ ಅರ್ಹತೆಯಾಗಿರುತ್ತದೆ. ಅಲ್ಲಿ ವಿವಿಧ ಪ್ರಕಾರದ ಜ್ಞಾನವನ್ನು ಒದಗಿಸಲಾಗುತ್ತದೆ ಮತ್ತು ಬೋಧನಾ ವಿಧಾನಗಳನ್ನು ಕಲಿಸಲಾಗುತ್ತದೆ ಹಾಗೂ ಸ್ಥಳೀಯ ಶಾಲೆಗಳಲ್ಲಿ ಬೋಧನೆಯ ಅಭ್ಯಾಸದ ತರಬೇತಿಯನ್ನು ನೀಡಲಾಗುತ್ತದೆ. 4 ವರ್ಷಗಳ ಸಂಯೋಜಿತ ಬಿ.ಎಡ್ ಪದವಿ ನೀಡುವ ಬಹುಶಿಸ್ತೀಯ ಸಂಸ್ಥೆಗಳಿಂದಲೇ 2 ವರ್ಷದ ಬಿ.ಎಡ್. ಕಾರ್ಯಕ್ರಮಗಳನ್ನೂ ಸಹ ನಡೆಸಲಾಗುವುದು ಮತ್ತು ಇತರ ವಿಶೇಷ ವಿಷಯಗಳಲ್ಲಿ ಈಗಾಗಲೇ ಬ್ಯಾಚುಲರ್ ಪದವಿಗಳನ್ನು ಪಡೆದವರು ಮಾತ್ರ ಈ ಪದವಿಗೆ ಅರ್ಹರಿರುತ್ತಾರೆ. ಈ ಬಿ.ಎಡ್. ಕಾರ್ಯಕ್ರಮಗಳನ್ನು 1 ವರ್ಷದ ಬಿ.ಎಡ್. ಕಾರ್ಯಕ್ರಮಗಳನ್ನಾಗಿ ಸೂಕ್ತವಾಗಿ ಮಾರ್ಪಡಿಸಬಹುದು ಮತ್ತು ಈ ಕಾರ್ಯಕ್ರಮವನ್ನು 4 ವರ್ಷದ ಬಹುವಿಷಯಗಳುಳ್ಳ ಬ್ಯಾಚುಲರ್ ಪದವಿಗಳಿಗೆ ಸಮನಾದ ಪದವಿ ಪೂರ್ಣಗೊಳಿಸಿದವರಿಗೆ ಅಥವಾ ವಿಶೇಷ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದವರಿಗೆ ಮತ್ತು ಆ ವಿಶೇಷ ವಿಷಯದಲ್ಲಿ ವಿಷಯ ಶಿಕ್ಷಕರಾಗಲು ಬಯಸುವವರಿಗೆ ಮಾತ್ರ ನೀಡಲಾಗುವುದು. ಅಂತಹ ಎಲ್ಲ ಬಿ.ಎಡ್. ಪದವಿಗಳನ್ನು 4 ವರ್ಷದ ಸಂಯೋಜಿತ ಬಿ.ಎಡ್ ಕಾರ್ಯಕ್ರಮಗಳನ್ನು ನಡೆಸಲು ಮಾನ್ಯತೆ ಪಡೆದ, ಬಹುಮುಖೀ ಉನ್ನತ ಶಿಕ್ಷಣ ಸಂಸ್ಥೆಗಳಿಂದ ಮಾತ್ರ ನೀಡಲಾಗುತ್ತದೆ. 4 ವರ್ಷದ ನಿಯಮಿತ ರೂಪದ ಸಮಗ್ರ B.Ed ಪದವಿಯನ್ನು ನೀಡುವ ಮತ್ತು ಅಂಗೀಕರಣ ಹೊಂದಿರುವ ಬಹುಶಿಸ್ತೀಯ ಬೋಧನಾ (Multi disciplinary) ಉನ್ನತ ಶಿಕ್ಷಣ ಸಂಸ್ಥೆಗಳು ದೂರದ ಪ್ರದೇಶಗಳಲ್ಲಿನ ವಿದ್ಯಾರ್ಥಿಗಳಿಗೆ ಮತ್ತು ತಮ್ಮ ವಿದ್ಯಾರ್ಹತೆಯನ್ನು ಹೆಚ್ಚಿಸಿಕೊಳ್ಳಲು ಬಯಸುವ ಸೇವಾ ನಿರತ ಶಿಕ್ಷಕರಿಗಾಗಿ ಮುಕ್ತ ಮತ್ತು ದೂರ ಕಲಿಕೆ (Open and Distance Learning-ODL) ಅಥವಾ ಸಂಯೋಜಿತ ವಿಧಾನದಲ್ಲಿ ಉನ್ನತ ಗುಣಮಟ್ಟದ B.Ed ಕಾರ್ಯಕ್ರಮಗಳನ್ನು ನೀಡಬಹುದು ಮತ್ತು ಆ ಸಂಸ್ಥೆಗಳು ವಿದ್ಯಾರ್ಥಿಗಳ ಮಾರ್ಗದರ್ಶನಕ್ಕಾಗಿ, ಪ್ರಾಯೋಗಿಕ ತರಬೇತಿಗಾಗಿ ಮತ್ತು ವಿದ್ಯಾರ್ಥಿ–ಬೋಧನಾ ಅಂಶಗಳಿಗಾಗಿ ಸೂಕ್ತವಾದ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತವೆ.

**5.24.** ಎಲ್ಲಾ ಬಿ.ಎಡ್. ಕಾರ್ಯಕ್ರಮಗಳು, ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನಕ್ಕೆ ಸಂಬಂಧಿಸಿದಂತೆ ಬೋಧನಾಶಾಸ್ತ್ರ, ಬಹು–ಹಂತದ ಬೋಧನೆ ಮತ್ತು ಮೌಲ್ಯಮಾಪನ, ವಿಶೇಷಚೇತನ ಮಕ್ಕಳಿಗೆ ಬೋಧನೆ, ವಿಶೇಷ ಆಸಕ್ತಿಗಳು ಅಥವಾ ಪ್ರತಿಭೆಗಳನ್ನು ಹೊಂದಿರುವ ಮಕ್ಕಳಿಗೆ ಬೋಧನೆ, ಶೈಕ್ಷಣಿಕ ತಂತ್ರಜ್ಞಾನದ ಬಳಕೆ, ಮತ್ತು ವಿದ್ಯಾರ್ಥಿ–ಕೇಂದ್ರಿತ ಮತ್ತು ಸಹಯೋಗಾತ್ಮಕ ಕಲಿಕೆಯನ್ನು ಒಳಗೊಂಡಂತೆ, ಇತ್ತೀಚಿನ ಬೋಧನಾಶಾಸ್ತ್ರದ ತಂತ್ರಗಳನ್ನು ಒಳಗೊಂಡಿರುತ್ತವೆ ಮತ್ತು

ಸ್ಥಳೀಯ ಶಾಲೆಗಳಲ್ಲಿ ತರಗತಿಯ ಬೋಧನೆಯ ರೂಪದಲ್ಲಿ ಪ್ರಶಿಕ್ಷಣಾರ್ಥಿಗಳು ಅಭ್ಯಾಸ ಬೋಧನೆ ಮಾಡುವುದನ್ನು ಒಳಗೊಂಡಿರುತ್ತವೆ. ಎಲ್ಲಾ ಬಿ.ಎಡ್. ಕಾರ್ಯಕ್ರಮಗಳಲ್ಲಿ ಯಾವುದೇ ವಿಷಯವನ್ನು ಕಲಿಸುವಾಗ ಅಥವಾ ಯಾವುದೇ ಚಟುವಟಿಕೆಯನ್ನು ನಿರ್ವಹಿಸುವಾಗ ಭಾರತೀಯ ಸಂವಿಧಾನದ ಮೂಲಭೂತ ಕರ್ತವ್ಯಗಳು (ಪರಿಚ್ಛೇದ 51 ಎ) ಮತ್ತು ಇತರ ಸಾಂವಿಧಾನಿಕ ನಿಬಂಧನೆಗಳ ಮೇಲೆ ಒತ್ತು ನೀಡಲಾಗುತ್ತದೆ. ಪರಿಸರ ಶಿಕ್ಷಣವನ್ನು ಶಾಲಾ ಪಠ್ಯಕ್ರಮದ ಅವಿಭಾಜ್ಯ ಅಂಗವಾಗಿಸುವ ಮೂಲಕ, ಪರಿಸರ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿಯ ಕಡೆಗೆ ಜಾಗೃತಿ ಮತ್ತು ಸಂವೇದನಶೀಲತೆಯನ್ನು ಸಹ ಸೂಕ್ತವಾಗಿ ಸಂಯೋಜಿಸುತ್ತದೆ.

**5.25.** ಸ್ಥಳೀಯ ಕಲೆ, ಸಂಗೀತ, ಕೃಷಿ, ವ್ಯವಹಾರ, ಕ್ರೀಡೆ, ಮರಗೆಲಸ ಮತ್ತು ಇತರ ವೃತ್ತಿಪರ ಕರಕುಶಲ ವಸ್ತುಗಳಂತಹ ಸ್ಥಳೀಯ ವೃತ್ತಿಗಳು, ಜ್ಞಾನ ಮತ್ತು ಕೌಶಲ್ಯಗಳನ್ನು ಉತ್ತೇಜಿಸುವ ಉದ್ದೇಶದಿಂದ, ಶಾಲೆಗಳು ಅಥವಾ ಶಾಲಾ ಸಂಕೀರ್ಣಗಳಲ್ಲಿ ಸ್ಥಳೀಯ ಪ್ರದೇಶದ ಪ್ರಸಿದ್ಧ ವ್ಯಕ್ತಿಗಳನ್ನು 'ಪ್ರಧಾನ ಬೋಧಕರು' ಎಂದು ನೇಮಿಸಿಕೊಳ್ಳಬಹುದು ಮತ್ತು ಅವರಿಗಾಗಿ ವಿಶೇಷವಾದ, ಕಿರು ಅವಧಿಯ ಸ್ಥಳೀಯ ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳನ್ನು BITE ಗಳು, DIET ಗಳು ಅಥವಾ ಶಾಲಾ ಸಂಕೀರ್ಣಗಳಲ್ಲಿ ಆಯೋಜಿಸಬಹುದು.

**5.26.** ವಿಕಲಚೇತನ ವಿದ್ಯಾರ್ಥಿಗಳಿಗೆ ಬೋಧನೆ ಮಾಡಲು ಬಯಸುವ ಅಥವಾ ಶಾಲಾ ವ್ಯವಸ್ಥೆಯಲ್ಲಿ ನಾಯಕತ್ವ ಮತ್ತು ನಿರ್ವಹಣಾ ಸ್ಥಾನಗಳಂತಹ ಹೆಚ್ಚು ವಿಶೇಷವಾದ ಬೋಧನಾ ಕ್ಷೇತ್ರಗಳಿಗೆ ಹೋಗಲು ಬಯಸುವ ಅಥವಾ ಬುನಾದಿ, ಪೂರ್ವಸಿದ್ಧತಾ, ಮಾಧ್ಯಮಿಕ ಮತ್ತು ಪ್ರೌಢ ಹಂತಗಳಲ್ಲಿ, ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಹೋಗಲು ಬಯಸುವ ಶಿಕ್ಷಕರಿಗೆ ಬಹುಶಿಸ್ತೀಯ ಬೋಧನಾ (Multi disciplinary) ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಿರು ಅವಧಿಯ, B.Ed ನಂತರದ ಪ್ರಮಾಣೀಕೃತ ಕೋರ್ಸ ಗಳನ್ನು ವ್ಯಾಪಕವಾಗಿ ಪ್ರಾರಂಭಿಸಲಾಗುವುದು.

**5.27.** ನಿರ್ದಿಷ್ಟ ವಿಷಯಗಳನ್ನು ಕಲಿಸಲು ಅಂತರರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಪ್ರಕಾರದ ಬೋಧನಾ ವಿಧಾನಗಳು ಇರಬಹುದು ಎಂದು ಗುರುತಿಸಲಾಗಿದೆ. NCERT ಯು ವಿವಿಧ ವಿಷಯಗಳನ್ನು ಕಲಿಸಲು ವೈವಿಧ್ಯಮಯ ಅಂತರರಾಷ್ಟ್ರೀಯ ಬೋಧನಾ ವಿಧಾನಗಳನ್ನು ಅಧ್ಯಯನ ಮಾಡುತ್ತದೆ, ಸಂಶೋಧಿಸುತ್ತದೆ, ದಾಖಲಿಸುತ್ತದೆ ಮತ್ತು ಸಂಗ್ರಹಿಸುತ್ತದೆ ಹಾಗೂ ಭಾರತದಲ್ಲಿ ಅನುಸರಿಸಲಾಗುತ್ತಿರುವ ಬೋಧನಾಶಾಸ್ತ್ರಗಳಲ್ಲಿ ಸುಧಾರಣೆ ಮಾಡಲು, ಈ ವಿಧಾನಗಳಿಂದ ಕಲಿಯಬಹುದಾದ ಮತ್ತು ಸಂಯೋಜಿಸಬಹುದಾದ ವಿಷಯಗಳ ಬಗ್ಗೆ ಶಿಫಾರಸ್ಸುಗಳನ್ನು ಮಾಡುತ್ತದೆ.

**5.28.** 2021 ರ ವೇಳೆಗೆ NCTE ಯು, ಈ ರಾಷ್ಟ್ರೀಯ ಶಿಕ್ಷಣ ನೀತಿ 2020 ರ ತತ್ವಗಳ ಆಧಾರದ ಮೇಲೆ NCERT ಯೊಂದಿಗೆ ಸಮಾಲೋಚಿಸಿ, ಶಿಕ್ಷಕರ ಶಿಕ್ಷಣಕ್ಕಾಗಿ ಹೊಸ ಮತ್ತು ಸಮಗ್ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, NCFTE–2021 ಅನ್ನು ರೂಪಿಸುತ್ತದೆ. ರಾಜ್ಯ ಸರ್ಕಾರಗಳು, ಸಂಬಂಧಿತ ಸಚಿವಾಲಯಗಳು / ಕೇಂದ್ರ ಸರ್ಕಾರದ ಇಲಾಖೆಗಳು ಮತ್ತು ವಿವಿಧ ತಜ್ಞರ ಸಂಸ್ಥೆಗಳು ಸೇರಿದಂತೆ ಎಲ್ಲಾ ಭಾಗೀದಾರರೊಂದಿಗೆ ಚರ್ಚಿಸಿದ ನಂತರ ಈ ಚೌಕಟ್ಟನ್ನು ಅಭಿವೃದ್ಧಿಪಡಿಸಲಾಗುವುದು ಮತ್ತು ಅದನ್ನು ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ಒದಗಿಸಲಾಗುವುದು. ವೃತ್ತಿಪರ ಶಿಕ್ಷಣಕ್ಕಾಗಿ ಶಿಕ್ಷಕರ ಶಿಕ್ಷಣ ಪಠ್ಯಕ್ರಮದ ಅವಶ್ಯಕತೆಗಳಿಗೂ ಸಹ NCFTE–2021 ಸಂಬಂಧಿಸಿರುತ್ತದೆ. ಪರಿಷ್ಕೃತ NCF ಗಳಲ್ಲಿನ ಬದಲಾವಣೆಗಳನ್ನು ಮತ್ತು ಶಿಕ್ಷಕರ ಶಿಕ್ಷಣದಲ್ಲಿನ ಉದಯೋನ್ಮುಖ ಅಗತ್ಯಗಳನ್ನು ಪ್ರತಿಬಿಂಬಿಸುವಂತೆ, NCFTE ಯನ್ನು ಪ್ರತಿ 5–10 ವರ್ಷಗಳಿಗೊಮ್ಮೆ ಪರಿಷ್ಕರಿಸಲಾಗುತ್ತದೆ.

**5.29.** ಅಂತಿಮವಾಗಿ, ಶಿಕ್ಷಕರ ಶಿಕ್ಷಣ ವ್ಯವಸ್ಥೆಯ ಸಮಗ್ರತೆಯನ್ನು ಸಂಪೂರ್ಣವಾಗಿ ಪುನಃಸ್ಥಾಪಿಸಲು, ದೇಶದಲ್ಲಿನ ಕಳಪೆ ಗುಣಮಟ್ಟದ ಶಿಕ್ಷಕರ ಶಿಕ್ಷಣ ಸಂಸ್ಥೆಗಳ (NEL) ವಿರುದ್ಧ, ಅಗತ್ಯವಿದ್ದಲ್ಲಿ ಅವುಗಳನ್ನು ಸ್ಥಗಿತಗೊಳಿಸುವುದು ಸೇರಿದಂತೆ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

## 6. ಸಮಾನ ಮತ್ತು ಸಮನ್ವಯ ಶಿಕ್ಷಣ: ಎಲ್ಲರಿಗಾಗಿ ಕಲಿಕೆ

**6.1.** ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಸಾಧಿಸಲು ಶಿಕ್ಷಣವು ಏಕೈಕ ದೊಡ್ಡ ಸಾಧನವಾಗಿದೆ. ಅಂತರ್ಗತ ಮತ್ತು ನ್ಯಾಯಸಮ್ಮತವಾದ ಶಿಕ್ಷಣ ಪಡೆಯುವಂತೆ ಮಾಡುವುದು ನಿಜಕ್ಕೂ ಒಂದು ಪ್ರಮುಖ ಗುರಿಯಾಗಿದ್ದು, ಅಂತರ್ಗತ ಮತ್ತು ಸಮಾನ ಸಮಾಜವನ್ನು ನಿರ್ಮಿಸಲು ಪ್ರಮುಖ ನಿರ್ಣಾಯಕ ಅಂಶವಾಗಿದೆ. ಇಂತಹ ಸಮಾಜದಲ್ಲಿ ಪ್ರತಿಯೊಬ್ಬ ನಾಗರಿಕನಿಗೆ ಕನಸು ಕಾಣಲು, ಅಭಿವೃದ್ಧಿ ಹೊಂದಲು ಮತ್ತು ರಾಷ್ಟ್ರಕ್ಕೆ ಕೊಡುಗೆ ನೀಡಲು ಅವಕಾಶವಿದೆ. ಶಿಕ್ಷಣ ವ್ಯವಸ್ಥೆಯು ದೇಶದ ಮಕ್ಕಳಿಗೆ ಪ್ರಯೋಜನವನ್ನು ನೀಡುವ ಗುರಿಯನ್ನು ಹೊಂದಿದ್ದು, ಮಕ್ಕಳ ಜನನದ ಅಥವಾ ಕೌಟಂಬಿಕ

ಸನ್ನಿವೇಶದ ಹಿನ್ನೆಲೆಯಲ್ಲಿ ಸಂದರ್ಭಗಳಿಂದಾಗಿ ಯಾವುದೇ ಮಗು ಕಲಿಯಲು ಮತ್ತು ಉತ್ಕೃಷ್ಟ ಸಾಧನೆ ಮಾಡಲು ಇರುವ ಯಾವುದೇ ಅವಕಾಶವನ್ನು ಕಳೆದುಕೊಳ್ಳುವಂತಿರಬಾರದು. ಶಾಲಾ ಶಿಕ್ಷಣದಲ್ಲಿನ ಲಭ್ಯತೆ, ಭಾಗವಹಿಸುವಿಕೆ ಮತ್ತು ಕಲಿಕಾ ಫಲಗಳಲ್ಲಿನ ಸಾಮಾಜಿಕ ವರ್ಗದ ಅಂತರವನ್ನು ತಗ್ಗಿಸುವುದು, ಶಿಕ್ಷಣ ಕ್ಷೇತ್ರದ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಮುಖ ಗುರಿಗಳಲ್ಲಿ ಒಂದಾಗಿದೆ ಎಂದು ಈ ನೀತಿಯು ಪುನರುಚ್ಚರಿಸುತ್ತದೆ. ಈ ಅಧ್ಯಾಯವನ್ನು ಉನ್ನತ ಶಿಕ್ಷಣದಲ್ಲಿ ಸಮಾನತೆ ಮತ್ತು ಸೇರ್ಪಡೆಯ ಸಾದೃಶ್ಯ ಸಮಸ್ಯೆಗಳನ್ನು ಚರ್ಚಿಸುವ ಅಧ್ಯಾಯ 14 ರೊಂದಿಗೆ ಓದಬಹುದು.

**6.2.** ಭಾರತೀಯ ಶಿಕ್ಷಣ ವ್ಯವಸ್ಥೆ ಮತ್ತು ಸರ್ಕಾರದ ನೀತಿಗಳು ಎಲ್ಲಾ ಹಂತದ ಶಾಲಾ ಶಿಕ್ಷಣದಲ್ಲಿ ಲಿಂಗ ಮತ್ತು ಸಾಮಾಜಿಕ ವರ್ಗದ ಅಂತರವನ್ನು ನಿವಾರಿಸುವಲ್ಲಿ ಸ್ಥಿರವಾದ ಪ್ರಗತಿಯನ್ನು ಸಾಧಿಸಿದ್ದರೂ, ವಿಶೇಷವಾಗಿ ಪ್ರೌಢ ಹಂತದ ಶಿಕ್ಷಣ ಕ್ಷೇತ್ರದಲ್ಲಿ ಐತಿಹಾಸಿಕವಾಗಿ ಕಡಿಮೆ ಪ್ರತಿನಿಧಿಸಲ್ಪಟ್ಟಿರುವ ಮತ್ತು ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ಗುಂಪುಗಳಿಗೆ ಸಂಬಂಧಿಸಿದಂತೆ ದೊಡ್ಡ ಪ್ರಮಾಣದ ಅಸಮಾನತೆಗಳು ಇನ್ನೂ ಉಳಿದಿವೆ. ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ಗುಂಪುಗಳನ್ನು, (ಎಸ್.ಇ.ಡಿ.ಜಿ-Socio-Economically Disadvantaged Groups), ಲಿಂಗ (ವಿಶೇಷವಾಗಿ ಸ್ತ್ರೀ ಮತ್ತು ತೃತೀಯ ಲಿಂಗಿ), ಸಾಮಾಜಿಕ–ಸಾಂಸ್ಕೃತಿಕ ಗುರುತುಗಳು (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಒಬಿಸಿ ಮತ್ತು ಅಲ್ಪಸಂಖ್ಯಾತರಂತಹ), ಭೌಗೋಳಿಕ ಗುರುತುಗಳು (ಉದಾಹರಣೆಗೆ ಹಳ್ಳಿಗಳು, ಸಣ್ಣ ಪಟ್ಟಣಗಳು ಮತ್ತು ಮಹತ್ವಾಕಾಂಕ್ಷೆಯ ಜಿಲ್ಲೆಗಳ ವಿದ್ಯಾರ್ಥಿಗಳು), ನ್ಯೂನತೆಗಳು (ಕಲಿಕಾ ನ್ಯೂನತೆಗಳು ಸೇರಿದಂತೆ), ಮತ್ತು ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳು (ವಲಸೆ ಸಮುದಾಯಗಳು, ಕಡಿಮೆ ಆದಾಯದ ಕುಟುಂಬಗಳು, ದುರ್ಬಲ ಪರಿಸ್ಥಿತಿಯಲ್ಲಿರುವ ಮಕ್ಕಳು, ಕಳ್ಳಸಾಗಣೆಗೆ ಬಲಿಯಾದವರು ಅಥವಾ ಅವರ ಮಕ್ಕಳು, ನಗರ ಪ್ರದೇಶಗಳಲ್ಲಿ ಭಿಕ್ಷುಕರು ಸೇರಿದಂತೆ ಅನಾಥರು, ಮತ್ತು ನಗರಗಳಲ್ಲಿನ ಬಡವರು) ಎಂದು ವಿಶಾಲವಾಗಿ ವರ್ಗೀಕರಿಸಬಹುದು. ಶಾಲೆಗಳಲ್ಲಿ 1ನೇ ತರಗತಿಯಿಂದ 12ನೇ ತರಗತಿಯವರೆಗೆ ಒಟ್ಟಾರೆ ದಾಖಲಾತಿ ದರಗಳು ಸ್ಥಿರವಾಗಿ ಕುಸಿಯುತ್ತಿವೆಯಾದರೂ, ದಾಖಲಾತಿಗಳಲ್ಲಿನ ಈ ಕುಸಿತವು ಅನೇಕ ಎಸ್ಇಡಿಜಿಗಳಲ್ಲಿ ಹೆಚ್ಚು ಸ್ಪಷ್ಟವಾಗಿದೆ, ಅಲ್ಲದೇ ಈ ಪ್ರತಿಯೊಂದು ಎಸ್ಇಡಿಜಿಗಳಲ್ಲಿನ ವಿದ್ಯಾರ್ಥಿನಿಯರ ದಾಖಲಾತಿ ದರದಲ್ಲಿ ಇನ್ನೂ ಹೆಚ್ಚಿನ ಕುಸಿತ ಮತ್ತು ಉನ್ನತ ಶಿಕ್ಷಣದಲ್ಲಿ ಅದಕ್ಕಿಂತಲೂ ಹೆಚ್ಚಿನ ಕುಸಿತ ಕಂಡುಬರುತ್ತದೆ. ಸಾಮಾಜಿಕ–ಸಾಂಸ್ಕೃತಿಕ ವಿಭಾಗದಲ್ಲಿ ಬರುವ ಎಸ್ಇಡಿಜಿಗಳ ಸಂಕ್ಷಿಪ್ತ ಅವಲೋಕನವನ್ನು ಈ ಕೆಳಗಿನ ಉಪ–ವಿಭಾಗಗಳಲ್ಲಿ ನೀಡಲಾಗಿದೆ.

**6.3.** U-DISE 2016–17ರ ಮಾಹಿತಿಯ ಪ್ರಕಾರ, ಪ್ರಾಥಮಿಕ ಹಂತದ ಸುಮಾರು 19.6% ವಿದ್ಯಾರ್ಥಿಗಳು ಪರಿಶಿಷ್ಟ ಜಾತಿಗಳಿಗೆ ಸೇರಿದವರಾಗಿದ್ದಾರೆ, ಆದರೆ ಈ ಪ್ರಮಾಣವು ಉನ್ನತ ಮಾಧ್ಯಮಿಕ ಹಂತದಲ್ಲಿ 17.3% ಕ್ಕೆ ಇಳಿಯುತ್ತದೆ. ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ (10.6% ರಿಂದ 6.8%), ಮತ್ತು ವಿಕಲಾಂಗ ಮಕ್ಕಳಿಗೆ (1.1% ರಿಂದ 0.25%) ಸಂಬಂಧಿಸಿದಂತೆ ಈ ದಾಖಲಾತಿ ದರ ಕುಸಿತವು ಹೆಚ್ಚು ತೀವ್ರವಾಗಿದ್ದು, ಈ ಪ್ರತಿಯೊಂದು ವಿಭಾಗದೊಳಗಿನ ವಿದ್ಯಾರ್ಥಿನಿಯರಿಗೆ ಹೋಲಿಸಿದರೆ ದಾಖಲಾತಿ ದರದಲ್ಲಿ ಇನ್ನೂ ಹೆಚ್ಚಿನ ಕುಸಿತವಿದೆ. ಉನ್ನತ ಶಿಕ್ಷಣದ ದಾಖಲಾತಿ ದರದಲ್ಲಿ ಕುಸಿತ ಇನ್ನೂ ಆಳವಾಗಿದೆ.

**6.4.** ಗುಣಮಟ್ಟದ ಶಾಲೆಗಳಿಗೆ ಪ್ರವೇಶ ಪಡೆಯದಿರುವಿಕೆ, ಬಡತನ, ಸಾಮಾಜಿಕ ರೀತಿ–ನೀತಿ ಮತ್ತು ಪದ್ಧತಿಗಳು ಹಾಗೂ ಭಾಷೆ ಸೇರಿದಂತೆ ವಿವಿಧ ಪ್ರಕಾರದ ಅಂಶಗಳು, ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಗಳ ದಾಖಲಾತಿ ಮತ್ತು ಧಾರಣ ದರಗಳ ಮೇಲೆ ಗಂಭೀರ ಪರಿಣಾಮವನ್ನು ಬೀರಿವೆ. ಪರಿಶಿಷ್ಟ ಜಾತಿಗಳಿಗೆ ಸೇರಿದ ಮಕ್ಕಳ ಪ್ರವೇಶ, ಭಾಗವಹಿಸುವಿಕೆ ಮತ್ತು ಕಲಿಕೆಯ ಫಲಿತಾಂಶಗಳಲ್ಲಿನ ಈ ಅಂತರವನ್ನು ನಿವಾರಿಸುವುದು ನೀತಿಯ ಪ್ರಮುಖ ಗುರಿಗಳಲ್ಲಿ ಒಂದಾಗಿದೆ. ಅಲ್ಲದೆ, ಐತಿಹಾಸಿಕ ದೃಷ್ಟಿಕೋನದಲ್ಲಿ ನೋಡಿದಾಗ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವುದರ ಆಧಾರದ ಮೇಲೆ ಗುರುತಿಸಲಾಗಿರುವ ಇತರ ಹಿಂದುಳಿದ ವರ್ಗಗಳಿಗೂ (ಒಬಿಸಿ) ಸಹ ವಿಶೇಷ ಗಮನ ಕೊಡಬೇಕಾಗಿದೆ.

**6.5.** ಬುಡಕಟ್ಟು ಸಮುದಾಯಗಳು ಮತ್ತು ಪರಿಶಿಷ್ಟ ಪಂಗಡದ ಮಕ್ಕಳೂ ಸಹ ವಿವಿಧ ಪ್ರಕಾರದ ಐತಿಹಾಸಿಕ ಮತ್ತು ಭೌಗೋಳಿಕ ಅಂಶಗಳಿಂದಾಗಿ ಅನೇಕ ಹಂತಗಳಲ್ಲಿ ಅನನುಕೂಲಗಳನ್ನು ಎದುರಿಸುತ್ತಾರೆ. ಬುಡಕಟ್ಟು ಸಮುದಾಯದ ಮಕ್ಕಳು, ಶಾಲಾ ಶಿಕ್ಷಣವು ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ ತಮ್ಮ ಜೀವನಕ್ಕೆ ಅಪ್ರಸ್ತುತ ಎಂದು ಅಭಿಪ್ರಾಯ ಪಡುತ್ತಾರೆ. ಪ್ರಸ್ತುತ ಬುಡಕಟ್ಟು ಸಮುದಾಯಗಳ ಮಕ್ಕಳನ್ನು ಮೇಲೆ ತರಲು ಹಲವಾರು ಕಾರ್ಯಕ್ರಮಗಳು ಜಾರಿಯಲ್ಲಿದ್ದು ಮತ್ತು ಅವುಗಳನ್ನು ಮುಂದುವರಿಸಲಾಗುತ್ತದೆಯಾದರೂ ಬುಡಕಟ್ಟು ಸಮುದಾಯಗಳಿಗೆ ಸೇರಿದ ಮಕ್ಕಳು ಈ ಕಾರ್ಯಕ್ರಮ/ಯೋಜನೆಗಳ ಪ್ರಯೋಜನಗಳನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ವಿಶೇಷ ಕಾರ್ಯವಿಧಾನಗಳನ್ನು ಅನುಸರಿಸಬೇಕಾಗಿದೆ.

**6.6.** ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣದಲ್ಲಿ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುತ್ತದೆ. ಈ ನೀತಿಯು ಎಲ್ಲಾ ಅಲ್ಪಸಂಖ್ಯಾತ ಸಮುದಾಯಗಳಿಗೆ, ವಿಶೇಷವಾಗಿ ಶೈಕ್ಷಣಿಕವಾಗಿ ಕಡಿಮೆ ಪ್ರತಿನಿಧಿತ್ವ ಹೊಂದಿರುವ ಸಮುದಾಯಗಳಿಗೆ ಸೇರಿದ ಮಕ್ಕಳ ಶಿಕ್ಷಣವನ್ನು ಉತ್ತೇಜಿಸಲು ವಿಶೇಷ ಪ್ರಯತ್ನಗಳ ಮಹತ್ವವನ್ನು ಗುರುತಿಸಿದೆ.

**6.7.** ಈ ನೀತಿಯು, ವಿಶೇಷ ಅಗತ್ಯವುಳ್ಳ ಮಕ್ಕಳು (ಸಿಡಬ್ಲ್ಯುಎಸ್‌ಎನ್) ಅಥವಾ ದಿವ್ಯಾಂಗ ಮಕ್ಕಳು, ಇತರ ಮಕ್ಕಳಂತೆ ಗುಣಮಟ್ಟದ ಶಿಕ್ಷಣವನ್ನು ಪಡೆಯುವ ಅದೇ ಅವಕಾಶಗಳನ್ನು ಪಡೆಯಲು ಸೂಕ್ತವಾದ ಕಾರ್ಯವಿಧಾನಗಳನ್ನು ರಚಿಸುವ ಪ್ರಾಮುಖ್ಯತೆಯನ್ನು ಗುರುತಿಸುತ್ತದೆ.

**6.8.** ಕೆಳಗಿನ ಉಪ–ವಿಭಾಗಗಳಲ್ಲಿ ವಿವರಿಸಿರುವಂತೆ ಶಾಲಾ ಶಿಕ್ಷಣದಲ್ಲಿ ಕಂಡು ಬರುವ ಸಾಮಾಜಿಕ ವರ್ಗಗಳ ನಡುವಿನ ಅಂತರವನ್ನು ತಗ್ಗಿಸಲು ಕೇಂದ್ರೀಕೃತ ಪ್ರಯತ್ನಗಳಿಗಾಗಿ ಪ್ರತ್ಯೇಕ ಯೋಜನೆಗಳನ್ನು ರೂಪಿಸಲಾಗುವುದು.

**6.9.** ಒಂದರಿಂದ ಮೂರನೇ ಅಧ್ಯಾಯಗಳಲ್ಲಿ ಚರ್ಚಿಸಲಾದ ECCE ಬುನಾದಿ ಅಕ್ಷರ ಜ್ಞಾನ ಮತ್ತು ಗಣಿತ ಕೌಶಲ, ಪ್ರವೇಶ, ದಾಖಲಾತಿ ಮತ್ತು ಹಾಜರಾತಿಗೆ ಸಂಬಂಧಿಸಿದ ನಿರ್ಣಾಯಕ ಸಮಸ್ಯೆಗಳು ಮತ್ತು ಶಿಫಾರಸ್ಸುಗಳು, ಕಡಿಮೆ ಪ್ರತಿನಿಧಿತ್ವ ಹೊಂದಿದ ಮತ್ತು ಹಿಂದುಳಿದ ಗುಂಪುಗಳಿಗೆ ಅತ್ಯಂತ ಸೂಕ್ತವಾಗಿವೆ. ಆದ್ದರಿಂದ, ಅಧ್ಯಾಯ 1 ರಿಂದ 3 ರಲ್ಲಿ ವಿವರಿಸಲಾದ ಕ್ರಮಗಳನ್ನು ಸಂಯೋಜಿತ ರೀತಿಯಲ್ಲಿ ಎಸ್‌ಇಡಿಜಿಗಳಿಗೆ ಅನ್ವಯಿಸಲಾಗುತ್ತದೆ.

**6.10.** ಇದಲ್ಲದೆ ವಿದ್ಯಾರ್ಥಿ ವೇತನಗಳು, ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪೋಷಕರನ್ನು ಉತ್ತೇಜಿಸಲು ಷರತ್ತುಬದ್ಧ ನಗದು ವರ್ಗಾವಣೆ, ಸಾರಿಗೆಗಾಗಿ ಸೈಕಲ್ ಗಳನ್ನು ಒದಗಿಸುವುದು ಸೇರಿದಂತೆ ಹಲವಾರು ಯಶಸ್ವಿ ನೀತಿಗಳು ಮತ್ತು ಯೋಜನೆಗಳನ್ನು ಜಾರಿಗೆ ತಂದಿದ್ದು, ಅದರಿಂದಾಗಿ ನಿರ್ದಿಷ್ಟ ಪ್ರದೇಶಗಳಲ್ಲಿನ ಶಾಲಾ ವ್ಯವಸ್ಥೆಯಲ್ಲಿ ಎಸ್‌ಇಡಿಜಿಗಳ ಭಾಗವಹಿಸುವಿಕೆಯನ್ನು ಗಮನಾರ್ಹವಾಗಿ ಹೆಚ್ಚಿಸಿವೆ. ಈ ಯಶಸ್ವಿ ನೀತಿಗಳು ಮತ್ತು ಯೋಜನೆಗಳನ್ನು ದೇಶಾದ್ಯಂತ ಗಮನಾರ್ಹವಾಗಿ ಬಲಪಡಿಸಬೇಕಾಗಿದೆ.

**6.11.** ನಿರ್ದಿಷ್ಟ ಎಸ್‌ಇಡಿಜಿಗಳಲ್ಲಿ ಯಾವ ಕ್ರಮಗಳು ವಿಶೇಷವಾಗಿ ಪರಿಣಾಮಕಾರಿಯಾಗುತ್ತವೆ ಎಂದು ತಿಳಿದುಕೊಳ್ಳಲು ಸಂಶೋಧನೆಯನ್ನೂ ಸಹ ಕೈಗೊಳ್ಳಬೇಕಾದ ಅಗತ್ಯವಿರುತ್ತದೆ. ಉದಾಹರಣೆಗೆ, ಕಡಿಮೆ ದೂರವಿದ್ದರೂ ಸಹ ಸೈಕಲ್‌ಗಳನ್ನು ಒದಗಿಸುವುದು ಮತ್ತು ಶಾಲೆಗೆ ಬರಲು ಸೈಕ್ಲಿಂಗ್ ಮತ್ತು ವಾಕಿಂಗ್ ಗುಂಪುಗಳನ್ನು ಆಯೋಜಿಸುವಂತಹ ಕ್ರಮಗಳು ವಿದ್ಯಾರ್ಥಿನಿಯರು ಶಾಲೆಗೆ ಬರುವ ಪ್ರಮಾಣವನ್ನು ಹೆಚ್ಚಿಸುವ ಪ್ರಬಲ ವಿಧಾನಗಳಾಗಿವೆ ಎಂದು ತಿಳಿದು ಬಂದಿದೆ. ಏಕೆಂದರೆ, ಇಂತಹ ಕ್ರಮಗಳು ಪೋಷಕರಿಗೆ ಸುರಕ್ಷತಾ ಪ್ರಯೋಜನಗಳು ಮತ್ತು ಸೌಕರ್ಯಗಳನ್ನು ಒದಗಿಸುತ್ತವೆ. ಒಬ್ಬರು ಇನ್ನೊಬ್ಬರಿಗೆ ಬೋಧಿಸುವ (One-On-One teaching) ವಿಧಾನದ ಮೂಲಕ ಬೋಧನೆ, ಸಹಪಾಠಿಗಳ ಮೂಲಕ ಬೋಧನೆ, ಮುಕ್ತ ಶಾಲೆ, ಸೂಕ್ತ ಮೂಲಸೌಕರ್ಯ ಮತ್ತು ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಸೂಕ್ತವಾದ ತಾಂತ್ರಿಕ ಯೋಜನೆಗಳು, ನಿರ್ದಿಷ್ಟ ಪ್ರಕಾರದ ವಿಕಲಾಂಗ ಮಕ್ಕಳಿಗೆ ಬಹಳ ಪರಿಣಾಮಕಾರಿಯಾಗಿವೆ. ಗುಣಮಟ್ಟದ ECCE ಸೌಲಭ್ಯವನ್ನು ಒದಗಿಸುವ ಶಾಲೆಗಳು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಂದ ಬರುವ ಮಕ್ಕಳಿಗೆ ಹೆಚ್ಚಿನ ಪ್ರಯೋಜನಕಾರಿಯಾಗಿವೆ. ಏತನ್ಮಧ್ಯೆ, ಹಾಜರಾತಿ ಮತ್ತು ಕಲಿಕೆಯ ಫಲಿತಾಂಶಗಳನ್ನು ಸುಧಾರಿಸುವ ಸಲುವಾಗಿ ವಿದ್ಯಾರ್ಥಿಗಳು, ಪೋಷಕರು, ಶಾಲೆಗಳು ಮತ್ತು ಶಿಕ್ಷಕರೊಂದಿಗೆ ಕೆಲಸ ಮಾಡುವ ಮತ್ತು ಸಂಪರ್ಕ ಸಾಧಿಸುವ ಸಲಹೆಗಾರರು ಮತ್ತು / ಅಥವಾ ಸುಶಿಕ್ಷಿತ ಸಾಮಾಜಿಕ ಕಾರ್ಯಕರ್ತರು ನಗರದ ಬಡ ಪ್ರದೇಶಗಳಲ್ಲಿನ ಮಕ್ಕಳಿಗೆ ವಿಶೇಷವಾಗಿ ಪರಿಣಾಮಕಾರಿಯಾಗಿದ್ದಾರೆ ಎಂದು ಕಂಡುಬಂದಿದೆ.

**6.12.** ಕೆಲವು ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯ ಎಸ್‌ಇಡಿಜಿಗಳು ಇರುತ್ತವೆ ಎಂದು ದತ್ತಾಂಶಗಳಿಂದ ತಿಳಿದು ಬರುತ್ತದೆ. ಅಲ್ಲದೆ, ಕೆಲವು ಪ್ರದೇಶಗಳನ್ನು ಮಹತ್ವಾಕಾಂಕ್ಷೆಯ ಜಿಲ್ಲೆಗಳೆಂದು ಗುರುತಿಸಲಾಗಿದ್ದು, ಅವುಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ವಿಶೇಷ ಪ್ರಯತ್ನಗಳ ಅವಶ್ಯಕತೆ ಇರುತ್ತದೆ. ಆದ್ದರಿಂದ, ಶೈಕ್ಷಣಿಕವಾಗಿ ಹಿಂದುಳಿದ ಎಸ್‌ಇಡಿಜಿಗಳಲ್ಲಿ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಪ್ರದೇಶಗಳನ್ನು ವಿಶೇಷ ಶಿಕ್ಷಣ ವಲಯಗಳಾಗಿ (S.E.Z) ಘೋಷಿಸಬೇಕು ಎಂದು ಶಿಫಾರಸ್ಸು ಮಾಡಲಾಗಿದ್ದು, ಅಲ್ಲಿನ ಶೈಕ್ಷಣಿಕ ಚಿತ್ರಣವನ್ನು ಬದಲಾಯಿಸಲು ಎಲ್ಲಾ ಯೋಜನೆಗಳು ಮತ್ತು ನೀತಿಗಳನ್ನು ಹೆಚ್ಚುವರಿ ಸಂಘಟಿತ ಪ್ರಯತ್ನಗಳ ಮೂಲಕ ಗರಿಷ್ಠವಾಗಿ ಕಾರ್ಯಗತಗೊಳಿಸಲಾಗುತ್ತದೆ.

**6.13.** ಎಲ್ಲಾ ಕಡಿಮೆ ಪ್ರತಿನಿಧಿತ್ವ ಹೊಂದಿರುವ ಗುಂಪುಗಳಲ್ಲಿ ಮಹಿಳೆಯರಿದ್ದು, ಎಲ್ಲಾ ಎಸ್‌ಇಡಿಜಿಗಳ ಅರ್ಧದಷ್ಟು ಭಾಗವಾಗಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ದುರದೃಷ್ಟವಶಾತ್, ಎಸ್‌ಇಡಿಜಿಗಳು ಎದುರಿಸುತ್ತಿರುವ ಹೊರಗುಳಿಯುವಿಕೆ ಮತ್ತು ಅಸಮಾನತೆಯ ಸಮಸ್ಯೆಯ ಪ್ರಭಾವವು, ಅಲ್ಲಿನ ಮಹಿಳೆಯರ ವಿಷಯದಲ್ಲಿ ಇನ್ನೂ ತೀವ್ರವಾಗಿರುತ್ತದೆ. ಈ ನೀತಿಯು ಸಮಾಜದಲ್ಲಿ ಮತ್ತು ಸಾಮಾಜಿಕ ಸಂಪ್ರದಾಯಗಳನ್ನು ರೂಪಿಸುವಲ್ಲಿ ಮಹಿಳೆಯರು ವಹಿಸುವ ವಿಶೇಷ ಮತ್ತು ನಿರ್ಣಾಯಕ ಪಾತ್ರವನ್ನು ಗುರುತಿಸುತ್ತದೆ; ಆದ್ದರಿಂದ, ವರ್ತಮಾನದಲ್ಲಿ ಮಾತ್ರವಲ್ಲದೆ ಭವಿಷ್ಯದಲ್ಲೂ ಸಹ ಹೆಣ್ಣುಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವುದರಿಂದ, ಈ ಎಸ್‌ಇಡಿಜಿಗಳ ಶಿಕ್ಷಣದ ಮಟ್ಟವನ್ನು

ಹೆಚ್ಚಿಸಬಹುದಾಗಿದೆ. ಎಸ್‌ಇಡಿಜಿಗಳ ವಿದ್ಯಾರ್ಥಿಗಳಿಗಾಗಿ ನೀತಿಗಳು ಮತ್ತು ಯೋಜನೆಗಳನ್ನು ರೂಪಿಸುವಾಗ, ಅಲ್ಲಿನ ವಿದ್ಯಾರ್ಥಿನಿಯರಿಗೆ ವಿಶೇಷ ಆದ್ಯತೆ ನೀಡಬೇಕು ಎಂದು ನೀತಿಯು ಶಿಫಾರಸು ಮಾಡುತ್ತದೆ.

**6.14.** ಇದಲ್ಲದೆ, ಎಲ್ಲಾ ಹೆಣ್ಣುಮಕ್ಕಳಿಗೆ ಮತ್ತು ತೃತೀಯ ಲಿಂಗಿ ವಿದ್ಯಾರ್ಥಿಗಳಿಗೆ ಸಮಾನ ಗುಣಮಟ್ಟದ ಶಿಕ್ಷಣವನ್ನು ನೀಡುವಂತೆ ರಾಷ್ಟ್ರದ ಸಾಮರ್ಥ್ಯವನ್ನು ಹೆಚ್ಚಿಸಲು ಭಾರತ ಸರ್ಕಾರವು 'ಲಿಂಗತ್ವ ಒಳಗೊಳ್ಳುವಿಕೆಯ ನಿಧಿ' ಯನ್ನು ಸ್ಥಾಪಿಸುತ್ತದೆ. ಈ ನಿಧಿಯು ಕೇಂದ್ರ ಸರ್ಕಾರವು ನಿರ್ಧರಿಸಿದ ಆದ್ಯತೆಗಳನ್ನು ಕಾರ್ಯಗತಗೊಳಿಸಲು, ಹೆಣ್ಣುಮಕ್ಕಳು ಮತ್ತು ತೃತೀಯ ಲಿಂಗಿ ವಿದ್ಯಾರ್ಥಿಗಳು ಶಿಕ್ಷಣದ ಅವಕಾಶವನ್ನು ಪಡೆಯುವಂತೆ ಸಹಾಯ ಮಾಡಲು ರಾಜ್ಯಗಳಿಗೆ ಲಭ್ಯವಿರುತ್ತದೆ (ಉದಾಹರಣೆಗೆ ನೈರ್ಮಲ್ಯ ಮತ್ತು ಶೌಚಾಲಯ, ಬೈಸಿಕಲ್, ಷರತ್ತುಬದ್ಧ ನಗದು ವರ್ಗಾವಣೆ ಇತ್ಯಾದಿ). ಹೆಣ್ಣುಮಕ್ಕಳು ಮತ್ತು ತೃತೀಯ ಲಿಂಗಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುವಾಗ ಸ್ಥಳೀಯ ಸನ್ನಿವೇಶಕ್ಕನುಗುಣವಾಗಿ ಎದುರಾಗುವ ಅಡೆತಡೆಗಳನ್ನು ಪರಿಹರಿಸುವ ಪರಿಣಾಮಕಾರಿ ಸಮುದಾಯ ಆಧಾರಿತ ಮಧ್ಯವರ್ತನೆಗಳನ್ನು ಬೆಂಬಲಿಸಲು ಮತ್ತು ಅವುಗಳನ್ನು ವಿಸ್ತರಿಸಲು ರಾಜ್ಯಗಳಿಗೆ ಈ ನಿಧಿಯು ಸಹಾಯ ಮಾಡುತ್ತದೆ. ಇತರ ಎಸ್‌ಇಡಿಜಿಗಳಲ್ಲಿನ ಇಂತಹುದೇ ಸಮಸ್ಯೆಗಳನ್ನು ಪರಿಹರಿಸಲು, ಇದೇ ರೀತಿಯ 'ಸೇರ್ಪಡೆ ನಿಧಿ' ಯೋಜನೆಗಳನ್ನೂ ಸಹ ಅಭಿವೃದ್ಧಿಪಡಿಸಲಾಗುತ್ತದೆ. ಮೂಲಭೂತವಾಗಿ, ಈ ನೀತಿಯು ಯಾವುದೇ ಲಿಂಗ ಆಧಾರಿತ ಅಥವಾ ಇತರ ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ಗುಂಪಿನ ಮಕ್ಕಳಿಗೆ ಶಿಕ್ಷಣದ ಪ್ರವೇಶದಲ್ಲಿ (ವೃತ್ತಿಪರ ಶಿಕ್ಷಣವನ್ನು ಒಳಗೊಂಡಂತೆ) ಉಳಿದಿರುವ ಅಸಮಾನತೆಯನ್ನು ತೆಗೆದುಹಾಕುವ ಗುರಿಯನ್ನು ಹೊಂದಿದೆ.

**6.15.** ವಿದ್ಯಾರ್ಥಿಗಳು ದೂರದ ಪ್ರದೇಶದಿಂದ ಶಾಲೆಗೆ ಬರಬೇಕಾದ ಸ್ಥಳಗಳಲ್ಲಿ, ಎಲ್ಲಾ ಮಕ್ಕಳ ಸುರಕ್ಷತೆಗಾಗಿ ಸೂಕ್ತವಾದ ವ್ಯವಸ್ಥೆಗಳೊಂದಿಗೆ, ಬಾಲಕಿಯರೂ ಸೇರಿದಂತೆ, ವಿಶೇಷವಾಗಿ ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ಹಿನ್ನೆಲೆಯಿಂದ ಬಂದ ವಿದ್ಯಾರ್ಥಿಗಳಿಗೆ ಜವಾಹರ್ ನವೋದಯ ವಿದ್ಯಾಲಯದ ಮಾನದಂಡಕ್ಕೆ ಹೊಂದಿಕೆಯಾಗುವ ಉಚಿತ ವಸತಿ ಸೌಲಭ್ಯಗಳನ್ನು ಒದಗಿಸಲಾಗುವುದು. ಗುಣಮಟ್ಟದ ಶಾಲೆಗಳಲ್ಲಿ (12 ನೇ ತರಗತಿಯವರೆಗೆ) ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ಹಿನ್ನೆಲೆಯ ಬಾಲಕಿಯರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಕಸ್ತೂರ್ ಬಾ ಗಾಂಧಿ ಬಾಲಿಕಾ ವಿದ್ಯಾಲಯಗಳನ್ನು ಬಲಪಡಿಸಲಾಗುವುದು ಮತ್ತು ವಿಸ್ತರಿಸಲಾಗುವುದು. ಉನ್ನತ–ಗುಣಮಟ್ಟದ ಶೈಕ್ಷಣಿಕ ಅವಕಾಶಗಳನ್ನು ಹೆಚ್ಚಿಸಲು, ವಿಶೇಷವಾಗಿ ಮಹತ್ವಾಕಾಂಕ್ಷೆಯ ಜಿಲ್ಲೆಗಳು, ವಿಶೇಷ ಶಿಕ್ಷಣ ವಲಯಗಳು ಮತ್ತು ಇತರ ಅನನುಕೂಲಕರ ಪ್ರದೇಶಗಳು ಸೇರಿದಂತೆ, ದೇಶದಾದ್ಯಂತ ಹೆಚ್ಚುವರಿ ಜವಾಹರ್ ನವೋದಯ ವಿದ್ಯಾಲಯಗಳು ಮತ್ತು ಕೇಂದ್ರೀಯ ವಿದ್ಯಾಲಯಗಳನ್ನು ಸ್ಥಾಪಿಸಲಾಗುವುದು. ಕನಿಷ್ಠ ಒಂದು ವರ್ಷದ ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣದ ತರಗತಿಯನ್ನು ಹೊಂದಿರುವ ಶಾಲಾ ಪೂರ್ವ ವಿಭಾಗಗಳನ್ನು ವಿಶೇಷವಾಗಿ ಅನಾನುಕೂಲಕರ ಪ್ರದೇಶಗಳು ಸೇರಿದಂತೆ, ಕೇಂದ್ರೀಯ ವಿದ್ಯಾಲಯಗಳು ಮತ್ತು ರಾಷ್ಟ್ರದಾದ್ಯಂತದ ಇತರ ಪ್ರಾಥಮಿಕ ಶಾಲೆಗಳಲ್ಲಿ ಪ್ರಾರಂಭಿಸಲಾಗುವುದು.

**6.16.** ಇಸಿಸಿಇ ಮತ್ತು ಶಾಲಾ ವ್ಯವಸ್ಥೆಯಲ್ಲಿ ವಿಶೇಷ ಚೇತನದ ಮಕ್ಕಳ ಸೇರ್ಪಡೆ ಮತ್ತು ಸಮಾನ ಭಾಗವಹಿಸುವಿಕೆಯನ್ನು ಖಾತರಿಪಡಿಸುವುದಕ್ಕೂ ಹೆಚ್ಚಿನ ಆದ್ಯತೆ ನೀಡಲಾಗುವುದು. ವಿಶೇಷ ಚೇತನದ ಮಕ್ಕಳು, ಬುನಾದಿ ಹಂತದಿಂದ ಉನ್ನತ ಶಿಕ್ಷಣದವರೆಗೆ ನಿಯಮಿತ ಶಾಲಾ ಪ್ರಕ್ರಿಯೆಯಲ್ಲಿ ಸಂಪೂರ್ಣವಾಗಿ ಭಾಗವಹಿಸಲು ಕ್ರಮ ಕೈಗೊಳ್ಳಲಾಗುತ್ತದೆ. ವಿಶೇಷ ಚೇತನದ ವ್ಯಕ್ತಿಗಳ ಹಕ್ಕುಗಳ (ಆರ್‌ಪಿಡಬ್ಲುಡಿ) ಕಾಯ್ದೆ 2016, ಸಮನ್ವಯ ಶಿಕ್ಷಣವನ್ನು 'ಒಂದು ಶಿಕ್ಷಣ ವ್ಯವಸ್ಥೆ' ಎಂದು ವ್ಯಾಖ್ಯಾನಿಸುತ್ತಿದ್ದು, ಇದರಲ್ಲಿ ವಿಶೇಷ ಚೇತನದ ಮತ್ತು ಇತರ ವಿದ್ಯಾರ್ಥಿಗಳು ಒಟ್ಟಾಗಿ ಕಲಿಯುತ್ತಾರೆ ಮತ್ತು ವಿವಿಧ ರೀತಿಯ ವಿಕಲಾಂಗ ವಿದ್ಯಾರ್ಥಿಗಳ ಕಲಿಕೆಯ ಅಗತ್ಯಗಳನ್ನು ಪೂರೈಸಲು ಬೋಧನೆ ಮತ್ತು ಕಲಿಕೆಯ ವ್ಯವಸ್ಥೆಯಲ್ಲಿ ಸೂಕ್ತ ಬದಲಾವಣೆ ಮಾಡಲಾಗಿರುತ್ತದೆ. ಈ ನೀತಿಯು ಆರ್‌ಪಿಡಬ್ಲ್ಯುಡಿ ಕಾಯ್ದೆ–2016 ರ ನಿಬಂಧನೆಗಳಿಗೆ ಸಂಪೂರ್ಣ ಹೊಂದಿಕೆಯಾಗುತ್ತದೆ ಮತ್ತು ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅದರ ಎಲ್ಲಾ ಶಿಫಾರಸುಗಳನ್ನು ಅನುಮೋದಿಸುತ್ತದೆ. ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು ಸಿದ್ಧಪಡಿಸುವಾಗ, ಡಿ.ಇ.ಪಿ.ಡಬ್ಲೂ.ಡಿಯಂತಹ (Department of Empowerment of persons with Disabilities) ರಾಷ್ಟ್ರ ಸಂಸ್ಥೆಗಳ ತಜ್ಞ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸುವುದನ್ನು ಎನ್‌ಸಿಇಆರ್‌ಟಿ ಖಚಿತಪಡಿಸುತ್ತದೆ.

**6.17.** ಈ ನಿಟ್ಟಿನಲ್ಲಿ ಶಾಲೆಗಳು / ಶಾಲಾ ಸಂಕೀರ್ಣಗಳಿಗೆ ವಿಕಲಾಂಗ ಮಕ್ಕಳ ಸಂಯೋಜನೆ, ವಿವಿಧ ಅಂಗವೈಕಲ್ಯ ಪ್ರಕಾರಗಳಲ್ಲಿ ತರಬೇತಿ ಪಡೆದ ವಿಶೇಷ ಶಿಕ್ಷಕರ ನೇಮಕಾತಿ ಮತ್ತು ವಿಶೇಷವಾಗಿ ತೀವ್ರ ಅಥವಾ ಬಹು ವಿಶೇಷ ಚೇತನ ಮಕ್ಕಳಿಗೆ, ಅಗತ್ಯವಿರುವ ಕಡೆಗಳಲ್ಲಿ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಲು ಸಂಪನ್ಮೂಲಗಳನ್ನು ಒದಗಿಸಲಾಗುವುದು. ಆರ್‌ಪಿಡಬ್ಲುಡಿ ಕಾಯ್ದೆ–2016 ರ ಪ್ರಕಾರ, ಎಲ್ಲ ವಿಕಲಾಂಗ ಮಕ್ಕಳಿಗೆ ತಡೆ ಮುಕ್ತ ಪ್ರವೇಶ ಒದಗಿಸಲಾಗುತ್ತದೆ. ವಿವಿಧ

ವರ್ಗಗಳ ವಿಕಲಾಂಗ ಮಕ್ಕಳು ವಿಭಿನ್ನ ಅಗತ್ಯಗಳನ್ನು ಹೊಂದಿರುತ್ತಾರೆ. ಶಾಲೆಗಳು ಮತ್ತು ಶಾಲಾ ಸಂಕೀರ್ಣಗಳು, ಎಲ್ಲಾ ವಿಕಲಚೇತನ ಮಕ್ಕಳಿಗೆ ವಸತಿ ಮತ್ತು ಅವರ ಅಗತ್ಯಗಳಿಗೆ ತಕ್ಕಂತೆ ಬೆಂಬಲವನ್ನು ಒದಗಿಸಲು ಮತ್ತು ಅವರ ಸಂಪೂರ್ಣ ಭಾಗವಹಿಸುವಿಕೆ ಮತ್ತು ತರಗತಿಯಲ್ಲಿ ಸೇರ್ಪಡೆಗೊಳ್ಳಲು ಕಾರ್ಯನಿರ್ವಹಿಸುತ್ತವೆ ಮತ್ತು ಈ ಕಾರ್ಯದಲ್ಲಿ ಅವುಗಳಿಗೆ ಸೂಕ್ತ ಬೆಂಬಲ ನೀಡಲಾಗುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ, ವಿಕಲಚೇತನ ಮಕ್ಕಳು ತರಗತಿ ಕೋಣೆಗಳಲ್ಲಿ ಹೆಚ್ಚು ಸುಲಭವಾಗಿ ಹೊಂದಿಕೊಳ್ಳಲು ಮತ್ತು ಶಿಕ್ಷಕರು ಹಾಗೂ ಅವರ ಗೆಳೆಯರೊಂದಿಗೆ ತೊಡಗಿಸಿಕೊಳ್ಳುವಂತೆ ಸಹಾಯ ಮಾಡಲು ಅವಶ್ಯಕವಾದ ಸಹಾಯಕ ಸಾಧನಗಳು ಮತ್ತು ಸೂಕ್ತ ತಂತ್ರಜ್ಞಾನ ಆಧಾರಿತ ಪರಿಕರಗಳು, ಜೊತೆಗೆ ಸಾಕಷ್ಟು ಮತ್ತು ಭಾಷೆಗೆ ಸೂಕ್ತವಾದ ಬೋಧನಾ–ಕಲಿಕಾ ಸಾಮಗ್ರಿಗಳನ್ನು (ಉದಾ., ದಪ್ಪ ಅಕ್ಷರ ಮತ್ತು ಬ್ರೈಲ್ ಸ್ವರೂಪಗಳಲ್ಲಿನ ಪಠ್ಯಪುಸ್ತಕಗಳು) ಒದಗಿಸಲಾಗುವುದು. ಕಲೆ, ಕ್ರೀಡೆ, ಮತ್ತು ವೃತ್ತಿಪರ ಶಿಕ್ಷಣ ಸೇರಿದಂತೆ ಎಲ್ಲಾ ಶಾಲಾ ಚಟುವಟಿಕೆಗಳಿಗೆ ಇದು ಅನ್ವಯಿಸುತ್ತದೆ. ಭಾರತೀಯ ಸಂಕೇತ ಭಾಷೆಯನ್ನು ಕಲಿಸಲು ಮತ್ತು ಭಾರತೀಯ ಸಂಕೇತ ಭಾಷೆಯನ್ನು ಬಳಸಿಕೊಂಡು ಇತರ ಮೂಲ ವಿಷಯಗಳನ್ನು ಕಲಿಸಲು NIOS(National Institute of open schoolings) ಉತ್ತಮ–ಗುಣಮಟ್ಟದ ಮಾಡ್ಯೂಲ್ ಗಳನ್ನು ಅಭಿವೃದ್ಧಿಪಡಿಸುತ್ತದೆ. ವಿಕಲಚೇತನ ಮಕ್ಕಳ ಸುರಕ್ಷತೆ ಮತ್ತು ಭದ್ರತೆಯ ಬಗ್ಗೆ ಸಾಕಷ್ಟು ಗಮನ ನೀಡಲಾಗುವುದು.

**6.18.** ಆರ್‌ಪಿಡಬ್ಲುಡಿ ಕಾಯ್ದೆ–2016 ರ ಪ್ರಕಾರ ಮಾನದಂಡ ಅಂಗವೈಕಲ್ಯ ಹೊಂದಿರುವ ಮಕ್ಕಳಿಗೆ ನಿಯಮಿತ ಅಥವಾ ವಿಶೇಷ ಶಾಲಾ ಶಿಕ್ಷಣದ ಆಯ್ಕೆ ಇರುತ್ತದೆ. ವಿಶೇಷ ಶಿಕ್ಷಣ ತಜ್ಞರ ಜೊತೆಯಲ್ಲಿ ಸಂಪನ್ಮೂಲ ಕೇಂದ್ರಗಳು, ತೀವ್ರವಾದ ಅಥವಾ ಬಹು ವಿಶೇಷ ಚೇತನ ಹೊಂದಿರುವ ಮಕ್ಕಳಿಗೆ ಪುನರ್ವಸತಿ ಮತ್ತು ಶೈಕ್ಷಣಿಕ ಅಗತ್ಯಗಳನ್ನು ಒದಗಿಸುತ್ತವೆ ಮತ್ತು ಅಗತ್ಯಕ್ಕನುಗುಣವಾಗಿ ಅಂತಹ ವಿದ್ಯಾರ್ಥಿಗಳು ಉತ್ತಮ ಗುಣಮಟ್ಟದ ಗೃಹ ಶಿಕ್ಷಣ ಮತ್ತು ಕೌಶಲವನ್ನು ಪಡೆಯಲು, ಪಾಲಕರು / ಪೋಷಕರಿಗೆ ಸಹಾಯ ಮಾಡುತ್ತವೆ. ಶಾಲೆಗಳಿಗೆ ಹೋಗಲು ಸಾಧ್ಯವಾಗದ ತೀವ್ರ ಪ್ರಕಾರದ ವಿಶೇಷ ಚೇತನ ಮಕ್ಕಳಿಗೆ ಗೃಹಾಧಾರಿತ ಶಿಕ್ಷಣವು ಆಯ್ಕೆಯಾಗಿ ಮುಂದುವರಿಯುತ್ತದೆ. ಗೃಹಾಧಾರಿತ ಶಿಕ್ಷಣ ಪಡೆಯುತ್ತಿರುವ ಮಕ್ಕಳನ್ನು ಸಾಮಾನ್ಯ ವ್ಯವಸ್ಥೆಯಲ್ಲಿನ ಯಾವುದೇ ಮಗುವಿಗೆ ಸಮನಾಗಿ ಪರಿಗಣಿಸಬೇಕು. ಸಮಾನತೆ ಮತ್ತು ಅವಕಾಶದ ಸಮಾನತೆಯ ತತ್ವವನ್ನು ಬಳಸಿಕೊಂಡು ಅದರ ದಕ್ಷತೆ ಮತ್ತು ಪರಿಣಾಮಕಾರಿತ್ವಕ್ಕಾಗಿ ಗೃಹಾಧಾರಿತ ಶಿಕ್ಷಣದ ಲೆಕ್ಕಪರಿಶೋಧನೆ ಇರಬೇಕು. ಆರ್‌ಪಿಡಬ್ಲುಡಿ ಕಾಯ್ದೆ–2016 ರ ಪ್ರಕಾರ, ಈ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಗೃಹಾಧಾರಿತ ಶಾಲಾ ಶಿಕ್ಷಣಕ್ಕಾಗಿ ಮಾರ್ಗಸೂಚಿಗಳು ಮತ್ತು ಮಾನದಂಡಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಎಲ್ಲ ವಿಶೇಷ ಚೇತನ ಮಕ್ಕಳಿಗೆ ಶಿಕ್ಷಣ ಒದಗಿಸುವುದು ರಾಜ್ಯದ ಜವಾಬ್ದಾರಿಯಾಗಿದೆ ಎಂಬುದು ಸ್ಪಷ್ಟವಾಗಿದ್ದು, ಪಾಲಕರು ತಮ್ಮ ಮಕ್ಕಳ ಕಲಿಕೆಯ ಅಗತ್ಯಗಳಿಗೆ ಸಕ್ರಿಯವಾಗಿ ಬೆಂಬಲಿಸಲು ಅನುವು ಮಾಡಿಕೊಡುವಂತೆ, ಕಲಿಕಾ ಸಾಮಗ್ರಿಗಳ ವ್ಯಾಪಕ ಪ್ರಮಾಣದ ಪ್ರಸಾರದೊಂದಿಗೆ, ಪಾಲಕರಿಗೆ ಮಾಹಿತಿ ಒದಗಿಸಲು ತಂತ್ರಜ್ಞಾನ–ಆಧಾರಿತ ಪರಿಹಾರಗಳನ್ನು ಬಳಸಲಾಗುತ್ತದೆ.

**6.19.** ಹೆಚ್ಚಿನ ತರಗತಿ ಕೋಣೆಗಳಲ್ಲಿ ನಿರ್ದಿಷ್ಟವಾದ ಕಲಿಕಾ ನ್ಯೂನತೆ ಇರುವ ಮಕ್ಕಳಿದ್ದು, ಅವರಿಗೆ ನಿರಂತರ ಬೆಂಬಲ ಬೇಕಾಗುತ್ತದೆ. ಅಂತಹ ಬೆಂಬಲವು ಬೇಗ ದೊರಕಿದಷ್ಟು, ಪ್ರಗತಿಯ ಉತ್ತಮ ಸಾಧ್ಯತೆಗಳಿವೆ ಎಂದು ಸಂಶೋಧನೆ ತಿಳಿಸುತ್ತದೆ. ಅಂತಹ ಕಲಿಕಾ ನ್ಯೂನತೆಗಳನ್ನು ಮೊದಲೇ ಗುರುತಿಸಲು ಶಿಕ್ಷಕರಿಗೆ ಸಹಾಯ ಮಾಡಬೇಕು ಮತ್ತು ಅವುಗಳ ಪರಿಹಾರಕ್ಕಾಗಿ ನಿರ್ದಿಷ್ಟವಾಗಿ ಯೋಜಿಸಬೇಕು. ಈ ದಿಶೆಯಲ್ಲಿ ಕೈಗೊಳ್ಳಬೇಕಾದ ನಿರ್ದಿಷ್ಟ ಕಾರ್ಯಗಳು, ಪ್ರತಿ ಮಗುವಿನ ಸಾಮರ್ಥ್ಯಕ್ಕೆ ಹೊಂದಿಕೊಳ್ಳುವ ಪಠ್ಯಕ್ರಮದೊಂದಿಗೆ, ಸೂಕ್ತವಾದ ಮೌಲ್ಯಮಾಪನ ಮತ್ತು ಪ್ರಮಾಣೀಕರಣಕ್ಕಾಗಿ ಪರಿಸರ ವ್ಯವಸ್ಥೆಯನ್ನು ರಚಿಸುವುದು ಮತ್ತು ಮಕ್ಕಳು ತಮ್ಮದೇ ಆದ ವೇಗದಲ್ಲಿ ಕಲಿಯುವಂತೆ ಅವಕಾಶ ಮಾಡಿಕೊಡಲು ಸೂಕ್ತವಾದ ತಂತ್ರಜ್ಞಾನದ ಬಳಕೆಯನ್ನು ಒಳಗೊಂಡಿರುತ್ತವೆ. ಕಲಿಕಾ ನ್ಯೂನತೆ ಹೊಂದಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಸಮಾನ ಪ್ರವೇಶ ಮತ್ತು ಅವಕಾಶಗಳನ್ನು ಖಚಿತಪಡಿಸಿಕೊಳ್ಳಲು, ಪ್ರಸ್ತಾವಿತ ಹೊಸ ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ, PARAKH ಸೇರಿದಂತೆ ಮೌಲ್ಯಾಂಕನ ಮತ್ತು ಪ್ರಮಾಣೀಕರಣ ಏಜೆನ್ಸಿಗಳು ಸೂಕ್ತವಾದ ಮಾರ್ಗಸೂಚಿಗಳನ್ನು ರೂಪಿಸುತ್ತವೆ ಮತ್ತು ಬುನಾದಿ ಹಂತದಿಂದ ಉನ್ನತ ಶಿಕ್ಷಣದವರೆಗೆ (ಪ್ರವೇಶ ಪರೀಕ್ಷೆಗಳನ್ನು ಒಳಗೊಂಡಂತೆ), ಅಂತಹ ಮೌಲ್ಯಮಾಪನವನ್ನು ನಡೆಸಲು ಸೂಕ್ತವಾದ ಸಾಧನಗಳನ್ನು ಶಿಫಾರಸು ಮಾಡುತ್ತವೆ.

**6.20.** ಲಿಂಗ ಸಂವೇದನೆ ಮತ್ತು ಕಡಿಮೆ ಪ್ರತಿನಿಧಿತ್ವ ಹೊಂದಿರುವ ಎಲ್ಲಾ ಗುಂಪುಗಳ ಕುರಿತು ಸೂಕ್ಷ್ಮ ಸಂವೇದನೆಯನ್ನು ಒಳಗೊಂಡಂತೆ, ನಿರ್ದಿಷ್ಟ ಅಂಗವೈಕಲ್ಯ ಹೊಂದಿರುವ ಮಕ್ಕಳಿಗೆ (ಕಲಿಕಾ ನ್ಯೂನತೆಗಳನ್ನು ಒಳಗೊಂಡಂತೆ) ಹೇಗೆ ಕಲಿಸಬೇಕು ಎಂಬ ಅರಿವು ಮತ್ತು ಜ್ಞಾನವು ಎಲ್ಲಾ ಶಿಕ್ಷಕ–ಶಿಕ್ಷಣ ಕಾರ್ಯಕ್ರಮಗಳ ಅವಿಭಾಜ್ಯ ಅಂಗವಾಗಲಿದೆ.

**6.21.** ಪರ್ಯಾಯ ಶಾಲೆಗಳ ಸಂಪ್ರದಾಯ ಅಥವಾ ಪರ್ಯಾಯ ಬೋಧನಾ ಶೈಲಿಗಳನ್ನು ಸಂರಕ್ಷಿಸಲು ಅವುಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಅದೇ ಸಮಯದಲ್ಲಿ, ಉನ್ನತ ಶಿಕ್ಷಣದಲ್ಲಿ ಈ ಶಾಲೆಗಳಿಂದ ಮಕ್ಕಳ ಪ್ರತಿನಿಧಿತ್ವವನ್ನು ಹೆಚ್ಚಿಸಲು, ಎನ್.ಸಿ.ಎಫ್.ಎಸ್.ಇ(NCFSE - National Curriculum Framework for School Education) ನಿಗದಿಪಡಿಸಿದ ವಿಷಯ ಮತ್ತು ಕಲಿಕೆಯ ಕ್ಷೇತ್ರಗಳನ್ನು ತಮ್ಮ ಪಠ್ಯಕ್ರಮದಲ್ಲಿ ಸಂಯೋಜಿಸಲು ಅವರಿಗೆ ಬೆಂಬಲ ನೀಡಲಾಗುವುದು. ನಿರ್ದಿಷ್ಟವಾಗಿ, ಈ ಶಾಲೆಗಳು ಬಯಸಿದಂತೆ ಪಠ್ಯಕ್ರಮದಲ್ಲಿ ವಿಜ್ಞಾನ, ಗಣಿತ, ಸಮಾಜ ಅಧ್ಯಯನಗಳು, ಹಿಂದಿ, ಇಂಗ್ಲಿಷ್, ರಾಜ್ಯ ಭಾಷೆಗಳು ಅಥವಾ ಇತರ ಸಂಬಂಧಿತ ವಿಷಯಗಳನ್ನು ಪರಿಚಯಿಸಲು ಹಣಕಾಸಿನ ನೆರವು ನೀಡಲಾಗುವುದು. ಈ ಶಾಲೆಗಳಲ್ಲಿ ಕಲಿಯುವ ಮಕ್ಕಳು, 1–12ನೇ ತರಗತಿಗಳಿಗಾಗಿ ಯೋಜಿಸಲಾದ ಕಲಿಕಾ ಫಲಗಳನ್ನು ಸಾಧಿಸಲು ಇದು ಅನುವು ಮಾಡಿಕೊಡುತ್ತದೆ. ಇದಲ್ಲದೆ, ಅಂತಹ ಶಾಲೆಗಳಲ್ಲಿನ ವಿದ್ಯಾರ್ಥಿಗಳನ್ನು ರಾಜ್ಯ ಅಥವಾ ಇತರ ಮಂಡಳಿಯ ಪರೀಕ್ಷೆಗಳು ಮತ್ತು ಎನ್.ಟಿ.ಎ(NTA-National Testing Agency) ಕೈಗೊಳ್ಳುವ ಮೌಲ್ಯಮಾಪನಗಳಿಗೆ ಒಳಗಾಗುವಂತೆ ಮತ್ತು ಆ ಮೂಲಕ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ದಾಖಲಾಗಲು ಪ್ರೋತ್ಸಾಹಿಸಲಾಗುತ್ತದೆ. ವಿಜ್ಞಾನ, ಗಣಿತ, ಭಾಷೆ ಮತ್ತು ಸಮಾಜ ಅಧ್ಯಯನಗಳ ಬೋಧನೆಯಲ್ಲಿ ಹೊಸ ಬೋಧನಾ ವಿಧಾನಗಳ ಕುರಿತು ದೃಷ್ಟಿಕೋನ ಸೇರಿದಂತೆ, ಶಿಕ್ಷಕರ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಗ್ರಂಥಾಲಯಗಳು ಮತ್ತು ಪ್ರಯೋಗಾಲಯಗಳನ್ನು ಬಲಪಡಿಸಲಾಗುತ್ತದೆ ಮತ್ತು ಪುಸ್ತಕಗಳು, ನಿಯತಕಾಲಿಕಗಳು ಮುಂತಾದ ಸಾಕಷ್ಟು ಓದುವ ಸಾಮಗ್ರಿಗಳು ಮತ್ತು ಇತರ ಬೋಧನಾ–ಕಲಿಕಾ ಸಾಮಗ್ರಿಗಳನ್ನು ಒದಗಿಸಲಾಗುತ್ತದೆ.

**6.22.** ಮೇಲಿನ ಎಲ್ಲಾ ನೀತಿ ಅಂಶಗಳಿಗೆ ಸಂಬಂಧಿಸಿದಂತೆ, ಎಸ್‌ಇಡಿಜಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಶೈಕ್ಷಣಿಕ ಅಭಿವೃದ್ಧಿಯಲ್ಲಿನ ಅಸಮಾನತೆಯನ್ನು ಕಡಿಮೆ ಮಾಡಲು ವಿಶೇಷ ಗಮನ ನೀಡಲಾಗುವುದು. ಶಾಲಾ ಶಿಕ್ಷಣದಲ್ಲಿ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಪ್ರಯತ್ನಗಳ ಭಾಗವಾಗಿ, ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿಗಳ ಪ್ರವೇಶವನ್ನು ಸುಲಭಗೊಳಿಸಲು, ವಿಶೇಷವಾಗಿ ಪ್ರೌಢ ಶಿಕ್ಷಣ ಹಂತದಲ್ಲಿನ ಎಲ್ಲಾ ಎಸ್‌ಇಡಿಜಿಗಳಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ, ನಿಗದಿಪಡಿಸಿದ ಪ್ರದೇಶಗಳಲ್ಲಿ ವಿಶೇಷ ವಸತಿ ನಿಲಯಗಳು, ಸೇತುಬಂಧ ಕಾರ್ಯಕ್ರಮಗಳು ಮತ್ತು ಶುಲ್ಕ ವಿನಾಯಿತಿ ಹಾಗೂ ವಿದ್ಯಾರ್ಥಿವೇತನದ ಮೂಲಕ ಹಣಕಾಸಿನ ನೆರವನ್ನು ದೊಡ್ಡ ಪ್ರಮಾಣದಲ್ಲಿ ನೀಡಲಾಗುವುದು.

**6.23.** ರಾಜ್ಯ ಸರ್ಕಾರಗಳು ರಕ್ಷಣಾ ಸಚಿವಾಲಯದ ಸಹಕಾರದೊಂದಿಗೆ, ಬುಡಕಟ್ಟು ಪ್ರಾಬಲ್ಯದ ಪ್ರದೇಶಗಳನ್ನು ಒಳಗೊಂಡಂತೆ, ಮಾಧ್ಯಮಿಕ ಮತ್ತು ಉನ್ನತ ಮಾಧ್ಯಮಿಕ ಶಾಲೆಗಳಲ್ಲಿ ಎನ್‌ಸಿಸಿ ವಿಭಾಗಗಳನ್ನು ತೆರೆಯಲು ಪ್ರೋತ್ಸಾಹಿಸಬಹುದು. ಇದು ವಿದ್ಯಾರ್ಥಿಗಳ ಸಹಜ ಪ್ರತಿಭೆ ಮತ್ತು ವಿಶಿಷ್ಟ ಸಾಮರ್ಥ್ಯವನ್ನು ಬಳಸಿಕೊಳ್ಳಲು ಅನುವು ಮಾಡಿಕೊಡುವುದರೊಂದಿಗೆ ರಕ್ಷಣಾ ಪಡೆಗಳಲ್ಲಿ ಯಶಸ್ವಿ ವೃತ್ತಿಜೀವನದ ಆಕಾಂಕ್ಷೆಗೆ ಸಹಾಯ ಮಾಡುತ್ತದೆ.

**6.24.** ಎಸ್‌ಇಡಿಜಿಗಳಲ್ಲಿನ ವಿದ್ಯಾರ್ಥಿಗಳಿಗೆ ಲಭ್ಯವಿರುವ ಎಲ್ಲಾ ಪ್ರಕಾರದ ವಿದ್ಯಾರ್ಥಿವೇತನಗಳು, ಇತರ ಅವಕಾಶಗಳು ಮತ್ತು ಯೋಜನೆಗಳ ಕುರಿತು ಎಲ್ಲಾ ವಿದ್ಯಾರ್ಥಿಗಳಿಗೆ ತಿಳಿಸಲು ಒಂದೇ ಸಂಸ್ಥೆಯಿಂದ ಸಮನ್ವಯಗೊಳಿಸಲಾಗುತ್ತದೆ ಮತ್ತು ಒಂದೇ ವೆಬ್‌ಸೈಟ್ ನಲ್ಲಿ ಈ ಕುರಿತು ಮಾಹಿತಿ ನೀಡಲಾಗುತ್ತದೆ. ಇದರಿಂದಾಗಿ ಎಲ್ಲಾ ವಿದ್ಯಾರ್ಥಿಗಳಿಗೆ ಏಕ ಕಾಲದಲ್ಲಿ ಈ ಕುರಿತು ತಿಳಿಸಿಕೊಡುವ ಮೂಲಕ ಅರ್ಹತೆಗೆ ಅನುಗುಣವಾಗಿ ಅಂತಹ 'ಏಕ ಗವಾಕ್ಷಿ ವ್ಯವಸ್ಥೆಯಲ್ಲಿ' ಸರಳೀಕೃತ ರೀತಿಯಲ್ಲಿ ಅರ್ಜಿ ಸಲ್ಲಿಸುವುದನ್ನು ಖಚಿತಪಡಿಸಿಕೊಳ್ಳಬಹುದಾಗಿದೆ.

**6.25.** ಎಲ್ಲಾ ಎಸ್‌ಇಡಿಜಿಗಳಲ್ಲಿ ಸಂಪೂರ್ಣ ಒಳಗೊಳ್ಳುವಿಕೆ ಮತ್ತು ಸಮಾನತೆಯನ್ನು ಸಾಧಿಸಲು ಮೇಲಿನ ಎಲ್ಲಾ ನೀತಿಗಳು ಮತ್ತು ಕ್ರಮಗಳು ಸಂಪೂರ್ಣವಾಗಿ ನಿರ್ಣಾಯಕವಾಗಿವೆ – ಆದರೆ ಅವು ಸಾಕಾಗುವುದಿಲ್ಲ. ಶಾಲೆಯ ಸಂಸ್ಕೃತಿಯಲ್ಲಿ ಬದಲಾವಣೆ ಕೂಡ ಮಾಡಬೇಕಾಗುತ್ತದೆ. ಶಿಕ್ಷಕರು, ಪ್ರಾಂಶುಪಾಲರು, ಆಡಳಿತಗಾರರು, ಸಲಹೆಗಾರರು ಮತ್ತು ವಿದ್ಯಾರ್ಥಿಗಳು ಸೇರಿದಂತೆ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಭಾಗವಹಿಸುವ ಎಲ್ಲರಿಗೂ, ಎಲ್ಲಾ ವಿದ್ಯಾರ್ಥಿಗಳ ಅವಶ್ಯಕತೆಗಳು, ಸೇರ್ಪಡೆ ಮತ್ತು ಸಮಾನತೆಯ ಪರಿಕಲ್ಪನೆಗಳು ಮತ್ತು ಎಲ್ಲಾ ವ್ಯಕ್ತಿಗಳ ಗೌರವ,ಘನತೆ ಮತ್ತು ಗೌಪ್ಯತೆಯ ಕುರಿತು ಸಂವೇದನಾ ಶೀಲರನ್ನಾಗಿಸಲಾಗುವುದು. ಅಂತಹ ಶೈಕ್ಷಣಿಕ ಸಂಸ್ಕೃತಿಯು, ವಿದ್ಯಾರ್ಥಿಗಳು ಸಬಲ ವ್ಯಕ್ತಿಗಳಾಗುವ ಮೂಲಕ ಸಮಾಜವು ತನ್ನ ಅತ್ಯಂತ ದುರ್ಬಲ ನಾಗರಿಕರ ಕಡೆಗೆ ಜವಾಬ್ದಾರಿಯುತವಾಗಿ ವರ್ತಿಸುವಂತೆ ಅನುವು ಮಾಡಿಕೊಡಲು ಸಹಾಯ ಮಾಡುವ ಅತ್ಯುತ್ತಮ ಮಾರ್ಗವನ್ನು ಒದಗಿಸುತ್ತದೆ. ಸೇರ್ಪಡೆ ಮತ್ತು ಸಮಾನತೆಗಳು ಶಿಕ್ಷಕರ ಶಿಕ್ಷಣದ ಪ್ರಮುಖ ಅಂಶವಾಗಿರುತ್ತವೆ (ಮತ್ತು ಶಾಲೆಗಳಲ್ಲಿನ ಎಲ್ಲಾ ನಾಯಕತ್ವ, ಆಡಳಿತಾತ್ಮಕ ಮತ್ತು ಇತರ ಹುದ್ದೆಗಳಿಗೆ ತರಬೇತಿ). ಎಲ್ಲಾ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಮಾದರಿಗಳನ್ನು ರೂಪಿಸುವ ಸಲುವಾಗಿ ಎಸ್‌ಇಡಿಜಿಗಳಿಂದ ಉತ್ತಮ ಗುಣಮಟ್ಟದ ಶಿಕ್ಷಕರು ಮತ್ತು ನಾಯಕರನ್ನು ನೇಮಕ ಮಾಡಲು ಪ್ರಯತ್ನಿಸಲಾಗುವುದು.

**6.26.** ಶಿಕ್ಷಕರು ತರಬೇತಿ ಪಡೆದ ಸಾಮಾಜಿಕ ಕಾರ್ಯಕರ್ತರು ಹಾಗೂ ಸಲಹೆಗಾರರು ಸೃಷ್ಟಿಸಿದ ಈ ಹೊಸ ಶಾಲಾ ಸಂಸ್ಕೃತಿಯ ಮೂಲಕ ಮತ್ತು ಸಮನ್ವಯ ಶಾಲಾ ಪಠ್ಯಕ್ರಮವನ್ನು ತರಲು ಮಾಡಲಾದ ಬದಲಾವಣೆಗಳ ಮೂಲಕ ವಿದ್ಯಾರ್ಥಿಗಳನ್ನು ಸಂವೇದನಾಶೀಲಗೊಳಿಸಲಾಗುತ್ತದೆ. ಶಾಲಾ ಪಠ್ಯಕ್ರಮವು ಎಲ್ಲಾ ವ್ಯಕ್ತಿಗಳಿಗೆ ಗೌರವ ನೀಡುವುದು, ಅನುಭೂತಿ, ಸಹನೆ, ಮಾನವ ಹಕ್ಕುಗಳು, ಲಿಂಗ ಸಮಾನತೆ, ಅಹಿಂಸೆ, ಜಾಗತಿಕ ಪೌರತ್ವ, ಸೇರ್ಪಡೆ ಮತ್ತು ಸಮಾನತೆಯಂತಹ ಮಾನವೀಯ ಮೌಲ್ಯಗಳ ವಿಷಯವನ್ನು ಒಳಗೊಂಡಿರುತ್ತದೆ. ವೈವಿಧ್ಯತೆಯ ಬಗ್ಗೆ ಸೂಕ್ಷ್ಮತೆಯನ್ನು ಬೆಳೆಸಲು ಮತ್ತು ಗೌರವ ಮೂಡಿಸಲು ವಿವಿಧ ಸಂಸ್ಕೃತಿಗಳು, ಧರ್ಮಗಳು, ಭಾಷೆಗಳು, ಲಿಂಗ ಗುರುತುಗಳು ಇತ್ಯಾದಿಗಳ ಬಗ್ಗೆ ಹೆಚ್ಚು ವಿವರವಾದ ಜ್ಞಾನವನ್ನೂ ಸಹ ಇದು ಒಳಗೊಂಡಿರುತ್ತದೆ. ಶಾಲಾ ಪಠ್ಯಕ್ರಮದಲ್ಲಿನ ಯಾವುದೇ ಪಕ್ಷಪಾತಗಳು ಮತ್ತು ಪೂರ್ವಾಗ್ರಹ ಪೀಡಿತ ಭಾವನೆಗಳನ್ನು ತೆಗೆದುಹಾಕಲಾಗುತ್ತದೆ ಮತ್ತು ಎಲ್ಲಾ ಸಮುದಾಯಗಳಿಗೆ ಸೂಕ್ತವಾದ ಮತ್ತು ಸಂಬಂಧಿತವಾದ ಹೆಚ್ಚಿನ ವಿಷಯಗಳನ್ನು ಸೇರಿಸಲಾಗುತ್ತದೆ.

## 7. ಶಾಲಾ ಸಂಕೀರ್ಣ/ಸಮೂಹಗಳ ಮೂಲಕ ಸಂಪನ್ಮೂಲಗಳ ಸದುಪಯೋಗ ಮತ್ತು ಪರಿಣಾಮಕಾರಿ ಆಡಳಿತ

**7.1.** ಪ್ರಸ್ತುತ ಸಮಗ್ರ ಶಿಕ್ಷಣ ಯೋಜನೆಯಡಿ ಸೇರ್ಪಡೆಯಾದ ಸರ್ವ ಶಿಕ್ಷಣ ಅಭಿಯಾನ ಮತ್ತು ರಾಜ್ಯಗಳ ಇತರ ಪ್ರಮುಖ ಪ್ರಯತ್ನಗಳಿಂದಾಗಿ, ದೇಶದ ಪ್ರತಿಯೊಂದು ಜನವಸತಿ ಪ್ರದೇಶದಲ್ಲಿನ ಪ್ರಾಥಮಿಕ ಶಾಲೆಗಳ ಸ್ಥಾಪನೆಯಿಂದಾಗಿ ಪ್ರಾಥಮಿಕ ಶಾಲೆಗಳಿಗೆ ಸಾರ್ವತ್ರಿಕ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿದೆ. ಅಲ್ಲದೇ, ಇದು ಹಲವಾರು ಸಣ್ಣ ಶಾಲೆಗಳ ಸ್ಥಾಪನೆಗೂ ಕಾರಣವಾಗಿದೆ. U-DISE 2016–17ರ ಮಾಹಿತಿಯ ಪ್ರಕಾರ, ದೇಶದ ಸುಮಾರು 28% ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮತ್ತು 14.8% ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 30 ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದಾರೆ. ಪ್ರಾಥಮಿಕ ಶಾಲಾ ವ್ಯವಸ್ಥೆಯಲ್ಲಿ (ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ, ಅಂದರೆ, 1–8ನೇ ತರಗತಿಗಳು) ತರಗತಿವಾರು ಸರಾಸರಿ ವಿದ್ಯಾರ್ಥಿಗಳ ಸಂಖ್ಯೆಯು ಸುಮಾರು 14 ಆಗಿದ್ದು, ಅದರಲ್ಲಿ ಗಮನಾರ್ಹ ಪ್ರಮಾಣದ ಸಂಖ್ಯೆಯ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು 6 ಕ್ಕಿಂತ ಕಡಿಮೆ ಇದೆ; 2016–17ರ ಅವಧಿಯಲ್ಲಿ, 1,08,017 ಏಕ–ಶಿಕ್ಷಕ ಶಾಲೆಗಳಿದ್ದು, ಅವುಗಳಲ್ಲಿ ಹೆಚ್ಚಿನವು (85743) 1–5ನೇ ತರಗತಿಗಳನ್ನು ಹೊಂದಿರುವ ಪ್ರಾಥಮಿಕ ಶಾಲೆಗಳಾಗಿದ್ದವು.

**7.2.** ಈ ಸಣ್ಣ ಶಾಲೆಗಳು, ಶಿಕ್ಷಕರ ನಿಯೋಜನೆ ಮತ್ತು ನಿರ್ಣಾಯಕವಾದ ಭೌತಿಕ ಸಂಪನ್ಮೂಲಗಳನ್ನು ಒದಗಿಸುವ ದೃಷ್ಟಿಯಿಂದ ಉತ್ತಮ ಶಾಲೆಗಳನ್ನು ನಡೆಸಲು ಆರ್ಥಿಕವಾಗಿ ಅನುಕೂಲಕರವಲ್ಲದ ಶಾಲೆಗಳಾಗಿವೆ ಮತ್ತು ಸಂಕೀರ್ಣ ಕಾರ್ಯಾಚರಣೆಯಿಂದ ಕೂಡಿವೆ. ಇಂತಹ ಶಾಲೆಗಳಲ್ಲಿನ ಶಿಕ್ಷಕರು ಸಾಮಾನ್ಯವಾಗಿ ಏಕಕಾಲದಲ್ಲಿ ಅನೇಕ ತರಗತಿಗಳಿಗೆ ಕಲಿಸುತ್ತಾರೆ, ಮತ್ತು ಅವರಿಗೆ ಯಾವುದೇ ಪೂರ್ವ ಹಿನ್ನೆಲೆ ಇಲ್ಲದ ವಿಷಯಗಳನ್ನು ಒಳಗೊಂಡಂತೆ ಅನೇಕ ವಿಷಯಗಳನ್ನು ಕಲಿಸುತ್ತಾರೆ; ಸಂಗೀತ, ಕಲೆಗಳು ಮತ್ತು ಕ್ರೀಡೆಗಳಂತಹ ಪ್ರಮುಖ ವಿಷಯಗಳನ್ನು ಹೆಚ್ಚಾಗಿ ಕಲಿಸಲಾಗುವುದಿಲ್ಲ; ಮತ್ತು ಪ್ರಯೋಗಾಲಯ ಮತ್ತು ಕ್ರೀಡಾ ಉಪಕರಣಗಳು ಹಾಗೂ ಗ್ರಂಥಾಲಯ ಪುಸ್ತಕಗಳಂತಹ ಭೌತಿಕ ಸಂಪನ್ಮೂಲಗಳು ಇಂತಹ ಶಾಲೆಗಳಲ್ಲಿ ಲಭ್ಯವಿರುವದಿಲ್ಲ.

**7.3.** ಸಣ್ಣ ಶಾಲೆಗಳ ಪ್ರತ್ಯೇಕತೆಯಿಂದ, ಶಿಕ್ಷಣ ಮತ್ತು ಬೋಧನಾ–ಕಲಿಕಾ ಪ್ರಕ್ರಿಯೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸಮುದಾಯದಲ್ಲಿದ್ದಾಗ ಮತ್ತು ತಂಡಗಳಲ್ಲಿದ್ದಾಗ ಉತ್ತಮವಾಗಿ ಕಾರ್ಯನಿರ್ವಹಿಸುತ್ತಾರೆ. ಸಣ್ಣ ಶಾಲೆಗಳು ಆಡಳಿತ ಮತ್ತು ನಿರ್ವಹಣೆಯ ದೃಷ್ಟಿಯಿಂದ ವ್ಯವಸ್ಥಿತ ಸಮಸ್ಯೆಯನ್ನೂ ಸಹ ಎದುರಿಸುತ್ತವೆ. ಭೌಗೋಳಿಕ ಪ್ರಸರಣ, ಸವಾಲಿನ ಪ್ರವೇಶ ಪರಿಸ್ಥಿತಿಗಳು ಮತ್ತು ಹೆಚ್ಚಿನ ಸಂಖ್ಯೆಯ ಶಾಲೆಗಳಿಂದಾಗಿ, ಎಲ್ಲಾ ಶಾಲೆಗಳನ್ನು ಸಮಾನವಾಗಿ ತಲುಪಲು ಕಷ್ಟವಾಗುತ್ತದೆ. ಆಡಳಿತಾತ್ಮಕ ರಚನೆಯನ್ನು ಶಾಲೆಯ ಸಂಖ್ಯೆಯಲ್ಲಿನ ಹೆಚ್ಚಳದೊಂದಿಗೆ ಅಥವಾ ಸಮಗ್ರ ಶಿಕ್ಷಣ ಯೋಜನೆಯ ಏಕೀಕೃತ ರಚನೆಯೊಂದಿಗೆ ಜೋಡಿಸಲಾಗಿಲ್ಲ.

**7.4.** ಶಾಲೆಗಳ ಕ್ರೋಢೀಕರಣ ಆಗಾಗ್ಗೆ ಚರ್ಚಿಸಲ್ಪಡುವ ಒಂದು ಆಯ್ಕೆಯಾಗಿದ್ದರೂ, ಅದನ್ನು ಚೆನ್ನಾಗಿ ಯೋಚಿಸಿ ಮತ್ತು ಲಭ್ಯತೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಖಚಿತಪಡಿಸಿಕೊಂಡಾಗ ಮಾತ್ರ ಕೈಗೊಳ್ಳಬೇಕು. ಆದಾಗ್ಯೂ, ಇಂತಹ ಕ್ರಮಗಳು ಸೀಮಿತ ಕ್ರೋಢಿಕರಣಕ್ಕೆ ಮಾತ್ರ ಕಾರಣವಾಗಬಹುದು ಮತ್ತು ಹೆಚ್ಚಿನ ಸಂಖ್ಯೆಯ ಸಣ್ಣ ಶಾಲೆಗಳಿಂದಾಗಿ ಉದ್ಭವಿಸುವ ರಚನಾತ್ಮಕ ಸಮಸ್ಯೆ ಮತ್ತು ಸವಾಲುಗಳನ್ನು ಪರಿಹರಿಸುವುದಿಲ್ಲ.

**7.5.** ರಾಜ್ಯ ಸರ್ಕಾರಗಳು ಶಾಲೆಗಳನ್ನು ಗುಂಪು ಮಾಡಲು ಅಥವಾ ಯೋಜನಾ ಬದ್ಧಗೊಳಿಸಲು ನವೀನ ಕಾರ್ಯವಿಧಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಈ ಸವಾಲುಗಳನ್ನು 2025 ರ ವೇಳೆಗೆ ಪರಿಹರಿಸುತ್ತವೆ. ಈ ಮಧ್ಯವರ್ತನೆಯ ಹಿಂದಿನ ಉದ್ದೇಶವು ಪ್ರತಿ ಶಾಲೆಯಲ್ಲಿ: (ಎ) ಕಲೆ, ಸಂಗೀತ ವಿಜ್ಞಾನ, ಕ್ರೀಡೆ, ಭಾಷೆ, ವೃತ್ತಿಪರ ವಿಷಯಗಳು, ಇತ್ಯಾದಿ ಸೇರಿದಂತೆ ಎಲ್ಲಾ ವಿಷಯಗಳನ್ನು ಕಲಿಸಲು ಸಾಕಷ್ಟು ಸಂಖ್ಯೆಯ ಶಿಕ್ಷಕರು (ಹಂಚಿಕೊಳ್ಳಲಾದ ಅಥವಾ ಇತರೇ) ಮತ್ತು ಸಲಹೆಗಾರರು / ತರಬೇತಿ ಪಡೆದ ಸಾಮಾಜಿಕ ಕಾರ್ಯಕರ್ತರು ಇರುವುದನ್ನು; (ಬಿ) ಗ್ರಂಥಾಲಯ, ವಿಜ್ಞಾನ ಪ್ರಯೋಗಾಲಯಗಳು, ಗಣಕಯಂತ್ರ ಪ್ರಯೋಗಾಲಯಗಳು, ಕೌಶಲ್ಯ ಪ್ರಯೋಗಾಲಯಗಳು, ಆಟದ ಮೈದಾನಗಳು, ಕ್ರೀಡಾ ಉಪಕರಣಗಳು ಮತ್ತು ಸೌಲಭ್ಯಗಳಂತಹ ಸಾಕಷ್ಟು ಸಂಪನ್ಮೂಲಗಳು ಇರುವುದನ್ನು (ಹಂಚಿಕೊಳ್ಳಲಾದ ಅಥವಾ ಇತರೇ); (ಸಿ) ಜಂಟಿಯಾಗಿ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜಿಸುವುದು, ಬೋಧನಾ–ಕಲಿಕಾ ವಿಷಯವನ್ನು ಹಂಚಿಕೊಳ್ಳುವುದು, ಜಂಟಿಯಾಗಿ ವಸ್ತು ವಿಷಯ ಅಭಿವೃದ್ಧಿ, ಕಲೆ ಮತ್ತು ವಿಜ್ಞಾನ ಪ್ರದರ್ಶನಗಳು, ಕ್ರೀಡಾ ಸಭೆಗಳು, ರಸಪ್ರಶ್ನೆಗಳು, ಚರ್ಚೆಗಳು ಮತ್ತು ಮೇಳಗಳು ಮುಂತಾದ ಜಂಟಿ ಚಟುವಟಿಕೆಗಳನ್ನು ನಡೆಸುವ ಮೂಲಕ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಶಾಲೆಗಳ ಪ್ರತ್ಯೇಕತೆಯನ್ನು ಹೋಗಲಾಡಿಸಲು ಸಮುದಾಯದ ಪ್ರಜ್ಞೆಯನ್ನು ಬೆಳೆಸಿರುವುದನ್ನು; (ಡಿ) ವಿಶೇಷ ಚೇತನ ಮಕ್ಕಳ ಶಿಕ್ಷಣಕ್ಕಾಗಿ ಶಾಲೆಗಳಾದ್ಯಂತ ಸಹಕಾರ ಮತ್ತು ಬೆಂಬಲ; ಮತ್ತು (ಇ), ಪ್ರಾಂಶುಪಾಲರು, ಶಿಕ್ಷಕರು ಮತ್ತು ಶಾಲೆಗಳ ಪ್ರತಿಯೊಂದು ಗುಂಪಿನೊಳಗಿನ ಇತರ ಭಾಗೀದಾರರಿಗೆ ಎಲ್ಲಾ ನಿರ್ಧಾರಗಳನ್ನು ತೆಗೆದುಕೊಳ್ಳುವ ಜವಾಬ್ದಾರಿಯನ್ನು ವಿನಿಯೋಗಿಸುವುದರ ಮೂಲಕ ಮತ್ತು ಬುನಾದಿ ಹಂತದಿಂದ ಮಾಧ್ಯಮಿಕ ಹಂತದವರೆಗೆ ಅಂತಹ ಶಾಲೆಗಳ ಗುಂಪನ್ನು, ಸಂಯೋಜಿತ ಅರೆ ಸ್ವಾಯತ್ತ ಘಟಕವಾಗಿ ಪರಿಗಣಿಸುವ ಮೂಲಕ ಶಾಲಾ ವ್ಯವಸ್ಥೆಯ ಆಡಳಿತದಲ್ಲಿ ಸುಧಾರಣೆ ತರುವುದನ್ನು ಖಚಿತಪಡಿಸಿಕೊಳ್ಳುವುದಾಗಿದೆ.

**7.6.** ಮೇಲಿನ ಉದ್ದೇಶವನ್ನು ಸಾಧಿಸಲು ಅನುಸರಿಸಬಹುದಾದ ಒಂದು ಸಂಭಾವ್ಯ ಕಾರ್ಯವಿಧಾನವೆಂದರೆ, ಐದರಿಂದ ಹತ್ತು ಕಿಲೋಮೀಟರ್ ವ್ಯಾಪ್ತಿಯಲ್ಲಿ ಒಂದು ಮಾಧ್ಯಮಿಕ ಶಾಲೆ ಮತ್ತು ಅದರ ನೆರೆಹೊರೆಯಲ್ಲಿರುವ ಅಂಗನವಾಡಿ ಸೇರಿದಂತೆ ಕೆಳ ಹಂತದ ತರಗತಿಗಳನ್ನು ಹೊಂದಿರುವ ಇತರ ಎಲ್ಲಾ ಶಾಲೆಗಳನ್ನು ಒಳಗೊಂಡಿರುವ ಶಾಲಾ ಸಂಕೀರ್ಣ ಎಂದು ಕರೆಯಲ್ಪಡುವ ಶಾಲೆಗಳ ಒಂದು ಗುಂಪನ್ನು ರಚಿಸುವುದಾಗಿದೆ. ಈ ಸಲಹೆಯನ್ನು 1964–66 ರಲ್ಲಿನ ಶಿಕ್ಷಣ ಆಯೋಗವು ಶಿಫಾರಸ್ಸು ಮಾಡಿತ್ತಾದರೂ ಅದನ್ನು ಅನುಷ್ಠಾನಗೊಳಿಸಿರಲಿಲ್ಲ. ಈ ನೀತಿಯು, ಸಾಧ್ಯವಿದ್ದಲ್ಲೆಲ್ಲಾ ಶಾಲಾ ಸಂಕೀರ್ಣ/ಕ್ಲಸ್ಟರ್ ಕಲ್ಪನೆಯನ್ನು ಬಲವಾಗಿ ಅನುಮೋದಿಸುತ್ತದೆ. ಶಾಲಾ ಸಂಕೀರ್ಣ/ಕ್ಲಸ್ಟರ್‌ನ ಗುರಿ, ಅಲ್ಲಿನ ಶಾಲೆಗಳಲ್ಲಿ ದಕ್ಷ ಸಂಪನ್ಮೂಲ ನಿರ್ವಹಣೆ ಮತ್ತು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಣೆ, ಸಮನ್ವಯ, ನಾಯಕತ್ವ, ಆಡಳಿತ ಮತ್ತು ನಿರ್ವಹಣೆಯನ್ನು ಮಾಡುವುದಾಗಿದೆ.

**7.7.** ಶಾಲಾ ಸಂಕೀರ್ಣಗಳು/ಕ್ಲಸ್ಟರ್‌ಗಳ ಸ್ಥಾಪನೆ ಮತ್ತು ಸಂಕೀರ್ಣಗಳಾದ್ಯಂತ ಸಂಪನ್ಮೂಲಗಳ ಹಂಚಿಕೆಯಿಂದಾಗಿ, ವಿಕಲಾಂಗ ಮಕ್ಕಳಿಗೆ ಸುಧಾರಿತ ಬೆಂಬಲ ದೊರಕುತ್ತದೆ, ಶಾಲಾ ಸಂಕೀರ್ಣದಾದ್ಯಂತ ಹೆಚ್ಚು ವಿಷಯ ಕೇಂದ್ರಿತ ಕ್ಲಬ್ ಗಳು ಸ್ಥಾಪನೆಯಾಗುತ್ತವೆ ಮತ್ತು ಶೈಕ್ಷಣಿಕ / ಕ್ರೀಡೆ / ಕಲೆ / ಕರಕುಶಲ ಚಟುವಟಿಕೆಗಳು, ವರ್ಚುವಲ್ ತರಗತಿಗಳನ್ನು ನಡೆಸಲು ಐಸಿಟಿ ಪರಿಕರಗಳ ಬಳಕೆ ಸಾಧ್ಯವಾಗುತ್ತದೆ. ವಿಷಯ ಶಿಕ್ಷಕರ ಹಂಚಿಕೆಯ ಮೂಲಕ ತರಗತಿಯಲ್ಲಿ ಕಲೆ, ಸಂಗೀತ, ಭಾಷೆ, ವೃತ್ತಿಪರ ವಿಷಯಗಳು, ದೈಹಿಕ ಶಿಕ್ಷಣ ಮತ್ತು ಇತರ ವಿಷಯಗಳ ಉತ್ತಮ ಸಂಯೋಜನೆ ಸಾಧ್ಯವಾಗುತ್ತದೆ, ಸಾಮಾಜಿಕ ಕಾರ್ಯಕರ್ತರು ಮತ್ತು ಸಲಹೆಗಾರರ ಹಂಚಿಕೆಯ ಮೂಲಕ ಉತ್ತಮ ವಿದ್ಯಾರ್ಥಿ ಬೆಂಬಲ ದೊರಕುತ್ತದೆ, ದಾಖಲಾತಿ, ಹಾಜರಾತಿ ಮತ್ತು ಕಾರ್ಯಕ್ಷಮತೆ ಹೆಚ್ಚುತ್ತದೆ ಮತ್ತು ಸ್ಥಳೀಯ ಭಾಗೀದಾರರಿಂದ ಹೆಚ್ಚು ದೃಢವಾದ ಮತ್ತು ಸುಧಾರಿತ ಆಡಳಿತ, ಮೇಲ್ವಿಚಾರಣೆ, ನಾವೀನ್ಯತೆಗಳು ಮತ್ತು ಉಪಕ್ರಮಗಳಿಗಾಗಿ ಶಾಲಾ ಸಂಕೀರ್ಣ ನಿರ್ವಹಣಾ ಸಮಿತಿಗಳಂತಹ (ಶಾಲಾ ನಿರ್ವಹಣಾ ಸಮಿತಿಗಳ ಬದಲಾಗಿ) ಪ್ರಯೋಜನಗಳಾಗುತ್ತವೆ. ಶಾಲೆಗಳು, ಶಾಲಾ ನಾಯಕರು, ಶಿಕ್ಷಕರು, ವಿದ್ಯಾರ್ಥಿಗಳು, ಪೂರಕ ಸಿಬ್ಬಂದಿ, ಪೋಷಕರು ಮತ್ತು ಸ್ಥಳೀಯ ನಾಗರಿಕರ ಅಂತಹ ದೊಡ್ಡ ಸಮುದಾಯಗಳನ್ನು ನಿರ್ಮಿಸುವುದರಿಂದ ಶಾಲಾ ವ್ಯವಸ್ಥೆಯಲ್ಲಿ ಶಕ್ತಿ ತುಂಬುತ್ತದೆ ಮತ್ತು ಅದನ್ನು ಸಬಲೀಕರಣಗೊಳಿಸುತ್ತದೆ.

**7.8.** ಶಾಲಾ ಸಂಕೀರ್ಣಗಳು / ಕ್ಲಸ್ಟರ್ ಗಳಿಂದಾಗಿ ಶಾಲೆಗಳ ಆಡಳಿತವು ಸುಧಾರಿಸುತ್ತದೆ ಮತ್ತು ಹೆಚ್ಚು ಪರಿಣಾಮಕಾರಿಯಾಗಲಿದೆ. ಶಿಕ್ಷಣ ಇಲಾಖೆಯು ಶಾಲಾ ಸಂಕೀರ್ಣ / ಕ್ಲಸ್ಟರ್ ಗೆ ಅಧಿಕಾರವನ್ನು ನೀಡುತ್ತದೆ ಮತ್ತು ಇದು ಅರೆ ಸ್ವಾಯತ್ತ ಘಟಕವಾಗಿ ಕಾರ್ಯನಿರ್ವಹಿಸುತ್ತದೆ. ಜಿಲ್ಲಾ ಶಿಕ್ಷಣಾಧಿಕಾರಿ (ಡಿಇಒ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿಇಒ) ಪ್ರಾಥಮಿಕವಾಗಿ ಪ್ರತಿ ಶಾಲಾ ಸಂಕೀರ್ಣ / ಕ್ಲಸ್ಟರ್ ಅನ್ನು ಒಂದೇ ಘಟಕವಾಗಿ ಪರಿಗಣಿಸುತ್ತಾರೆ ಮತ್ತು ಅದರ ಕಾರ್ಯನಿರ್ವಹಣೆಗೆ ಸಹಾಯ

ಮಾಡುತ್ತಾರೆ. ಪ್ರತಿಯೊಂದು ಶಾಲಾ ಸಂಕೀರ್ಣವು ಶಿಕ್ಷಣ ಇಲಾಖೆಯು ನಿಯೋಜಿಸಿದ ನಿರ್ದಿಷ್ಟ ಕಾರ್ಯಗಳನ್ನು ನಿರ್ವಹಿಸುತ್ತದೆ ಮತ್ತು ಅದರೊಳಗಿರುವ ಶಾಲೆಗಳೊಂದಿಗೆ ಪ್ರತ್ಯೇಕವಾಗಿ ವ್ಯವಹರಿಸುತ್ತದೆ. ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು (ಎನ್‌ಸಿಎಫ್) ಮತ್ತು ರಾಜ್ಯ ಪಠ್ಯಕ್ರಮದ ಚೌಕಟ್ಟು (ಎಸ್‌ಸಿಎಫ್) ಗಳನ್ನು ಅನುಸರಿಸುತ್ತಾ, ಸಮಗ್ರವಾದ ಶಿಕ್ಷಣವನ್ನು ನೀಡಲು ಮತ್ತು ಬೋಧನಾ ವಿಧಾನ, ಪಠ್ಯಕ್ರಮ ಇತ್ಯಾದಿಗಳೊಂದಿಗೆ ನೂತನ ಪ್ರಯೋಗ ಕೈಗೊಳ್ಳಲು ಶಾಲಾ ಸಂಕೀರ್ಣ / ಕ್ಲಸ್ಟರ್ ಗೆ ಶಿಕ್ಷಣ ಇಲಾಖೆಯು ಗಮನಾರ್ಹ ಸ್ವಾಯತ್ತತೆ ನೀಡುತ್ತದೆ. ಈ ಸಂಸ್ಥೆಯಡಿಯಲ್ಲಿನ ಶಾಲೆಗಳನ್ನು ಬಲಪಡಿಸಲಾಗುತ್ತದೆ ಮತ್ತು ಅದರಿಂದಾಗಿ ಹೆಚ್ಚಿನ ಸ್ವಾತಂತ್ರ್ಯವನ್ನು ಚಲಾಯಿಸಲು ಸಾಧ್ಯವಾಗುತ್ತದೆ, ಮತ್ತು ಸಂಕೀರ್ಣವನ್ನು ಹೆಚ್ಚು ನವೀನ ಮತ್ತು ಪ್ರತಿಕ್ರಿಯಾತ್ಮಕವಾಗಿಸಲು ಸಹಕಾರಿಯಾಗುತ್ತದೆ. ಏತನ್ಮಧ್ಯೆ, ಶಿಕ್ಷಣ ಇಲಾಖೆಯು ಒಟ್ಟಾರೆ ವ್ಯವಸ್ಥೆಯ ಪರಿಣಾಮಕಾರಿತ್ವವನ್ನು ಸುಧಾರಿಸುವುದರೊಂದಿಗೆ ಸಾಧಿಸಬೇಕಾದ ಸರಾಸರಿ ಹಂತದ ಗುರಿಗಳ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಲು ಸಾಧ್ಯವಾಗುತ್ತದೆ.

**7.9.** ಅಲ್ಪಾವಧಿಯ ಮತ್ತು ದೀರ್ಘಾವಧಿಯ ಯೋಜನೆಗಾಗಿ ಕಾರ್ಯನಿರ್ವಹಿಸುವ ಸಂಸ್ಕೃತಿಯನ್ನು ಅಂತಹ ಸಂಕೀರ್ಣಗಳು / ಸಮೂಹಗಳ ಮೂಲಕ ಬೆಳೆಸಲಾಗುತ್ತದೆ. ಶಾಲೆಗಳು ಎಸ್.ಡಿ.ಎಮ್.ಸಿಗಳ (SDMC-School Development and Monitoring Committee) ಪಾಲ್ಗೊಳ್ಳುವಿಕೆಯ ಮೂಲಕ ತಮ್ಮ ಯೋಜನೆಗಳನ್ನು (ಎಸ್.ಡಿ.ಪಿ–School Development Plan) ಅಭಿವೃದ್ಧಿಪಡಿಸುತ್ತವೆ. ಈ ಯೋಜನೆಗಳು ನಂತರ ಶಾಲಾ ಸಂಕೀರ್ಣ/ಕ್ಲಸ್ಟರ್ ಅಭಿವೃದ್ಧಿ ಯೋಜನೆಗಳ (ಎಸ್.ಸಿ.ಡಿ.ಪಿ – School Complex Development Plan) ರಚನೆಗೆ ಆಧಾರವಾಗುತ್ತವೆ. ಎಸ್.ಸಿ.ಡಿ.ಪಿಯು, ಶಾಲಾ ಸಂಕೀರ್ಣಕ್ಕೆ ಸಂಬಂಧಿಸಿದ ವೃತ್ತಿಪರ ಶಿಕ್ಷಣ ಸಂಸ್ಥೆಗಳಂತಹ ಎಲ್ಲಾ ಇತರ ಸಂಸ್ಥೆಗಳ ಯೋಜನೆಗಳನ್ನೂ ಸಹ ಒಳಗೊಂಡಿರುತ್ತದೆ ಮತ್ತು ಅವುಗಳನ್ನು ಎಸ್‌ಡಿಎಮ್‌ಸಿ ಯ ಪಾಲ್ಗೊಳ್ಳುವಿಕೆಯೊಂದಿಗೆ ಶಾಲಾ ಸಂಕೀರ್ಣದ ಪ್ರಾಂಶುಪಾಲರು ಮತ್ತು ಶಿಕ್ಷಕರು ರಚಿಸುತ್ತಾರೆ ಮತ್ತು ಆ ಯೋಜನೆಯು ಸಾರ್ವಜನಿಕವಾಗಿ ಲಭ್ಯವಾಗಲಿದೆ. ಈ ಯೋಜನೆಗಳಲ್ಲಿ ಮಾನವ ಸಂಪನ್ಮೂಲಗಳು, ಕಲಿಕಾ ಸಂಪನ್ಮೂಲಗಳು, ಭೌತಿಕ ಸಂಪನ್ಮೂಲಗಳು ಮತ್ತು ಮೂಲಸೌಕರ್ಯ, ಸುಧಾರಣಾ ಉಪಕ್ರಮಗಳು, ಹಣಕಾಸು ಸಂಪನ್ಮೂಲಗಳು, ಶಾಲಾ ಸಂಸ್ಕೃತಿ ಉಪಕ್ರಮಗಳು, ಶಿಕ್ಷಕರ ಅಭಿವೃದ್ಧಿ ಯೋಜನೆಗಳು ಮತ್ತು ಶೈಕ್ಷಣಿಕ ಫಲಿತಾಂಶಗಳು ಸೇರಿವೆ. ಚಲನಶೀಲ ಕಲಿಕಾ ಸಮುದಾಯಗಳನ್ನು ಅಭಿವೃದ್ಧಿಪಡಿಸಲು ಶಾಲಾ ಸಂಕೀರ್ಣದಾದ್ಯಂತ ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಬಳಸಿಕೊಳ್ಳುವ ಪ್ರಯತ್ನಗಳನ್ನು ಕುರಿತು ಇದು ವಿವರಿಸುತ್ತದೆ. ಎಸ್‌ಡಿಪಿ ಮತ್ತು ಎಸ್‌ಸಿಡಿಪಿ ಯೋಜನೆಗಳು, ಶಿಕ್ಷಣ ಇಲಾಖೆಯು ಸೇರಿದಂತೆ ಶಾಲೆಯ ಎಲ್ಲಾ ಭಾಗೀದಾರರನ್ನು ಜೋಡಿಸುವ ಪ್ರಾಥಮಿಕ ಕಾರ್ಯವಿಧಾನವಾಗಿವೆ. ಎಸ್‌ಡಿಎಂಸಿಯು, ಎಸ್‌ಡಿಪಿ ಮತ್ತು ಎಸ್‌ಸಿಡಿಪಿಯನ್ನು ಶಾಲೆಯ ಕಾರ್ಯವೈಖರಿ ಮತ್ತು ಪ್ರಗತಿ ಪಥದ ಮೇಲ್ವಿಚಾರಣೆಗೆ ಬಳಸುತ್ತದೆ ಮತ್ತು ಈ ಯೋಜನೆಗಳ ಅನುಷ್ಠಾನಕ್ಕೆ ಸಹಾಯ ಮಾಡುತ್ತದೆ. ಶಿಕ್ಷಣ ಇಲಾಖೆಯು, ಸಂಬಂಧಿತ ಅಧಿಕಾರಿಯ ಮೂಲಕ, (ಉದಾ., ಬಿಇಒ,) ಪ್ರತಿ ಶಾಲಾ ಸಂಕೀರ್ಣದ ಎಸ್‌ಸಿಡಿಪಿಯನ್ನು ಅನುಮೋದಿಸುತ್ತದೆ ಮತ್ತು ಖಚಿತಪಡಿಸುತ್ತದೆ. ಇದು ಎಸ್‌ಸಿಡಿಪಿಯಲ್ಲಿನ ಅಲ್ಪಾವಧಿಯ (1 ವರ್ಷ) ಮತ್ತು ದೀರ್ಘಾವಧಿಯ (3–5 ವರ್ಷಗಳು) ಗುರಿಗಳನ್ನು ಸಾಧಿಸಲು ಅಗತ್ಯವಾದ ಸಂಪನ್ಮೂಲಗಳನ್ನು (ಹಣಕಾಸು, ಮಾನವ, ಭೌತಿಕ, ಇತ್ಯಾದಿ) ಒದಗಿಸುತ್ತದೆ. ಶೈಕ್ಷಣಿಕ ಫಲಿತಾಂಶಗಳನ್ನು ಸಾಧಿಸಲು ಇದು ಶಾಲಾ ಸಂಕೀರ್ಣಗಳಿಗೆ ಇತರ ಎಲ್ಲ ಸಂಬಂಧಿತ ಬೆಂಬಲವನ್ನೂ ಸಹ ಒದಗಿಸುತ್ತದೆ. ಶಿಕ್ಷಣ ಇಲಾಖೆ ಮತ್ತು ಎಸ್‌ಸಿಇಆರ್‌ಟಿಗಳು, ಎಸ್‌ಡಿಪಿ ಮತ್ತು ಎಸ್‌ಸಿಡಿಪಿ ಸಿದ್ಧಪಡಿಸಲು ನಿರ್ದಿಷ್ಟವಾದ ಮಾನದಂಡಗಳನ್ನು (ಉದಾ., ಹಣಕಾಸು, ಸಿಬ್ಬಂದಿ, ಪ್ರಕ್ರಿಯೆ) ಮತ್ತು ಚೌಕಟ್ಟುಗಳನ್ನು ಎಲ್ಲಾ ಶಾಲೆಗಳೊಂದಿಗೆ ಹಂಚಿಕೊಳ್ಳಬಹುದು ಮತ್ತು ಅವುಗಳನ್ನು ನಿಯತಕಾಲಿಕವಾಗಿ ಪರಿಷ್ಕರಿಸಬಹುದು.

**7.10.** ಸಾರ್ವಜನಿಕ ಮತ್ತು ಖಾಸಗಿ ಶಾಲೆಗಳನ್ನೂ ಒಳಗೊಂಡಂತೆ, ಶಾಲೆಗಳಲ್ಲಿ ಸಹಕಾರ ಮತ್ತು ಸಕಾರಾತ್ಮಕ ಸಮನ್ವಯಕ್ಕಾಗಿ, ಒಂದು ಖಾಸಗಿ ಶಾಲೆಯನ್ನು ಒಂದು ಸಾರ್ವಜನಿಕ ಶಾಲೆಯೊಂದಿಗೆ ಜೋಡಿಸುವ ಪ್ರಕ್ರಿಯೆಯನ್ನು ದೇಶಾದ್ಯಂತ ಪ್ರಾರಂಭಿಸಲಾಗುವುದು, ಇದರಿಂದಾಗಿ ಅಂತಹ ಜೋಡಿಯಾಗಿರುವ ಶಾಲೆಗಳು ಪರಸ್ಪರ ಭೇಟಿಯಾಗಬಹುದು / ಸಂವಹನ ನಡೆಸಬಹುದು, ಸಾಧ್ಯವಾದರೆ ಪರಸ್ಪರರಿಂದ ಕಲಿಯಬಹುದು ಮತ್ತು ಸಂಪನ್ಮೂಲಗಳನ್ನು ಹಂಚಿಕೊಳ್ಳಬಹುದು. ಸಾಧ್ಯವಿದ್ದಲ್ಲಿ, ಖಾಸಗಿ ಶಾಲೆಗಳ ಮತ್ತು ಸರ್ಕಾರಿ ಶಾಲೆಗಳ ಉತ್ತಮ ಅಭ್ಯಾಸಗಳನ್ನು ಪರಸ್ಪರ ಶಾಲೆಗಳಲ್ಲಿ ದಾಖಲಿಸಲಾಗುತ್ತದೆ, ಹಂಚಿಕೊಳ್ಳಲಾಗುತ್ತದೆ ಮತ್ತು ಸಾಂಸ್ಥೀಕರಣಗೊಳಿಸಲಾಗುತ್ತದೆ.

**7.11.** ಪ್ರತಿ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ "ಬಾಲ ಭವನ" ವನ್ನು ಬಲಪಡಿಸಲು ಅಥವಾ ಇರದಿರುವ ಕಡೆಗೆ ಹೊಸ "ಬಾಲ ಭವನ" ವನ್ನು ಸ್ಥಾಪಿಸಲು ಪ್ರೋತ್ಸಾಹಿಸಲಾಗುತ್ತದೆ, ಅಲ್ಲಿಗೆ ಎಲ್ಲಾ ವಯಸ್ಸಿನ ಮಕ್ಕಳು ವಾರಕ್ಕೊಮ್ಮೆ ಭೇಟಿ ನೀಡಬಹುದು (ಉದಾ.,

ವಾರಾಂತ್ಯದಲ್ಲಿ) ಅಥವಾ ವಿಶೇಷ ಹಗಲಿನ ಅವಧಿಯ ಬೋರ್ಡಿಂಗ್ ಶಾಲೆಯಾಗಿ, ಅಲ್ಲಿ ಕಲೆ–ಸಂಬಂಧಿತ, ವೃತ್ತಿ–ಸಂಬಂಧಿತ ಮತ್ತು ಆಟ–ಸಂಬಂಧಿತ ಚಟುವಟಿಕೆಗಳಲ್ಲಿ ಭಾಗವಹಿಸಬಹುದು. ಸಾಧ್ಯವಾದರೆ ಅಂತಹ ಬಾಲ ಭವನಗಳನ್ನು ಶಾಲಾ ಸಂಕೀರ್ಣಗಳು / ಸಮೂಹಗಳ ಒಂದು ಭಾಗವಾಗಿ ಸೇರಿಸಿಕೊಳ್ಳಬಹುದು.

7.12. ಶಾಲೆಯು ಇಡೀ ಸಮುದಾಯಕ್ಕೆ ಸಂಭ್ರಮಾಚರಣೆಯ ಮತ್ತು ಗೌರವದ ತಾಣವಾಗಿರಬೇಕು. ಒಂದು ಸಂಸ್ಥೆಯಾಗಿ ಶಾಲೆಯ ಘನತೆಯನ್ನು ಪುನಃಸ್ಥಾಪಿಸಬೇಕು ಮತ್ತು ಶಾಲೆಯ ಸ್ಥಾಪನಾ ದಿನದಂತಹ ಪ್ರಮುಖ ಆಚರಣೆಗಳನ್ನು ಸಮುದಾಯದೊಂದಿಗೆ ಆಚರಿಸಲಾಗುವುದು ಮತ್ತು ಆ ದಿನ ಶಾಲೆಯಲ್ಲಿ ಹಳೆಯ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರದರ್ಶಿಸಿ ಗೌರವಿಸಬಹುದು. ಇದಲ್ಲದೆ, ಶಾಲಾ ಮೂಲಸೌಕರ್ಯದ ಬಳಕೆಯಾಗದ ಸಾಮರ್ಥ್ಯವನ್ನು, ಸಮುದಾಯದ ಸಾಮಾಜಿಕ, ಬೌದ್ಧಿಕ ಮತ್ತು ಸ್ವಯಂಸೇವಕ ಚಟುವಟಿಕೆಗಳನ್ನು ಉತ್ತೇಜಿಸಲು ಮತ್ತು ಬೋಧನೇತರ / ಶಾಲೇತರ ಸಮಯದಲ್ಲಿ ಸಾಮಾಜಿಕ ಒಗ್ಗಟ್ಟನ್ನು ಉತ್ತೇಜಿಸಲು ಬಳಸಬಹುದು ಮತ್ತು ಇದನ್ನು "ಸಾಮಾಜಿಕ ಚೇತನಾ ಕೇಂದ್ರ" ವನ್ನು ಬಳಸಬಹುದು.

## 8. ಶಾಲಾ ಶಿಕ್ಷಣಕ್ಕಾಗಿ ಮಾನಕಗಳ ನಿರ್ಧಾರ ಮತ್ತು ಅಂಗೀಕರಣ

**8.1.** ಶೈಕ್ಷಣಿಕ ಫಲಿತಾಂಶಗಳನ್ನು ನಿರಂತರವಾಗಿ ಸುಧಾರಿಸುವುದು ಶಾಲಾ ಶಿಕ್ಷಣ ನಿಯಂತ್ರಣ ವ್ಯವಸ್ಥೆಯ ಗುರಿಯಾಗಿರಬೇಕು; ಅದು ಶಾಲೆಗಳನ್ನು ಅತಿಯಾಗಿ ನಿರ್ಬಂಧಿಸಬಾರದು, ನಾವೀನ್ಯತೆಯನ್ನು ತಡೆಯಬಾರದು ಅಥವಾ ಪ್ರಾಂಶುಪಾಲರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ನಿರುತ್ಸಾಹಗೊಳಿಸಬಾರದು. ಒಟ್ಟಾರೆಯಾಗಿ, ನಿಯಂತ್ರಣವು ಶಾಲೆಗಳು ಮತ್ತು ಶಿಕ್ಷಕರನ್ನು ವಿಶ್ವಾಸದೊಂದಿಗೆ ಸಬಲಗೊಳಿಸುವ ಗುರಿಯನ್ನು ಹೊಂದಿರಬೇಕು, ಅದೇ ಸಮಯದಲ್ಲಿ ಸಂಪೂರ್ಣ ಪಾರದರ್ಶಕತೆಯನ್ನು ಸಾಧಿಸಲು ಎಲ್ಲಾ ಹಣಕಾಸು ವ್ಯವಹಾರಗಳು, ಕಾರ್ಯವಿಧಾನಗಳು ಮತ್ತು ಶೈಕ್ಷಣಿಕ ಫಲಿತಾಂಶಗಳನ್ನು ಸಂಪೂರ್ಣವಾಗಿ ಸಾರ್ವಜನಿಕರಿಗಾಗಿ ಮುಕ್ತಗೊಳಿಸುವ ಮೂಲಕ ವ್ಯವಸ್ಥೆಯ ಸಮಗ್ರತೆಯನ್ನು ಖಾತರಿಪಡಿಸುವುದರೊಂದಿಗೆ ಶ್ರೇಷ್ಠತೆಗಾಗಿ ಶ್ರಮಿಸಲು ಮತ್ತು ಅವರ ಅತ್ಯುತ್ತಮ ಪ್ರದರ್ಶನವನ್ನು ನೀಡಲು ಅನುವು ಮಾಡಿಕೊಡಬೇಕು.

**8.2.** ಪ್ರಸ್ತುತದಲ್ಲಿ, ಶಾಲಾ ಶಿಕ್ಷಣ ವ್ಯವಸ್ಥೆಯ ಆಡಳಿತ ಮತ್ತು ನಿಯಂತ್ರಣದ ಎಲ್ಲಾ ಮುಖ್ಯ ಕಾರ್ಯಗಳಾದ ಶಿಕ್ಷಣವನ್ನು ಒದಗಿಸುವುದು, ಶಿಕ್ಷಣ ಸಂಸ್ಥೆಗಳ ನಿಯಂತ್ರಣ ಮತ್ತು ನೀತಿ ನಿರೂಪಣೆಯನ್ನು ಶಾಲಾ ಶಿಕ್ಷಣ ಇಲಾಖೆ ಅಥವಾ ಅದರ ಅಂಗ ಸಂಸ್ಥೆಗಳು ನಿರ್ವಹಿಸುತ್ತವೆ. ಇದು ಹಿತಾಸಕ್ತಿ ಸಂಘರ್ಷ ಮತ್ತು ಅಧಿಕಾರದ ಅತಿಯಾದ ಕೇಂದ್ರೀಕರಣಕ್ಕೆ ಕಾರಣವಾಗುತ್ತದೆ; ಶಾಲಾ ಶಿಕ್ಷಣ ಇಲಾಖೆಯು ನಿರ್ವಹಿಸುವ ಇತರ ಪಾತ್ರಗಳಿಂದಾಗಿ, ಅದರಲ್ಲೂ ವಿಶೇಷವಾಗಿ ನಿಯಂತ್ರಣದ ಮೇಲೆ ಹೆಚ್ಚಿನ ಗಮನ ಕೇಂದ್ರೀಕರಣಗೊಳ್ಳುವ ಮೂಲಕ ಗುಣಮಟ್ಟದ ಶೈಕ್ಷಣಿಕ ಅವಕಾಶಗಳನ್ನು ಒದಗಿಸುವ ಪ್ರಯತ್ನಗಳು ದುರ್ಬಲಗೊಳ್ಳುವುದರಿಂದ ಶಾಲಾ ವ್ಯವಸ್ಥೆಯ ನಿಷ್ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಕಾರಣವಾಗುತ್ತದೆ.

**8.3.** ಪ್ರಸ್ತುತ ಇರುವ ನಿಯಂತ್ರಣ ವ್ಯವಸ್ಥೆಯಿಂದ ಶಿಕ್ಷಣದ ವಾಣಿಜ್ಯೀಕರಣ ಮತ್ತು ಖಾಸಗಿ ಶಾಲೆಗಳು ಮಾಡುತ್ತಿರುವ ಪೋಷಕರ ಆರ್ಥಿಕ ಶೋಷಣೆಯನ್ನು ತಡೆಯಲು ಸಾಧ್ಯವಾಗಿಲ್ಲ, ಆದರೆ ಅದೇ ಸಮಯದಲ್ಲಿ ಇದು ಸಾರ್ವಜನಿಕ ಸೇವಾ ಮನೋಭಾವದ ಖಾಸಗಿ (philanthropic) ಶಾಲೆಗಳನ್ನು ನಿರುತ್ಸಾಹಗೊಳಿಸಿದೆ. ಸಾರ್ವಜನಿಕ ಮತ್ತು ಖಾಸಗಿ ಶಾಲೆಗಳೆರಡರ ಗುರಿಯು ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದೇ ಆಗಿರಬೇಕಾಗಿದ್ದರೂ, ಎರಡರ ನಿಯಂತ್ರಕ ವಿಧಾನಗಳ ನಡುವೆ ಸಾಕಷ್ಟು ಅಸಾಮ್ಯತೆ ಇದೆ.

**8.4.** ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯು ಪ್ರಜಾಪ್ರಭುತ್ವ ಸಮಾಜದ ಅಡಿಪಾಯವಾಗಿದೆ ಮತ್ತು ಉನ್ನತ ಮಟ್ಟದ ಶೈಕ್ಷಣಿಕ ಫಲಿತಾಂಶಗಳನ್ನು ಸಾಧಿಸಲು ಅದನ್ನು ನಿರ್ವಹಿಸುವ ವಿಧಾನವನ್ನು ಬದಲಾಯಿಸಬೇಕು ಮತ್ತು ಉತ್ತೇಜಿಸಬೇಕು. ಅದೇ ಸಮಯದಲ್ಲಿ, ಶಾಲಾ ಶಿಕ್ಷಣದಲ್ಲಿ ಮಹತ್ವದ ಮತ್ತು ಪ್ರಯೋಜನಕಾರಿ ಪಾತ್ರವನ್ನು ವಹಿಸಲು ಖಾಸಗಿ / ಸಾರ್ವಜನಿಕ ಸೇವಾ ಮನೋಭಾವದ ಶಾಲಾ ವಲಯವನ್ನೂ ಸಹ ಪ್ರೋತ್ಸಾಹಿಸಬೇಕು ಮತ್ತು ಸಶಕ್ತಗೊಳಿಸಬೇಕು.

**8.5.** ರಾಜ್ಯದ ಶಾಲಾ ಶಿಕ್ಷಣ ವ್ಯವಸ್ಥೆ, ಆ ವ್ಯವಸ್ಥೆಯೊಳಗಿನ ಸ್ವತಂತ್ರ ಜವಾಬ್ದಾರಿಗಳು ಮತ್ತು ಅದರ ನಿಯಂತ್ರಣದ ವಿಧಾನಕ್ಕೆ ಸಂಬಂಧಿಸಿದಂತೆ ಈ ನೀತಿಯ ಪ್ರಮುಖ ತತ್ವಗಳು ಮತ್ತು ಶಿಫಾರಸ್ಸುಗಳು ಹೀಗಿವೆ:

(ಎ) ಶಾಲಾ ಶಿಕ್ಷಣದಲ್ಲಿ ಉನ್ನತ ಮಟ್ಟದ ರಾಜ್ಯ ಶಿಕ್ಷಣ ಸಂಸ್ಥೆಯಾಗಿರುವ ಶಾಲಾ ಶಿಕ್ಷಣ ಇಲಾಖೆಯು, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ನಿರಂತರ ಸುಧಾರಣೆಗೆ ಒಟ್ಟಾರೆ ಮೇಲ್ವಿಚಾರಣೆ ಮತ್ತು ನೀತಿ ನಿರೂಪಣೆಯ ಜವಾಬ್ದಾರಿಯನ್ನು

ಹೊಂದಿರುತ್ತದೆ; ಸಾರ್ವಜನಿಕ ಶಾಲೆಗಳ ಸುಧಾರಣೆಯ ಬಗ್ಗೆ ಸೂಕ್ತ ಗಮನವನ್ನು ಖಚಿತಪಡಿಸಿಕೊಳ್ಳಲು ಮತ್ತು ಹಿತಾಸಕ್ತಿಗಳ ಸಂಘರ್ಷವನ್ನು ತಪ್ಪಿಸಲು, ಇದು ಶಾಲೆಗಳ ನಿಬಂಧನೆ ಮತ್ತು ಕಾರ್ಯಾಚರಣೆಯೊಂದಿಗೆ ಅಥವಾ ಶಾಲೆಗಳ ನಿಯಂತ್ರಣ ಕಾರ್ಯದಲ್ಲಿ ಭಾಗಿಯಾಗುವುದಿಲ್ಲ.

(ಬಿ) ಇಡೀ ರಾಜ್ಯದ ಸಾರ್ವಜನಿಕ ಶಾಲಾ ವ್ಯವಸ್ಥೆಯ ಶೈಕ್ಷಣಿಕ ಕಾರ್ಯಾಚರಣೆಗಳು ಮತ್ತು ಸೇವಾ ನಿಬಂಧನೆಗಳನ್ನು ಶಾಲಾ ಶಿಕ್ಷಣ ನಿರ್ದೇಶನಾಲಯವು ನಿರ್ವಹಿಸುತ್ತದೆ (ಡಿಇಒ ಮತ್ತು ಬಿಇಒ ಕಚೇರಿಗಳು ಸೇರಿದಂತೆ); ಶೈಕ್ಷಣಿಕ ಕಾರ್ಯಾಚರಣೆಗಳು ಮತ್ತು ನಿಬಂಧನೆಗಳಿಗೆ ಸಂಬಂಧಿಸಿದ ನೀತಿಗಳನ್ನು ಕಾರ್ಯಗತಗೊಳಿಸಲು ಇದು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತದೆ.

(ಸಿ) ಸಾರ್ವಜನಿಕ, ಖಾಸಗಿ, ಮತ್ತು ಸಾರ್ವಜನಿಕ ಸೇವಾ ಮನೋಭಾವದ ವ್ಯಕ್ತಿ/ಸಂಸ್ಥೆಗಳು (philanthropic) ಪ್ರಾರಂಭಿಸಿದ ಶಾಲೆಗಳ ಪ್ರಕಾರಗಳು ಮತ್ತು ಶಾಲಾ ಪೂರ್ವ ಶಿಕ್ಷಣ ಸೇರಿದಂತೆ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಅವಶ್ಯಕವಾದ ಗುಣಮಟ್ಟ ಮಾನಕಗಳನ್ನು ಅನುಸರಣೆ ಮಾಡುತ್ತಿರುವುದನ್ನು ಖಚಿತಪಡಿಸಿಕೊಳ್ಳಲು, ಪರಿಣಾಮಕಾರಿಯಾದ ಸ್ವ–ನಿಯಂತ್ರಣ ಗುಣಮಟ್ಟ ಅಥವಾ ಅಂಗೀಕರಣ ವ್ಯವಸ್ಥೆಯನ್ನು ಸ್ಥಾಪಿಸಲಾಗುವುದು. ಎಲ್ಲಾ ಪ್ರಕಾರದ ಶಾಲೆಗಳು ನಿರ್ದಿಷ್ಟವಾದ ಕನಿಷ್ಠ ವೃತ್ತಿಪರ ಮತ್ತು ಗುಣಮಟ್ಟದ ಮಾನಕಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಲು, ಎಲ್ಲಾ ರಾಜ್ಯಗಳಲ್ಲಿ ಸ್ವತಂತ್ರ ಸ್ವರೂಪದ ರಾಜ್ಯವ್ಯಾಪಿ ಸಂಸ್ಥೆಯಾದ ರಾಜ್ಯ ಶಾಲಾ ಮಾನಕ ಪ್ರಾಧಿಕಾರ (SSSA-State School Standard Setting Authority) ವನ್ನು ಸ್ಥಾಪಿಸಲಾಗುವುದು. SSSA ಯು, ಮೂಲಭೂತ ನಿಯತಾಂಕಗಳನ್ನು ಆಧರಿಸಿ ಕನಿಷ್ಠ ಮಾನಕಗಳನ್ನು (ಅವುಗಳೆಂದರೆ ಸುರಕ್ಷತೆ, ಭದ್ರತೆ, ಮೂಲಸೌಕರ್ಯ, ವಿಷಯವಾರು ಮತ್ತು ತರಗತಿವಾರು ಶಿಕ್ಷಕರ ಸಂಖ್ಯೆ, ಆರ್ಥಿಕ ಸಂಭವನೀಯತೆ ಮತ್ತು ಆಡಳಿತದ ಉತ್ತಮ ಪ್ರಕ್ರಿಯೆಗಳು) ರೂಪಿಸುತ್ತದೆ ಮತ್ತು ಅವುಗಳನ್ನು ಎಲ್ಲಾ ಶಾಲೆಗಳು ಅನುಸರಿಸುತ್ತವೆ. ಈ ನಿಯತಾಂಕಗಳ ಚೌಕಟ್ಟನ್ನು SCERT ಯು ವಿವಿಧ ಭಾಗೀದಾರರೊಂದಿಗೆ, ವಿಶೇಷವಾಗಿ ಶಿಕ್ಷಕರು ಮತ್ತು ಶಾಲೆಗಳೊಂದಿಗೆ ಸಮಾಲೋಚಿಸಿ ರಚಿಸುತ್ತದೆ.

SSSA ನಿಗದಿಪಡಿಸಿದಂತೆ, ಸಾರ್ವಜನಿಕ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಗಾಗಿ, ಎಲ್ಲಾ ಮೂಲಭೂತ ನಿಯಂತ್ರಕ ಮಾಹಿತಿಯನ್ನು ಸಾರ್ವಜನಿಕರಿಗೆ ಶಾಲೆಗಳೇ ಸ್ವಯಂ ತಿಳಿಸುವ ವಿಧಾನವನ್ನು ವ್ಯಾಪಕವಾಗಿ ಬಳಸಲಾಗುತ್ತದೆ. ಜಾಗತಿಕವಾಗಿ ಅನುಸರಿಸಲಾಗುತ್ತಿರುವ ಶಾಲಾ ಮಾನಕಗಳ ಅತ್ಯುತ್ತಮ ಅಭ್ಯಾಸಗಳನ್ನು ಆಧರಿಸಿ, ಮಾಹಿತಿಯನ್ನು ಯಾವ ಆಯಾಮಗಳಲ್ಲಿ ಮತ್ತು ಸ್ವರೂಪದಲ್ಲಿ ಸ್ವಯಂ–ಘೋಷಿಸಬೇಕು ಎಂದು SSSA ನಿರ್ಧರಿಸುತ್ತದೆ. ಎಲ್ಲಾ ಶಾಲೆಗಳು, ನಿಖರವಾದ ಈ ಮಾಹಿತಿಯನ್ನು ಮೇಲೆ ತಿಳಿಸಲಾದ SSSA ಇಂದ ನಿರ್ವಹಿಸಲ್ಪಡುವ ಸಾರ್ವಜನಿಕ ವೆಬ್‌ಸೈಟ್ ನಲ್ಲಿ ಮತ್ತು ಶಾಲೆಗಳ ವೆಬ್‌ಸೈಟ್ ಗಳಲ್ಲಿ ಒದಗಿಸಬೇಕು ಮತ್ತು ಕಾಲ ಕಾಲಕ್ಕೆ ನವೀಕರಿಸಬೇಕು. ಸಾರ್ವಜನಿಕವಾಗಿ ಪ್ರಕಟಿಸಲಾದ ಮಾಹಿತಿಯ ಕುರಿತು ಭಾಗೀದಾರರು ಅಥವಾ ಇತರರಿಂದ ಬರುವ ಯಾವುದೇ ದೂರುಗಳು ಅಥವಾ ಕುಂದುಕೊರತೆಗಳನ್ನು SSSA ಪರಿಹರಿಸುತ್ತದೆ. ನಿಯಮಿತವಾಗಿ ಅಮೂಲ್ಯವಾದ ಹಿಮ್ಮಾಹಿತಿ ಪಡೆಯಲು ಯಾದೃಚ್ಛಿಕವಾಗಿ ಆಯ್ಕೆಮಾಡಿದ ವಿದ್ಯಾರ್ಥಿಗಳ ಪ್ರತಿಕ್ರಿಯೆಯನ್ನು ಆನ್‌ಲೈನ್ ನಲ್ಲಿ ಸ್ವೀಕರಿಸಲಾಗುತ್ತದೆ. SSSA ಯ ಎಲ್ಲಾ ಕೆಲಸಗಳಲ್ಲಿ ದಕ್ಷತೆ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ತಂತ್ರಜ್ಞಾನವನ್ನು ಸೂಕ್ತವಾಗಿ ಬಳಸಿಕೊಳ್ಳಲಾಗುವುದು. ಇದು ಪ್ರಸ್ತುತ ಶಾಲೆಗಳು ನಿರ್ವಹಿಸುತ್ತಿರುವ ನಿಯಂತ್ರಕ ಆದೇಶಗಳ ಭಾರವನ್ನು ಗಮನಾರ್ಹವಾಗಿ ತಗ್ಗಿಸುತ್ತದೆ.

(ಡಿ) ಶೈಕ್ಷಣಿಕ ಮಾನಕಗಳು ಮತ್ತು ಪಠ್ಯಕ್ರಮವನ್ನು ಒಳಗೊಂಡಂತೆ ಶೈಕ್ಷಣಿಕ ವಿಷಯಗಳ ನೇತೃತ್ವವನ್ನು ರಾಜ್ಯದಲ್ಲಿ SCERT ಯು (NCERT ಯ ಸಹಯೋಗ ಮತ್ತು ಸಮಾಲೋಚನೆಯೊಂದಿಗೆ) ವಹಿಸುತ್ತದೆ. SCERT ಯು ಎಲ್ಲಾ ಭಾಗೀದಾರರೊಂದಿಗೆ ವ್ಯಾಪಕ ಸಮಾಲೋಚನೆ ನಡೆಸುವ ಮೂಲಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಚೌಕಟ್ಟನ್ನು (SQAAF) ಅಭಿವೃದ್ಧಿಪಡಿಸುತ್ತದೆ. ಸಿಆರ್‌ಸಿಗಳು, ಬಿಆರ್‌ಸಿಗಳು ಮತ್ತು ಡಯಟ್‌ಗಳ ಪುನರ್ ರಚನೆಗಾಗಿ SCERT "ಬದಲಾವಣೆಯ ನಿರ್ವಹಣಾ ಪ್ರಕ್ರಿಯೆಯನ್ನೂ" ಸಹ ಮುನ್ನಡೆಸುತ್ತದೆ ಮತ್ತು ಅವುಗಳನ್ನು ಅತ್ಯುತ್ತಮ ಉತ್ಕೃಷ್ಟ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವುದರ ಮೂಲಕ ಮುಂದಿನ 3 ವರ್ಷಗಳಲ್ಲಿ ಈ ಸಂಸ್ಥೆಗಳ ಸಾಮರ್ಥ್ಯ ಮತ್ತು ಕೆಲಸದ ಸಂಸ್ಕೃತಿಯನ್ನು ಬದಲಾಯಿಸಬೇಕಾಗಿದೆ. ಏತನ್ಮಧ್ಯೆ, ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಿ ಶಾಲೆಯನ್ನು ಬಿಡುವ ಹಂತದಲ್ಲಿ ವಿದ್ಯಾರ್ಥಿಗಳ ಸಾಮರ್ಥ್ಯದ ಪ್ರಮಾಣೀಕರಣವನ್ನು ಪ್ರತಿ ರಾಜ್ಯದ ಮೌಲ್ಯಮಾಪನ / ಪರೀಕ್ಷಾ ಮಂಡಳಿಗಳು ನಿರ್ವಹಿಸುತ್ತವೆ.

**8.6.** ಶಾಲೆಗಳು, ಸಂಸ್ಥೆಗಳು, ಶಿಕ್ಷಕರು, ಅಧಿಕಾರಿಗಳು, ಸಮುದಾಯಗಳು ಮತ್ತು ಇತರ ಭಾಗೀದಾರರಿಗೆ ಸಾಕಷ್ಟು ಸಂಪನ್ಮೂಲಗಳನ್ನು ಒದಗಿಸುವಂತಹ ಸಂಸ್ಕೃತಿ, ರಚನೆಗಳು ಮತ್ತು ವ್ಯವಸ್ಥೆಗಳು ಅದಕ್ಕೆ ತಕ್ಕಂತೆ ಹೊಣೆಗಾರಿಕೆಯನ್ನೂ ಸಹ ನೀಡುತ್ತವೆ. ಶಿಕ್ಷಣ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಪಾಲುದಾರರು ಮತ್ತು ಭಾಗೀದಾರರು ತಮ್ಮ ತಮ್ಮ ಪಾತ್ರವನ್ನು ಉನ್ನತ ಮಟ್ಟದ ಸಮಗ್ರತೆ, ಸಂಪೂರ್ಣ ಬದ್ಧತೆ ಮತ್ತು ಅನುಕರಣೀಯ ಕೆಲಸದ ನೀತಿಯೊಂದಿಗೆ ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆ. ವ್ಯವಸ್ಥೆಯಲ್ಲಿನ ಪ್ರತಿಯೊಂದು ಪಾತ್ರವು, ಸ್ಪಷ್ಟವಾಗಿ ನಿರೂಪಿಸಲಾದ ಪಾತ್ರ ನಿರೀಕ್ಷೆಗಳನ್ನು ಮತ್ತು ಈ ನಿರೀಕ್ಷೆಗಳಿಗೆ ಅನುಗುಣವಾಗಿ ಆ ಪಾತ್ರದ ಕಾರ್ಯಕ್ಷಮತೆಯ ಕಠಿಣ ಮೌಲ್ಯಮಾಪನ ಪ್ರಕ್ರಿಯೆಯನ್ನು ಹೊಂದಿರುತ್ತದೆ. ಈ ರೀತಿಯ ಮೌಲ್ಯಮಾಪನ ವ್ಯವಸ್ಥೆಯು ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳುವುದರೊಂದಿಗೆ ವಸ್ತುನಿಷ್ಠ ಮತ್ತು ಅಭಿವೃದ್ಧಿ ಉದ್ದೇಶ ಹೊಂದಿರುತ್ತದೆ. ಕಾರ್ಯಕ್ಷಮತೆಯ ಪೂರ್ಣ ನೋಟವನ್ನು ಖಚಿತಪಡಿಸಿಕೊಳ್ಳಲು ಮೌಲ್ಯಮಾಪನ ವ್ಯವಸ್ಥೆಯು ಹಿಮ್ಮಾಹಿತಿ ಮತ್ತು ಮೌಲ್ಯಮಾಪನದ ಅನೇಕ ಮೂಲಗಳನ್ನು ಹೊಂದಿರುತ್ತದೆ (ಮತ್ತು ಮೌಲ್ಯಮಾಪನ ವಿಧಾನ ಸರಳವಾಗಿಯೂ ಇರುವುದಿಲ್ಲ. ಉದಾ. ವಿದ್ಯಾರ್ಥಿಗಳಿಗೆ 'ಅಂಕ ನೀಡುವುದು'). ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯಂತಹ ಫಲಿತಾಂಶಗಳು ಅನೇಕ ಮಧ್ಯಂತರ ಚಲಕಗಳು ಮತ್ತು ಬಾಹ್ಯ ಪ್ರಭಾವಗಳನ್ನು ಹೊಂದಿರುತ್ತವೆ ಎಂದು ಮೌಲ್ಯಮಾಪನವು ಗುರುತಿಸುತ್ತದೆ. ಶಿಕ್ಷಣ ಪ್ರಕ್ರಿಯೆಯಲ್ಲಿ, ವಿಶೇಷವಾಗಿ ಶಾಲೆಯ ಮಟ್ಟದಲ್ಲಿ ಗುಂಪು ಕಾರ್ಯದ ಅಗತ್ಯತೆಯನ್ನೂ ಸಹ ಅದು ಗುರುತಿಸುತ್ತದೆ. ಶಿಕ್ಷಣ ಕ್ಷೇತ್ರದಲ್ಲಿರುವ ಎಲ್ಲಾ ವ್ಯಕ್ತಿಗಳ ಪ್ರಚಾರ, ಗುರುತಿಸುವಿಕೆ ಮತ್ತು ಹೊಣೆಗಾರಿಕೆಯು, ಅಂತಹ ಕಾರ್ಯಕ್ಷಮತೆಯ ಮೌಲ್ಯಮಾಪನವನ್ನು ಆಧರಿಸಿರುತ್ತದೆ. ಈ ಅಭಿವೃದ್ಧಿ, ಕಾರ್ಯಕ್ಷಮತೆ ಮತ್ತು ಹೊಣೆಗಾರಿಕೆ ವ್ಯವಸ್ಥೆಯನ್ನು, ಉನ್ನತ ಮಟ್ಟದ ನೈತಿಕತೆಯಿಂದ ಮತ್ತು ಅತ್ಯಂತ ವ್ಯವಸ್ಥಿತವಾಗಿ ತಮ್ಮ ನಿಯಂತ್ರಣ ವ್ಯಾಪ್ತಿಯಲ್ಲಿ ನಡೆಸಲಾಗಿರುವುದನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಅಧಿಕಾರಿಗಳು ಜವಾಬ್ದಾರರಾಗಿರುತ್ತಾರೆ.

**8.7.** ಸಾರ್ವಜನಿಕ ಸೇವಾ ಮನೋಭಾವ ಹೊಂದಿರುವ (philanthropic) ಖಾಸಗಿ ಶಾಲೆಗಳನ್ನು ಪ್ರೋತ್ಸಾಹಿಸಲಾಗುತ್ತದೆ ಎನ್ನುವುದನ್ನು ಮನವರಿಕೆ ಮಾಡಿಕೊಡಲು, ಸಾರ್ವಜನಿಕ ಮತ್ತು ಖಾಸಗಿ ಶಾಲೆಗಳನ್ನು (ಕೇಂದ್ರ ಸರ್ಕಾರವು ನಿರ್ವಹಿಸುವ / ಧನ ಸಹಾಯ ಮಾಡುವ / ನಿಯಂತ್ರಿಸುವ ಶಾಲೆಗಳನ್ನು ಹೊರತುಪಡಿಸಿ) ಒಂದೇ ರೀತಿಯ ಅರ್ಹತೆಗಳು, ಮಾನದಂಡಗಳು ಮತ್ತು ಪ್ರಕ್ರಿಯೆಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುವುದು ಮತ್ತು ಅಂಗೀಕರಣ ನೀಡಲಾಗುವುದು. ಈ ಪ್ರಕ್ರಿಯೆಯಲ್ಲಿ ಶಾಲಾ ಮಾಹಿತಿಯನ್ನು ಆನ್ ಲೈನ್ ಮತ್ತು ಆಫ್ ಲೈನ್ ವಿಧಾನದಲ್ಲಿ ಸಾರ್ವಜನಿಕರಿಗೆ ಒದಗಿಸುವುದರ ಮೂಲಕ ಪಾರದರ್ಶಕತೆಗೆ ಒತ್ತು ನೀಡಲಾಗುತ್ತದೆ. ಅನಿಯಂತ್ರಿತ ಬೋಧನಾ ಶುಲ್ಕದ ಹೊರೆಯಿಂದ ಪೋಷಕರು ಮತ್ತು ಸಮುದಾಯಗಳನ್ನು ರಕ್ಷಿಸುವ ಜೊತೆಗೆ ಗುಣಮಟ್ಟದ ಶಿಕ್ಷಣಕ್ಕಾಗಿ, ಸಾರ್ವಜನಿಕ ಸೇವಾ ಮನೋಭಾವದ ಖಾಸಗಿ ಪ್ರಯತ್ನಗಳನ್ನು ಪ್ರೋತ್ಸಾಹಿಸುವ ಮೂಲಕ ಶಿಕ್ಷಣ ಸಾರ್ವಜನಿಕ ಸರಕು (Education as public good) ಎಂಬ ಪರಿಕಲ್ಪನೆಯ ಸ್ವರೂಪವನ್ನು ದೃಢಪಡಿಸುತ್ತದೆ. ಸಾರ್ವಜನಿಕ ಮತ್ತು ಖಾಸಗಿ ಶಾಲೆಗಳಿಗೆ ಸಂಬಂಧಿಸಿದಂತೆ ಶಾಲೆಗಳ ವೆಬ್‌ಸೈಟ್ ಮತ್ತು SSSA 'ವೆಬ್‌ಸೈಟ್' ನಲ್ಲಿ ತರಗತಿ ಕೊಠಡಿಗಳು, ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಸಂಖ್ಯೆ ಕಲಿಸುವ ವಿಷಯಗಳು, ಯಾವುದೇ ರೀತಿಯ ಶುಲ್ಕಗಳು ಹಾಗೂ NAS ಮತ್ತು SAS ನಂತಹ ಪ್ರಮಾಣೀಕೃತ ಮೌಲ್ಯಮಾಪನಗಳ ಆಧಾರದ ಮೇಲೆ ಒಟ್ಟಾರೆ ವಿದ್ಯಾರ್ಥಿ ಫಲಿತಾಂಶಗಳ ಮಾಹಿತಿಯನ್ನು (ಕನಿಷ್ಠ ಪಕ್ಷ ಈ ಮಾಹಿತಿಯಾದರೂ ಇರಬೇಕು) ಸಾರ್ವಜನಿಕರಿಗಾಗಿ ಪ್ರಕಟಿಸಲಾಗುತ್ತದೆ. ಕೇಂದ್ರ ಸರ್ಕಾರದಿಂದ ನಿಯಂತ್ರಿಸಲ್ಪಡುವ / ನಿರ್ವಹಿಸುವ / ಧನ ಸಹಾಯ ಪಡೆದ ಶಾಲೆಗಳಿಗಾಗಿ CBSE ಯು MHRD ಯೊಂದಿಗೆ ಸಮಾಲೋಚಿಸಿ ಒಂದು ಚೌಕಟ್ಟನ್ನು ಸಿದ್ಧಪಡಿಸುತ್ತದೆ. ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು 'ಲಾಭರಹಿತ' ಘಟಕವಾಗಿ ಪರಿಗಣಿಸಿ, ಒಂದೇ ರೀತಿಯ ಲೆಕ್ಕಪರಿಶೋಧನೆ ಮತ್ತು ಬಹಿರಂಗಪಡಿಸುವಿಕೆಯ ಮಾನದಂಡಗಳಿಗೆ ಒಳಪಡಿಸಲಾಗುತ್ತದೆ. ಹೆಚ್ಚುವರಿ, ಯಾವುದಾದರೂ ಇದ್ದರೆ, ಶೈಕ್ಷಣಿಕ ಕ್ಷೇತ್ರದಲ್ಲಿ ಮರುಹೂಡಿಕೆ ಮಾಡಲಾಗುತ್ತದೆ.

**8.8.** ಕಳೆದ ದಶಕದಲ್ಲಿ ಪಡೆದುಕೊಂಡ ಅನುಭವ ಮತ್ತು ಕಲಿಕೆಯ ಆಧಾರದ ಮೇಲೆ ಸುಧಾರಣೆಗಳನ್ನು ತರಲು ಮಾನಕಗಳ ರಚನೆ / ನಿಯಂತ್ರಕ ಚೌಕಟ್ಟು ಮತ್ತು ಶಾಲಾ ನಿಯಂತ್ರಣ, ಅಂಗೀಕರಣ ಮತ್ತು ಆಡಳಿತಕ್ಕೆ ಅನುಕೂಲವಾಗುವ ವ್ಯವಸ್ಥೆಗಳನ್ನು ಪರಿಶೀಲಿಸಲಾಗುತ್ತದೆ. ಈ ಪರಿಶೀಲನೆಯ ಮುಖ್ಯ ಉದ್ದೇಶವೆಂದರೆ, ಎಲ್ಲಾ ವಿದ್ಯಾರ್ಥಿಗಳು, ವಿಶೇಷವಾಗಿ ಹಿಂದುಳಿದ ಮತ್ತು ಅವಕಾಶ ವಂಚಿತ ವಿದ್ಯಾರ್ಥಿಗಳು ಆರಂಭಿಕ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣದ ಹಂತದಿಂದ (3ನೇ ವಯಸ್ಸಿನಿಂದ) ಉನ್ನತ ಮಾಧ್ಯಮಿಕ ಹಂತದ ಶಿಕ್ಷಣದವರೆಗೆ (12ನೇ ತರಗತಿಯವರೆಗೆ) ಉನ್ನತ ಗುಣಮಟ್ಟದ ಮತ್ತು ಸಮಾನವಾದ ಶಾಲಾ ವ್ಯವಸ್ಥೆಗೆ ಸಾರ್ವತ್ರಿಕ, ಉಚಿತ ಮತ್ತು ಕಡ್ಡಾಯ ಪ್ರವೇಶವನ್ನು ಹೊಂದಿರುವಂತೆ ಖಚಿತಪಡಿಸಿಕೊಳ್ಳುವುದಾಗಿದೆ. ಭೌತಿಕ ಮತ್ತು ಮೂಲಸೌಕರ್ಯಗಳಂತಹ ಯಾಂತ್ರಿಕ ಸ್ವರೂಪದ ನಿರ್ದಿಷ್ಟತೆಗಳ ಮೇಲಿನ ಅತಿಯಾದ ಪ್ರಾಮುಖ್ಯತೆಯನ್ನು ಕಡಿಮೆ ಮಾಡಲಾಗುತ್ತದೆ ಮತ್ತು ಅವಶ್ಯಕತೆಗಳು ವಾಸ್ತವ ಅಂಶಗಳಿಗೆ ಅನುಗುಣವಾಗಿ ಇರುವಂತೆ ನೋಡಿಕೊಳ್ಳಲಾಗುತ್ತದೆ. ಉದಾ., ಶಾಲೆ ಹೊಂದಿರಬೇಕಾದ ಜಮೀನು ಮತ್ತು ಕೋಣೆಯ ಗಾತ್ರಗಳು, ನಗರ ಪ್ರದೇಶಗಳಲ್ಲಿನ ಆಟದ ಮೈದಾನಗಳ ಪ್ರಾಯೋಗಿಕತೆಗಳು ಇತ್ಯಾದಿ. ಮಕ್ಕಳ ಸುರಕ್ಷತೆ, ಭದ್ರತೆ ಮತ್ತು ಆಹ್ಲಾದಕರ ಹಾಗೂ

ಉತ್ಪಾದಕ ಕಲಿಕೆಯ ಸ್ಥಳವನ್ನು ಖಚಿತಪಡಿಸಿಕೊಂಡು, ಸ್ಥಳೀಯ ಅಗತ್ಯತೆಗಳು ಮತ್ತು ನಿರ್ಬಂಧಗಳ ಆಧಾರದ ಮೇಲೆ ತನ್ನದೇ ಆದ ನಿರ್ಧಾರಗಳನ್ನು ತೆಗೆದುಕೊಳ್ಳಲು ಪ್ರತಿ ಶಾಲೆಗೆ ಅವಕಾಶ ಮಾಡಿಕೊಡುತ್ತಾ, ಈ ಕುರಿತು ಇರುವ ಕಡ್ಡಾಯ ನಿಬಂಧನೆಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತದೆ ಮತ್ತು ಅವುಗಳನ್ನು ಸಡಿಲಗೊಳಿಸಲಾಗುತ್ತದೆ. ಶಾಲೆಗಳು ತಮಗೆ ಸಂಬಂಧಿಸಿದ ಶೈಕ್ಷಣಿಕ ಫಲಿತಾಂಶಗಳು, ಹಣಕಾಸು ವ್ಯವಹಾರಗಳು, ಶೈಕ್ಷಣಿಕ ಮತ್ತು ಕಾರ್ಯಾಚರಣೆಯ ವಿಷಯಗಳನ್ನು ಪಾರದರ್ಶಕವಾಗಿ ಬಹಿರಂಗಪಡಿಸುವುದಕ್ಕೆ ಸೂಕ್ತ ಪ್ರಾಮುಖ್ಯತೆಯನ್ನು ನೀಡಲಾಗುವುದು ಮತ್ತು ಅವುಗಳನ್ನು ಶಾಲೆಗಳ ಮೌಲ್ಯಮಾಪನ ಮಾಡುವ ಪ್ರಕ್ರಿಯೆಯಲ್ಲಿ ಸೂಕ್ತವಾಗಿ ಸೇರ್ಪಡೆಗೊಳಿಸಲಾಗುವುದು. ಈ ಕ್ರಮದಿಂದಾಗಿ ಎಲ್ಲಾ ಮಕ್ಕಳಿಗೆ ಉಚಿತ ನ್ಯಾಯಸಮ್ಮತ ಮತ್ತು ಗುಣಮಟ್ಟದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಖಾತರಿಪಡಿಸುವ ಸುಸ್ಥಿರ ಅಭಿವೃದ್ಧಿ ಗುರಿ 4 (SDG 4) ಅನ್ನು ಸಾಧಿಸುವತ್ತ ಭಾರತ ಮತ್ತಷ್ಟು ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ.

**8.9**. ಸಾರ್ವಜನಿಕ ಶಾಲಾ ಶಿಕ್ಷಣ ವ್ಯವಸ್ಥೆಯ ಉದ್ದೇಶವು ಎಲ್ಲಾ ಪ್ರಕಾರದ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ನೀಡುವುದು ಅತ್ಯಂತ ಆಕರ್ಷಕ ಆಯ್ಕೆಯಾಗುವಂತೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವುದಾಗಿದೆ.

**8.10**. ನಿಯಮಿತವಾಗಿ ಸಂಪೂರ್ಣ ಶಿಕ್ಷಣ ವ್ಯವಸ್ಥೆಯ 'ಆರೋಗ್ಯ ತಪಾಸಣೆ' ಯನ್ನು ಕೈಗೊಳ್ಳಲು, ಮೌಲ್ಯಮಾಪನ ಕಾರ್ಯವಿಧಾನಗಳು ಮತ್ತು ದತ್ತಾಂಶ ವಿಶ್ಲೇಷಣೆಗೆ ಸಹಾಯ ಮಾಡಬಹುದಾದ NCERT ಯಂತಹ ಇತರ ಸರ್ಕಾರಿ ಸಂಸ್ಥೆಗಳ ಸೂಕ್ತ ಸಹಕಾರದೊಂದಿಗೆ, ಪ್ರಸ್ತಾವಿತ ಹೊಸ ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ PARAKH, ವಿದ್ಯಾರ್ಥಿಗಳ ಕಲಿಕಾ ಮಟ್ಟಗಳ ಮಾದರಿ ಆಧಾರಿತ ರಾಷ್ಟ್ರೀಯ ಸಾಧನಾ ಸಮೀಕ್ಷೆ (NAS) ಯನ್ನು ನಡೆಸುತ್ತದೆ. ಈ ಮೌಲ್ಯಮಾಪನವು ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಎಲ್ಲಾ ವಿದ್ಯಾರ್ಥಿಗಳನ್ನು ಒಳಗೊಂಡಿರುತ್ತದೆ. ರಾಜ್ಯಗಳು ತಮ್ಮದೇ ಆದ ಗಣತಿ ಆಧಾರಿತ ರಾಜ್ಯ ಮೌಲ್ಯಾಂಕನ ಸಮೀಕ್ಷೆ (SAS) ಯನ್ನು ನಡೆಸಲು ಪ್ರೋತ್ಸಾಹಿಸಲಾಗುವುದು, ಇದರ ಫಲಿತಾಂಶಗಳನ್ನು ಅಭಿವೃದ್ಧಿ ಉದ್ದೇಶಗಳಿಗಾಗಿ, ಶಾಲೆಗಳು ಒಟ್ಟಾರೆ ಫಲಿತಾಂಶ ಮತ್ತು ವಿದ್ಯಾರ್ಥಿಗಳ ಫಲಿತಾಂಶವನ್ನು ಅನಾಮಧೇಯ ರೂಪದಲ್ಲಿ ಸಾರ್ವಜನಿಕವಾಗಿ ಬಹಿರಂಗಪಡಿಸಲು ಮತ್ತು ಶಿಕ್ಷಣ ವ್ಯವಸ್ಥೆಯ ನಿರಂತರ ಸುಧಾರಣೆಗೆ ಮಾತ್ರ ಬಳಸಲಾಗುತ್ತದೆ. ಉದ್ದೇಶಿತ ಹೊಸ ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ PARAKH ಸ್ಥಾಪನೆಯಾಗುವವರೆಗೂ NCERT ಯು NAS ಅನ್ನು ಮುಂದುವರಿಸಬಹುದು.

**8.11**. ಅಂತಿಮವಾಗಿ, ಶಾಲೆಗಳಿಗೆ ದಾಖಲಾದ ಮಕ್ಕಳನ್ನು ಮತ್ತು ಹದಿಹರೆಯದವರನ್ನು ಈ ಇಡೀ ಪ್ರಕ್ರಿಯೆಯಲ್ಲಿ ಮರೆಯಬಾರದು; ಏಕೆಂದರೆ, ಶಾಲಾ ವ್ಯವಸ್ಥೆಯನ್ನು ಅವರಿಗಾಗಿಯೇ ವಿನ್ಯಾಸಗೊಳಿಸಲಾಗಿದೆ. ಹದಿಹರೆಯದವರು ಎದುರಿಸುತ್ತಿರುವ ವಿವಿಧ ಕಷ್ಟಕರ ಸಮಸ್ಯೆಗಳಾದ ಮಾದಕ ದ್ರವ್ಯ ಸೇವನೆ ಮತ್ತು ಹಿಂಸೆ, ತಾರತಮ್ಯ ಮತ್ತು ಕಿರುಕುಳದ ಕುರಿತು ಗಮನ ಹರಿಸಬೇಕಾಗುತ್ತದೆ. ವಿಶೇಷವಾಗಿ ಹೆಣ್ಣು ಮಕ್ಕಳು ಸೇರಿದಂತೆ, ಮಕ್ಕಳ / ಹದಿಹರೆಯದವರ ಹಕ್ಕುಗಳು ಅಥವಾ ಸುರಕ್ಷತೆಯ ವಿರುದ್ಧದ ಯಾವುದೇ ಉಲ್ಲಂಘನೆಗಳ ಬಗ್ಗೆ ಸೂಕ್ತವಾದ ಪ್ರಕ್ರಿಯೆಯನ್ನು ಮತ್ತು ಈ ಕುರಿತು ವರದಿ ಮಾಡಲು ಸ್ಪಷ್ಟ, ಸುರಕ್ಷಿತ ಮತ್ತು ಪರಿಣಾಮಕಾರಿ ಕಾರ್ಯವಿಧಾನಗಳನ್ನು ಒಳಗೊಂಡಿರಬೇಕು ಹಾಗೂ ಅವರ ಸುರಕ್ಷತೆ ಮತ್ತು ಹಕ್ಕುಗಳ ಬಗ್ಗೆ ಎಚ್ಚರಿಕೆಯಿಂದ ಗಮನ ಹರಿಸಬೇಕು. ಎಲ್ಲಾ ವಿದ್ಯಾರ್ಥಿಗಳಿಗೆ ಪರಿಣಾಮಕಾರಿ ಸಮಯೋಚಿತ ಮತ್ತು ಚಿರಪರಿಚಿತವಾಗಿರುವ ಇಂತಹ ಕಾರ್ಯವಿಧಾನಗಳನ್ನು ಅಭಿವೃದ್ಧಿಪಡಿಸಲು ಹೆಚ್ಚಿನ ಆದ್ಯತೆ ನೀಡಲಾಗುವುದು.

# ಭಾಗ - 2 : ಉನ್ನತ ಶಿಕ್ಷಣ

## 9. ಗುಣಮಟ್ಟದ ವಿಶ್ವವಿದ್ಯಾಲಯಗಳು ಮತ್ತು ಮಹಾವಿದ್ಯಾಲಯಗಳು; ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯ ಕುರಿತು ಒಂದು ನವೀನ ಹಾಗೂ ದೂರದರ್ಶಿತ್ವದ ದೃಷ್ಟಿಕೋನ

**9.1.** ಮಾನವ ಕುಲವನ್ನು ಮತ್ತು ಈ ಮೂಲಕ ಸಾಮಾಜಿಕ-ಸುಸಂಗತ-ಸುಸ್ಥಿರವಾದ ವ್ಯವಸ್ಥೆಯನ್ನು ಉತ್ತಮೀಕರಣ ಗೊಳಿಸಲು, ಅದೂ ಅಲ್ಲದೇ ಅಭಿವೃದ್ಧಿಶೀಲ ದೇಶವಾಗಿರುವ ಭಾರತದಲ್ಲಿ ಸಂವಿಧಾನಾತ್ಮಕವಾಗಿ ರೂಪಿಸಲಾಗಿರುವ -ಪ್ರಜಾಪ್ರಭುತ್ವದ, ನ್ಯಾಯಪರತೆಯ,ಸಾಮಾಜಿಕ ಪ್ರಜ್ಞೆಯ ಜಾಗೃತಿಯ, ಸುಸಂಸ್ಕೃತ, ಸ್ವತಂತ್ರ, ಮಾನವೀಯ, ರಾಷ್ಟ್ರನಿರ್ಮಾಣದಲ್ಲಿ, ಉನ್ನತ ಶಿಕ್ಷಣವು ಅತ್ಯಂತ ಮಹತ್ವದ ಪಾತ್ರವನ್ನು ಹೊಂದಿರುತ್ತದೆ. ಹೀಗಾಗಿ ಈ ಉನ್ನತ ಶಿಕ್ಷಣವು ಪ್ರಾಮುಖವಾಗಿ ದೇಶದ ಸುಸ್ಥಿರವಾದ ಜೀವನ ವಿಧಾನಕ್ಕೆ ಮತ್ತು ಆರ್ಥಿಕ ಅಭಿವೃದ್ಧಿಗಳಿಗೆ ಅತ್ಯಂತ ಪ್ರಮುಖವಾದ ಸೂತ್ರಗಳನ್ನೇ ನಿರೂಪಿಸುತ್ತದೆ. ಭಾರತವು ಜ್ಞಾನಾಧಾರಿತ ಆರ್ಥಿಕ ಕ್ಷೇತ್ರ ಹಾಗೂ ಸಮಾಜವಾಗಿ ರೂಪುಗೊಳ್ಳುತ್ತಿರುವುದರಿಂದ, ಸಹಜವಾಗಿಯೇ ಯುವಸಮುದಾಯವು ಉನ್ನತ ಶಿಕ್ಷಣವನ್ನು ಪಡೆದುಕೊಳ್ಳುವ ಅಭೀಪ್ಸೆಯನ್ನು ಹೊಂದಿರುತ್ತದೆ.

**9.2.** ಸುಸ್ಥಿರವಾದ ಉತ್ತಮ ಅಭಿವೃದ್ಧಿಯ ಗುರಿಯನ್ನು ಹೊಂದಿರುವ ಉನ್ನತ ಶಿಕ್ಷಣವು 21ನೇ ಶತಮಾನದ ಆದ್ಯತೆಯಾಗಿರುತ್ತದೆ.ಹೀಗಾಗಿ,ಚಿಂತನಪರ,ಸರ್ವಾಂಗೀಣವಾಗಿರುವ,ಹಾಗೂಸೃಜನಾತ್ಮಕವ್ಯಕ್ತಿತ್ವಗಳನ್ನುರೂಪಿಸುವದೇ 21ನೇ ಶತಮಾನದ ಪ್ರಮುಖ ಅವಶ್ಯಕತೆಯೂ ಆಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ಒಂದು ಅಥವಾ ಒಂದಕ್ಕಿಂತ ಹೆಚ್ಚು ವಿಷಯಗಳಲ್ಲಿ ಆಳವಾದ ಜ್ಞಾನವನ್ನು ಹೊಂದಿರಬೇಕು ಮತ್ತು ಜೊತೆ ಜೊತೆಯಾಗಿಯೇ ಗುಣ-ಸ್ವಭಾವಗಳನ್ನೂ ಉತ್ತಮಗೊಳಸಿಕೊಳ್ಳಲು, ನೈತಿಕ ಮೌಲ್ಯಗಳನ್ನು, ಸಹಜ ಕುತೂಹಲವನ್ನು, ವೈಜ್ಞಾನಿಕ ಮನೋಭಾವವನ್ನೂ, ಸೃಜನಾತ್ಮಕತೆಯನ್ನು, ಸೇವಾಮನೋಭಾವದಲ್ಲಿ ತನ್ಮಯತೆಯನ್ನು ರೂಢಿಸಿಕೊಂಡಿರಬೇಕು ಮತ್ತು ವಿಜ್ಞಾನದ ಎಲ್ಲ ವಿಭಾಗಗಳ, ಸಮಾಜ ವಿಜ್ಞಾನಗಳ, ಕಲಾ ವಿಷಯಗಳ, ಮಾನವಿಕಗಳನ್ನು ಒಳಗೊಂಡಂತೆ ಭಾಷೆಗಳನ್ನು, ಜೊತೆಜೊತೆಗೆ ವೃತ್ತಿಪರಿಣಿತಿಯ, ತಾಂತ್ರಿಕ-ವಿಷಯಗಳ ಮತ್ತು ವೃತ್ತಿಪರ ವಿಷಯಗಳನ್ನೂ ಆಳವಾಗಿ ಅಭ್ಯಸಿಸಿರಬೇಕು. 21ನೇ ಶತಮಾನದ ಕ್ಷಮತೆಯನ್ನು ರೂಪಿಸುವ ಸಲುವಾಗಿ, ಗುಣಾತ್ಮಕವಾಗಿರುವ ಉನ್ನತ ಶಿಕ್ಷಣವು ರಚನಾತ್ಮಕವಾಗಿ ಸಾರ್ವಜನಿಕರ ಒಳಗೊಳ್ಳುವಿಕೆಯನ್ನು ಮತ್ತು ಸಮಾಜಕ್ಕೆ ಫಲಪ್ರದವಾಗಿರುವ ಕೊಡುಗೆಗಳನ್ನು ಸಮರ್ಥನೀಯವಾಗಿ ನೀಡುವಂತೆ ಇರಬೇಕಾಗಿದೆ. ಅದಕ್ಕಾಗಿ ವಿದ್ಯಾರ್ಥಿಗಳನ್ನು ಅರ್ಥಪೂರ್ಣ ಹಾಗೂ ತೃಪ್ತಿದಾಯಕವಾದ-ಬದುಕನ್ನು ರೂಪಿಸಿಕೊಳ್ಳುವಂತೆ, ತನ್ಮೂಲಕ ಆರ್ಥಿಕ-ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಸಮರ್ಥರಾಗುವಂತೆ ಉನ್ನತ ಶಿಕ್ಷಣವನ್ನು ರೂಪಿಸಬೇಕಾಗಿದೆ.

**9.3.** ಸಮಗ್ರವಾಗಿ ವಿಕಸನಗೊಂಡ ವ್ಯಕ್ತಿಗಳನ್ನು ಈ ದಿಸೆಯಲ್ಲಿ ಪರಿಣಿತಿಗೊಳಿಸುವ ಸಲುವಾಗಿ, ಈಗಾಗಲೇ ನಿಗದಿಗೊಳಿಸಲಾಗಿರುವ ಕೌಶಲ್ಯ ಮತ್ತು ಮೌಲ್ಯಗಳನ್ನು, ಕಲಿಕಾ ಹಂತದಲ್ಲಿಯೇ ಅಂದರೆ ಪೂರ್ವ-ಪ್ರಾಥಮಿಕದಿಂದ ಪ್ರಾರಂಭಿಸಿ ಉನ್ನತ ಶಿಕ್ಷಣದವರೆಗೂ ಅಳವಡಿಸಿ, ಅನುಷ್ಠಾನಿಸಬೇಕಾಗಿರುವುದು ಇಂದಿನ ಅಗತ್ಯವಾಗಿದೆ.

**9.4.** ಇನ್ನು ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ, ಈ ಉನ್ನತ ಶಿಕ್ಷಣವು ಖಚಿತವಾಗಿಯೂ ಪ್ರಜ್ಞಾಪೂರ್ಣತೆಯನ್ನು, ಸಾಮಾಜಿಕ ಪ್ರಜ್ಞೆಯನ್ನು ಮತ್ತು ಜ್ಞಾನಾಧಾರಿತವಾಗಿರುವುದನ್ನು ಮತ್ತು ಈ ಮೂಲಕ ಕೌಶಲ್ಯಪೂರ್ಣ ರಾಷ್ಟ್ರವನ್ನು ಅಭಿವೃದ್ಧಿ ಪಡಿಸುವಂತೆ ಇರಬೇಕಾಗಿದೆ. ಈ ಮೂಲಕವಾಗಿ ತನ್ನದೇ ಸಮಸ್ಯೆಗಳಿಗೆ ಸೂಕ್ತವಾಗಿರುವ ಶಕ್ತ-ಸಮರ್ಥ ಪರಿಹಾರಗಳನ್ನು ರೂಪಿಸುವದಾಗಿರುತ್ತದೆ. ಉನ್ನತ ಶಿಕ್ಷಣವು ಪರಿಪೂರ್ಣವಾಗಿ ಜ್ಞಾನಸೃಷ್ಟಿಯ ಮತ್ತು ಆ ಮೂಲಕ ಆವಿಷ್ಕಾರಗಳನ್ನು ರೂಪಿಸಿ, ಅವುಗಳು ಅಭಿವೃದ್ಧಿಶೀಲ ರಾಷ್ಟ್ರೀಯ ಆರ್ಥಿಕತೆಗೆ ಒದಗಿ ಬರುವ ಹಾಗೆ ಇರುವ ಆಧಾರಗಳ ಮೇಲೆಯೇ ಸಾಕಾರಗೊಳ್ಳುವಂತೆ ಇರಬೇಕು. ಹೀಗಾಗಿ, ಉನ್ನತ ಶಿಕ್ಷಣದ ಮೂಲ ಉದ್ದೇಶವು, ಪ್ರತಿಯೊಬ್ಬ ಉದ್ಯೋಗಿಗೂ, ಕೇವಲ ಉದ್ಯೋಗಗಳಿಗೆ ಹೆಚ್ಚಿನ ಪ್ರಮಾಣದ ಅವಕಾಶಗಳನ್ನು ರೂಪಿಸುವುದಕ್ಕಿಂತ ಹೆಚ್ಚಿನ ವಿಷಯಗಳನ್ನು ಹೊಂದಿದೆ. ಇದು ಹೆಚ್ಚು ಸ್ಪಂದನಶೀಲ, ಸಾಮಾಜಿಕವಾಗಿ ಒಳಗೊಳ್ಳುವ, ಸಮುದಾಯಗಳ ಜೊತೆಗೆ ಸೌಹಾರ್ದತೆಯಲ್ಲಿ ಮತ್ತೂ ಸಂತಸಭರಿತವಾಗಿ ಮಿಲಿತಗೊಳ್ಳುವ ಹಾಗೂ ಸಮೃದ್ಧ ರಾಷ್ಟ್ರಕ್ಕೆ ಅವಶ್ಯವಾಗಿರುವ ಸೂತ್ರಗಳನ್ನು ಉನ್ನತ ಶಿಕ್ಷಣವು ಪ್ರತಿನಿಧಿಸುತ್ತದೆ.

**9.2 ಪ್ರಚಲಿತ ಅವಧಿಯಲ್ಲಿ ಭಾರತವು ಎದುರಿಸಿದ ಕೆಲವು ಸಮಸ್ಯೆಗಳು ಇಂತಿವೆ;**

ಅ) ಹರಿದು ಚೂರಾಗಿರುವ ಉನ್ನತ ಶಿಕ್ಷಣದ ವಾತಾವರಣ;

ಆ) ಸಂಜ್ಞಾನಾತ್ಮಕ–ಕೌಶಲ್ಯಗಳು ಮತ್ತು ಅಧ್ಯಯನದ ಫಲಿತಗಳನ್ನು ಕುರಿತು ಹೆಚ್ಚು ಲಕ್ಷ್ಯಕೊಡದಿರುವುದು;

ಇ) ನಿಕಾಯಗಳ (ಜ್ಞಾನಶಾಖೆಗಳ) ಬಿಗಿಯಾದ ವರ್ಗೀಕರಣ, ಆರಂಭಿಕ ಹಂತದಲ್ಲೇ ವಿಭಾಗೀಕರಣ ಮತ್ತು ಸೀಮಿತ–ವ್ಯಾಪ್ತಿಯ ಅಧ್ಯಯನಕ್ಕೆ ಮಾತ್ರ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸಿದ್ದು;

ಈ) ಹಿಂದುಳಿದ ಕ್ಷೇತ್ರಗಳಲ್ಲಿ ವ್ಯವಸ್ಥೆಯ ಅಲಭ್ಯತೆ, ಆ ಕ್ಷೇತ್ರಗಳಲ್ಲಿ ಸ್ಥಳೀಯ ಭಾಷೆಗಳಲ್ಲಿ ಕಲಿಸುವ ಉನ್ನತ ಶಿಕ್ಷಣ ಸಂಸ್ಥೆಗಳು ವಿರಳ.

ಉ) ಸೀಮಿತ ಸಂಖ್ಯೆಯ ಪರಿಣಿತರ ಲಭ್ಯತೆ ಹಾಗೂ ಸಾಂಸ್ಥಿಕ–ಸ್ವಾಯತ್ತತೆಯ ಕೊರತೆ.

ಊ) ಅಧ್ಯಾಪಕರುಗಳ ಪದೋನ್ನತಿಯಲ್ಲಿ ಅಸಮರ್ಪಕ ವಿಧಾನಗಳ ಅಳವಡಿಕೆ;

ಋ) ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಮತ್ತು ಮಹಾವಿದ್ಯಾಲಯಗಳಲ್ಲಿ ಸಂಶೋಧನೆಯ ಕುರಿತು ಕಡಿಮೆ ಲಕ್ಷ್ಯ ಕೊಟ್ಟಿದ್ದು, ಮತ್ತು ಎಲ್ಲ ನಿಕಾಯಗಳಿಗೂ (ವಿಷಯಗಳಲ್ಲೂ) ಸಂಶೋಧನೆಗೆ ಧನಸಹಾಯವನ್ನು ಒದಗಿಸುವಲ್ಲಿ ತಾರತಮ್ಯ ಮತ್ತು ಅಸ್ಪರ್ಧಾತ್ಮಕ ವಿಧಾನಗಳ ಬಳಕೆ.

ಎ) ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸೂಕ್ತಗುಣಮಟ್ಟದ ಆಡಳಿತ ಮತ್ತು ನಾಯಕತ್ವದ ಕೊರತೆ

ಏ) ಪರಿಣಾಮಕಾರಿಯಲ್ಲದ ನಿಯಂತ್ರಣ ವ್ಯವಸ್ಥೆ

ಐ) ಬೃಹತ್ ವಿಶ್ವವಿದ್ಯಾಲಯಗಳು ಇದರಿಂದ ಸಂಲಗ್ನಿತ ಪದವಿ ಶಿಕ್ಷಣದಲ್ಲಿ ಗುಣಮಟ್ಟದ ಕೊರತೆ.

**9.3 ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಆಮೂಲಾಗ್ರವಾದ ಪರಿವರ್ತನೆ ತರುವ ಮತ್ತು ಪುನರ್–ಶಕ್ತಿಸಂಪನ್ನಗೊಳಿಸುವ ಮೂಲಕ ಈ ಎಲ್ಲ ಸವಾಲುಗಳನ್ನೂ ಸಮರ್ಥವಾಗಿಯೇ ಪರಿಹಾರಗೊಳಿಸುವಲ್ಲಿ ಮತ್ತು ಆ ಮೂಲಕ ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣವನ್ನು ಒದಗಿಸುವ, ಸಮಾನತೆ ಮತ್ತು ಸುಸಂಗತಗೊಳಿಸುವಿಕೆಯನ್ನು ಹೊಂದಿರುವಂತೆ ಇರುವ ಪರಿಕಲ್ಪನೆಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿಯು ಹೊಂದಿರುತ್ತದೆ. ಈ ನೀತಿಯು ಪ್ರಚಲಿತದಲ್ಲಿ ಅನುಷ್ಠಾನದಲ್ಲಿರುವ ನೀತಿಗೆ ಈ ಕೆಳಕಂಡ ಪರಿವರ್ತನೆಗಳನ್ನು ಒಳಗೊಂಡಿರುತ್ತದೆ;**

ಅ) ದೇಶದ ಎಲ್ಲಾ ಜಿಲ್ಲೆಗಳಲ್ಲಿ ಅಥವಾ ಸನಿಹದಲ್ಲಿರುವಂತೆ ಒಂದಾದರೂ ದೊಡ್ಡ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ಬಹುಶಿಸ್ತೀಯ (multidisciplinary) ಅಧ್ಯಯನಕ್ಕೂ ಸ್ಥಳೀಯ ಭಾಷೆಗಳಲ್ಲಿ ಅಧ್ಯಯನಕ್ಕೂ ಅವಕಾಶ ಮಾಡಿಕೊಡುವುದು

ಆ) ಪದವಿ–ಪೂರ್ವ ಶಿಕ್ಷಣ ವ್ಯವಸ್ಥೆಯಲ್ಲಿಯೂ ಬಹುಶಿಸ್ತೀಯ (multidisciplinary) ಅಧ್ಯಯನಕ್ಕೆ ಅವಕಾಶ ಕಲ್ಪಿಸುವುದು

ಇ) ಸಂಸ್ಥೆಗಳು ಮತ್ತು ಪರಿಣಿತ ಬೋಧಕ ವರ್ಗದ ಸ್ವಾಯತ್ತತೆ.

ಈ) ವಿದ್ಯಾರ್ಥಿಗಳ ಅನುಭವವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಪಠ್ಯಕ್ರಮ, ಕಲಿಸುವ ವ್ಯವಸ್ಥೆ ಮತ್ತು ಮೌಲ್ಯಮಾಪನಗಳಲ್ಲಿ ಆಮೂಲಾಗ್ರ ಬದಲಾವಣೆ ತರುವುದು.

ಉ) ಅಧ್ಯಾಪನ, ಸಂಶೋಧನೆ ಮತ್ತು ಸೇವೆಯ ಆಧಾರದಲ್ಲಿ ಬೋಧಕ ಸಿಬ್ಬಂದಿಯ ಮತ್ತು ಸಂಸ್ಥೆಯ ಪ್ರಮುಖರ ಸ್ಥಾನಗಳನ್ನು ಅರ್ಹತೆಯ ಆಧಾರದಲ್ಲಿ ತುಂಬುವುದು ಮತ್ತು ವೃತ್ತಿಪರತೆಯನ್ನು ಬೆಳೆಸುವುದು.

**ಊ)** ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನವನ್ನು ಸ್ಥಾಪಿಸುವುದು. ಸಂಶೋಧನೆಗಳ ಕುರಿತು ಗೌಪ್ಯ ಮೌಲ್ಯಮಾಪನ ನಡೆಸಿ ಅರ್ಹರಿಗೆ ಧನಸಹಾಯ ಒದಗಿಸುವುದು.

**ಋ)** ಶೈಕ್ಷಣಿಕ ಮತ್ತು ಆಡಳಿತ ಸ್ವಾಯತ್ತತೆ ಹೊಂದಿರುವ ಸ್ವತಂತ್ರ, ಸಮರ್ಥತಜ್ಞತೆಯುಳ್ಳ ಸಂಸ್ಥೆಗಳ ಮೂಲಕ ನಿರ್ವಹಣೆ.

ಎ) 'ಹಗುರ ಆದರೆ ಬಿಗಿಯಾದ'ಏಕ–ಗವಾಕ್ಷ ನಿಯಂತ್ರಣ ವ್ಯವಸ್ಥೆ.

ಏ) ವಿಶೇಷ ಅಥವಾ ದಿವ್ಯಾಂಗ ವಿದ್ಯಾರ್ಥಿಗಳಿಗೆ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಮೂಲಕ ಹಾಗೂ ಖಾಸಗಿ ಸಂಸ್ಥೆಗಳು ಹಾಗೂ ದಾನಿಗಳ ಸಹಕಾರದಲ್ಲಿ ಕಲಿಕೆಯ ಎಲ್ಲ ಅವಕಾಶಗಳನ್ನು ಒದಗಿಸಿಕೊಡುವುದು

## 10. ಸಾಂಸ್ಥಿಕ ಪುನರ್ ರಚನೆ ಮತ್ತು ಕ್ರೋಢೀಕರಣ

**10.1.** ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈಗ ಭಿನ್ನ ಭಿನ್ನ ಸ್ವರೂಪದಲ್ಲಿರುವ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಕ್ರೋಢೀಕರಿಸಿ, ಈ ನೀತಿಗೆ ಅನುಗುಣವಾಗಿ ಬಹುವಿಷಯ ಬೋಧನಾ ವಿಶ್ವವಿದ್ಯಾಲಯಗಳನ್ನಾಗಿ, ಮಹಾವಿದ್ಯಾಲಯಗಳನ್ನಾಗಿ ರೂಪಿಸುವುದು ಮತ್ತು ಅವುಗಳು ಕನಿಷ್ಠ 3000 ವಿದ್ಯಾರ್ಥಿಗಳನ್ನು ಒಳಗೊಂಡಿರುವಂತೆ ಮಾಡುವುದು ಈ ನೀತಿಯ ಪ್ರಮುಖ ಉದ್ದೇಶವಾಗಿರುತ್ತದೆ. ಇಂಥವಿಶ್ವವಿದ್ಯಾಲಯಗಳು ಹಾಗೂ ಮಹಾವಿದ್ಯಾಲಯಗಳ ಸಮುಚ್ಚಯಗಳನ್ನು ರಚಿಸುವ ಮೂಲಕ ಜೀವಂತ, ಕ್ರಿಯಾಶೀಲ ವಾತಾವರಣವನ್ನು ಸೃಜಿಸುವುದು, ಸಂಪನ್ಮೂಲಗಳನ್ನು ಹಂಚಿಕೊಳ್ಳುವುದು, ಕಲೆ, ವಿಜ್ಞಾನ, ಕ್ರೀಡೆ ಮುಂತಾಗಿ ಎಲ್ಲ ಕ್ಷೇತ್ರಗಳಲ್ಲಿ ಮುನ್ನಡೆಯುವಂತೆ ಮಾಡುವುದು.

**10.2.** ಈ ನೀತಿಯಲ್ಲಿ ಪ್ರಮುಖವಾಗಿ ಹಲವು ನಿಕಾಯಗಳನ್ನು ಹೊಂದಿರುವ ಬೃಹದ್–ವಿಶ್ವವಿದ್ಯಾಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಯ ವಲಯಗಳನ್ನು ಉನ್ನತ ಶಿಕ್ಷಣದ ಸಂರಚನಾ ವ್ಯವಸ್ಥೆಯಲ್ಲಿ ಪ್ರಮುಖವಾಗಿ ಶಿಫಾರಸ್ಸು ಮಾಡಲಾಗಿರುತ್ತದೆ. ಪ್ರಾಚೀನ ಭಾರತದಲ್ಲಿ ಇದ್ದ ವಿಶ್ವವಿದ್ಯಾಲಯಗಳಾದ ತಕ್ಷಶಿಲಾ, ನಲಂದಾ ಮತ್ತು ವಿಕ್ರಮಶಿಲಾ ವಿಶ್ವವಿದ್ಯಾಲಯಗಳು ಸಾವಿರಾರು ವಿದ್ಯಾರ್ಥಿಗಳಿಂದ ಅಧ್ಯಯನಶೀಲವಾಗಿದ್ದವು. ಅದೇ ವ್ಯವಸ್ಥೆಯಲ್ಲಿರುವಂತೆ– ಈ ರೀತಿಯ ಬಹುವಿಷಯಗಳ– ಅಂತರ್–ಸಂಬಂಧದ ವಿಷಯದ ಕುರಿತು ಅಧ್ಯಯನದ ಅನುಷ್ಠಾನ ಪದ್ಧತಿಯಿಂದ ಹಾಗೂ ಅಧಿಕಪ್ರಮಾಣದ ಸಂಶೋಧನೆಯ ಮತ್ತು ಮರು–ಸಂಶೋಧನೆಗಳಿಂದ, ಮತ್ತು ಅದಕ್ಕೆ ಪೂರಕವಾಗಿರುವ ಬೋಧನಾ ವ್ಯವಸ್ಥೆಯಿಂದ ಕೂಡಿರುವ ವಿಶ್ವವಿದ್ಯಾಲಯಗಳನ್ನು ರೂಪಿಸಬೇಕಾಗಿದೆ. ಭಾರತದ ಈ ಅಪೂರ್ವ ಪರಂಪರೆಯನ್ನು ಪುನರ್–ಸ್ಥಾಪಿಸುವ ಅವಶ್ಯಕತೆಯೂ ಇದೆ. ಈ ಮೂಲಕ ಸರ್ವತೋಮುಖ, ಸರ್ವಾಂಗೀಣವಾಗಿರುವ ಉದ್ಬೋಧಕ ಪ್ರವೃತ್ತಿಯ ವ್ಯಕ್ತಿತ್ವಗಳನ್ನು ರೂಪಿಸಬೇಕಿದೆ. ಅವುಗಳ ಉನ್ನತ ಪರಂಪರೆಯನ್ನು ಮುಂದುವರಿಸಬೇಕಾಗಿದೆ.

**10.3.** ಉನ್ನತ ಶಿಕ್ಷಣದ ಈ ದೃಷ್ಟಿಕೋನವು, ವಿಶೇಷತಃ ಒಂದು ನೂತನ ಪೂರ್ವಭಾವೀ–ಪರಿಕಲ್ಪನೆಯನ್ನು ಮನನಗೊಳಿಸಿಕೊಳ್ಳುವ ಪ್ರಕ್ರಿಯೆಯಾಗಿದೆ ಒಂದು ವಿಶ್ವವಿದ್ಯಾಲಯವೆಂದರೆ, ಹಲವು ವಿಷಯಗಳು ಅಂತರ್ಗತವಾಗಿ ಸಾವಯವ ಸಂಬಂಧ ಹೊಂದಿರುವ ಆಯಾಮಗಳ ಉನ್ನತ ಅಧ್ಯಯನದ ಸಂಸ್ಥೆಯಾಗಿರುತ್ತದೆ. ಒಂದು ಮಾದರಿಯ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಯೇ ಪ್ರಧಾನವಾದರೆ ಇನ್ನೊಂದು ಮಾದರಿಯ ವಿಶ್ವವಿದ್ಯಾಲಯಗಳಲ್ಲಿ ಬೋಧನೆ ಮತ್ತು ಕಲಿಕೆಯೇ ಪ್ರಧಾನವಾಗಿರುತ್ತದೆ. ಇವು ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ನೀಡುವ ಬೃಹತ್ ವಿಶ್ವವಿದ್ಯಾಲಯಗಳಾದರೆ, ಸ್ವತಂತ್ರವಾಗಿ ಪದವಿಗಳನ್ನು ನೀಡುವ ಸ್ವಾಯತ್ತ ಕಾಲೇಜುಗಳ ಸ್ಥಾಪನೆಗೂ ಈ ನೀತಿಯು ಅವಕಾಶ ಕಲ್ಪಿಸುತ್ತದೆ. ಈ ಕಾಲೇಜುಗಳು ವಿಶ್ವವಿದ್ಯಾಲಯಗಳಿಗಿಂತ ಚಿಕ್ಕದಾಗಿರುತ್ತವೆ.

**10.4.** ಹಂತ–ಹಂತವಾಗಿ ಮಹಾವಿದ್ಯಾಲಯಗಳಿಗೆ ಅವುಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಸ್ವಾಯತತ್ತೆಯನ್ನು ಅನುಮತಿಸುವ ಪಾರದರ್ಶಕ ವ್ಯವಸ್ಥೆಯೊಂದನ್ನು ಸ್ಥಾಪಿತಗೊಳಿಸಲಾಗುತ್ತದೆ. ನಿಗದಿಗೊಳಿಸಿರುವ ಅವಧಿಯಲ್ಲಿ ಪ್ರತಿಯೊಂದು ಮಹಾವಿದ್ಯಾಲಯವೂ ಪ್ರಗತಿಯನ್ನು ಸಾಧಿಸಿ, ಸ್ವಾಯತ್ತತಾಪೂರ್ಣ ಪದವಿಪ್ರದಾನ ವಿದ್ಯಾಲಯವಾಗಿ ಅಥವಾ ವಿಶ್ವವಿದ್ಯಾಲಯದ ಘಟಕ ಮಹಾವಿದ್ಯಾಲಯವಾಗಿ ಮುಂದಿನ ಅವಧಿಯಲ್ಲಿ ಕಾರ್ಯ ನಿರ್ವಹಿಸುವಂತೆ ಪರಿಕಲ್ಪನೆಯನ್ನು ಇಲ್ಲಿ ರೂಪಿಸಲಾಗಿರುತ್ತದೆ. ಎರಡನೇ ಹಂತದಲ್ಲಿ, ಅದು ಪೂರ್ಣತಃ ವಿಶ್ವವಿದ್ಯಾಲಯದ ಒಂದು ಭಾಗವೇ ಆಗಿರುತ್ತದೆ. ಅದಕ್ಕಾಗಿ ಸೂಕ್ತವಾಗಿರುವ ಮಾನ್ಯತೆಗಳ ಮೂಲಕ ಈ ಸ್ವಾಯತ್ತತಾಪೂರ್ಣ ಪದವಿಪ್ರದಾನ ಮಹಾವಿದ್ಯಾಲಯಗಳು ಸಂಶೋಧನಾ ಆಧಾರಿತ ಅಥವಾ ಬೋಧನಾ ಆಧಾರಿತ ವಿಶ್ವವಿದ್ಯಾಲಯಗಳಾಗಿ ವಿಕಾಸಗೊಳ್ಳಬಹುದು.

**10.5.** ಇಲ್ಲಿ ಅತ್ಯಂತ ಸ್ಪಷ್ಟವಾಗಿಯೇ ಉಲ್ಲೇಖಿಗೊಳಿಸುತ್ತಿರುವದೇನೆಂದರೆ, ಈ ಮೂರು–ವಿಶಾಲ–ವಿಧಾನಗಳ ಸಂಸ್ಥೆಗಳ ವ್ಯವಸ್ಥೆಯು ಯಾವುದೇ ರೀತಿಯಲ್ಲಿಯೂ ಸಂಕೀರ್ಣಮಯ ಸ್ವರೂಪದಲ್ಲಿರುವ ವ್ಯವಸ್ಥೆಯಾಗಿರುವುದಿಲ್ಲ. ಅನನ್ಯಸಾಧಾರಣದ ವರ್ಗೀಕರಣವಾಗಿರುವುದಿಲ್ಲ. ಆದರೆ ಇವು ನಿರಂತರತ್ವದ ವ್ಯವಸ್ಥೆಯ ಸಂಗಡವೇ ಇರುತ್ತವೆ. ಈ ಉನ್ನತ ಶಿಕ್ಷಣ ಸಂಸ್ಥೆಗಳು ಸ್ವಾಯತ್ತತೆಯನ್ನು ಮತ್ತು ಮುಕ್ತತೆಯನ್ನು ಹೊಂದಿದ್ದು, ಅವು ಕ್ರಮೇಣ ಒಂದು ಹಂತದಿಂದ ಮತ್ತೊಂದು ಹಂತಕ್ಕೆ, ಏರುವುದು ಅವುಗಳು ರೂಪಿಸಿಕೊಳ್ಳುವ ಯೋಜನೆಗಳ ಪರಿಣಾಮಕಾರೀ ಫಲಿತಾಂಶಗಳನ್ನು ಆಧರಿಸಿಕೊಂಡಿರುತ್ತದೆ. ಹೀಗಾಗಿ, ಈ ಸಂಸ್ಥೆಗಳ ವರ್ಗೀಕರಣಗಳಿಗೆ ಅತ್ಯಂತ ವಿಶಿಷ್ಟವಾಗಿರುವ ಲಕ್ಷಣವೆಂದರೆ, – ಅವುಗಳು ನಿಗದಿಗೊಳಿಸಿಕೊಂಡಿರುವ ಗುರಿ ಹಾಗೂ ಕಾರ್ಯನುಷ್ಠಾನವನ್ನು ಗುರುತಿಸುತ್ತದೆ. ಅದಕ್ಕಾಗಿ ಈ ಉನ್ನತ ಶಿಕ್ಷಣ ಸಂಸ್ಥೆಗಳ ಮಾನ್ಯತೆಯನ್ನು ನಿರ್ಣಯಿಸುವಲ್ಲಿ ವೈವಿಧ್ಯಮಯತೆಯ ಹಾಗೂ ಸಮಯೋಚಿತವಾಗಿರುವ ಮಾನ್ಯತಾ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲಾಗುತ್ತದೆ. ಆದಾಗ್ಯೂ, ಎಲ್ಲ ಉನ್ನತ ಶಿಕ್ಷಣ ಮತ್ತು ಬೋಧನಾ–ಕಲಿಕಾ ವಿಧಾನಗಳು ಮಾತ್ರ ಒಂದೇ ರೂಪದ್ದಾಗಿರುತ್ತವೆ.

**10.6.** ಬೋಧನೆ ಮತ್ತು ಸಂಶೋಧನೆಯ ಜೊತೆಜೊತೆಗೇ, ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಮತ್ತೆ ಕೆಲವು ಗುರುತರ ಹೊಣೆಗಾರಿಕೆಗಳೂ ಇರುತ್ತವೆ. ಅದೆಂದರೆ ಇನ್ನಿತರ ಉನ್ನತ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಸಹಕಾರ, ಸಾಮುದಾಯಿಕ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು ಮತ್ತು ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವುದೂ ಸೇರಿದೆ.

**10.7.** ವರ್ಷ 2040 ರ ಹೊತ್ತಿಗೆ ಈ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ಬಹುಶಿಸ್ತೀಯ ಅಧ್ಯಯನದ ಸಂಸ್ಥೆಗಳಾಗಿ ಪರಿವರ್ತನಗೊಳ್ಳುವ ಧ್ಯೇಯ ಹೊಂದಿರಬೇಕು. ಅದಕ್ಕಾಗಿ ವಿದ್ಯಾರ್ಥಿಗಳ ಸಂಖ್ಯೆ ಸಾವಿರಕ್ಕೂ ಮಿಗಿಲಾಗಿ–ಇರುವಂತೆ ಗುರಿ ಹೊಂದಬೇಕಾಗಿದೆ. ಸಂಪನ್ಮೂಲ ಮತ್ತು ಮೂಲಸೌಕರ್ಯಗಳ ಯುಕ್ತವಾದ ಬಳಕೆಯನ್ನು ಮಾಡಿಕೊಳ್ಳುವದಕ್ಕಾಗಿ, ಮತ್ತು ಈ ಮೂಲಕ ಬಹು–ವಿಷಯಗಳ ಆಯಾಮದ ಸ್ಪಂದನಶೀಲ ಸಮುದಾಯಗಳನ್ನು ರೂಪಣೆಗೊಳಿಸಬೇಕಾಗಿರುತ್ತದೆ. ಈ ಪ್ರಕ್ರಿಯೆಯು ನಿಗದಿತವಾಗಿರುವ ಕಾಲಾವಧಿಯನ್ನೂ ಹೊಂದಿರುವುದರಿಂದ, ಈ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ಮೊದಲ ಹಂತದಲ್ಲಿ –ಅಂದರೆ ವರ್ಷ 2030ರ ಅವಧಿಗೆ, ಈ ಬಹು ವಿಷಯಗಳ ಅಧ್ಯಯನವನ್ನು ಪ್ರೋತ್ಸಾಹಿಸುವಂತೆ ಯೋಜನೆಯನ್ನು ರೂಪಿಸಬೇಕಾಗಿದೆ. ತದನಂತರದಲ್ಲಿ ಹಂತಹಂತವಾಗಿ ವಿದ್ಯಾರ್ಥಿಯ ಸಾಮರ್ಥ್ಯವನ್ನೂ, ನಿಗದಿಗೊಳಿಸಲಾಗಿರುವ ಹಂತವನ್ನು ತಲುಪುವಂತೆ ಪ್ರಗತಿಗೊಳಿಸಬೇಕಾಗಿರುತ್ತದೆ.

**10.8.** ಅಭಿವೃದ್ಧಿಯಲ್ಲಿ ಹಿಂದುಳಿದ ವಲಯಗಳಲ್ಲಿ ಹೆಚ್ಚು ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಮತ್ತು ಅಲ್ಲಿ ಪ್ರಗತಿಯನ್ನು ರೂಪಿಸಿ, ಅದು ಅಲ್ಲಿ ಎಲ್ಲರಿಗೂ ಲಭ್ಯವಾಗುವಂತೆ, ಸಮತೆಯನ್ನು ಸ್ಥಾಪಿಸಿಕೊಳ್ಳುವಂತೆ ಮತ್ತು ಸಮನ್ವಯಗೊಳ್ಳುವಂತೆ ರೂಪಿಸಬೇಕಾಗಿದೆ. ಹೀಗಾಗಿ ವರ್ಷ 2030 ರ ಸಮಯಕ್ಕೆ, ಕನಿಷ್ಠಪಕ್ಷ ಪ್ರತಿ ಜಿಲ್ಲೆಯಲ್ಲಿಯೂ ಅಥವಾ ಆಯಾ ಜಿಲ್ಲೆಗೆ ಸಮೀಪದಲ್ಲಿರುವಂತೆಯೂ ಈ ರೀತಿಯ ಉನ್ನತ ಅಧ್ಯಯನದ ಒಂದು ಬೃಹದ್–ಸಂಸ್ಥೆಯನ್ನು ಸ್ಥಾಪಿತಗೊಳಿಸಲಾಗುವದು. ಖಾಸಗೀ ಹಾಗೂ ಸಾರ್ವಜನಿಕ ವಲಯದಲ್ಲಿಯೂ ಸ್ಥಳೀಯ ಅಥವಾ ಭಾರತೀಯ ಭಾಷೆಯ ಇಲ್ಲವೇ ದ್ವಿಭಾಷಾ ಪದ್ಧತಿಯಲ್ಲಿ ಬೋಧನಾ ವ್ಯವಸ್ಥೆಯನ್ನು ಒಳಗೊಂಡಿರುವಂತಹ ಉನ್ನತ ಗುಣಮಟ್ಟದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಸೂಕ್ತ ಕ್ರಮಗಳನ್ನು ರೂಪಿಸಲಾಗುವುದು.

ಒಟ್ಟಿನಲ್ಲಿ ಈ ಉನ್ನತ ಶಿಕ್ಷಣಕ್ಕೆ ಮತ್ತು ವೃತ್ತಿಪರ ಶಿಕ್ಷಣಕ್ಕೆ ಹೆಚ್ಚಿನ ಪ್ರಮಾಣದ ಪ್ರವೇಶಾವಕಾಶಗಳು ಲಭ್ಯವಾಗುವಂತೆ ಮಾಡಿ ಅದು "ಒಟ್ಟು ದಾಖಲಾತಿ ಅನುಪಾತದಲ್ಲಿ" (Gross Enrollment Ratio) ಈಗ ಅಂದರೆ 2018 ರ ಸಮಯಕ್ಕೆ ಇದ್ದ 26.3% ವನ್ನು ವರ್ಷ 2030ರ ಸಮಯಕ್ಕೆ 50% ಕ್ಕೆ ತಲುಪಿಸುವ ಗುರಿಯನ್ನು ಹೊಂದಿದೆ. ಅದಕ್ಕೆ ರೂಪುಗೊಳಿಸಲಾಗುತ್ತಿರುವ ಹೊಸಹೊಸ ಸಂಸ್ಥೆಗಳೂ ಈ ಗುರಿಯನ್ನು ತಲುಪಲು ಸಹಕಾರಿಯಾಗಿರುವವು. ಈ ಮೂಲಕ ಉನ್ನತಶಿಕ್ಷಣ ಸಂಸ್ಥೆಗಳ ಸಂಖ್ಯೆಯೂ ಮಟ್ಟವೂ ಗಣನೀಯವಾಗಿ ವಿಸ್ತರಣೆಗೊಳಿಸುವುದರಿಂದಾಗಿ ಮತ್ತು ಅಸ್ತಿತ್ವದಲ್ಲಿರುವ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸುಧಾರಣೆ ಗೊಳಿಸುವುದೂ ಇದರಿಂದ ಸಾಧ್ಯವಾಗುತ್ತದೆ.

**10.9.** ಖಾಸಗೀ ವಲಯ ಮತ್ತು ಸಾರ್ವಜನಿಕ ವಲಯದಲ್ಲಿರುವ ಸಂಸ್ಥೆಗಳಲ್ಲಿ ಈ ಪ್ರಗತಿಯು ಒಂದು ಸಮರ್ಥನೀಯವಾಗಿರುವ ಹಾಗೂ ಪ್ರಬಲವಾದ ಅವಧಾರಣದ ಮೂಲಕವೇ ಅಧಿಕ ಪ್ರಮಾಣದ ಮಹೋನ್ನತಿಯನ್ನು ಸಾಧಿಸಿಕೊಂಡಿದ್ದಲ್ಲಿ ಅಂತಹ ಹೆಚ್ಚಿನ ಪ್ರಮಾಣದ ಸಂಸ್ಥೆಗಳನ್ನು ಮತ್ತೂ ಅಭಿವೃದ್ಧಿ ಪಡಿಸುವ ಮೂಲಕ ಪ್ರಗತಿಯನ್ನು ಸಾಧಿಸಬಹುದಾಗಿದೆ. ಇಲ್ಲಿ ಸಾರ್ವಜನಿಕ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಹೆಚ್ಚಿನ ಹಂತಗಳಲ್ಲಿ ಅಧಿಕ ಧನಸಹಾಯವನ್ನು ನೀಡುವಲ್ಲಿ ಒಂದು ಸುಯೋಗ್ಯವಾದ ಮತ್ತು ಪಾರದರ್ಶಕವಾಗಿರುವ ವಿಧಾನವನ್ನು ನಿರ್ಧರಿಸಲಾಗುತ್ತದೆ. ಈ ವ್ಯವಸ್ಥೆಯು ಸಾರ್ವಜನಿಕ ಸಂಸ್ಥೆಗಳಿಗೂ ಸಹಿತ ಪ್ರಗತಿ ಸಾಧಿಸಲು ಮತ್ತು ಅದೂ ಸಹಿತ ಪಾರದರ್ಶಕವಾಗಿರುವ ವ್ಯವಸ್ಥೆಯನ್ನೇ

ಆಧಾರವಾಗಿರಿಸಿಕೊಂಡು, ಪೂರ್ವಭಾವಿಯಾಗಿಯೇ ಘೋಷಿಸಲ್ಪಡಲಾಗುವಂತೆಯೇ ಇರುವ ಮಾನ್ಯತಾ ಪ್ರದಾನ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ. ಇದು ಮಾನ್ಯತಾ ನಿಯಮಗಳ ವ್ಯಾಪ್ತಿಯಲ್ಲಿಯೇ ರೂಪಿಸಲ್ಪಡುವುದರಿಂದ ಈ ಸಾರ್ವಜನಿಕ ಸಂಸ್ಥೆಗಳೂ ಪ್ರಗತಿ ಸಾಧಿಸಲು ಸಮಾನ–ಅವಕಾಶಗಳನ್ನು ಒದಗಿಸುತ್ತಿದೆ. ಈ ನೀತಿಯಲ್ಲಿ ರೂಪಿಸಲ್ಪಟ್ಟಿರುವ ಹಾಗೆ ಇರುವ ಉನ್ನತ ಶಿಕ್ಷಣ ಸಂಸ್ಥೆಗಳಿಗೆ, ಅವುಗಳ ಸಾಮರ್ಥ್ಯವನ್ನು ವಿಸ್ತರಿಸಿಕೊಳ್ಳುವುದರ ಸಲುವಾಗಿ, ಅವುಗಳಿಗೆ ಪ್ರೋತ್ಸಾಹವನ್ನೂ ಒದಗಿಸುತ್ತದೆ.

**10.10**. ಸಂಸ್ಥೆಗಳಿಗೆ ದೂರ–ಶಿಕ್ಷಣ ಕಲಿಕಾ ಮತ್ತು ಆನ್ ಲೈನ್ ಶಿಕ್ಷಣವನ್ನು (ಮಾನ್ಯತೆ ಹೊಂದಿದ್ದಲ್ಲಿ ಮಾತ್ರ) ಆಯ್ಕೆ ಮಾಡಿಕೊಳ್ಳುವ ವಿಕಲ್ಪವು ಇರುತ್ತದೆ. ತಮ್ಮ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು, ಲಭ್ಯತೆ ಹೆಚ್ಚಿಸಲು, GER (ದಾಖಲಾತಿ ಅನುಪಾತ) ಹೆಚ್ಚಿಸಲು ಮತ್ತು ದೀರ್ಘಾವಧಿ ಕಲಿಕೆಗೆ ಅವಕಾಶ ನೀಡಲು (SDG-4)ಸಂಸ್ಥೆಗಳು ದೂರ–ಶಿಕ್ಷಣ ಕಲಿಕಾ ಮತ್ತು ಆನ್‌ಲೈನ್ ಶಿಕ್ಷಣ ವಿಧಾನ (ಮಾನ್ಯತೆ ಹೊಂದಿದ್ದಲ್ಲಿ ಮಾತ್ರ) ಗಳನ್ನು ನಡೆಸಬಹುದು.

ಈ ಎಲ್ಲ ಆನ್–ಲೈನ್ ಕಾರ್ಯಕ್ರಮಗಳು(On-line programs) ಮತ್ತು ಅವುಗಳ ಘಟಕಗಳು ಯಾವುದೇ ಡಿಪ್ಲೋಮಾ ಅಥವಾ ಪದವಿಗಳಿಗೆ ಪೂರಕವಾಗುವಂತಿದ್ದರೆ ಅವುಗಳು ಆಯಾ ಉನ್ನತ ಶಿಕ್ಷಣ ಸಂಸ್ಥೆಯು ತನ್ನ ಆವರಣದಲ್ಲಿಯೇ ಅನುಷ್ಠಾನಿಸಿರುವ, ಉನ್ನತ ಗುಣಮಟ್ಟದ ಕಾರ್ಯಕ್ರಮಗಳ ಸಮಸಮವಾಗಿಯೇ ಅಂದರೆ ಅದೇ ಮಾನಕಗಳಲ್ಲಿಯೇ ಇರಬೇಕು. ಈ ದೂರ ಶಿಕ್ಷಣ ಕಲಿಕಾ ವ್ಯವಸ್ಥೆಗಾಗಿ ಮಾನ್ಯತೆಗೊಳಿಸಲ್ಪಟ್ಟಿರುವ ಪ್ರಮುಖ ಸಂಸ್ಥೆಗಳು ಈ ಆನ್ ಲೈನ್ –ಡಿಸ್ಟೆನ್ಸ್–ಲರ್ನಿಂಗ್(ಓಡಿಎಲ್)ಅನ್ನು ಬೆಂಬಲಿಸುವ ಮೂಲಕ ಗುಣಾತ್ಮಕವಾಗಿರುವ ದೂರ–ಶಿಕ್ಷಣ–ವ್ಯವಸ್ಥೆಗೆ ದಾರಿ ಮಾಡಿಕೊಡಬೇಕು.

**10.11**. ಒಂದೇ ವಿಷಯಕ್ಕೆ ಸೀಮಿತವಾಗಿರುವ ಉನ್ನತ ಶಿಕ್ಷಣ ಸಂಸ್ಥೆಗಳನ್ನೂ ಬರಲಿರುವ ದಿನಗಳಲ್ಲಿ ಕ್ರಮೇಣವಾಗಿ ತೆಗೆದು ಹಾಕಲಾಗುವುದು ಮತ್ತು ಆ ಸಂಸ್ಥೆಗಳು ಬಹು ವಿಷಯ ಅಧ್ಯಯನಗಳತ್ತ ಪರಿವರ್ತನೆಗೊಳ್ಳಲು ಸಮಯ ನೀಡಲಾಗುವುದು. ಅವು ಅಂತರ್ ಶಿಸ್ತೀಯ ಬಹುವಿಷಯಗಳ ಅಧ್ಯಯನಕ್ಕೆ ಉತ್ತೇಜನವನ್ನು ಮತ್ತು ಅಂತರ್–ವಿಭಾಗೀಯ ಬೋಧನೆ ಹಾಗೂ ಸಂಶೋಧನೆಗಳನ್ನು ಎಲ್ಲ ಸ್ತರಗಳಲ್ಲಿಯೂ ರೂಪಿಸುವ ಉದ್ದೇಶಗಳನ್ನು ಹೊಂದಿರುತ್ತದೆ. ಏಕ–ವಿಷಯಕ್ಕೆ ಸೀಮಿತ ಸಂಸ್ಥೆಗಳಲ್ಲಿ ಎಲ್ಲ ವಲಯಗಳ–ವಿಷಯಗಳ–ವಿಭಾಗಗಳನ್ನು ಜೋಡಿಸುವ ಮೂಲಕ, ಈಗ ಕಾರ್ಯನಿರ್ವಹಿಸುತ್ತಿರುವ, ಈ ರೀತಿಯ ಸಂಸ್ಥೆಗಳನ್ನು ಬಲಪಡಿಸಲಾಗುತ್ತದೆ. ಇದಕ್ಕೆ ಪೂರಕವಾಗಿ ಎಲ್ಲ ಉನ್ನತ–ಶಿಕ್ಷಣ–ಸಂಸ್ಥೆಗಳು ಸೂಕ್ತ ಸಂಸ್ಥೆಗಳಿಂದ ಮಾನ್ಯತೆ ಪಡೆದು ಹಂತಹಂತವಾಗಿ "ಸಂಪೂರ್ಣ–ಸ್ವಾಯತ್ತತೆಯ ಶೈಕ್ಷಣಿಕ ಮತ್ತು ಆಡಳಿತಾತ್ಮಕ–ವಾತಾವರಣದತ್ತ ಚಲಿಸಬೇಕಾಗುತ್ತದೆ. ಸಾರ್ವಜನಿಕ ಸಂಸ್ಥೆಗಳ ಸ್ವಾಯತ್ತತೆಗಾಗಿ ಅವುಗಳಿಗೆ ಬೇಕಾದ ಸಂಪನ್ಮೂಲಗಳನ್ನು ನೀಡಲಾಗುವುದು ಮತ್ತು ಸರ್ವರ ಏಳಿಗೆಗೆ ಬದ್ಧರಾದ ಖಾಸಗಿ ಸಂಸ್ಥೆಗಳನ್ನೂ ಈ ನಿಟ್ಟಿನಲ್ಲಿ ಪ್ರೋತ್ಸಾಹಿಸಲಾಗುವುದು.

**10.12**. ಈ ಶಿಕ್ಷಣ ನೀತಿಯ ಮೂಲಕ ಪರಿಕಲ್ಪಿಸಲಾಗುತ್ತಿರುವ ಈ ನೂತನ ನಿಯಂತ್ರಣ ವ್ಯವಸ್ಥೆಯು ಸಂಸ್ಥೆಗಳ ಸಬಲೀಕರಣ, ಸಂಶೋಧನೆಗೆ ಸ್ವಾಯತ್ತತೆಗಳನ್ನು ಪ್ರೋತ್ಸಾಹಿಸುತ್ತದೆ. ಬರಲಿರುವ ಹದಿನೈದು ವರ್ಷಗಳ ಅವಧಿಯಲ್ಲಿ, ಈ ಶ್ರೇಣಿಕೃತ ಸ್ವಾಯತ್ತತಾ ನೀತಿಯ ಅಡಿಯಲ್ಲಿ. 'ಮಾನ್ಯತೆ ಪಡೆದ ಮಹಾವಿದ್ಯಾಲಯಗಳ ನೀತಿ'ಯನ್ನು ಕ್ರಮೇಣ ದೂರ ಮಾಡುವುದನ್ನು ಒಳಗೊಂಡಿರುತ್ತದೆ ಮತ್ತು ಇದನ್ನು ಒಂದು ಸವಾಲಿನ ರೀತಿಯಲ್ಲಿ ನಿರ್ವಹಿಸಲಾಗುತ್ತದೆ. ಸದ್ಯ ಅಸ್ತಿತ್ವದಲ್ಲಿರುವ ಪ್ರತಿಯೊಂದು ಮಾನ್ಯತೆ ಪಡೆದ ವಿಶ್ವವಿದ್ಯಾಲಯವು ತನ್ನ ವ್ಯಾಪ್ತಿಯಲ್ಲಿರುವ ಮಾನ್ಯತೆ ಪಡೆದ ಎಲ್ಲ ಮಹಾವಿದ್ಯಾಲಯಗಳ ಮುಂದಾಳ್ತನವನ್ನು ವಹಿಸಿಕೊಳ್ಳಬೇಕಾಗುತ್ತದೆ. ಈ ಮೂಲಕ ಅವುಗಳು ತಮ್ಮ ಸಾಮರ್ಥ್ಯಶೀಲತೆಯನ್ನು ಹೆಚ್ಚಿಸಿಕೊಳ್ಳುವಲ್ಲಿ, ಬೋಧನೆ ಮತ್ತು ಮೌಲ್ಯಾಂಕನ, ಆಡಳಿತಾತ್ಮಕ ಸುಧಾರಣೆಗಳು, ಹಣಕಾಸಿನ ಸದೃಢತೆ ಮತ್ತು ನಿರ್ವಹಣಾ ಪರಿಣಿತಿಯ ವಿಷಯಗಳಲ್ಲಿ ಕನಿಷ್ಟ ಮಾನಕಗಳನ್ನು ತಲುಪಲು ಸಾಧ್ಯವಾಗುತ್ತದೆ. ಪ್ರಚಲಿತದಲ್ಲಿ ಒಂದು ವಿಶ್ವವಿದ್ಯಾಲಯದಿಂದ ಮಾನ್ಯತೆಗೊಳಪಟ್ಟಿರುವ ಎಲ್ಲ ಮಹಾವಿದ್ಯಾಲಯಗಳೂ, ನಿಗದಿಗೊಳಿಸಲಾಗಿರುವ ಮಾನದಂಡವನ್ನು ಹಾಗೂ ಬರಲಿರುವ ಅವಧಿಯಲ್ಲಿ ರೂಪಿಸಲಾಗುವ ಮಾನದಂಡಗಳನ್ನು ಹೊಂದುವ ಸಲುವಾಗಿ ಅಳವಡಿಸಿಕೊಳ್ಳುವಂತೆ ಹಾಗೂ ಕ್ರಮೇಣ ಸ್ವಾಯತ್ತತಾಪೂರ್ಣ ಪದವಿಪ್ರದಾನ ಮಹಾವಿದ್ಯಾಲಯಗಳಾಗಿ ಪರಿವರ್ತನಗೊಳ್ಳುವುದನ್ನು ಸಾಧಿಸಬೇಕಾಗುತ್ತದೆ. ಇದನ್ನು ಸಂಯೋಜಿತ ರಾಷ್ಟ್ರೀಯ–ಪ್ರಯತ್ನಗಳೊಂದಿಗೆ, ಸೂಕ್ತವಾಗಿರುವ ಮಾರ್ಗದರ್ಶನವನ್ನು ಒಳಗೊಂಡಂತೆ ಸರಕಾರೀ ಬೆಂಬಲದೊಂದಿಗೆ ಸಾಧಿಸಲಾಗುತ್ತದೆ.

**10.13**. ಉನ್ನತ ಶಿಕ್ಷಣ ವಲಯವು ಸಂಪೂರ್ಣವಾಗಿ ವೃತ್ತಿಪರಿಣತಿಯ ಹಾಗೂ ವೃತ್ತಿಯಾಧಾರಿತ ಶಿಕ್ಷಣವನ್ನು ನೀಡುವ ಸಮಗ್ರ ಉನ್ನತ ಶಿಕ್ಷಣ ನೀತಿಯ ವ್ಯವಸ್ಥೆಯಾಗಿರುವ ಗುರಿಯನ್ನು ಹೊಂದಿದೆ. ಈ ನೀತಿಯ ಹಾಗೂ ಅದರ ದೃಷ್ಟಿಕೋನವನ್ನು ಸಧ್ಯ ದೇಶಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಎಲ್ಲ ಉನ್ನತ–ಶಿಕ್ಷಣ ಸಂಸ್ಥೆಗಳ ವಿಷಯ–ವಿಭಾಗಗಳಿಗೂ ಸಮಾನವಾಗಿಯೇ

ಅನ್ವಯಿಸಲ್ಪಡುತ್ತದೆ. ಇವುಗಳು ಕ್ರಮೇಣ ಸಂದರ್ಭಾನುಸಾರವಾಗಿ ಒಂದು ಸುಸಂಬದ್ಧ ವ್ಯವಸ್ಥೆಯ ವಾತಾವರಣ ಹೊಂದಿರುವ ಉನ್ನತ ಶಿಕ್ಷಣದ ವಿನ್ಯಾಸದಲ್ಲಿ ರೂಪುಗೊಳ್ಳಬೇಕಾಗುತ್ತದೆ.

**10.14**. ಜಗತ್ತಿನಾದ್ಯಂತವೂ, ವಿಶ್ವವಿದ್ಯಾಲಯವೆಂದರೆ 'ಹಲವು ವಿಷಯಗಳ –ಸಾವಯವ–ಸಂಬಂಧದ ಬಹು ಆಯಾಮದ ಅಧ್ಯಯನ ಸಂಸ್ಥೆ"ಯಾಗಿದೆ. ಇದು ಪದವಿಪೂರ್ವ, ಪದವಿ, ಮತ್ತು ವಿಶೇಷ–ಅಧ್ಯಯನ(ಪಿಎಚ್‌ಡಿ) ಯೋಜನೆಗಳ ಮೂಲಕ ಅಧ್ಯಯನ ವ್ಯವಸ್ಥೆಯನ್ನು, ಈ ಸಲುವಾಗಿ ಉನ್ನತ ಗುಣಮಟ್ಟದ ಬೋಧನಾ ವ್ಯವಸ್ಥೆ ಹಾಗೂ ಸಂಶೋಧನಾ ವ್ಯವಸ್ಥೆಯನ್ನು ಹೊಂದಿರುತ್ತದೆ. ಸದ್ಯದಲ್ಲಿ ಇರುವ ಪಾರಿಭಾಷಿಕ–ಪದಾವಳಿಯಲ್ಲಿ (Nomenclature) ಗುರುತಿಸಲಾಗಿರುವ 'ಪರಿಗಣಿಸಲ್ಪಡುವ ವಿಶ್ವವಿದ್ಯಾಲಯ," " ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯ', ಮಾನ್ಯತೆ ಹೊಂದಿರುವ ತಾಂತ್ರಿಕ ವಿಶ್ವವಿದ್ಯಾಲಯ', ಏಕೀಕೃತ ವಿಶ್ವವಿದ್ಯಾಲಯ ( Unitary University)ಗಳೆಲ್ಲವನ್ನೂ, ನಿಯಮಗಳಿಗನುಸಾರವಾಗಿರುವ ಮಾನಕಗಳ ಫಲಿತವಾಗಿರುವ ಪ್ರಕಾರ ನೇರವಾಗಿ "ವಿಶ್ವವಿದ್ಯಾಲಯ"ವೆಂದು ಪುನರ್–ಪ್ರತಿಷ್ಠಾಪಿಸಲಾಗುವದು.

## 11. ಸಮಗ್ರ ಮತ್ತು ಬಹುಶಿಸ್ತೀಯ ಅಧ್ಯಯನದತ್ತ ಚಲನೆ

ಪ್ರಾಚೀನ ಕಾಲದಿಂದಲೂ ಭಾರತವು ಈ ರೀತಿಯ ಸಮಗ್ರವಾದ ಹಾಗೂ ಬಹುಶಿಸ್ತೀಯ ಅಧ್ಯಯನದ ಪರಂಪರೆಯನ್ನು ಹೊಂದಿದೆ. ತಕ್ಷಶಿಲಾ, ನಲಂದಾದಂತಹ ವಿಶ್ವವಿದ್ಯಾಲಯಗಳಲ್ಲಿ ಭಾರತೀಯ ಸಾಹಿತ್ಯಿಕ ವಿಷಯಗಳಲ್ಲೂ ಸಹಿತ ಈ ಬಗ್ಗೆ ಉಲ್ಲೇಖಗಳಿವೆ. ಪ್ರಾಚೀನ ಭಾರತದ ಸಾಹಿತ್ಯಿಕ ಕೃತಿಗಳ ಪೈಕಿ ಬಾಣಭಟ್ಟನ ಕಾದಂಬರಿಯು 64 ಕಲೆಗಳ ಅಥವಾ ವಿದ್ಯೆಗಳ ಜ್ಞಾನವೇ ಉತ್ತಮ ಶಿಕ್ಷಣವೆಂದು ಗುರುತಿಸಿದೆ. ಇಲ್ಲಿ ಉಲ್ಲೇಖಿಸಲ್ಪಟ್ಟಿರುವ 64 ವಿದ್ಯೆಗಳು ಕೇವಲ ಪಠ್ಯ ಮಾತ್ರವಾಗಿರದೇ, ಗಾಯನದಂತಹ ಮತ್ತು ಚಿತ್ರಕಲೆಯನ್ನೂ ಒಳಗೊಂಡಿತ್ತು. ಅದೂ ಅಲ್ಲದೇ, 'ವೈಜ್ಞಾನಿಕ ವಿಧಾನದ' ವಲಯಗಳಲ್ಲಿಯೂ, ಅಂದರೆ– ರಸಾಯನ ಶಾಸ್ತ್ರ ಹಾಗೂ ಗಣಿತ ಶಾಸ್ತ್ರ, ವೃತ್ತಿಯಾಧಾರಿತ ಅಭಿಯಂತ್ರ ಶಾಸ್ತ್ರ(ಇಂಜನೀಯರಿಂಗ್), ತಂತ್ರಶಾಸ್ತ್ರ, ಬಡಿಗತನ(ಮರಗೆಲಸ), ವಸ್ತ್ರ ವಿನ್ಯಾಸ, ವೃತ್ತಿ ಪರಿಣಿತ ವಲಯಗಳು ಅಂದರೆ ಔಷಧ ತಯಾರಿಕೆ, ಜೊತೆಗೆ ಸೂಕ್ಷ್ಮ ಕುಶಲತೆಯ ಸಂವಹನ, ಸಂವಾದ ಮತ್ತು ಚರ್ಚೆಗಳನ್ನು ಒಳಗೊಂಡಿದೆ.

**11.1.** ಸೃಜನಶೀಲ ಮಾನವನ ಉಪಕ್ರಮಗಳ ವಿಭಾಗಗಳೇ ಆಗಿರುವ ಗಣಿತ ಶಾಸ್ತ್ರ, ವಿಜ್ಞಾನಿಗಳು, ವೃತ್ತಿಪರ ವಿಷಯಗಳು, ವೃತ್ತಿಪರಿಣಿತಿಯ ವಿಷಯಗಳು ಹಾಗೂ ಸೂಕ್ಷ್ಮ ಕೌಶಲ್ಯಾಧಾರಿತವಾಗಿರುವ ವಿದ್ಯೆಗಳೆಲ್ಲವನ್ನು 'ಕಲೆ' ಎಂದು ಗುರುತಿಸುವುದಕ್ಕೆ ನಿಶ್ಚಿತವಾದ ಭಾರತೀಯ ಬೇರುಗಳಿವೆ. ಆಧುನಿಕತೆಯ ಇಂದಿನ ಯುಗದಲ್ಲಿ ಇವುಗಳನ್ನು "ಮುಕ್ತ ಕಲೆಗಳು (ವಿದ್ಯೆಗಳು)" ಎಂದು ಗುರುತಿಸಲ್ಪಟ್ಟಿವೆ. ಅವುಗಳನ್ನು ಮತ್ತೆ ಭಾರತೀಯ ಶಿಕ್ಷಣದ ವ್ಯವಸ್ಥೆಗೆ ಮರಳಿ ಜೋಡಿಸಬೇಕಾಗಿದೆ. ಏಕೆಂದರೆ ಈ ವಿಧಾನವೇ 21ನೇ ಶತಮಾನವು ನಿರೀಕ್ಷಿಸುತ್ತಿರುವ ಶಿಕ್ಷಣದ ವ್ಯವಸ್ಥೆಯಾಗಿದೆ.

**11.2.** ಪದವಿ–ಪೂರ್ವ ಶಿಕ್ಷಣ ವ್ಯವಸ್ಥೆಯಲ್ಲಿ ಕಲೆ ಮತ್ತು ವಿಜ್ಞಾನದ ಜೊತೆಗೆ ಮಾನವಿಕಗಳನ್ನೂ ಒಳಗೊಂಡ ವಿಜ್ಞಾನ, ತಂತ್ರಜ್ಞಾನ, ಇಂಜನೀಯರಿಂಗ್, ಗಣಿತ( STEM)ಗಳನ್ನು ಸಮಗ್ರವಾಗಿ ಮೂಲಕ ಅಳವಡಿಸಿದಲ್ಲಿ, ಅದು ನಿಖರವಾಗಿಯೇ ಅಧ್ಯಯನದ ಧನಾತ್ಮಕವಾದ ಫಲಿತಾಂಶಗಳನ್ನೇ ಕೊಡುತ್ತದೆ, ಜೊತೆಗೆ ಸೃಜನಶೀಲತೆಯನ್ನು ಅಧಿಕಗೊಳಿಸುವ ಹಾಗೂ ಆವಿಷ್ಕಾರದ ಅವಕಾಶವನ್ನು, ವಿಮರ್ಶಾತ್ಮಕವಾದ ಚಿಂತನಾ ವಿಧಾನವನ್ನು ಮತ್ತು ಉನ್ನತ ಮಟ್ಟದ ಯೋಚನಾ ಸಾಮರ್ಥ್ಯಗಳನ್ನು, ಸಮಸ್ಯೆಗಳನ್ನು ಪರಿಹರಿಸುವ ಶಕ್ತಿಯನ್ನು, ಸಂಘಟನಾತ್ಮಕವಾಗಿರುವ, ಕಾರ್ಯತತ್ಪರರಾಗಿರುವುದನ್ನು, ಸಂವಹನ ಕೌಶಲ್ಯಗಳನ್ನು, ಆಳವಾಗಿ ಮತ್ತೂ ಆಳವಾಗಿ ಅಧ್ಯಯನ ಮಾಡುತ್ತ, ಜೊತೆಗೆ ಈ ಎಲ್ಲ ವಿಷಯಗಳ ಕುರಿತು ರೂಪಿತವಾಗಿರುವ ಪಠ್ಯಕ್ರಮದ ಆಚೆಯೂ, ಸಾಮಾಜಿಕವಾಗಿ ಹಾಗೂ ನೈತಿಕವಾಗಿ ಜಾಗೃತಿಯನ್ನು ಹೊಂದಲು ಇತರೆ ನಿಶ್ಚಿತವಾದ ಹಂತದ ಪ್ರಗತಿಯನ್ನೇ ತೋರಿಸಿದೆ. ಇವುಗಳ ಜೊತೆಗೆ ಸಮಾಜದಲ್ಲಿ ಭಾಗವಹಿಸುವಿಕೆಯನ್ನು ಮತ್ತು ತನ್ಮೂಲಕ ಅಧ್ಯಯನದಲ್ಲಿ ಸಂತೋಷ ಕಾಣುವುದನ್ನು ಒಳಗೊಂಡಿದೆ. ಈ ಸಮಗ್ರ ಹಾಗೂ ಬಹುಶಿಸ್ತೀಯ ಅಧ್ಯಯನದ ಕಾರಣ ಸಂಶೋಧನೆಯೂ ವೃದ್ಧಿಂಗತವಾಗುತ್ತದೆ.

**11.3.** ಒಂದು ಸಮಗ್ರ ಹಾಗೂ ಬಹುಶಿಸ್ತೀಯ ಅಧ್ಯಯನದ ಶಿಕ್ಷಣವು ಮಾನವರಲ್ಲಿ ಪ್ರಜ್ಞಾವಂತಿಕೆ, ಬುದ್ಧಿವಂತಿಕೆ, ಭೌತಿಕ, ಭಾವನಾತ್ಮಕ ಮತ್ತು ನೈತಿಕಾಂಶಗಳನ್ನು ಸಮಗ್ರೀಕರಿಸಿಕೊಂಡಿರುವ ರೀತಿಯಲ್ಲಿ, ಮನುಕುಲದ ಸಾಮರ್ಥ್ಯವನ್ನು ಪ್ರಗತಿಗೊಳಿಸುವ ಗುರಿಯನ್ನು ಹೊಂದಿರುತ್ತದೆ. ಈ ರೀತಿಯ ಶಿಕ್ಷಣವು ಸರ್ವಾಂಗೀಣ ಪ್ರಗತಿಯನ್ನು ಸಾಧಿಸಿದ ವ್ಯಕ್ತಿಗಳನ್ನು ರೂಪಿಸುತ್ತದೆ ಮತ್ತು ಗುಣ–ದೋಷ ವಿವೇಚನಾಯುಕ್ತ–ಧಾರಣ ಶಕ್ತಿಯನ್ನು ಹೊಂದಿ– ಅದು ಕಲೆಗಳು, ಮಾನವಿಕಗಳು, ಭಾಷೆಗಳು, ವಿಜ್ಞಾನಗಳು, ಸಮಾಜ ವಿಜ್ಞಾನಗಳು, ಹಾಗೂ ವೃತ್ತಿ ಪರಿಣತಿಯ, ತಾಂತ್ರಿಕ ಮತ್ತು ವೃತ್ತಿಯಾಧಾರಿತ

ವಲಯಗಳಲ್ಲಿ ಈ ವಾತಾವರಣವು ರೂಪುಗೊಳ್ಳುವಂತೆ ಇರುತ್ತದೆ. ಇದೊಂದು ಸಾಮಾಜಿಕವಾಗಿ ಒಳಗೊಳ್ಳುವಿಕೆಯ ಶಾಸ್ತ್ರವಾಗಿದೆ. ತಂತ್ರಜ್ಞಾನದ ಕೌಶಲ್ಯಭರಿತ ಪೂರ್ಣತೆಗಳಿಂದ– ಅಂದರೆ ಸಂವಹನ ಮತ್ತು ಸಂವಾದಗಳಿಂದ ಕೂಡಿದೆ. ಆಯ್ಕೆ ಮಾಡಿಕೊಂಡ ವಿಷಯದಲ್ಲಿ ಅಥವಾ ವಲಯದಲ್ಲಿ ವಿಶೇಷ ಪರಿಣಿತಿಗೆ ಕಾರಣವಾಗುತ್ತದೆ. ಇಂತಹ ಪರಿಪೂರ್ಣ ಸ್ವರೂಪದ ಶಿಕ್ಷಣವು ದೀರ್ಘಾವಧಿಯಲ್ಲಿ, ತಾಂತ್ರಿಕ ಮತ್ತು ಉದ್ಯೋಗಾಧಾರಿತ ವಿಷಯಗಳನ್ನು ಒಳಗೊಂಡಂತೆ ಪದವಿಪೂರ್ವ ಶಿಕ್ಷಣದ ವಿಧಾನವೂ ಆಗುತ್ತದೆ.

**11.4.** ಸಮಗ್ರವಾಗಿರುವ ಹಾಗೂ ಬಹುಶಿಸ್ತೀಯ ಅಧ್ಯಯನ ಈ ಪೂರ್ವದಲ್ಲಿಯೇ ಭಾರತದಲ್ಲಿ ಅತ್ಯಂತ ಯಶಸ್ವಿಯಾಗಿಯೇ, ಸುಂದರವಾಗಿಯೇ ವಿವೇಚಿಸಲ್ಪಟ್ಟಿದೆ. ಇದು ಈಗ ಮತ್ತೆ ಅವಶ್ಯವಾಗಿರುತ್ತದೆ. ಇಂದು ಇದನ್ನು ಭಾರತದ ಶಿಕ್ಷಣದ ವ್ಯವಸ್ಥೆಯಲ್ಲಿ ಅವಶ್ಯಕವಾಗಿ ಅಳವಡಿಸಿದರೆ, 21 ನೇ ಶತಮಾನದಲ್ಲಿ ಯಶಸ್ವಿಯಾಗಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ ಮತ್ತು ನಾಲ್ಕನೇ ಔದ್ಯೋಗಿಕ ಕ್ರಾಂತಿಯ ಅವಧಿಯಲ್ಲಿ ಇದು ಅವಶ್ಯಕವೂ ಆಗಿರುತ್ತದೆ. ತಾಂತ್ರಿಕ ಶಿಕ್ಷಣವನ್ನು ಒದಗಿಸುತ್ತಿರುವ (ಇಂಜಿನಿಯರಿಂಗ್) ಸಂಸ್ಥೆಗಳೂ ಸಹಿತ ಅಂದರೆ– ಭಾರತೀಯ ವಿಜ್ಞಾನ ಸಂಸ್ಥೆಗಳು (I.I.T) ಸಹಿತ ಬಹುವಿಷಯಗಳ ಅಧ್ಯಯನದ ಶಿಕ್ಷಣದ ಮೂಲಕ ಜೊತೆಜೊತೆಗೆ ಕಲಾವಿಷಯಗಳೊಡನೆ ಸಂಯೋಜನಗೊಳ್ಳುವಂತೆ ಸಮಗ್ರಗೊಳಿಸಬೇಕಾಗಿದೆ. ಕಲಾ ವಿಭಾಗದ ಹಾಗೂ ಮಾನವಿಕ ವಿಭಾಗದ ವಿದ್ಯಾರ್ಥಿಗಳು ಸಹಿತ ವಿಜ್ಞಾನದ ವಿಷಯಗಳನ್ನು ಅಭ್ಯಸಿಸುವಂತೆ ಗುರಿಯನ್ನು ರೂಪಿಸಬೇಕಾಗಿದೆ. ಜೊತೆಗೆ ಈ ಎಲ್ಲ ವಿಷಯಗಳನ್ನು ಇನ್ನೂ ಹೆಚ್ಚಿನ ವೃತ್ತಿಪರತೆಯ ವಿಷಯಗಳ ಹಾಗೂ ಕೌಶಲ್ಯಪೂರಿತ ಜ್ಞಾನಶಾಖೆಗಳ ಅಧ್ಯಯನಕ್ಕಾಗಿ ಸ್ಥಾಪಿಸಲ್ಪಡುವ ಪ್ರಯತ್ನದಲ್ಲಿ ರೂಪಿತಗೊಳ್ಳಬೇಕಾಗುವುದು.

**11.5.** ವಿದ್ಯಾರ್ಥಿಗಳ ಆಸಕ್ತಿಗೆ ಅನುಗುಣವಾದ ಕಾಂಬಿನೇಷನ್ನುಗಳಲ್ಲಿ ಓದುವ ಅವಕಾಶ ತೆರೆಯುವ ಜೊತೆಗೆ ವಿದ್ಯಾರ್ಥಿಗಳ ಅನುಕೂಲಕ್ಕೆ ತಕ್ಕಂತೆ ಯಾವಾಗ ಬೇಕಾದರೂ ಸೇರುವ ಹಾಗೂ ಕೈಬಿಡುವ ಅವಕಾಶಗಳನ್ನು ಕಲ್ಪಿಸುವ ಮೂಲಕ ಜೀವನ ಪರ್ಯಂತ ಓದುವ ಅವಕಾಶವನ್ನು ಕಲ್ಪಿಸಬೇಕಿದೆ. ಈಗಿನ ಶಿಕ್ಷಣ ಕ್ರಮವು ಕಠಿಣವಾಗಿದ್ದು ಅಧ್ಯಯನದ ಮಧ್ಯದಲ್ಲಿ ತೊರೆದರೆ ಯಾವುದೇ ಸರ್ಟಿಫಿಕೇಟ್ ಲಭ್ಯವಾಗುವುದಿಲ್ಲ. ಪಿ ಎಚ್ ಡಿ –ಸಂಶೋಧನಾತ್ಮಕ ಅಧ್ಯಯನಗಳನ್ನು, ಈ ಬಹುಶೀಸ್ತಿಯ ವಿಶ್ವವಿದ್ಯಾಲಯಗಳಲ್ಲಿ ಮಾಡುವುದರಿಂದ ಸಂಶೋಧನಾತ್ಮಕವಾಗಿರುವ ವಿಶೇಷ ಪರಿಣಿತಿಯನ್ನು ಹೊಂದುವುದರ ಜೊತೆಗೆ ಅಕಾಡೆಮಿಯಾ, ಸರ್ಕಾರ ಮತ್ತು ಉದ್ಯಮವಲಯದಲ್ಲಿ ಉದ್ಯೋಗದ ಸಾಧ್ಯತೆಗಳು ತೆರೆದುಕೊಳ್ಳುತ್ತವೆ.

**11.6.** ಬೃಹತ್–ಬಹುಶಿಸ್ತೀಯ ವಿಶ್ವವಿದ್ಯಾಲಯಗಳು ಮತ್ತು ಮಹಾವಿದ್ಯಾಲಯಗಳು ಈ ಸರ್ವಾಂಗೀಣ ಪ್ರಗತಿಯ ಗುಣವನ್ನು ಹೊಂದಿರುವ ಮಟ್ಟದಲ್ಲಿರುವ ಶಿಕ್ಷಣವನ್ನು ನಾವೀನ್ಯತೆಯ ಮೂಲಕ ಮತ್ತು ಪಠ್ಯಕ್ರಮದ ವಿಕಲ್ಪಗಳನ್ನು ಒದಗಿಸುವ ಮೂಲಕ, ಇಲ್ಲಿ ವಿದ್ಯಾರ್ಥಿಗಳಿಗೆ ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ. ಇದರ ಜೊತೆಜೊತೆಗೆ ವಿಶೇಷ ಪರಿಣಿತಿಯನ್ನೂ ಪಡೆಯಲು ಸಾಧ್ಯವಾಗುತ್ತದೆ. ಇದೆಲ್ಲವನ್ನೂ ಬೋಧಕರ ಸಂಖ್ಯೆಯನ್ನು ಅಧಿಕಗೊಳಿಸುತ್ತ ಹಾಗೂ ಸ್ವಾಯತ್ತಾಧಿಕಾರ ಹೊಂದಿದ ಸಂಸ್ಥೆಯು ಪಠ್ಯಕ್ರಮವನ್ನು ರೂಪಿಸುವ ಮೂಲಕ ವಿದ್ಯಾರ್ಥಿಗಳಿಗೆ ಪ್ರೋತ್ಸಾಹದಾಯಕವಾಗಿರುವಂತೆ ರೂಪಿಸಲಾಗುವುದು. ಈ ರೀತಿಯಾಗಿ ಶಿಕ್ಷಣಶಾಸ್ತ್ರವು ಸಂವಹನದಲ್ಲಿ, ಸಂವಾದದಲ್ಲಿ ಚರ್ಚೆಯಲ್ಲಿ, ಸಂಶೋಧನೆಯಲ್ಲಿ ಹಾಗೂ ವಿಷಯಗಳ ಅಂತರ್ ಸಂಬಂಧದ (Cross-disciplinary) ಮತ್ತು ವಿಷಯಗಳ ಆಂತರ್ಯದ ಅಂತರ್ ಶಿಸ್ತೀಯ ವಿಷಯಗಳಲ್ಲಿ ಹೆಚ್ಚಿನ ಒತ್ತು ಕೊಡಲಾಗುವುದು.

**11.7.** ಭಾಷೆಗಳ, ಸಾಹಿತ್ಯಿಕ, ಸಂಗೀತದ, ತತ್ತ್ವಶಾಸ್ತ್ರದ, ಭಾರತೀಯ ಶಾಸ್ತ್ರದ (Indology), ಕಲಾ ವಿಷಯದ, ನೃತ್ಯದ, ನಾಟಕದ, ಶಿಕ್ಷಣದ, ಗಣಿತಶಾಸ್ತ್ರದ, ಸಂಖ್ಯಾಶಾಸ್ತ್ರದ, ಶುದ್ಧ ಹಾಗೂ ಆನ್ವಯಿಕ ವಿಜ್ಞಾನಗಳ, ಸಮಾಜ ಶಾಸ್ತ್ರದ, ಅರ್ಥಶಾಸ್ತ್ರದ, ಕ್ರೀಡೆಗಳ, ಭಾಷಾಂತರದ ಮತ್ತು ವ್ಯಾಖ್ಯಾನಗಳ (ವಿವರಣೆಗಳ) ವಿಭಾಗಗಳಲ್ಲಿ ಹಾಗೂ ಇದರ ಜೊತೆಗೆ ಈ ಬಹುಮುಖೀ ಮತ್ತು ಭಾರತೀಯ ಶಿಕ್ಷಣ ಮತ್ತು ಶೈಕ್ಷಣಿಕ ವಲಯವನ್ನು ಉತ್ತೇಜನಗೊಳಿಸುವಲ್ಲಿ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳನ್ನು (H E I) ಸ್ಥಾಪಿತಗೊಳಿಸಲಾಗುವುದರ ಜೊತೆಗೆ ಸಮರ್ಥಶೀಲವಾಗಿರುವಂತೆ ರೂಪಿಸುವುದು. ಈ ಎಲ್ಲ ವಿಷಯಗಳಿಗೂ ಪದವಿ–ಸ್ನಾತಕ ಪದವಿ ವಿಭಾಗಗಳಲ್ಲಿ, ಇವುಗಳ ಶ್ರೇಯಾಂಕಗಳನ್ನು, ಹಾಗೂ ಒಂದು ವೇಳೆ ಆ ವಿಭಾಗಗಳಿಂದ ಅಥವಾ ದೂರ ಶಿಕ್ಷಣ ಮಾದರಿ (O D L) ಮಾಧ್ಯಮದ ಮೂಲಕ ಅವುಗಳನ್ನು ಅಧ್ಯಯನ ಮಾಡುತ್ತಿದ್ದಲ್ಲಿ , ಇವುಗಳನ್ನು ಉನ್ನತ ಶಿಕ್ಷಣದ ದೈನಂದಿನ ವರ್ಗಗಳಲ್ಲಿ ಅಧ್ಯಯನಕ್ಕೆ ಅಳವಡಿಸದೇ ಇದ್ದಲ್ಲಿ, ಆಗ ಅವುಗಳಿಗೆ ಪದವಿ, ಸ್ನಾತಕ ಪದವಿ ಹಂತಗಳಲ್ಲಿ ಶ್ರೇಯಾಂಕಗಳನ್ನು ನೀಡಲಾಗುತ್ತದೆ.

**11.8.** ಈ ರೀತಿಯಲ್ಲಿ ಸಮಗ್ರವಾಗಿರುವ ಬಹುಶಿಸ್ತೀಯ ಶಿಕ್ಷಣವನ್ನು ಸಾಧಿಸುವ ಸಲುವಾಗಿ, ಈ ಉನ್ನತ ಶಿಕ್ಷಣ ಸಂಸ್ಥೆಗಳು ನಮ್ಯತೆಯ ಹಾಗೂ ನಾವೀನ್ಯಪೂರ್ಣವಾಗಿ ರೂಪಿಸಲ್ಪಡುವ ಪಠ್ಯಕ್ರಮವು, ಈ ರೀತಿಯ ಶ್ರೇಣಿಯಾಧಾರಿತ ವರ್ಗಗಳನ್ನು ಒಳಗೊಂಡಿರುವ, ಹಾಗೂ ಸಮುದಾಯಗಳೂ ಭಾಗವಹಿಸುವಂತಹ ಯೋಜನೆ ಹಾಗೂ ಸೇವೆಯ ಮೂಲಕ, ಪರಿಸರ ಶಿಕ್ಷಣದ ಅಂಗವಾಗಿರುವ ತಾಪಮಾನ ಬದಲಾವಣೆ, ಮಾಲಿನ್ಯ, ತ್ಯಾಜ್ಯ ನಿರ್ವಹಣೆ, ಸ್ವಚ್ಛತೆ, ಜೀವ ವೈವಿಧ್ಯತೆಯ ಸಂರಕ್ಷಣೆ, ಜೈವಿಕ ಸಂಪನ್ಮೂಲಗಳ ನಿರ್ವಹಣೆ ಮತ್ತು ಜೀವ ವೈವಿಧ್ಯತೆಯನ್ನು ಅರಣ್ಯ ಹಾಗೂ ವನ್ಯಜೀವಿ ಸಂರಕ್ಷಣ ಮತ್ತೆ ಸುಸ್ಥಿರ ಅಭಿವೃದ್ಧಿಯ ಜೀವನ ಪದ್ಧತಿಯ ಮೂಲಕ ಇಂತಹ ವಿಷಯಗಳ ಅಧ್ಯಯನವನ್ನು ಹೊಂದಿದ ಯೋಜನೆಯನ್ನು ಹೊಂದಿದ ವ್ಯವಸ್ಥೆಯನ್ನು ರೂಪಿಸುವ ಸಲುವಾಗಿ ಇರುತ್ತದೆ.

ಈ ರೀತಿ ಮೌಲ್ಯಾಧಾರಿತ ಮಾನವೀಯತೆಯನ್ನು ಬದುಕಿನಲ್ಲಿ ವಿಶಾಲಗೊಳಿಸುವ, ನೈತಿಕ, ಸಂವಿಧಾನಾತ್ಮಕ ಹಾಗೂ ಮಾನವ ಕುಲದ ವೈಶ್ವಿಕ ಮೌಲ್ಯಗಳಾದ"ಸತ್ಯ", "ಧರ್ಮ", "ಶಾಂತಿ", "ಪ್ರೇಮ", "ಅಹಿಂಸೆ", 'ವೈಜ್ಞಾನಿಕ ಮನೋಭಾವ', ನಾಗರಿಕ ಪ್ರಜ್ಞೆ ಹಾಗೂ ಜೊತೆಜೊತೆಗೆ ಜೀವನ ಕೌಶಲ್ಯಗಳನ್ನೂ ಒಳಗೊಂಡಿರುತ್ತದೆ. ಸೇವೆ/ ಕರ್ತವ್ಯಗಳ ಕುರಿತಾದ ಪಾಠಗಳು ಮತ್ತು ಸಮುದಾಯದಲ್ಲಿ ಸೇವಾ ಕಾರ್ಯಕ್ರಮಗಳ ಯೋಜನೆಯ ಮೂಲಕ ಭಾಗವಹಿಸುವಿಕೆಯನ್ನು, ಈ ಸಮಗ್ರ ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗವೆಂದೇ ಪರಿಗಣಿಸಲಾಗುತ್ತಿದೆ. ಇಡೀ ಜಗತ್ತು ಇದೀಗ ಹೆಚ್ಚು ಹೆಚ್ಚಾಗಿ ಪರಸ್ಪರ ಸಂಬಂಧ ಹೊಂದಿರುವುದರಿಂದ ಜಾಗತಿಕ ಪೌರತ್ವದ ಶಿಕ್ಷಣ GCED;Global Citizenship Education, ಅದರಲ್ಲೂ ಪ್ರಪಂಚದಲ್ಲಿರುವ ಜಾಗತಿಕ ಸವಾಲುಗಳನ್ನು ಸಮರ್ಥವಾಗಿ ನೀಡುವ ಮೂಲಕ ಕಲಿಕಾರ್ಥಿಯು ಜಾಗೃತಿ ಹೊಂದಿ, ಈ ಜಾಗತಿಕ ವಿಷಯಗಳ ಕುರಿತು ಅರಿವನ್ನೂ ಹೊಂದುವಂತೆ ಹಾಗೂ ಹೆಚ್ಚಿನ ಕ್ಷಮತೆಯಿಂದ ಶಾಂತಿ ಸ್ಥಾಪಿಸುವಲ್ಲಿ ಪ್ರವರ್ತಕರಾಗುವಂತೆ, ಸಹನಶೀಲರಾಗಿರುವಂತೆ, ಸಮನ್ವಯಗೊಳ್ಳುವಂತೆ ಸುರಕ್ಷಿತವಾಗಿರುವಂತೆ ಹಾಗೂ ಸುಸ್ಥಿರ ಸಮಾಜ ವ್ಯವಸ್ಥೆಯನ್ನು ಹೊಂದುವಂತೆ ರೂಪಿಸಲಾಗುತ್ತಿದೆ.

ಅಂತಿಮವಾಗಿ ಪರಿಪೂರ್ಣ ಶಿಕ್ಷಣದ ಭಾಗವಾಗಿ ಈ ಉನ್ನತ ಶಿಕ್ಷಣ ಸಂಸ್ಥೆಗಳ ಎಲ್ಲ ವಿದ್ಯಾರ್ಥಿಗಳಿಗೂ ಸ್ಥಳೀಯ ಕೈಗಾರಿಕಾ ವಲಯಗಳಲ್ಲಿ, ವ್ಯವಹಾರಗಳಲ್ಲಿ, ಕಲಾಕಾರರಲ್ಲಿ, ಕರಕುಶಲ ವ್ಯಕ್ತಿಗಳಲ್ಲಿ ಹಾಗೂ ಲಭ್ಯವಿರುವ ಇತರೇ ವಲಯಗಳಲ್ಲಿ, ಸಂಸ್ಥೆಯೇ ಹೊಂದಿರುವ ಬೋಧಕರ ಹಾಗೂ ಸಂಶೋಧಕರ ಅಥವಾ ಇನ್ನಿತರ ಉನ್ನತ ಶಿಕ್ಷಣ ಸಂಸ್ಥೆಗಳ / ಸಂಶೋಧನಾ ಸಂಸ್ಥೆಗಳಲ್ಲಿ ಪ್ರಶಿಕ್ಷಣದ ವ್ಯವಸ್ಥೆಯನ್ನು(Internship) ಒದಗಿಸಲಾಗುವದು. ಇದರಂತೆ ವಿದ್ಯಾರ್ಥಿಗಳು ತಾವು ಕಲಿಯುತ್ತಿರುವ ವಿಷಯಗಳ ಪ್ರಾಯೋಗಿಕ ಆಯಾಮಗಳನ್ನು ಇಲ್ಲಿ ಭಾಗವಹಿಸುವುದರಿಂದ ನೇರವಾಗಿ ಪಡೆದುಕೊಳ್ಳಬಹುದು. ಮತ್ತು ಇದರ ಉಪ–ಉತ್ಪನ್ನದಂತಿರುವ ಹೆಚ್ಚಿನ ಉದ್ಯೋಗಾವಕಾಶಗಳನ್ನೂ ಪಡೆದುಕೊಳ್ಳಬಹುದು.

**11.9.** ಈ ಪದವಿ ಯೋಜನೆಗಳ ವರ್ಗಗಳ ಸಂರಚನೆ ಹಾಗೂ ಅವಧಿ ಮಿತಿಗಳನ್ನು ಆಯಾ ಸಂದರ್ಭಕ್ಕೆ ತಕ್ಕಂತೆ ಸೂಕ್ತವಾಗಿರುವ ಹಾಗೆ ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ. ಪದವಿ ಶಿಕ್ಷಣದ ಅವಧಿಯು 3 ಅಥವಾ 4 ವರ್ಷದ ಅವಧಿಯದ್ದಾಗಿರುತ್ತದೆ. ಈ ಅವಧಿಯಲ್ಲಿಯೇ (ಬಹು ನಿರ್ಗಮನದ ಆಯ್ಕೆ)ಯ ವಿನ್ಯಾಸವನ್ನು ಹೊಂದಿದ್ದು, ಪ್ರತಿಯೊಂದು ಹಂತದಲ್ಲೂ ಸೂಕ್ತವಾಗಿ ಪ್ರಮಾಣೀಕರಿಸುವ ವ್ಯವಸ್ಥೆಯಿಂದ ಸಂಯೋಜಿತಗೊಂಡಿರುತ್ತದೆ. ಉದಾಹರಣೆಗೆ, ಆರೂ ವಿಷಯಗಳಲ್ಲಿ/ ವಲಯದಲ್ಲಿ, ವೃತ್ತಿಯಾಧಾರಿತ ಅಧ್ಯಯನದಲ್ಲಿ, ವೃತ್ತಿ ಪರಿಣಿತಿಯ ವರ್ಗಗಳನ್ನು ಒಳಗೊಂಡಂತೆ, ಒಂದು ವರ್ಷದ ಅಧ್ಯಯನವನ್ನು ಯಶಸ್ವಿಯಾಗಿ ಪೂರ್ತಿಗೊಳಿಸಿದಲ್ಲಿ ಒಂದು "ಪ್ರಮಾಣ ಪತ್ರ"ವನ್ನು ಕೊಡಲಾಗುವುದು. ಅಥವಾ 2 ವರ್ಷದ ಅವಧಿಯ ಅಧ್ಯಯನದ ನಂತರದಲ್ಲಿ ಒಂದು ಡಿಪ್ಲೋಮಾ("ಉಪಾಧಿಪತ್ರ")ವನ್ನು ಕೊಡಲಾಗುವುದು. 3 ವರ್ಷಗಳ ಅಧ್ಯಯನವನ್ನು ಪೂರೈಸಿದ ನಂತರದಲ್ಲಿ, ಸ್ನಾತಕಪೂರ್ವ "ಪದವಿ ಪತ್ರ"ವನ್ನು ಕೊಡಲಾಗುವದು. ಆದರೂ 4 ವರ್ಷಗಳ ಅವಧಿಯ ಬಹುಶಿಸ್ತೀಯ ಪದವಿ ವರ್ಗಗಳನ್ನು ಇಲ್ಲಿ ಆದ್ಯತಾಪೂರ್ಣವಾಗಿರುವ ಆಯ್ಕೆಯೆಂದು ಕರೆಯಲಾಗುತ್ತದೆ.–ಏಕೆಂದರೆ ಇದು ಆಯಾ ವಿಷಯಗಳಲ್ಲಿ ಪೂರ್ಣಪ್ರಮಾಣದ ಸಮಗ್ರತೆಯನ್ನು ಹಾಗೂ ಬಹುಶಿಸ್ತೀಯ ಶಿಕ್ಷಣದ ಸರ್ವ ಅಂಶಗಳನ್ನೂ ಒಳಗೊಂಡಿರುತ್ತದೆ. ಅದರಲ್ಲೂ ವಿದ್ಯಾರ್ಥಿಯು ಆಯ್ಕೆ ಮಾಡಿಕೊಂಡಿರುವ ಪ್ರಮುಖ ಹಾಗೂ ಪೂರಕ ವಿಷಯಗಳಲ್ಲಿಯೇ ಕೇಂದ್ರಿತ ಗಮನದಿಂದಾಗಿ, ಹೆಚ್ಚಿನ ಅಧ್ಯಯನದ ಅನುಭವವನ್ನು ಹೊಂದಲು ಸಾಧ್ಯವಾಗುತ್ತದೆ. ಇದರ ಉದ್ದೇಶಕ್ಕಾಗಿಯೇ " ಒಂದು ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್' ವ್ಯವಸ್ಥೆಯನ್ನು(ABC; Academic Bank of credit) ಸ್ಥಾಪಿಸಲಾಗುವುದು ಮತ್ತು ಇದು ಅಧಿಕೃತಗೊಂಡಿರುವ ಉನ್ನತ ಶಿಕ್ಷಣ ಸಂಸ್ಥೆಗಳ ಮೂಲಕ ಕಲಿಯುವ ವಿದ್ಯಾರ್ಥಿಯು ಗಳಿಸುವ ಶೈಕ್ಷಣಿಕ ಶ್ರೇಯಾಂಕಗಳನ್ನು ಗಣಕೀಕರಣದ ವ್ಯವಸ್ಥೆಯ ಮೂಲಕ ರಕ್ಷಿಸಲಾಗುವುದು. ಆಯಾ ಉನ್ನತ ಶಿಕ್ಷಣ ಸಂಸ್ಥೆಗಳ ಮೂಲಕ ವಿದ್ಯಾರ್ಥಿಯು ಗಳಿಸಿರುವ ಶ್ರೇಯಾಂಕಗಳ ಆಧಾರದ ಮೇಲೆ ಪದವಿಯನ್ನು ಪ್ರದಾನ ಮಾಡಲಾಗುವದು. ಈ 4–ವರ್ಷದ ವ್ಯವಸ್ಥೆಯು "ಸಂಶೋಧನೆಯೊಂದಿಗೆ ಪದವಿ"

ಎಂದು ಗುರುತಿಸಲಾಗುವದು. ಒಂದು ವೇಳೆ ಆ ವಿದ್ಯಾರ್ಥಿಯು ತನ್ನ ಅಧ್ಯಯನದ ವೇಳೆಯಲ್ಲಿ ಕಠಿಣ ಪರಿಶ್ರಮದೊಂದಿಗೆ ಯೋಜನಾಬದ್ಧತೆಯ ಮೂಲಕ ಆಯ್ಕೆ ಮಾಡಿಕೊಂಡ ವಿಷಯಗಳಲ್ಲಿ, ಆಯಾ ಉನ್ನತ ಶಿಕ್ಷಣ ಸಂಸ್ಥೆಗಳು ವಿಶೇಷವಾಗಿ ನಮೂದಿಸಿರುವ ಪ್ರಮುಖ ವಿಷಯಗಳ ಅಧ್ಯಯನವನ್ನು ಪೂರೈಸಿದ್ದಲ್ಲಿ, ಈ 'ಸಂಶೋಧನೆಯೊಂದಿಗೆ ಪದವಿ' ಪ್ರದಾನಗೊಳಿಸಲಾಗುವುದು.

**11.10.** ಉನ್ನತ ಶಿಕ್ಷಣ ಸಂಸ್ಥೆಗಳು ಸ್ನಾತಕೋತ್ತರ ಪದವಿಗಳನ್ನು ವಿವಿಧ ವಿನ್ಯಾಸಗಳಲ್ಲಿ ರೂಪಿಸಿ ಒದಗಿಸುವ ನಮ್ಯತಾ ವ್ಯವಸ್ಥೆಯೂ ಇರುತ್ತದೆ.

**ಅ)** ಎರಡು ವರ್ಷದ ಅಧ್ಯಯನದ ಈ ಸ್ನಾತಕೋತ್ತರ ಪದವಿ ವಿಧಾನದಲ್ಲಿ, ಎರಡನೇ ವರ್ಷವನ್ನು – ಯಾರು ತಮ್ಮ ಪದವಿ ಅಧ್ಯಯನವನ್ನು 3 ವರ್ಷದ ಅವಧಿಯಲ್ಲಿ ಪೂರ್ತಿ ಮಾಡಿಕೊಂಡಿರುವರೋ ಅವರಿಗೆ– ಸಂಪೂರ್ಣವಾಗಿ ಸಂಶೋಧನೆಗೆ ಅನುಬದ್ಧಗೊಳಿಸಲಾಗುವುದು.

**ಆ)** 4–ವರ್ಷದ ಅವಧಿಯ ಪದವಿ ಶಿಕ್ಷಣವನ್ನು ಸಂಶೋಧನಾ ವಿನ್ಯಾಸದಲ್ಲಿ ಮುಗಿಸಿಕೊಂಡು ಬಂದಿರುವವರಿಗೆ, ಆಗ ಕೇವಲ "ಒಂದೇ ವರ್ಷದ ಸ್ನಾತಕ ವರ್ಗ"ವಿರುವುದು.

**ಇ)** ಸಮನ್ವಿತಗೊಳಿಸಲ್ಪಟ್ಟಿರುವ 5–ವರ್ಷಗಳ ಅವಧಿಯ ಸ್ನಾತಕಪೂರ್ವ/ಸ್ನಾತಕ ವರ್ಗದ ವ್ಯವಸ್ಥೆಯೂ ಇಲ್ಲಿದೆ. ಇಲ್ಲಿ ಮುಖ್ಯವಾಗಿ, ಪಿ ಎಚ್ ಡಿಯ ಸಲುವಾಗಿ ಮಾತ್ರ, ಸ್ನಾತಕೋತ್ತರ ಅಥವಾ ನಾಲ್ಕು ವರ್ಷಗಳ ಪದವಿಯನ್ನು ಅದೂ ಸಂಶೋಧನೆಯನ್ನೂ ಒಳಗೊಂಡಂತೆ ಪೂರೈಸಿರಬೇಕು. ಈಗ ಪ್ರಚಲಿತದಲ್ಲಿರುವ "ಎಂ.ಫಿಲ್" ವ್ಯವಸ್ಥೆಯನ್ನು ಸ್ಥಗಿತಗೊಳಿಸಲಾಗುವುದು.

**11.11.** ಸಮಾನ ಶಿಕ್ಷಣ ಹಾಗೂ ಬಹುಶಿಸ್ತೀಯ ಶಿಕ್ಷಣಕ್ಕಾಗಿ ಆದರ್ಶವಾಗಿರುವ ಸಾರ್ವಜನಿಕ ವಿಶ್ವವಿದ್ಯಾಲಯಗಳಾದ, ಸಧ್ಯ ಕಾರ್ಯ ನಿರ್ವಹಿಸುತ್ತಿರುವ ಭಾರತೀಯ ತಂತ್ರಜ್ಞಾನ ಸಂಸ್ಥೆ(I I T), ಭಾರತೀಯ ಪ್ರಬಂಧನ ಸಂಸ್ಥೆ(I I M) ಮೊದಲಾದವುಗಳನ್ನು ಇನ್ನು ಮುಂದೆ "ಮೇರು" (MERU – Multi-disciplinary Education & Research University) " ಎಂದು ಕರೆಯಲಾಗುವುದು.

ಈ ರೀತಿಯ "ಮೇರು"ಗಳನ್ನು ಸ್ಥಾಪಿಸಿ, ಆ ಮೂಲಕ ಗುಣಾತ್ಮಕವಾಗಿರುವ ಶಿಕ್ಷಣದ ವ್ಯವಸ್ಥೆಯಲ್ಲಿ ಜಾಗತಿಕ ಮಾನಕಗಳನ್ನು ಹೆಚ್ಚಿನ ಪ್ರಮಾಣದಲ್ಲಿಯೇ ಸಾಧಿಸುವ ಸಲುವಾಗಿ ಗುರಿಯನ್ನು ಹೊಂದಿ ಸ್ಥಾಪಿಸಲಾಗುವುದು. ಈ ಸಂಸ್ಥೆಗಳೂ ಸಹಿತ ಭಾರತದಾದ್ಯಂತವೂ ಈ ಬಹುಶಿಸ್ತೀಯ ಶಿಕ್ಷಣದ ಉಚ್ಚತಮ ಮಾನಕಗಳನ್ನು ರೂಪಿಸಲು ಸಹಾಯಕವಾಗಿರುತ್ತವೆ.

**11.12.** ಇನ್‌ಕ್ಯುಬೇಶನ್ ಸೆಂಟರ್( Incubation Centre)ಗಳನ್ನು ಸ್ಥಾಪಿಸುವ ಮೂಲಕ, ಉಚ್ಚ ಶಿಕ್ಷಣ ಸಂಸ್ಥೆಗಳು ಸಂಶೋಧನೆ ಮತ್ತು ಆವಿಷ್ಕಾರಗಳ ವಿಷಯದಲ್ಲಿ ಅಧ್ಯಯನವನ್ನು ಕೇಂದ್ರ ವಿಷಯವಾಗಿ ಗಮನಿಸಬೇಕಾಗುವುದು. ತಾಂತ್ರಿಕ ವ್ಯವಸ್ಥೆಯಲ್ಲಿಯೂ ಪ್ರಗತಿ ಕೇಂದ್ರಗಳು, ಸೀಮಿತ ವಲಯಗಳಲ್ಲೂ ಸಹಿತ ಸಂಶೋಧನಾ ಕೇಂದ್ರಗಳು, ಬೃಹದ್ ಕೈಗಾರಿಕಾ–ಶೈಕ್ಷಣಿಕ ಸಂಪರ್ಕಗಳಲ್ಲಿ, ಮತ್ತು ವಿಷಯಗಳ ಅಂತರ್–ಶಿಸ್ತೀಯ ಸಂಬಂಧದ ಅಧ್ಯಯನದ ಸಂಶೋಧನೆಯ ಮೂಲಕ, ಮಾನವಿಕಗಳ ಮತ್ತು ಸಮಾಜ ಶಾಸ್ತ್ರಗಳ–ವಿಜ್ಞಾನಗಳ ಸಂಶೋಧನೆಯನ್ನು ಇದು ಒಳಗೊಂಡಿದೆ.

ಸದ್ಯದ ಅವಧಿಯಲ್ಲಿರುವ ಸಾಂಕ್ರಾಮಿಕ ಹಾಗೂ ಮಹಾಮಾರಿಯಾಗಿರುವ ಘಟನಾವಳಿಗಳಲ್ಲಿ, ಈ ಉನ್ನತ ಶಿಕ್ಷಣ ಸಂಸ್ಥೆಗಳು, ಈ ರೀತಿಯ ಮಾರಕ ರೋಗಗಳನ್ನು ನಿಯಂತ್ರಣ ಮಾಡುವುದಕ್ಕೆ ಸಂಬಂಧಿಸಿದ ಅಧ್ಯಯನವನ್ನು ರೂಪಿಸುವ ಸಲುವಾಗಿ, 'ಸಾಂಕ್ರಾಮಿಕ–ರೋಗ ಶಾಸ್ತ್ರ (Epidimiology )", ರೋಗಾಣು ಶಾಸ್ತ್ರ( Virology), ರೋಗನಿದಾನ, ಹಾಗೂ ವೈದ್ಯಕೀಯ ಉಪಕರಣಗಳ ವಿಷಯದಲ್ಲಿ, ಸಂಶೋಧನಾ ಕಾರ್ಯಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಉನ್ನತ ಶಿಕ್ಷಣ ಸಂಸ್ಥೆಗಳು ವಿಶೇಷವಾಗಿ ಸುಲಭದಲ್ಲಿಯೇ ಅಳವಡಿಸಲಾಗುವ ಕ್ರಿಯಾವಿಧಿಯನ್ನು ಅಭಿವೃದ್ಧಿ ಪಡಿಸಬೇಕಿದೆ ಮತ್ತು, ವಿದ್ಯಾರ್ಥಿಗಳಲ್ಲಿ ಈ ರೀತಿಯ ಸಂಶೋಧನೆಯ ಪ್ರವೃತ್ತಿಗಾಗಿ ಸ್ಪರ್ಧಾತ್ಮಕವಾಗಿರುವಂತೆ ರೂಪಿಸಬೇಕಾಗಿದೆ. ಎನ್.ಆರ್.ಎಫ್(N R F) ಈ ರೀತಿಯ ಅತ್ಯಂತ ತೀವ್ರತರಹದ ಕ್ರಿಯಾಶೀಲ ಸಂಶೋಧನೆಗಳಿಗೆ, ಆವಿಷ್ಕಾರಗಳಿಗೆ ಸಹಾಯಕವಾಗುವಂತೆ ಹಾಗೂ ಸಾಮರ್ಥ್ಯ ಪಡೆಯುವಂತೆ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿಯೂ, ಬೋಧನಾ ಪ್ರಯೊಗಾಲಯಗಳಲ್ಲಿ, ಮತ್ತು ಇತರೆ ಸಂಶೋಧನಾ ಸಂಸ್ಥೆಗಳಲ್ಲಿ ರೂಪುಗೊಳ್ಳಬೇಕಿದೆ.

## 12. ಉತ್ತಮ ಕಲಿಕಾ ಪರಿಸರ ಹಾಗೂ ವಿದ್ಯಾರ್ಥಿಗಳಿಗೆ ನೆರವು

12.1. ಪರಿಣಾಮಕಾರಿ ಕಲಿಕೆ ಎನ್ನುವುದು ವಿಸ್ತೃತವಾದ ಮತ್ತು ಸೂಕ್ತವಾದ ಪಠ್ಯಕ್ರಮ, ಕ್ರಿಯಾಶೀಲವಾಗಿರುವ ಬೋಧನಾ ವ್ಯವಸ್ಥೆ, ಅವಿರತವಾಗಿರುವ ರಚನಾತ್ಮಕವಾದ ಮೌಲ್ಯಾಂಕನಗಳು, ಮತ್ತು ವಿದ್ಯಾರ್ಥಿಗಳಿಂದ ಹೆಚ್ಚಿನ ಸಹಕಾರವನ್ನು ಬಯಸುತ್ತದೆ. ಈ ಪಠ್ಯಕ್ರಮವು ಯಾವಾಗಲೂ ಪ್ರಸ್ತುತವೂ, ಸುಸಂಗತವೂ ಆಗಿದ್ದು ಕಡ್ಡಾಯವಾಗಿ ಆಕರ್ಷಕವೂ ಆಗಿರಬೇಕಾಗಿದೆ. ಅದೂ ಅಲ್ಲದೇ, ನಿಯಮಾನುಸಾರವಾಗಿ ಅದನ್ನು ಸಾಮಯಿಕವಾಗಿರುವಂತೆ ನವೀಕರಿಸುತ್ತಲೇ, ಅದರಲ್ಲಿ ಜ್ಞಾನದ ಇತ್ತೀಚಿನ ಬೆಳವಣಿಗೆಗಳೂ ಸೇರಿಕೊಂಡಿರುತ್ತವೆ ಮತ್ತು ನಿರ್ದಿಷ್ಟಪಡಿಸಲಾಗಿರುವ ಕಲಿಕಾ ಫಲಿತಾಂಶವು ರೂಪುಗೊಳ್ಳುವಂತೆ ಇರಬೇಕು. ಉಚ್ಚ ಗುಣದ ಶಿಕ್ಷಣ ಶಾಸ್ತ್ರವು, ಈ ವಿದ್ಯಾರ್ಥಿಗಳಿಗೆ ಪಠ್ಯಕ್ರಮದ ವಿಷಯಗಳನ್ನು ಒದಗಿಸುವಲ್ಲಿ, ಕಲಿಕೆಯನ್ನು ಯಶಸ್ವಿಗೊಳಿಸುವಲ್ಲಿ ಅವಶ್ಯಕವಾಗಿದೆ. ಇವು ಕಲಿಕಾ ಫಲಿತಾಂಶದ ಮೇಲೆ ನೇರಾನೇರವಾಗಿಯೇ ಪ್ರಭಾವವನ್ನು ಬೀರುತ್ತವೆ. ಇದಕ್ಕಾಗಿ ಮೌಲ್ಯಾಂಕನಗೊಳಿಸುವ ಹಾಗೂ ವೈಜ್ಞಾನಿಕವಾಗಿಯೂ ಇರಬೇಕು. ಅವು ಕಲಿಕೆಯನ್ನು ಅವಿರತವಾಗಿರುವಂತೆಯೇ ಸುಧಾರಣೆಗೊಳ್ಳುತ್ತಿರುವಂತೆಯೇ ಇರಬೇಕು.ಜ್ಞಾನವನ್ನು ಅನ್ವಯಿಸುವಲ್ಲಿ ಪರೀಕ್ಷೆಗೆ ಒಳಪಡುವಂತೆಯೂ ಇರಬೇಕು. ಅಂತಿಮವಾಗಿ ಎಂದಲ್ಲದಿದ್ದರೂ, ಈ ಉನ್ನತ ಗುಣಮಟ್ಟದ ಕಲಿಕೆಗೆ ಅತ್ಯಂತ ನಿರ್ಣಯಾತ್ಮಕ ಹಾಗೂ ನಿರ್ಧಾರಾತ್ಮಕ ಅಂಶಗಳಾಗಿರುವ ಅರ್ಹತೆ, ಒಳ್ಳೆಯ ಆರೋಗ್ಯ, ಸಾಮಾಜಿಕ–ಮಾನಸಿಕ–ಸೌಹಾರ್ದ ಜೀವನ ವಿಧಾನ ಮತ್ತು ನೈತಿಕಜೀವನ ಪದ್ಧತಿಯ ಆಧಾರದ ಮೇಲೆಯೇ ವಿದ್ಯಾರ್ಥಿಗಳಲ್ಲಿ ಅವರ ಸಾಮರ್ಥ್ಯವು ಪ್ರಗತಿಯನ್ನು ಹೊಂದುವಂತೆ ರೂಪಿಸುವಲ್ಲಿ ನಿರ್ಣಯಾತ್ಮಕವಾಗಿರುವ ಅಂಶಗಳಾಗಿವೆ.

ಹೀಗೆ ಪಠ್ಯಕ್ರಮ, ಶಿಕ್ಷಣ ಶಾಸ್ತ್ರ, ನಿರಂತರವಾದ ಮೌಲ್ಯಾಂಕನ, ಮತ್ತು ವಿದ್ಯಾರ್ಥಿಗಳಿಗೆ ಕೊಡುವ ಸಹಕಾರಗಳು ಇಲ್ಲಿ ಮೂಲಾಧಾರ ವಿಷಯಗಳಾಗಿ ಭದ್ರ ಬುನಾದಿಯಾಗಿವೆ. ಇವುಗಳ ಜೊತೆಜೊತೆಗೆ ಸೂಕ್ತವಾಗಿರುವ ಸಂಪನ್ಮೂಲಗಳು, ಮತ್ತು ಮೂಲಭೂತಸೌಕರ್ಯಗಳು, ಗುಣಾತ್ಮಕವಾಗಿರುವ ವಾಚನಾಲಯಗಳು, ಕಲಿಕಾ ವರ್ಗಗಳು, ಪ್ರಯೋಗಾಲಯಗಳು, ತಂತ್ರಜ್ಞಾನ, ಕ್ರೀಡೆ/ಮತ್ತು ಮನೋರಂಜನಾ ಅವಶ್ಯಕತೆಗಳು, ವಿದ್ಯಾರ್ಥಿಗಳು ಸಂವಾದ ನಡೆಸಲು ಅವಕಾಶಗಳು ಉಪಾಹಾರ ಮಂದಿರದ ವ್ಯವಸ್ಥೆಗಳು, ಮುಂತಾದ ಈ ಅವಶ್ಯಕ ಸಂಗತಿಗಳು ಕಲಿಕಾ ವಾತಾವರಣದಲ್ಲಿ ಇರುವದನ್ನು– ಖಾತ್ರಿಗೊಳಿಸಬೇಕಾಗಿರುತ್ತದೆ. ಎಲ್ಲ ವಿದ್ಯಾರ್ಥಿಗಳೂ ಸಮರ್ಥವಾಗಿ, ಸ್ಪರ್ಧಾತ್ಮಕವಾಗಿ ತಮ್ಮನ್ನು ತಾವೇ ಅಧ್ಯಯನದಲ್ಲಿ ತೊಡಗಿಸಿಕೊಳ್ಳುವ ಮೂಲಕ ಇಲ್ಲಿ ಯಶಸ್ಸನ್ನು ಪಡೆಯಲಾಗುತ್ತದೆ.

12.2. ಪ್ರಥಮದಲ್ಲಿ, ಸೃಜನಾತ್ಮಕತೆಯನ್ನು ಉತ್ತೇಜನಗೊಳಿಸುವ ವ್ಯವಸ್ಥೆಯಲ್ಲಿ ಪಠ್ಯಕ್ರಮದ ವಿಷಯದಲ್ಲಿ ಉದ್ಬೋಧಕವಾಗಿರುವ ಸಂಗತಿಗಳು ಇರುವದಕ್ಕಾಗಿ ಮತ್ತು ಶಿಕ್ಷಣವು ಶಾಸ್ತ್ರೀಯವಾಗಿರುವಂತೆ, ವೈಶಾಲ್ಯತೆಯಿಂದ ಕೂಡಿರುವ ಉನ್ನತ ಶಿಕ್ಷಣದ ಅರ್ಹತೆಯ ಚೌಕಟ್ಟಿನಲ್ಲಿಯೇ ಮೌಲ್ಯಾಂಕನಗೊಳಿಸುವದಕ್ಕಾಗಿ, ಮತ್ತು ಸಂಸ್ಥೆಗಳ ಹಾಗೂ ಕಾರ್ಯಕ್ರಮಗಳಲ್ಲಿ–ದೂರ ಶಿಕ್ಷಣ ಕಲಿಕಾ ವ್ಯವಸ್ಥೆಯೂ ಒಳಗೊಂಡಂತೆ – ಒಂದು ಸ್ಥಿರತೆಯನ್ನು ಸದಾ ರೂಪಿಸಿಕೊಂಡಿರಬೇಕಾಗುತ್ತದೆ. ಮತ್ತು ವರ್ಗಗಳಲ್ಲಿ ಪರಂಪರಾಗತವಾಗಿರುವ ಶೈಲಿಯ ವಿನ್ಯಾಸದಲ್ಲಿ ಇರಬೇಕು. ಸೂಕ್ತವಾಗಿಯೇ ಪಠ್ಯಕ್ರಮ ಹಾಗೂ ಶಿಕ್ಷಣ ಶಾಸ್ತ್ರವು, ಶಿಕ್ಷಣ ಸಂಸ್ಥೆಗಳಲ್ಲಿ ರೂಪಿಸಲ್ಪಡುತ್ತಿದ್ದ ಜೊತೆಗೆ ಇದು ಎಲ್ಲ ವಿದ್ಯಾರ್ಥಿಗಳಿಗೂ ಕಲಿಕಾ ಅನುಭವದ ಮೂಲಕವೇ ತೊಡಗಿಸಿಕೊಳ್ಳುವಂತೆ ಇರಬೇಕು. ಜೊತೆಗೆ ನಿರಂತರವಾಗಿರುವ ರಚನಾತ್ಮಕ ಮೌಲ್ಯಾಂಕನವು ಮತ್ತೂ ಮುಂದಿನ ಹಂತಗಳನ್ನು, ಅಂದರೆ ಪ್ರತೀ ಕಾರ್ಯಕ್ರಮದ ಯೋಜನೆಯ ಗುರಿಗಳನ್ನು ತಲುಪುವಂತೆ ನೋಡಿಕೊಳ್ಳಲಾಗುತ್ತದೆ.

ಈ ರೀತಿಯ ಎಲ್ಲ ಮೌಲ್ಯಾಂಕನ ವಿಧಾನವನ್ನು ಆ ಉನ್ನತ ಶಿಕ್ಷಣ ಸಂಸ್ಥೆಯೇ ನಿರ್ಣಯಿಸುವದು. ಇದರಲ್ಲಿ ಅಂತಿಮ ಹಂತದ ಪ್ರಮಾಣಪತ್ರವನ್ನು ಪ್ರದಾನ ಮಾಡುವ ವಿಷಯವನ್ನೂ ಒಳಗೊಂಡಿರುತ್ತದೆ. **'ಆಯ್ಕೆಯಾಧಾರಿತ ಶ್ರೇಯಾಂಕ** ವಿಧಾನದ (CBCS-Choice Based Credit System-) ಮೂಲಕ ಆವಿಷ್ಕಾರಗಳನ್ನು ಅಳವಡಿಸಲು ಮತ್ತು ನಮ್ಯತೆಯನ್ನು ರೂಪಿಸುವ ಸಲುವಾಗಿ ಪರಿಷ್ಕರಣಗೊಳಿಸಲಾಗುವದು. ಹೀಗಾಗಿ ಈ ಉನ್ನತ ಶಿಕ್ಷಣ ಸಂಸ್ಥೆಗಳು **'ಅನುಮಾಪಕ–ಶ್ರೇಯಾಂಕ** ಆಧಾರಿತ ಶ್ರೇಣೀಕರಣ ವ್ಯವಸ್ಥೆ( Criterion based Credit System) ಗೆ, ಈ ಉನ್ನತ ಶಿಕ್ಷಣ ಸಂಸ್ಥೆಗಳು ರೂಪಣೆ ಪಡೆಯುತ್ತ ಸಾಗಬೇಕಿದೆ. ಆ ಮೂಲಕ ವಿದ್ಯಾರ್ಥಿಗಳ ಸಾಧನೆಯನ್ನು ಮೌಲ್ಯಾಂಕನಗೊಳಿಸುವಲ್ಲಿ– ಪ್ರತಿ ವಿಷಯದಲ್ಲೂ ಅವನ/ಅವರ ಕಲಿಕೆಯ ಗುರಿಗಳನ್ನು ಆಧರಿಸಿ ನೀಡಲಾಗುತ್ತದೆ. ಈ ವಿಧಾನವನ್ನು ಇನ್ನಷ್ಟು ಪರಿಷ್ಕರಿಸಿ, ಫಲಿತಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತುಲನಾತ್ಮಕವಾಗಿಯೇ ಪಡೆಯುವಂತೆ ವ್ಯವಸ್ಥೆಯನ್ನು ಹೊಂದಿರುತ್ತದೆ. ಇದೂ ಅಲ್ಲದೇ, ಉನ್ನತ ಶಿಕ್ಷಣ ಸಂಸ್ಥೆಗಳು ಈಗ ಇರುವ ಹೆಚ್ಚಿನ ಹೊಣೆಗಾರಿಕೆಯ ಪರೀಕ್ಷಾ ವಿಧಾನದಿಂದ ದೂರವಾಗಿ, ನಿರಂತರವಾಗಿರುವ ಹಾಗೂ ಸರ್ವಾಂಗೀಣವಾಗಿರುವ, ಪ್ರಬುದ್ಧ ಬೋಧಶಕ್ತಿ ಸಂಪನ್ನತೆಯ ವಿಶ್ಲೇಷಣೆಯ ಮೌಲ್ಯಾಂಕನದ ಪದ್ಧತಿಯನ್ನು ಅಳವಡಿಸಿಕೊಳ್ಳಬಹುದಾಗಿದೆ.

**12.3.** ಎರಡನೇಯದಾಗಿ, ಪ್ರತಿಯೊಂದು ಸಂಸ್ಥೆಯೂ ತನ್ನ ಶೈಕ್ಷಣಿಕ ಯೋಜನೆಗಳನ್ನು, ತರಗತಿ ನಡೆಸುವ ಯೋಜನೆಗಳನ್ನು ವಿಸ್ತಾರವಾದ "ಸಾಂಸ್ಥಿಕ ಅಭಿವೃದ್ಧಿ ಯೋಜನೆ(IDP)" ಯಲ್ಲಿ ಸಮನ್ವಯ ಗೊಳಿಸಬೇಕಾಗಿದೆ. ಪ್ರತಿಯೊಂದು ಸಂಸ್ಥೆಯೂ ಸಹಿತ, ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಗೆ ಬಾಧ್ಯಸ್ಥರಾಗಬೇಕಿದೆ ಮತ್ತು ಶೈಕ್ಷಣಿಕ ಅವಧಿಯಲ್ಲಿ ವೈವಿಧ್ಯಮಯದ ಸಮುದಾಯಗಳ ಸಂಪರ್ಕವನ್ನು, ವಿದ್ಯಾರ್ಥಿಗೆ ಸಹಕಾರಿಯಾಗಿರುವ ಸಮರ್ಥವಾಗಿರುವ ಆಂತರಿಕ–ವಿಧಾನಗಳನ್ನು ರೂಪಣೆಗೊಳಿಸಬೇಕಾಗಿದೆ. ಜೊತೆ ಜೊತೆಗೆ ಅಧ್ಯಯನ ವರ್ಗಗಳಲ್ಲಿ ಹಾಗೂ ಹೊರಗೆಯೂ ಸಹಿತ 'ನಿಯಮನಿಷ್ಠ ಶೈಕ್ಷಣಿಕ ಪರಸ್ಪರ–ಸಂವಹನಗಳ" ಸಲುವಾಗಿ ಸಾಮಾಜಿಕ ಜ್ಞಾನಕೇಂದ್ರಗಳನ್ನು ರೂಪಿಸಬೇಕಿದೆ. ಉದಾಹರಣೆಗೆ, ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳೂ ಒಂದು ಕಾರ್ಯಾನುಷ್ಠಾನದ ವ್ಯವಸ್ಥೆಗಳನ್ನು ಹೊಂದಿದ್ದು, ಅದರ ಜೊತೆಗೆ ಸಂಬಂಧಪಟ್ಟ ವಿಷಯಕ್ಕೆ ಕೇಂದ್ರಿತಗೊಂಡಿರುವ ಸಂಘಗಳಿಗೆ ಹಣಕಾಸಿನ ಸಹಾಯ ಒದಗಿಸುವ ಅವಕಾಶಗಳನ್ನು ಹೊಂದಬೇಕಾಗಿದೆ. ಜೊತೆಗೆ ವಿದ್ಯಾರ್ಥಿಗಳಿಂದಲೇ ಸಂಘಟಿತವಾಗುವ ಚಟುವಟಿಕೆಗಳಿಗೆ ಉದಾಹರಣೆಗೆ: ವಿಜ್ಞಾನಕ್ಕೆ, ಗಣಿತಕ್ಕೆ, ಕಾವ್ಯ, ಭಾಷೆ, ಸಾಹಿತ್ಯ, ಚರ್ಚೆ, ಸಂಗೀತ ಮತ್ತು ಕ್ರೀಡೆಗಳಿಗೆ ಆಯಾ ವಿಭಾಗಗಳ ಬೋಧಕರ ಸಹಾಯದೊಂದಿಗೆ ಇರುವ ಚಟುವಟಿಕೆಗಳಿಗೆ ಧನಸಹಾಯ ಒದಗಿಸುವ ಅವಕಾಶಗಳೂ ಇರಬೇಕು.

ಮುಂದಿನ ಅವಧಿಯಲ್ಲಿ ಇಂತಹ ವಿಷಯಗಳನ್ನು ಪಠ್ಯಕ್ರಮದಲ್ಲಿಯೇ – ಅಂದರೆ ಆಯಾ ವಿಷಯಕ್ಕೆ ಸೂಕ್ತ ಪರಿಣಿತ ಬೋಧಕರ ಲಭ್ಯತೆಯನ್ನು ಹಾಗೂ ಅವಕಾಶವನ್ನು ಗಮನಿಸಿ , ಆಯಾ ಶೈಕ್ಷಣಿಕ ಆವರಣದಲ್ಲಿ ಇರುವ ವಿದ್ಯಾರ್ಥಿಗಳಿಂದ ಬೇಡಿಕೆಯು ಬಂದಲ್ಲಿ, ಅಲ್ಲಿ ಪ್ರಾರಂಭಿಸಬೇಕಾಗಿರುತ್ತದೆ. ಇಲ್ಲಿರುವ ಬೋಧಕರು ವಿದ್ಯಾರ್ಥಿಗಳನ್ನು ಅವರು ತಲುಪುವ ಸಾಮರ್ಥ್ಯ ಹಾಗೂ ಅವರಿಗೆ ದೊರೆಯುವ ತರಬೇತಿಯನ್ನು ಹೊಂದಿರಬೇಕೇ ವಿನಾ ಕೇವಲ ಅವರು "ಕಲಿಸುವುದು" ಎನ್ನುವ ರೀತಿಯಲ್ಲಿ ರೂಪಿತಗೊಳ್ಳಬಾರದು, ಹೀಗಾಗಿ ಇದು ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಯಾಗಿ ಹಾಗೂ ಪರಾಮರ್ಶನದ ಪಾಲನೆಯಲ್ಲಿ ಗುರುವೂ ಆಗಿರಬೇಕಾಗುತ್ತದೆ.

**12.4.** ಮೂರನೇಯದಾಗಿ, ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದ ಹಿನ್ನೆಲೆಯಿಂದ ಬರುವ ವಿದ್ಯಾರ್ಥಿಗಳು ಉತ್ತೇಜನವನ್ನೂ ಹಾಗೂ ಸಹಕಾರವನ್ನು, ತಮ್ಮ ಉನ್ನತ ಶಿಕ್ಷಣದ ಅಧ್ಯಯನದ ಈ ಸಂಕ್ರಮಣದ ಅವಧಿಯಲ್ಲಿ ಬಯಸುತ್ತಾರೆ. ಹೀಗಾಗಿ, ವಿಶ್ವವಿದ್ಯಾಲಯಗಳಾಗಲೀ ಮತ್ತು ಮಹಾವಿದ್ಯಾಲಯಗಳಾಗಲಿ, ಈ ಮೂಲಕ ಬೇಡಿಕೆಗಳನ್ನು ಈಡೇರಿಸುವ ಸಲುವಾಗಿ ಉಚ್ಚ–ಗುಣಾತ್ಮಕವಾಗಿರುವ ಸಹಕಾರವನ್ನು ಒದಗಿಸಿಕೊಡುವ ಕೇಂದ್ರಗಳನ್ನು ರೂಪಿಸಿಕೊಳ್ಳಬೇಕಾಗುವುದು. ಮತ್ತು ಅವರ ಸಲುವಾಗಿ ಅಧಿಕ ಪ್ರಮಾಣದ ನಿಧಿಗಳನ್ನೂ ಸ್ಥಾಪಿಸಬೇಕಾಗುತ್ತದೆ. ಇವೆಲ್ಲವನ್ನೂ ಯಶಸ್ವಿಯಾಗಿ ಅನ್ವಯಿಸಿಕೊಳ್ಳಲು ಶೈಕ್ಷಣಿಕ ಮೂಲಗಳನ್ನು ಪರಿಣಾಮಕಾರಿಯಾಗಿರುವಂತೆಯೇ ಅಳವಡಿಸಿಕೊಳ್ಳಬೇಕಾಗುತ್ತದೆ. ಈ ಮೂಲಕ ಇಲ್ಲಿ, ವೃತ್ತಿಪರತೆಯ ಶೈಕ್ಷಣಿಕ ಮತ್ತು ವೃತ್ತಿ–ಸಲಹಾ ವ್ಯವಸ್ಥೆಯನ್ನು ಎಲ್ಲ ವಿದ್ಯಾರ್ಥಿಗಳಿಗೂ ಲಭ್ಯವಾಗಿರುವಂತೆ ವ್ಯವಸ್ಥೆ ರೂಪಿಸಬೇಕಾಗುತ್ತದೆ. ಇದಷ್ಟೇ ಅಲ್ಲದೇ, ಇಲ್ಲಿ ವಿದ್ಯಾರ್ಥಿಗಳು ದೈಹಿಕ ಆರೋಗ್ಯ, ಮಾನಸಿಕ ಆರೋಗ್ಯ ಮತ್ತು ದೃಢತೆ ಹಾಗೂ ಭಾವನಾತ್ಮಕವಾಗಿ ಸಮತೋಲನ ಸಾಧಿಸುವ ನಿಟ್ಟಿನಲ್ಲಿ ಸಲಹಾಕಾರರು ಸದಾ ನೆರವು ನೀಡಬೇಕಾಗುತ್ತದೆ.

**12.5** ನಾಲ್ಕನೆಯದಾಗಿ, "ದೂರ ಶಿಕ್ಷಣ ಕಲಿಕೆ( ODL)" ಮತ್ತು ಆನ್–ಲೈನ್ ಶಿಕ್ಷಣಗಳು ಒಂದು ಸ್ವಾಭಾವಿಕ ಪಥವನ್ನು ರೂಪಿಸುತ್ತಿದ್ದು, ಈ ಮೂಲಕ ಉಚ್ಚ ಶಿಕ್ಷಣವನ್ನು ಪಡೆದುಕೊಳ್ಳುವ ಪ್ರಮಾಣವು ಕ್ರಮೇಣ ಹೆಚ್ಚುತ್ತಿದೆ. ಇದರ ಕ್ಷಮತೆಯನ್ನು ನಿಯಮಾನುಸಾರವಾಗಿಯೇ ಸಮತೋಲನಗೊಳಿಸಲು, ಈ "ದೂರ ಶಿಕ್ಷಣ ಕಲಿಕೆ'ಯನ್ನು ಅದೂ ಕೇಂದ್ರೀಭೂತವಾಗಿರುವ ವಿಸ್ತರಣೆಯ ಉದ್ದೇಶದಲ್ಲಿ, ಸಾಕ್ಷ್ಯಗಳ ಆಧಾರದ ಪ್ರಯತ್ನಗಳ ಮೂಲಕ ರೂಪಿಸಲ್ಪಟ್ಟಿರುವಂತೆಯೇ ಇರುವ ಗುಣಾತ್ಮಕ ಮಾನಕದಂತೆ ಇರಬೇಕಾಗುತ್ತದೆ. ದೂರ ಶಿಕ್ಷಣ ಕಲಿಕಾ ಕಾರ್ಯಕ್ರಮಗಳನ್ನು ಯೋಜನೆಗೊಳಿಸುವ ಪ್ರಸ್ತುತ ವರ್ಗಗಳಲ್ಲಿ ಅಧ್ಯಯನ ಮಾಡುತ್ತಿರುವ ವಿಧಾನದಂತೆಯೇ – ಅದೇ ಗುಣಾತ್ಮಕತೆಯನ್ನು ಹೊಂದಿರುವಂತೆಯೇ–ಗುರಿಯನ್ನು ಹೊಂದಬೇಕಾಗಿದೆ. ನಿಯಮಗಳು, ಮಾನಕಗಳು ಮತ್ತು ಮಾರ್ಗದರ್ಶಿ ಸೂತ್ರಗಳಲ್ಲಿ ಇದನ್ನು ಸುವ್ಯವಸ್ಥಿತವಾಗಿ ಪ್ರಗತಿಗೊಳಿಸುವದಕ್ಕೆ, ನಿಬಂಧನೆಗಳ ಪ್ರಕಾರವೇ ಈ ದೂರ ಶಿಕ್ಷಣ ಮಾನ್ಯತಾ ವಿಧಾನವನ್ನು ಸಿದ್ಧಪಡಿಸಲಾಗುವದು. ಮತ್ತು ಗುಣಾತ್ಮಕವಾಗಿರುವ ದೂರ ಶಿಕ್ಷಣ ಕಲಿಕೆಯ ವಿನ್ಯಾಸವನ್ನು ರೂಪಿಸಲಾಗುವದಲ್ಲದೇ, ಇದು ಗುಣಾತ್ಮಕ ದೂರ ಶಿಕ್ಷಣ ಕಲಿಕೆಗಾಗಿ, ಎಲ್ಲ ಉಚ್ಚ ಶಿಕ್ಷಣ ಸಂಸ್ಥೆಗಳೂ ತಮ್ಮಲ್ಲಿ ಅಭಿವೃದ್ಧಿ ಪಡಿಸಿಕೊಳ್ಳಬೇಕಾಗುವದು, ಹೀಗಾಗಿ ಇಲ್ಲಿ ಇದನ್ನು ಶಿಫಾರಸು ಮಾಡಲಾಗಿದೆ.

**12.6.** ಅಂತಿಮವಾಗಿ, ಎಲ್ಲ ಯೋಜನೆಗಳು, ಪಠ್ಯಕ್ರಮಗಳು, ಹಾಗೂ ಶಿಕ್ಷಣ ಶಾಸ್ತ್ರವು ಎಲ್ಲ ವಿಷಯಗಳಿಗೂ ಒಳಗೊಳ್ಳುವಂತೆ – ಇಲ್ಲಿ ವರ್ಗಗಳಲ್ಲಿ ಬೋಧಿಸುವ ವಿಷಯಗಳನ್ನೂ ಒಳಗೊಂಡಂತೆ– ಆನ್–ಲೈನ್ ಪದ್ಧತಿಯಲ್ಲಿ ದೂರ ಶಿಕ್ಷಣ

ಕಲಿಕಾ ವಿಭಾಗಗಳಲ್ಲಿ ಬೋಧಿಸುವ ವಿಷಯಗಳನ್ನು ಒಳಗೊಂಡಂತೆ ಇದ್ದು, ಜೊತೆಗೆ ಇವು ವಿದ್ಯಾರ್ಥಿಗಳಿಗೆ – ಅವರು ತಮ್ಮ ಗುರಿಯನ್ನು ಜಾಗತಿಕ ಮಾನಕಗಳ ಪ್ರಕಾರವೇ ಅನ್ವಯವಾಗುವಂತೆ ಗುಣಾತ್ಮಕತೆಯನ್ನು ಸಾಧಿಸುವಲ್ಲಿ ಸಹಕಾರಿಯಾಗಿರುವಂತೆ ಇರಬೇಕು.

**ಅಂತರಾಷ್ಟ್ರೀಕರಣ**

**12.7.** ಈ ಮೇಲ್ಕಂಡಂತೆ ರೂಪಿಸಲ್ಪಟ್ಟಿರುವ ಉಪಕ್ರಮಗಳ ಪರಿಣಾಮವಾಗಿ, ಈಗ ಭಾರತದಲ್ಲಿ ಅಧ್ಯಯನ ಮಾಡುತ್ತಿರುವ ಅಪಾರ ಸಂಖ್ಯೆಯ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೂ ಸಹಿತ ಸಹಾಯಕವಾಗಿವೆ. ಅದೂ ಅಲ್ಲದೇ ಭಾರತದ ವಿದ್ಯಾರ್ಥಿಗಳಿಗೂ ಸಹಿತ – ಅವರು ಅಧ್ಯಯನಕ್ಕಾಗಿ ವಿದೇಶಕ್ಕೆ ಪಯಣಿಸಲು, ಸಂದರ್ಶಿಸಲು, ಅಲ್ಲಿ ಅಧ್ಯಯನ ನಡೆಸಲು, ಶ್ರೇಯಾಂಕಗಳನ್ನು ವರ್ಗಾಯಿಸಲು ಅಥವಾ ವಿದೇಶಿ ಸಂಸ್ಥೆಗಳಲ್ಲಿ ಸಂಶೋಧನೆಯನ್ನು ಕೈಗೊಳ್ಳಲು–ಸಹಾಯಕವಾಗಿವೆ. ಅದೇ ರೀತಿಯಲ್ಲಿ (ಬೇರೆ ದೇಶದ ವಿದ್ಯಾರ್ಥಿಗಳಿಗೂ ಸಹಿತ ಇದೇ ರೀತಿಯ ಗತಿಶೀಲತೆಯನ್ನು ಒದಗಿಸುತ್ತವೆ. ವಿಷಯ–ವಿಭಾಗಗಳಲ್ಲಾಗಲಿ, ವರ್ಗಗಳಲ್ಲಾಗಲೀ ಮತ್ತು ವಿಷಯಕ್ಕೆ ಸಂಬಂಧಪಟ್ಟಂತೆ ಕಾರ್ಯಕ್ರಮಗಳಲ್ಲಿ ಅಂದರೆ– ಭಾರತೀಯ ಶಾಸ್ತ್ರ, ಭಾರತೀಯ ಭಾಷೆಗಳು, ವೈದ್ಯಕೀಯ ರಂಗದಲ್ಲಿ ಆಯುಷ್ ವ್ಯವಸ್ಥೆ ಗಳು, ಯೋಗ, ಕಲೆಗಳು, ಸಂಗೀತ, ಇತಿಹಾಸ, ಸಂಸ್ಕೃತಿ,ಮತ್ತು ಆಧುನಿಕ ಭಾರತ,ವಿಜ್ಞಾನ ವಲಯದಲ್ಲಿ ಅಂತರಾಷ್ಟ್ರಿಯ ಪ್ರಸ್ತುತತೆಗೆ ಸೂಕ್ತವಾಗಿರುವ ಪಠ್ಯಕ್ರಮ,ಸಮಾಜ ವಿಜ್ಞಾನಗಳು, ಮತ್ತೂ ಈ ಎಲ್ಲ ಹಂತಗಳಾಚೆಯೂ, ಸಾಮಾಜಿಕವಾಗಿ ವಾಸ–ವ್ಯವಸ್ಥೆಯಿರುವ ಜೊತೆಗೆ ಸಹಕಾರೀ ವಾತಾವರಣವಿರುವ ಆವರಣದ ಸ್ವರೂಪ ಇತ್ಯಾದಿಗಳೆಲ್ಲವೂ ಇಲ್ಲಿ ಮುಖ್ಯವಾಗಿರುತ್ತವೆ. ಈ ಜಾಗತಿಕ ಮಾನಕದ ಗುಣಾತ್ಮಕ ಹಂತವನ್ನು ತಲುಪುವ ಗುರಿಯೆಡೆಗೆ ಪ್ರೋತ್ಸಾಹ ನೀಡಲಾಗುತ್ತದೆ. ಈ ಮೂಲಕ ಹೆಚ್ಚಿನ ಸಂಖ್ಯೆಯ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳನ್ನು ಆಕರ್ಷಿಸಬಹುದಾಗಿದೆ ಹಾಗೂ ಸ್ವದೇಶದಲ್ಲಿಯೇ ಅಂತಾರಾಷ್ಟ್ರೀಯ ಮಟ್ಟದ ಶಿಕ್ಷಣ ಪಡೆಯಬಹುದಾಗಿದೆ.

**12.8.** ಭಾರತವು ತನಗಿದ್ದ "ವಿಶ್ವ ಗುರು" ಸ್ಥಾನವನ್ನು ಪುನರ್–ಸ್ಥಾಪಿಸುವ ಸಲುವಾಗಿ, ಜಾಗತಿಕ ವಿದ್ಯಾರ್ಥಿಗಳಿಗೆ ಕೈಗೆಟಕುವ ಖರ್ಚಿನಲ್ಲಿ ಉಚ್ಚ ಗುಣಮಟ್ಟದ ಜಾಗತಿಕ ಮಾನಕಗಳಲ್ಲಿ ಗುರುತಿಸಲ್ಪಟ್ಟಂತೆಯೇ ಇರುವ ಅತ್ಯುತ್ತಮ ಶಿಕ್ಷಣದ ವ್ಯವಸ್ಥೆಯು ಜಾಗತಿಕ ವಿದ್ಯಾರ್ಥಿ ಸಮುದಾಯಕ್ಕೆ ಅಧ್ಯಯನಕ್ಕೆ ಲಭ್ಯವಾಗುವಂತೆ ಉತ್ತೇಜನಗೊಳಿಸುತ್ತಿದೆ. ಪ್ರತಿಯೊಂದು ದೇಶದ ವಿದ್ಯಾರ್ಥಿಗಳಿಗೂ ಶಿಕ್ಷಣ ವ್ಯವಸ್ಥೆಯನ್ನು ಒದಗಿಸಿಕೊಡುವ ಸಲುವಾಗಿ, ಪ್ರತಿಯೊಂದು ಉಚ್ಚ ಶಿಕ್ಷಣ ಸಂಸ್ಥೆಯಲ್ಲಿ ಒಂದು ಅಂತಾರಾಷ್ಟ್ರೀಯ ವಿದ್ಯಾರ್ಥಿ ಕಾರ್ಯಾಲಯವೊಂದನ್ನು" ಸ್ಥಾಪಿಸಲಾಗುವುದು. ಈ ಮೂಲಕ ವಿದೇಶಿ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಕುರಿತು ಸಮಾಲೋಚನೆ, ಸ್ವಾಗತ, ಸಹಕಾರವನ್ನು ಒದಗಿಸಿ ಕೊಡುವ ಮತ್ತು ಇವು ವಿದೇಶಿ ವಿದ್ಯಾರ್ಥಿಗಳಿಗೆ ಲಭ್ಯವಾಗುವಂತೆ, ಈ ಕಾರ್ಯಾಲಯವು ನಿರ್ವಹಣಾ ವಿಧಾನವನ್ನು ಹೊಂದಿರುತ್ತದೆ. ಸಂಶೋಧನೆ, ಕಲಿಕಾ ಹಂತದ ಸಹಯೋಗಗಳು ಹಾಗೂ ಬೋಧಕ/ವಿದ್ಯಾರ್ಥಿ ವಿನಿಮಯಗಳು, ಉನ್ನತ ಗುಣಮಟ್ಟದ ಶಿಕ್ಷಣ ಹೊಂದಿರುವ ವಿದೇಶೀ ಸಂಸ್ಥೆಗಳೊಡನೆ ಇವೆಲ್ಲ ಸುಲಭವಾಗಿ ಲಭ್ಯವಾಗುವಂತೆ ರೂಪಿಸಲಾಗುವುದು. ಅದಕ್ಕೆ ಸೂಕ್ತವಾಗಿರುವ ಪರಸ್ಪರ ಪ್ರಯೋಜಕಾರಿಯಾಗಿರುವ, ಹಾಗೂ ಆ ದಿಸೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿದೇಶಿ ಸಂಸ್ಥೆಗಳೊಡನೆ "ಒಡಂಬಡಿಕೆಗಳಿಗೆ (MOU) ಸಹಿ ಹಾಕಲಾಗುವುದು".

ಅತ್ಯುತ್ತಮವಾಗಿ ಸಾಧನೆಗಳನ್ನು ತೋರಿಸುತ್ತಿರುವ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ, ಈ ರೀತಿಯ ಅಧ್ಯಯನಕ್ಕಾಗಿ ವಿದೇಶಗಳ ವಿಸ್ತರಣಾ ಕೇಂದ್ರಗಳನ್ನು ಸ್ಥಾಪಿಸುವಂತೆ ಪ್ರೋತ್ಸಾಹಿಸಲಾಗುವದು. ಅದೇ ರೀತಿಯಲ್ಲಿಯೇ ಸಮಸಮವಾಗಿಯೇ ಆಯ್ಕೆ ಮಾಡಲ್ಪಟ್ಟ ವಿಶ್ವವಿದ್ಯಾಲಯಗಳು– ಉದಾಹರಣೆಗೆ , ಜಾಗತಿಕ ಮಟ್ಟದಲ್ಲಿ ಅತ್ಯುತ್ತಮವೆಂದು ಶ್ರೇಯಾಂಕಗೊಳಿಸಲ್ಪಟ್ಟಿರುವ ಪ್ರಥಮ 100 ವಿಶ್ವವಿದ್ಯಾಲಯಗಳು ಭಾರತದಲ್ಲಿಯೂ ಕಾರ್ಯನಿರ್ವಹಿಸುವಂತೆ, ಅವುಗಳಿಗೆ ಅವಕಾಶವನ್ನು ಒದಗಿಸಲಾಗುವುದು. ಇಂತಹ ಅವಕಾಶವನ್ನು ಒದಗಿಸುವ ಸಲುವಾಗಿ ಒಂದು ವೈಜ್ಞಾನಿಕ ವಿಧಾನದ ವಿನ್ಯಾಸವನ್ನು, ಇಂತಹ ಪ್ರವೇಶಗಳಿಗೆ ಸ್ಥಾಪಿಸಿ, ಮತ್ತು ಆ ರೀತಿಯ ವಿಶ್ವವಿದ್ಯಾಲಯಗಳಿಗೆ ಕೆಲವು ವಿಶೇಷ ಸೌಲಭ್ಯಗಳನ್ನು –ಅಂದರೆ ನಿಬಂಧನಾತ್ಮಕ, ಆಡಳಿತಾತ್ಮಕ ಮತ್ತು ಭಾರತದ ಇನ್ನುಳಿದ ಸ್ವಾಯತ್ತಾಧಿಕಾರ ಹೊಂದಿರುವ ವಿಶ್ವವಿದ್ಯಾಲಯಗಳ ಸಮಸಮಕ್ಕೆ ನಿಯಮಗಳನ್ನು ಹೊಂದಿರುವಂತೆ ರೂಪಿಸಲಾಗುವದು. ಇದೆಲ್ಲದರ ಜೊತೆಗೇ ವಿಶೇಷ ಪ್ರಯತ್ನಗಳ ಮೂಲಕ ಸಂಶೋಧನಾಧಾರಿತ ವಿಷಯಗಳ ಹಿನ್ನೆಲೆಯಲ್ಲಿ, ಭಾರತೀಯ ಸಂಸ್ಥೆಗಳ ಸಂಗಡ ವಿದ್ಯಾರ್ಥಿ ವಿನಿಮಯಗಳಿಗಾಗಿ ಪ್ರಯತ್ನಿಸಲಾಗುವದು. ವಿದೇಶೀ ವಿಶ್ವವಿದ್ಯಾಲಯಗಳಿಂದ ಪಡೆದಿರುವ ಶ್ರೇಯಾಂಕಗಳನ್ನು ಇಲ್ಲಿನ ಶಿಕ್ಷಣ ಸಂಸ್ಥೆಗಳು ರೂಪಿಸಿರುವ ಮಾದರಿಯಲ್ಲೇ ಇರುವ ಸಂದರ್ಭದಲ್ಲಿ ಸರಿಸಮವಾಗಿ ಪರಿಗಣಿಸಲಾಗುವುದು.

## 12.9 ವಿದ್ಯಾರ್ಥಿಗಳ ಚಟುವಟಿಕೆ ಮತ್ತು ಭಾಗವಹಿಸುವಿಕೆ

**12.9.** ಶೈಕ್ಷಣಿಕ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗೇ ಪ್ರಥಮ ಪಾಶಸ್ತ್ಯವಿರುತ್ತದೆ. ಕಾರ್ಯಚಟುವಟಿಕೆಯಿಂದ ಸದಾ ಸ್ಪಂದನಶೀಲವಾಗಿರುವ ಉನ್ನತ ಗುಣಮಟ್ಟದ ಬೋಧನಾ –ಕಲಿಕಾ ವ್ಯವಸ್ಥೆಯನ್ನು ಹೊಂದಿರುವ ವಾತಾವರಣ ಇರುವ ಆವರಣಗಳು ಇಲ್ಲಿ ಇರುವದು ಅತ್ಯಾವಶ್ಯವಾಗಿವೆ. ಅಧ್ಯಯನದ ಕೊನೆಯ ಹಂತದವರೆಗೂ ವಿದ್ಯಾರ್ಥಿಗಳಿಗೆ ಕ್ರೀಡೆಗಳ, ಸಾಂಸ್ಕೃತಿಕ ಕಲಾ ಸಂಘಗಳ, ಪರಿಸರ ಸಂಘಗಳ, ಕ್ರಿಯಾಶೀಲ ಚಟುವಟಿಕೆಗಳ ಸಂಘಗಳ, ಸೇವಾ ಯೋಜನೆಗಳ ಮೂಲಕ ಸಾಕಷ್ಟು ಅವಕಾಶಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಬೇಕು. ಹೀಗಾಗಿ, ಪ್ರತಿಯೊಂದು ಶಿಕ್ಷಣ ಸಂಸ್ಥೆಯಲ್ಲಿ ಒಂದು 'ಸಲಹಾ ಕೇಂದ್ರದ' ವ್ಯವಸ್ಥೆ ಇದ್ದು, ಅದು ಈ ರೀತಿಯ ಭಾವನಾತ್ಮಕ ಹಾಗೂ ಒತ್ತಡದ ಸಂದರ್ಭಗಳನ್ನೂ ಹೊಂದಾಣಿಕಾ ಮನೋಭಾವದಲ್ಲಿ ನಿರ್ವಹಣೆ , ಮಾಡುವಂತೆ ನಿಭಾಯಿಸಬೇಕು. ಇದರ ಜೊತೆಜೊತೆಗೆ ಮತ್ತೆ, ಗ್ರಾಮೀಣ ಹಿನ್ನೆಲೆಯಿಂದ ಬರುವ ವಿದ್ಯಾರ್ಥಿಗಳಿಗೆ ಅವಶ್ಯವಿರುವ ಸಹಕಾರವನ್ನು ಒದಗಿಸುವುದಕ್ಕಾಗಿ ವ್ಯವಸ್ಥೀಕೃತ ಯೋಜನೆಯನ್ನು ಹೊಂದಿರಬೇಕು, ಅದಕ್ಕಾಗಿ ಅವಶ್ಯಕತೆಗೆ ತಕ್ಕಂತೆ ವಿದ್ಯಾರ್ಥಿ ನಿಲಯಗಳನ್ನು, ಅವಕಾಶವನ್ನು ಹೆಚ್ಚಿಸಬೇಕಾಗುತ್ತದೆ. ಅದೂ ಅಲ್ಲದೇ ಎಲ್ಲ ಉಚ್ಚ ಶಿಕ್ಷಣ ಸಂಸ್ಥೆಗಳೂ ಉತ್ತಮ ವೈದ್ಯಕೀಯ ಸವಲತ್ತನ್ನು ಸಂಸ್ಥೆಯ ಆವರಣದಲ್ಲಿಯೇ ಆಯಾ ಸಂಸ್ಥೆಯ ಎಲ್ಲ ವಿದ್ಯಾರ್ಥಿಗಳಿಗೂ ಲಭ್ಯವಾಗಿರುವಂತೆ ಖಚಿತತೆ ಒದಗಿಸಬೇಕಾಗಿರುತ್ತದೆ.

### ವಿದ್ಯಾರ್ಥಿಗಳಿಗೆ ಹಣಕಾಸಿನ ಸಹಕಾರ

**12.10**. ಹಲವು ವಿಧಾನಗಳಲ್ಲಿ, ವಿದ್ಯಾರ್ಥಿಗಳಿಗೆ ಅವಶ್ಯವಿರುವ ಹಣಕಾಸಿನ ಸೌಲಭ್ಯವನ್ನು ಅವರಿಗೆ ದೊರೆಯುವಂತೆ ಅವಕಾಶ ಒದಗಿಸಬೇಕು. ಅದರಲ್ಲೂ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಇತರೆ ಹಿಂದುಳಿದ ಜಾತಿ ಮತ್ತು ಸಾಮಾಜಿಕವಾಗಿ ಆರ್ಥಿಕವಾಗಿ ಅನಾನುಕೂಲತೆಯಿರುವ ಗುಂಪು (SEDG) ಗಳ ವಿದ್ಯಾರ್ಥಿಗಳಿಗೆ ಲಭ್ಯವಾಗುವಂತೆ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಅದಕ್ಕಾಗಿ "ರಾಷ್ಟ್ರೀಯ ವಿದ್ಯಾರ್ಥಿ ವೇತನ( ನ್ಯಾಶನಲ್ ಸ್ಕಾಲರಶಿಪ್)" ಗಳ ಮೂಲಕ ಬೆಂಬಲ, ಉತ್ತೇಜನ ನೀಡಲಾಗುತ್ತದೆ. ಈ ವಿದ್ಯಾರ್ಥಿವೇತನವನ್ನು ಸ್ವೀಕರಿಸುತ್ತಿರುವ ವಿದ್ಯಾರ್ಥಿಗಳ ಪ್ರಗತಿಪಥವು ಯಶಸ್ವಿಯಾಗಿ ಮುಂದುವರೆಯುವಂತೆ ಗಮನಿಸಬೇಕಾಗುವದು. ಖಾಸಗೀ ಉಚ್ಚ ಶಿಕ್ಷಣ ಸಂಸ್ಥೆಗಳೂ ಸಹಿತ ಈ ವಿಷಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ವಿನಾಯಿತಿ/ಶುಲ್ಕರಾಹಿತ್ಯ ಸವಲತ್ತು ಮತ್ತು ವಿದ್ಯಾರ್ಥಿ ವೇತನಗಳನ್ನು ತನ್ನ ವಿದ್ಯಾರ್ಥಿಗಳಿಗೆ ರೂಪಿಸಬೇಕಾಗುವುದು.

## 13. ಪ್ರೇರಣಾಪೂರ್ಣ, ಜ್ಞಾನಸಂಪನ್ನ ಮತ್ತು ಸಮರ್ಥ ಬೋಧಕ ಸಿಬ್ಬಂದಿ

**13.1.** ಒಂದು ಯಶಸ್ವೀ ಉಚ್ಚ ಶಿಕ್ಷಣ ಸಂಸ್ಥೆಯ ಪ್ರಮುಖ ಲಕ್ಷಣವೆಂದರೆ, ಅಲ್ಲಿರುವ ಗುಣಾತ್ಮಕವಾದ ಶಿಕ್ಷಣದ ಲಭ್ಯತೆ ಮತ್ತು ಅದನ್ನು ಬೋಧಿಸುತ್ತಿರುವ ಬೋಧಕ ವರ್ಗದ ಕಾರ್ಯತತ್ಪರತೆಯಾಗಿರುತ್ತದೆ. ಉಚ್ಚ ಶಿಕ್ಷಣದ ಗುರಿಗಳನ್ನು ಸಾಧಿಸುವ ಸಲುವಾಗಿ ಬೋಧಕ ಸಿಬ್ಬಂದಿಯು ವಿಮರ್ಶಾತ್ಮಕವಾಗಿರುವ ಸಮಾಲೋಚನೆಗಳನ್ನು ಆದರಿಸುತ್ತ, ಈ ಹಿಂದಿನ ಕೆಲವು ವರ್ಷಗಳಲ್ಲಿ ಹಲವಾರು ಸೌಲಭ್ಯಗಳನ್ನು ರೂಪಿಸಿರುವ ಮೂಲಕ ಅವಶ್ಯಕತೆಗಳನ್ನು ಸುವ್ಯವಸ್ಥೆಗೊಳಿಸುತ್ತ ಮತ್ತು ಪ್ರಗತಿಯ ವ್ಯಾಪ್ತಿಯನ್ನೂ ಅಧಿಕಗೊಳಿಸುತ್ತ ಬರುವುದಾಗಿದೆ. ಜೊತೆಗೆ ವಿವಿಧ ವಿಭಾಗಗಳಲ್ಲಿಯೂ ಸಮಪ್ರಮಾಣದ ಪ್ರಾತಿನಿಧ್ಯಕ್ಕಾಗಿ ಬೋಧಕ ಸಿಬ್ಬಂದಿಯ ಸೇವೆಯನ್ನು ಒಪ್ಪಂದದಲ್ಲಿ ಒದಗಿಸುತ್ತ ಇರುವುದನ್ನು ಒಳಗೊಂಡಿದೆ. ಸರಕಾರಿ ಅಥವಾ ಸಾರ್ವಜನಿಕ ಸಂಸ್ಥೆಗಳಲ್ಲಿ ಖಾಯಂ ಬೋಧಕ ಸಿಬ್ಬಂದಿಯ ಸಂಬಳದ ಮಟ್ಟವನ್ನು ಗಣನೀಯವಾಗಿ ಹೆಚ್ಚಿಸಲಾಗುವದು. ವೃತ್ತಿ ಪರಿಣಿತಿಯನ್ನು ಅಧಿಕಗೊಳಿಸುವ ಅವಕಾಶಗಳಿಗಾಗಿ ವೃತ್ತಿಪರಿಣಿತಿಯ ಬೋಧಕ ಸಿಬ್ಬಂದಿಯನ್ನು ಲಭ್ಯಗೊಳಿಸುವ ಸಲುವಾಗಿ, ಹಲವಾರು ವಿಧಾನಗಳನ್ನು ಅನುಷ್ಠಾನಿಸಲಾಗಿದೆ. ಆದಾಗ್ಯೂ ಸಹಿತ, ಈ ಶೈಕ್ಷಣಿಕ ವೃತ್ತಿಗಳಲ್ಲಿ ಹಲವು ವಿಧದಲ್ಲಿ, ಅಲ್ಲಿನ ಸ್ಥಿತಿಯನ್ನು ಸುಧಾರಿಸುವ ಸಲುವಾಗಿ ಕೈಗೊಂಡಿದ್ದರು ಸಹಿತ, ಕಲಿಕಾ ವಿಭಾಗದಲ್ಲಿ ಬೋಧಕರ ಉತ್ತೇಜನ, ಸಂಶೋಧನೆ, ಮತ್ತು ಸೇವೆಯ ವಿಷಯಗಳಲ್ಲಿ ಈ ಉಚ್ಚ ಶಿಕ್ಷಣ ಸಂಸ್ಥೆಗಳಲ್ಲಿ ಈಗಲೂ ನಿಗದಿಗೊಳಿಸಲಾಗಿರುವ ಹಂತಕ್ಕಿಂತ ತೀರ ಕೆಳಗಿನ ಹಂತದಲ್ಲಿಯೇ ಇದೆ. ಈ ರೀತಿಯ ಕಡಿಮೆ ಗುಣಮಟ್ಟದ ಬೋಧನಾ ವ್ಯವಸ್ಥೆಗೆ ಹಲವಾರು ವಿಧದ ಸಂಗತಿಗಳೂ ಕಾರಣವಾಗಿವೆ. ಅವುಗಳಿಂದರೆ– ಬೋಧಕ ಸಿಬ್ಬಂದಿಯ ಸಂತೋಷದಾಯಕ ಜೀವನ–ವಿಧಾನ, ಉತ್ಸಾಹಶೀಲತೆ,ಸದಾ ಕಾರ್ಯಮಗ್ನತೆ ಮತ್ತು ಅವನ/ಅವಳ ವಿದ್ಯಾರ್ಥಿಗಳನ್ನು ಪ್ರಗತಿ ಸಾಧಿಸಿ ಮುಂದುವರೆಯುವಂತೆ ಮಾಡಲು, ಸಂಸ್ಥೆಯನ್ನು ಕುರಿತು, ಹಾಗೂ ವೃತ್ತಿಯನ್ನು ಕುರಿತು ಇರುವ ಸಂಗತಿಗಳಾಗಿವೆ. ಇದನ್ನು ಕೊನೆಗೊಳಿಸುವ ಸಲುವಾಗಿ ಉತ್ತಮ ಫಲಿತಾಂಶವನ್ನು ಪಡೆಯುವ ಸಲುವಾಗಿ, ಪ್ರೇರಣಾಪೂರ್ಣ ಹಾಗೂ ಬೋಧಕ ಸಿಬ್ಬಂದಿಯು ಉಚ್ಚ ಶಿಕ್ಷಣ ಸಂಸ್ಥೆಗಳಲ್ಲಿ ಲಭ್ಯವಾಗುವಂತೆ ರೂಪಿಸಲು ಈ ಕೆಳಕಂಡ ಉಪಕ್ರಮಗಳನ್ನು ಶಿಫಾರಸ್ಸು ಮಾಡಲಾಗಿದೆ.

**13.2.** ಅತ್ಯಂತ ಮೂಲಭೂತ ಹಂತವಾಗಿ ಎಲ್ಲಾ ಉಚ್ಚ ಶಿಕ್ಷಣ ಸಂಸ್ಥೆಗಳು ಅತ್ಯಾವಶ್ಯವಾಗಿರುವ ಎಲ್ಲ ಸವಲತ್ತುಗಳನ್ನು ಹಾಗೂ ಮೂಲ ಸೌಕರ್ಯಗಳನ್ನು ಹೊಂದಲೇಬೇಕಾಗಿರುತ್ತದೆ. ಇದರಲ್ಲಿ– ಕುಡಿಯುವ ನೀರು, ಸ್ವಚ್ಛ ಶೌಚಾಲಯಗಳು ಹಾಗೂ ಅವುಗಳ ನಿರ್ವಹಣೆ, ಫಲಕಗಳು, ಕಾರ್ಯಾಲಯಗಳು, ಬೋಧನೆಗೆ ಸಹಾಯಕವಾಗಿರುವ ಪೂರಕ ಉಪಕರಣಗಳು, ವಾಚನಾಲಯಗಳು, ಪ್ರಯೋಗಶಾಲೆಗಳು ಹಾಗೂ ಆನಂದದಾಯಕ ವಾತಾವರಣವಿರುವ ಕಲಿಕಾ ಕೋಣೆ ಮತ್ತು ಅಲ್ಲಿ ಸೂಕ್ತ ಅವಕಾಶ,ಮತ್ತು ಆವರಣವೂ ಸಹಿತ ಇಲ್ಲಿ ಒಳಗೊಂಡಿದೆ. ಪ್ರತಿಯೊಂದೂ ವರ್ಗದ ಕೋಣೆಯೂ ಸಹಿತ ಆಧುನಿಕ ಶೈಕ್ಷಣಿಕ ತಂತ್ರಜ್ಞಾನದ ಸೌಲಭ್ಯವನ್ನು ಪಡೆದಿರಬೇಕು. ಇವೆಲ್ಲವೂ ಕಲಿಕೆಯ ಪರಿಪೂರ್ಣ ಅನುಭವಕ್ಕೆ ಸಹಕಾರಿಯಾಗುವಂತೆ ಇರಬೇಕಾಗುತ್ತದೆ.

**13.3.** ಬೋಧನಾ ಕರ್ತವ್ಯಗಳೂ ಸಹಿತ ಅಧಿಕಾಧಿಕ ಒತ್ತಡದಿಂದ ಕೂಡಿರಬಾರದು. ವಿದ್ಯಾರ್ಥಿ–ಶಿಕ್ಷಕ ಅನುಪಾತವೂ ಸಹಿತ ವಿಪರೀತ ವೆನಿಸಬಾರದು. ಆಗ ಮಾತ್ರ ವಿದ್ಯಾರ್ಥಿಗಳ ಸಂಗಡ ಸಂವಾದ ನಡೆಸಲು,. ಸಂಶೋಧನೆಗಳನ್ನೂ ನಡೆಸಲು ಸಾಧ್ಯವಾಗುತ್ತದೆ ಮತ್ತು ಬೇರೆ ವಿಶ್ವದ್ಯಾಲಯಗಳ ಚಟುವಟಿಕೆಗಳನ್ನು ಇಲ್ಲಿ ನಡೆಸಲು ಸಾಧ್ಯವಾಗುತ್ತದೆ. ಒಂದು ಸಂಸ್ಥೆಯಲ್ಲಿ ನೇಮಕಾತಿ ಹೊಂದಿದ ಬೋಧಕ ಸಿಬ್ಬಂದಿಯು ಸಾಮಾನ್ಯವಾಗಿ ಮತ್ತೆ ಹಲವಾರು ಸಂಸ್ಥೆಗಳಿಗೆ ವರ್ಗಾವಣೆಗೊಳ್ಳುವಂತಿಲ್ಲ. ಆಗ ಮಾತ್ರ ಅವರು ಸಂಪೂರ್ಣವಾಗಿ ಇಲ್ಲಿಯೇ ಲಭ್ಯರಾಗುವದರಿಂದ, ಇಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ, ಜೊತೆಗೆ ಸಂಪರ್ಕ ಸಾಧಿಸಲೂ ಅನುವಾಗುತ್ತದೆ. ತಾವು ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆ ತನ್ಮೂಲಕ ಸಮುದಾಯಕ್ಕೂ ಬದ್ಧತೆಯನ್ನು ಹೊಂದಲು ಅನುಕೂಲವಾಗುತ್ತದೆ.

**13.4.** ನಿಗದಿಪಡಿಸಲ್ಪಟ್ಟಿರುವ ಹಾಗೂ ಅನುಮೋದಿಸಲ್ಪಟ್ಟಿರುವ ಶೈಕ್ಷಣಿಕ ವಿನ್ಯಾಸದ ವ್ಯಾಪ್ತಿಯಲ್ಲಿಯೇ, ಬೋಧಕ ಸಿಬ್ಬಂದಿಯು ತಮ್ಮದೇ ವಿನ್ಯಾಸದ ಪಠ್ಯಕ್ರಮದ ಮಾದರಿಯನ್ನು ಹಾಗೂ ಅದರ ಮೂಲಕ ಶೈಕ್ಷಣಿಕ ಸಾಧ್ಯತೆಗಳನ್ನು ರೂಪಿಸಲು ಸ್ವಾತಂತ್ರ್ಯವನ್ನೂ ಒದಗಿಸಲಾಗುವದು.ಇದರಲ್ಲಿ ಪಠ್ಯ ಪುಸ್ತಕಗಳು ಹಾಗೂ ಅಧ್ಯಯನಕ್ಕಾಗಿ ಅವಶ್ಯವಿರುವ ಸಲಕರಣೆಗಳ ಆಯ್ಕೆ ಮಾಡುವುದನ್ನೂ ಒಳಗೊಂಡಂತೆ, ಅಸೈನ್‌ಮೆಂಟ್‌ಗಳು ಮತ್ತು ಮೌಲ್ಯಾಂಕನಗೊಳಿಸುವಿಕೆಯಲ್ಲಿ ಈ ಅವಕಾಶವಿರುತ್ತದೆ. ಉದ್ಬೋಧಕವಾದ ಬೋಧನೆಯನ್ನು ಅನುಷ್ಠಾನಗೊಳಿಸಿಕೊಳ್ಳುವಂತೆ ಬೋಧಕ ಸಿಬ್ಬಂದಿಯನ್ನು ಸಕ್ಷಮಗೊಳಿಸುತ್ತ, ಸಂಶೋಧನೆ ಹಾಗೂ ಸೇವೆಯ ವಿಷಯದಲ್ಲಿ ಅವರು ಯಾವುದನ್ನು ಉತ್ತಮವೆಂದು ನಿರೂಪಿಸುತ್ತಾರೆಯೋ, ಅಂತಹ ಬೋಧಕ ಸಿಬ್ಬಂದಿಯನ್ನು ಪ್ರೇರಕರೆಂದು ಹಾಗೂ ಸಮರ್ಥನೆಂದು ಗುರುತಿಸುವ ಮೂಲಕ ಅವರೊಬ್ಬ ನಿಜವಾಗಿಯೂ ಸಾಧಕರೆಂದು, ಸೃಜನಾತ್ಮಕ ಕಾರ್ಯದಲ್ಲಿ ತೊಡಗಿಕೊಂಡವರೆಂದು ಗುರುತಿಸಬೇಕಾಗುತ್ತದೆ.

**13.5.** ಶ್ರೇಷ್ಠ ಸಾಧನೆಯನ್ನು ಮಾಡಿದವರನ್ನು, ಅವರಿಗೆ ಮತ್ತು ಪ್ರೋತ್ಸಾಹದಾಯಕವಾದ ಅಂಶಗಳಾದ ಭಡ್ತಿ, ಪುರಸ್ಕಾರ, ಪದೋನ್ನತಿ, ಮಾನ್ಯತೆ, ಹಾಗೂ ಸಂಸ್ಥೆಯ ಮುಂದಾಳ್ತನವನ್ನು ಕೊಡುವುದರೊಡನೆ ಅವರನ್ನು ಗೌರವದಿಂದ ಪರಿಗಣಿಸಬೇಕಾಗುವದು. ಈ ಮಧ್ಯದಲ್ಲಿ, ಅವಶ್ಯವಿರುವ ನಿಯಮಗಳನ್ನು ಅನುಷ್ಠಾನಿಸುವಲ್ಲಿ ಯಶಸ್ವಿಯಾಗದ ಬೋಧಕ ಸಿಬ್ಬಂದಿ ವರ್ಗವಿದ್ದಲ್ಲಿ ಉತ್ತರದಾಯಿಗಳನ್ನು ಮಾಡಲಾಗುವುದು.

**13.6.** ಸಾಧನೆಯಲ್ಲಿ ಶ್ರೇಷ್ಠತೆಯನ್ನು ತಲುಪುವ ಸಲುವಾಗಿ ಸಶಕ್ತಗೊಳಿಸಲಾಗಿರುವ ಪೂರ್ಣಸ್ವಾಯತ್ತತೆ ಹೊಂದಿರುವ ಸಂಸ್ಥೆಗಳ ದೃಷ್ಟಿಕೋನವನ್ನು ಗಮನದಲ್ಲಿರಿಸಿಕೊಂಡು, ಉಚ್ಚ ಶಿಕ್ಷಣ ಸಂಸ್ಥೆಯನ್ನು ಸ್ಪಷ್ಟವಾಗಿಯೇ ವ್ಯಾಖ್ಯಾನಿಸಲಾಗಿದೆ. ಸ್ವತಂತ್ರ, ಮತ್ತು ಪಾರದರ್ಶಕ ಪ್ರಕ್ರಿಯಾ ವ್ಯವಸ್ಥೆಯ, ಹಾಗೂ ಬೋಧಕ ಸಿಬ್ಬಂದಿಯ ಆಯ್ಕೆಯಲ್ಲಿ ಸೂಕ್ತ ಮಾನದಂಡದ ನಿಯಮದಂತೆ ರೂಪಿತವಾಗಿರಬೇಕಿದೆ. ಇದೆಲ್ಲವನ್ನೂ ಪರಿಗಣಿಸಿ, ಸದ್ಯದಲ್ಲಿ ಇರುವ ಬೋಧಕ ಸಿಬ್ಬಂದಿಯ ಆಯ್ಕೆಯ ವಿಧಾನವನ್ನು ಒಂದು "ನಿಗದಿಗೊಳಿಸಲ್ಪಟ್ಟಿರುವ ಅವಧಿಯ ಕಾಲಮಿತಿ ವ್ಯವಸ್ಥೆಗೆ" ಅಂದರೆ, ಅರ್ಹತಾ ಪರೀಕ್ಷೆಯ ಅವಧಿಯ(ಸೇವಾಪೂರ್ವ ಅವಧಿ) ಮೂಲಕ, ಶ್ರೇಷ್ಠತೆಯನ್ನು ಖಚಿತಗೊಳಿಸುವ ತನಕ ಈ ಅವಧಿಯನ್ನು ಪರಿಗಣಿಸಲಾಗುವದು. ಇಲ್ಲಿ ತೀವ್ರ ಗತಿಯ ಪದೋನ್ನತಿಯ ವ್ಯವಸ್ಥೆಯೂ ಇದೆ. ಅಲ್ಲಿ ಪರಿಣಾಮಕಾರಿ ಸಂಶೋಧನೆ ಮತ್ತು ಅವರ ಕೊಡುಗೆಗಳನ್ನು ಗುರುತಿಸಲಾಗುತ್ತದೆ. ಒಟ್ಟಿನಲ್ಲಿ, ಕಾರ್ಯಕ್ಷಮತೆಯ ಸೂಕ್ತ ಮೌಲ್ಯಾಂಕನಕ್ಕೆ ಹಲವು ಆಯಾಮದ ಮಾನಕಗಳ ವ್ಯವಸ್ಥೆಯಿದ್ದು, ಅಲ್ಲಿರುವ "ಅವಧಿ"ಯ ವಿಷಯವಾಗಿ ಅಂದರೆ, ಪರೀಕ್ಷಾವಧಿಯ ನಂತರ ಉದ್ಯೋಗವನ್ನು ಖಾಯಂಗೊಳಿಸುವದಕ್ಕಾಗಿ, ಅಥವಾ ಪದೋನ್ನತಿಗೊಳಿಸುವದಕ್ಕಾಗಿ, ವೇತನದಲ್ಲಿ ಹೆಚ್ಚಳಕ್ಕಾಗಿ, ಮಾನ್ಯತೆಯನ್ನು ನೀಡುವುದಕ್ಕಾಗಿ ಇದರ ಜೊತೆಜೊತೆಗೆ, ಸಹಯೋಗಿ ಹಾಗೂ ವಿದ್ಯಾರ್ಥಿಗಳ ಸಮೀಕ್ಷೆ, ಬೋಧನೆಯಲ್ಲಿ ಹಾಗೂ ಶಿಕ್ಷಣ ಶಾಸ್ತ್ರದಲ್ಲಿ ಆವಿಷ್ಕಾರಗಳು, ಗುಣಾತ್ಮಕ ಹಾಗೂ ಪ್ರಭಾವಪೂರ್ಣ ಸಂಶೋಧನೆಗಳು, ವೃತ್ತಿಪರಿಣಿತಿಯ ಪ್ರಗತಿ ಚಟುವಟಿಕೆಗಳು ಮತ್ತು ಸಂಸ್ಥೆಗೆ ಹಾಗೂ ಸಮುದಾಯಕ್ಕೆ ನೀಡಲ್ಪಡುವ ಇತರ ಸೇವೆಗಳು – ಇವು ಪ್ರತಿಯೊಂದು ಉಚ್ಚ ಶಿಕ್ಷಣದ ಸಂಸ್ಥೆಯಿಂದ ಅಭಿವೃದ್ಧಿಪಡಿಸಲ್ಪಟ್ಟು, ಜೊತೆಗೆ ಅದು ಸಾಂಸ್ಥಿಕ ಅಭಿವೃದ್ಧಿ ಯೋಜನೆ (IDP) ಯ ಜೊತೆಗೆ ಪ್ರತಿಪಾದಿತಗೊಂಡಿರುತ್ತದೆ.

**13.7.** ಸದ್ಯದ ಪರಿಸ್ಥಿತಿಯಲ್ಲಿ ಅತ್ಯಾವಶ್ಯವಾಗಿರುವ ಸಂಗತಿ ಎಂದರೆ, ಆವಿಷ್ಕಾರಗಳು ಮತ್ತು ಪ್ರಾವೀಣ್ಯತೆಯನ್ನು ರೂಪಿಸುವ, ಅಪ್ರತಿಮ ಸಾಧನೆ ಮಾಡಿರುವ ಮತ್ತು ಉತ್ಸಾಹಪೂರ್ಣ ಸಂಸ್ಥೆಯ ಮುಖ್ಯಸ್ಥರುಗಳು ಬೇಕಾಗಿರುವ ಸಂಗತಿಯಾಗಿದೆ. ಅಪ್ರತಿಮವಾಗಿರುವ ಹಾಗೂ ಪರಿಣಾಮಕಾರಿಯಾಗಿರುವ ಸಾಂಸ್ಥಿಕ ಮುಂದಾಳತ್ವವು, ಒಂದು ಸಂಸ್ಥೆಯ ಯಶಸ್ಸು ಹಾಗೂ ಆ ಸಂಸ್ಥೆಯ ಬೋಧಕ ಸಿಬ್ಬಂದಿಗೆ ಪ್ರಾಮುಖ್ಯವಾಗಿ ಬೇಕಾಗಿರುವ ಸಂಗತಿಯಾಗಿದೆ. ಉನ್ನತ ಅಧ್ಯಯನದ ಶಿಕ್ಷಣದ ಮೂಲಕ ಅತ್ಯುತ್ತಮ ಸಾಧನೆಯನ್ನು ಮಾಡಿರುವ ಬೋಧಕ ಸಿಬ್ಬಂದಿ ಮತ್ತು ಅತ್ಯಾವಶ್ಯಕ ಸೇವೆಯ ಋಜುವಾತುಗಳು, ಅದೇ ರೀತಿಯಲ್ಲಿ ಅನುಷ್ಠಾನಿಸಲ್ಪಟ್ಟ ಮುಖಂಡತ್ವ ಹಾಗೂ ನಿರ್ವಹಣಾ ಸಾಮರ್ಥ್ಯಗಳನ್ನು ಪೂರ್ವಭಾವಿಯಾಗಿಯೇ ಗುರುತಿಸಿ, ಮುಖಂಡತ್ವದ ಹುದ್ದೆಗೆ ಇರುವ ಹಂತ ಹಂತದ ಏಣಿ ಮೆಟ್ಟಲುಗಳ ತರಬೇತಿ ನೀಡುವುದು ಅಗತ್ಯವಾಗಿದೆ. ಮುಖ್ಯಸ್ಥನ ಸ್ಥಾನವು ಎಂದಿಗೂ ಖಾಲಿಯಾಗಿರಬಾರದು. ಹೀಗಾಗಿ ಒಬ್ಬರು ಇನ್ನೊಬ್ಬರಿಗೆ ಸ್ಥಾನವನ್ನು ಬಿಟ್ಟುಕೊಡುವ ಮೊದಲೇ ಸಾಕಷ್ಟು ಸಾಂಸ್ಥಿಕ ನಾಯಕತ್ವ ತರಬೇತಿ ನೀಡುವ ಮೂಲಕ ನಾಯಕತ್ವದ ಸುಲಲಿತ ವರ್ಗಾವಣೆಗೆ ಹಾದಿ ಸುಗಮಗೊಳಿಸಬೇಕು. ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ತಮ್ಮ ಸಂಸ್ಥೆಯಲ್ಲಿ ಒಳ್ಳೆಯ ಕೆಲಸದ ವಾತಾವರಣ, ಪಾಠ–ಪ್ರವಚನ ಹಾಗೂ ಸಂಶೋಧನೆ, ಸಮುದಾಯಗಳಿಗೆ ಉಪಯುಕ್ತ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ವಾತಾವರಣವನ್ನು ಹೊಂದುವ ಗುರಿಯನ್ನು ಹೊಂದಬೇಕಾಗಿದೆ.

## 14. ಉನ್ನತ ಶಿಕ್ಷಣದಲ್ಲಿ ಸಮಾನತೆ ಮತ್ತು ಒಳಗೊಳ್ಳುವಿಕೆ.

**14.1.** ಗುಣಾತ್ಮಕವಾಗಿರುವ ಉಚ್ಚ ಶಿಕ್ಷಣದ ಪ್ರವೇಶಾವಕಾಶದಲ್ಲಿ ಅದು ಅಪಾರ ಸಾಧ್ಯತೆಯ ಸರಣಿಯನ್ನೇ ತೋರಿಸುತ್ತಿದೆ. ಇದು ಪ್ರತಿಯೊಬ್ಬ ವ್ಯಕ್ತಿಯನ್ನು ಒಳಗೊಂಡಂತೆ ಹಾಗೂ ಸಮಾಜವನ್ನು ಒಳಗೊಂಡಂತೆ ಇಬ್ಬರನ್ನೂ ಪ್ರತಿಕೂಲ ಪರಿಸ್ಥಿತಿಯ ಚಕ್ರೀಯ ಗತಿಯಿಂದ ಮೇಲೆತ್ತುತ್ತದೆ. ಈ ಕಾರಣಕ್ಕಾಗಿ, ಸರ್ವರಿಗೂ ಈ ಗುಣಾತ್ಮಕವಾಗಿರುವ ಉನ್ನತ ಶಿಕ್ಷಣದ ಸೌಲಭ್ಯವು ದೊರೆಯುವಂತೆ ಅವಕಾಶಗಳನ್ನು ರೂಪಿಸಿಕೊಡುವುದೇ ಅತ್ಯಂತ ಹೆಚ್ಚಿನ ಪ್ರಾಶಸ್ತ್ಯದ ವಿಷಯವಾಗಿರುತ್ತದೆ. ಈ ನೀತಿಯು, ಎಲ್ಲ ವಿದ್ಯಾರ್ಥಿಗಳಿಗೂ ಗುಣಾತ್ಮಕವಾಗಿರುವ ಉನ್ನತ ಶಿಕ್ಷಣವು ಸಮಾನವಾಗಿಯೇ ಲಭ್ಯವಾಗುವಂತೆ ಖಚಿತಗೊಳಿಸುವ ಕುರಿತು ಪರಿಕಲ್ಪನೆಗಳನ್ನು ಹೊಂದಿ– ಅವುಗಳನ್ನು (S E D G) ವಿಶೇಷ ಸ್ಥಾನದೊಂದಿಗೆ ಗುರುತಿಸಲಾಗಿದೆ.

**14.2.** ಶಾಲೆ ಮತ್ತು ಉಚ್ಚ ಶಿಕ್ಷಣ ವಲಯಗಳಲ್ಲಿ ಈ ಎಸ್ ಈ ಡಿ ಜಿ ಯನ್ನು ಶಿಕ್ಷಣ ನೀತಿಯಿಂದ ಕೈ ಬಿಟ್ಟಿರುವುದಕ್ಕೆ ಹಲವಾರು ಕಾರಣಗಳಿವೆ. ಮತ್ತು ಅದರ 'ಗತಿ–ವಿಧಿಯೂ" ಕಾರಣವಾಗಿದೆ. ಆದ್ದರಿಂದ ಸಮತೆಯನ್ನು ಸಾಧಿಸುವ ಮತ್ತು ಅಳವಡಿಸುವ ಕ್ರಿಯೆಯ ಅನುಷ್ಠಾನ ಎಲ್ಲಾ ಶಾಲೆ ಮತ್ತು ಉನ್ನತ ಶಿಕ್ಷಣಗಳಲ್ಲಿ ಆಗಬೇಕಿದೆ. ಅದೂ ಅಲ್ಲದೇ ಹಂತಹಂತವಾಗಿ ಸುಸ್ಥಿರ ಪರಿವರ್ತನೆಯನ್ನು ಖಚಿತಗೊಳಿಸುವ ಸಲುವಾಗಿ ನಿರಂತರವಾಗಿ ಅದನ್ನು ಮುಂದುವರೆಸಿಕೊಂಡು ಹೋಗುವುದೂ ಕಡ್ಡಾಯವಾಗಬೇಕಿದೆ. ಈ ರೀತಿಯಲ್ಲಿ, ಈ ನೀತಿಯು ಸಮತೆಯನ್ನು, ಒಳಗೊಳ್ಳುವಿಕೆಯನ್ನು ಉನ್ನತ ಶಿಕ್ಷಣದಲ್ಲಿ ಅನುಷ್ಠಾನಗೊಳಿಸಲು ಬದ್ಧವಾಗಿದ್ದು, ಇದನ್ನು ಶಾಲಾ ವ್ಯವಸ್ಥೆಗೆ ಇರುವ ರೀತಿಯಲ್ಲಿಯೇ ಸಂಯೋಜನೆಗೊಳಿಸುವುದಕ್ಕಾಗಿ ಅಭ್ಯಸಿಸಬೇಕು.

**14.3.** ಇಲ್ಲಿ ಕೈಬಿಡಬಹುದಾದ ಕೆಲವು ಆಯಾಮಗಳಿವೆ. ಅದರಲ್ಲೂ ಉನ್ನತ ಶಿಕ್ಷಣದಲ್ಲಿ ಕೆಲವು ಅಥವಾ ಗಣನೀಯ ಪ್ರಮಾಣದಲ್ಲಿಯೇ ಅಧಿಕಗೊಂಡಿವೆ. ಇವುಗಳನ್ನು ಖಂಡಿತವಾಗಿಯೂ ವಿಶೇಷವಾಗಿಯೇ ಗುರುತಿಸಬೇಕಿದೆ.– ಇವುಗಳಲ್ಲಿ ಉನ್ನತ ಶಿಕ್ಷಣದ ಅವಕಾಶಗಳ ಬಗೆಗೆ ಸೂಕ್ತ ಜ್ಞಾನವಿಲ್ಲದಿರುವಿಕೆ, ಶಿಕ್ಷಣದ ವೆಚ್ಚದ ಹಿನ್ನೆಲೆಯಲ್ಲಿ ಆರ್ಥಿಕ ಅವಕಾಶಗಳು, ಹಣಕಾಸಿನ ತೊಂದರೆಗಳು, ಪ್ರವೇಶ ಪ್ರಕ್ರಿಯೆಗಳು, ಭೌಗೋಳಿಕ ಹಾಗೂ ಭಾಷಿಕ ಅಡೆ–ತಡೆಗಳು ಮತ್ತು ಹಲವಾರು ಉನ್ನತ ಶಿಕ್ಷಣ ಸಂಸ್ಥೆಗಳ ಕಾರ್ಯವಿಧಾನದಿಂದಾಗಿ ಉದ್ಯೋಗಾವಕಾಶದಲ್ಲಿಯೂ ಸಹಿತ ತೊಂದರೆಗಳು, ಮತ್ತು ವಿದ್ಯಾರ್ಥಿಗಳಿಗೆ ಅವಶ್ಯವಿರುವ ಬೆಂಬಲದ ಬಗೆಗೆ ನಿಶ್ಚಿತವಾದ ವಿನ್ಯಾಸವಿಲ್ಲದಿರುವಿಕೆಯು ಕಾರಣವಾಗಿವೆ.

### 14.4. ಈ ಉದ್ದೇಶಕ್ಕಾಗಿ ಉನ್ನತ ಶಿಕ್ಷಣಕ್ಕಾಗಿ ನಿರ್ದಿಷ್ಟಪಡಿಸಿರುವ ಹೆಚ್ಚುವರಿ ಕ್ರಮಗಳನ್ನು ಎಲ್ಲ ಸರಕಾರಗಳೂ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳೂ ಅಳವಡಿಸಿಕೊಳ್ಳಬೇಕಾಗಿದೆ.

**14.4.1.** ಸರಕಾರವು ತೆಗೆದುಕೊಳ್ಳಬೇಕಾಗಿರುವ ಕ್ರಮಗಳು;

ಅ) ಈ ಎಸ್ ಈ ಡಿ ಜಿ ಯ ಶಿಕ್ಷಣದ ಸಲುವಾಗಿ ಸರಕಾರವು ಸೂಕ್ತವಾಗಿರುವ ಅನುದಾನಗಳನ್ನು ನಿಗದಿಗೊಳಿಸುವುದು;

ಆ) ಈ ಎಸ್ ಈ ಡಿ ಜಿ ಗಳಿಗೆ ಅಧಿಕ ಜಿ ಈ ಆರ್ ಸಲುವಾಗಿ ಸ್ಪಷ್ಟವಾದ ಗುರಿಯನ್ನು ನಿರ್ಧಾರ ಮಾಡುವುದು;

ಇ) ಉನ್ನತ ಶಿಕ್ಷಣ ಸಂಸ್ಥೆಗಳ –ಪ್ರವೇಶಗಳಲ್ಲಿ ಲಿಂಗಾನುಪಾತದಲ್ಲಿ ಸಮತೋಲವನ್ನು ಹೆಚ್ಚಿಸುವುದು;

**ಈ)** ಅಭೀಪ್ಸೆ ಹೊಂದಿರುವ ಜಿಲ್ಲೆಗಳಲ್ಲಿ ಮತ್ತು ಹೆಚ್ಚಿನ ಎಸ್ ಈ ಡಿ ಜಿ ಗಳನ್ನು ಹೊಂದಿರುವ ಶೈಕ್ಷಣಿಕ ವಲಯಗಳಲ್ಲಿ ಹೆಚ್ಚಿನ ಸಂಖ್ಯೆಯ ಉಚ್ಚ ಶಿಕ್ಷಣದ ಸಂಸ್ಥೆಗಳನ್ನು ಸ್ಥಾಪಿಸುವುದು;

**ಉ)** ಸ್ಥಳೀಯ ಭಾಷೆಯಲ್ಲಿ ಅಥವಾ ಭಾರತೀಯ ಭಾಷೆಗಳಲ್ಲಿ ಅಥವಾ ದ್ವಿಭಾಷಾ ವ್ಯವಸ್ಥೆಯಲ್ಲಿ ಕಲಿಸುವ ಉಚ್ಚ ಗುಣಮಟ್ಟದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸಹಕಾರ ಮತ್ತು ಅಭಿವೃದ್ಧಿ:

**ಊ)** ಎಸ್ ಡಿ ಜಿ ಈ ಗಳ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಎರಡಕ್ಕೂ ಹೆಚ್ಚಿನ ಹಣಕಾಸಿನ ಸಹಾಯ ಮತ್ತು ವಿದ್ಯಾರ್ಥಿ ವೇತನಗಳನ್ನು ಒದಗಿಸುವುದು;

**ಋ)** ವಿದ್ಯಾರ್ಥಿ ವೇತನದ ಹಾಗೂ ಉನ್ನತ ಶಿಕ್ಷಣದ ಅವಕಾಶಗಳಿಗಾಗಿ ಎಸ್ ಡಿ ಜಿ ಗಳಲ್ಲಿ ಪ್ರಚಾರ/ ಪ್ರಸಾರದ ಕಾರ್ಯಕ್ರಮಗಳನ್ನು ನಡೆಸುವುದು

ಎ) ಕಲಿಕೆಯ ಉತ್ತಮ ಫಲಿತಾಂಶಕ್ಕಾಗಿ ಮತ್ತು ಭಾಗವಹಿಸುವಿಕೆಯಲ್ಲಿ ಉತ್ತಮವಿರುವಂತೆ ತಂತ್ರಜ್ಞಾನವನ್ನು ಹಾಗೂ ಉಪಕರಣಗಳನ್ನು ಅಭಿವೃದ್ಧಿ ಪಡಿಸುವುದು

### 14.4.2. ಉನ್ನತ ಶಿಕ್ಷಣ ಸಂಸ್ಥೆಗಳು ತೆಗೆದುಕೊಳ್ಳಬೇಕಾದ ಕ್ರಮಗಳು;

**ಅ)** ಉಚ್ಚ ಶಿಕ್ಷಣವನ್ನು ಹೊಂದಲು ಇರುವ ಶುಲ್ಕ ಹಾಗೂ ವೆಚ್ಚಗಳನ್ನು ಕಡಿಮೆಗೊಳಿಸಲು ಕೈಗೊಳ್ಳುವುದು.

ಆ) ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಹೆಚ್ಚಿನ ಹಣಕಾಸಿನ ಸಹಾಯ ಮತ್ತು ವಿದ್ಯಾರ್ಥಿ ವೇತನಗಳನ್ನು ಒದಗಿಸುವುದು;

ಇ) ಉನ್ನತ ಶಿಕ್ಷಣದ ಅವಕಾಶಗಳು ಮತ್ತು ವಿದ್ಯಾರ್ಥಿ ವೇತನಗಳ ಬಗೆಗೆ ಪ್ರಸಾರ/ಪ್ರಚಾರ ನಡೆಸುವುದು;

ಈ) ಪ್ರವೇಶ ಪ್ರಕ್ರಿಯೆಯು ಒಳಗೊಳ್ಳುವಂತೆ ರೂಪಣೆ

ಉ) ಪಠ್ಯಕ್ರಮದಲ್ಲಿ ಸಹಿತ ಹೆಚ್ಚಿನ ಸಮನ್ವಯತೆಯಲ್ಲಿ ರೂಪಣೆ;

ಊ) ಉನ್ನತ ಶಿಕ್ಷಣದ ಕಾರ್ಯಕ್ರಮಗಳು ಅಧಿಕ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸುವಂತೆ ರೂಪಣೆ;

ಋ) ಭಾರತೀಯ ಭಾಷೆಗಳಲ್ಲಿ ಮತ್ತು ದ್ವಿಭಾಷಾ ಪದ್ಧತಿಯಲ್ಲಿ ಕಲಿಸುವ ಪದವಿ ವರ್ಗಗಳು

ಎ) ಎಲ್ಲಾ ಕಟ್ಟಡಗಳಲ್ಲಿ ಹಾಗೂ ಸವಲತ್ತುಗಳು ಹೆಚ್ಚಿನ ಸಂಖ್ಯೆಯಲ್ಲಿ ಅಂದರೆ ವಿಕಲಾಂಗರಿಗೆ ಸ್ನೇಹಿಯಾಗಿರುವಂತೆ, ಸುಲಭವಾಗಿ ಲಭ್ಯವಾಗುವಂತೆ, ಗಾಲಿ ಖುರ್ಚಿಗಳನ್ನು ಒದಗಿಸುವುದು;

ಏ) ಶೈಕ್ಷಣಿಕವಾಗಿ ಹಿಂದುಳಿದ ವಾತಾವರಣದಿಂದ ಬರುವ ವಿದ್ಯಾರ್ಥಿಗಳಿಗೆ 'ಸಂಪರ್ಕ–ವರ್ಗ"ಗಳನ್ನು ಒದಗಿಸುವುದು;

ಐ) ಸಾಮಾಜಿಕ–ಭಾವನಾತ್ಮಕವಾಗಿರುವ ಮತ್ತು ಶೈಕ್ಷಣಿಕ ವಿಷಯಕ್ಕೆ ಸಹಕಾರಿಯಾಗಿರುವ ಬೆಂಬಲವನ್ನು ಒದಗಿಸುವದು ಹಾಗೂ ಎಲ್ಲ ವಿದ್ಯಾರ್ಥಿಗಳಿಗೂ ಸೂಕ್ತ ಸಲಹೆಯೊಂದಿಗೆ ಮತ್ತು ಕಾರ್ಯಕ್ರಮಗಳನ್ನು ಸಂಯೋಜಿಸುವ ಮೂಲಕ ಒದಗಿಸುವುದು;

**ಒ)** ಬೋಧಕ ಸಿಬ್ಬಂದಿಯ, ಸಮಾಲೋಚಕರ ಮತ್ತು ಪುರುಷ–ಸ್ತ್ರೀ ಅಸ್ಮಿತೆಯ ವಿಷಯಗಳಲ್ಲಿ ಅದರ ಬಗೆಗೆ ವಿದ್ಯಾರ್ಥಿಗಳಲ್ಲಿ ಮತ್ತು ಆ ಉನ್ನತ ಸಂಸ್ಥೆಗಳಲ್ಲಿ ಅಳವಡಿಸಲ್ಪಟ್ಟಿರುವ ಎಲ್ಲ ವಿಷಯಗಳ ಕುರಿತು ಜೊತೆಗೆ ಪಠ್ಯಕ್ರಮದ ಕುರಿತು ಸಂವೇದನೆಯನ್ನು ಹೆಚ್ಚಿಸುವುದು;

ಓ) ಯಾವುದೇ ರೀತಿಯ ಭೇದಭಾವಗಳು ಬಾರದಂತೆ ಮತ್ತು ಕಿರುಕುಳಗಳನ್ನು ತಡೆಗಟ್ಟುವ ಬಗೆಗೆ ಬಿಗಿಯಾದ ನಿಯಮಗಳ ಅಳವಡಿಕೆ;

ಔ) ಸಂಸ್ಥೆಯ ಅಭಿವೃದ್ಧಿಯ ಯೋಜನೆಗಳನ್ನು ರೂಪಿಸುವುದು– ಅದು ಎಸ್ ಈ ಡಿ ಜಿ ಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ರೂಪಿಸಲ್ಪಟ್ಟಿರುವಂತೆ ವಿಶೇಷ ಯೋಜನೆಗಳನ್ನು ಒಳಗೊಂಡಿರಬೇಕು. ಕೇವಲ ಮೇಲ್ಕಂಡ ಯೋಜನೆಗಳಿಗೆ ಮಾತ್ರವೇ ಸೀಮಿತವಾಗುವಂತೆ ಯೋಜನೆಗಳನ್ನು ರೂಪಿಸಬೇಕಾಗುವುದು;

## 15. ಶಿಕ್ಷಕರ ಶಿಕ್ಷಣ

**15.1.** ಶಿಕ್ಷಕರ ಶಿಕ್ಷಣವೆನ್ನುವುದು ವಿಶಾಲಾರ್ಥದಲ್ಲಿ ಶಾಲಾ ಶಿಕ್ಷಕರನ್ನೂ ಒಳಗೊಂಡಿರುವ ವಲಯವಾಗಿದ್ದು, ಇದು ಬರಲಿರುವ ಮುಂದಿನ ಪೀಳಿಗೆಯನ್ನು ರೂಪಿಸುತ್ತದೆ. ಶಿಕ್ಷಕನ ಸಿದ್ಧತೆ ಎಂದರೆ ಅದು "'ಹಲವು–ವಿಷಯಗಳ ಚಟುವಟಿಕೆಗಳ" ತಯಾರಿಯನ್ನು, ಆ ರೀತಿಯ ದೃಷ್ಟಿಕೋನವನ್ನು, ಜ್ಞಾನವನ್ನು, ಸ್ವಭಾವದ ಸಂರಚನೆಯನ್ನು ಹಾಗೂ ಮೌಲ್ಯಗಳನ್ನು, ಮತ್ತು ಉತ್ತಮ ಮಾರ್ಗದರ್ಶಕರ ಅಡಿಯಲ್ಲಿ ಅನುಶೀಲನಾ ವಿಕಾಸವನ್ನು ಅಭಿವೃದ್ಧಿ ಪಡಿಸಿಕೊಳ್ಳುವದಾಗಿರುತ್ತದೆ. ಶಿಕ್ಷಕರು ಕಡ್ಡಾಯವಾಗಿ ಭಾರತೀಯ ಭಾಷೆಗಳ ಜ್ಞಾನ, ನೀತಿಗಳು, ಮತ್ತು ಗುಡ್ಡಗಾಡು ಸಂಸ್ಕೃತಿಯ ಪರಂಪರೆಗಳ ಜೊತೆಜೊತೆಗೆ ಆಧುನಿಕ ಶಿಕ್ಷಣದಲ್ಲಿ ಆಗಿರುವ ಬೆಳವಣಿಗೆಗಳು ಮತ್ತು ಶಿಕ್ಷಣ ಶಾಸ್ತ್ರದ ವಿಷಯದಲ್ಲಿ ಭದ್ರಬುನಾದಿಯನ್ನು ಹೊಂದಬೇಕಿದೆ.

**15.2.** ಸರ್ವೋಚ್ಚ ನ್ಯಾಯಾಲಯವು ಅನುಶಾಸನಗೊಳಿಸಿದ, ನ್ಯಾಯಾಧೀಶ ಜೆ.ಎಸ್.ವರ್ಮಾ ಆಯೋಗವು(2012), ತನ್ನ ವರದಿಯಲ್ಲಿ ಉಲ್ಲೇಖಿಸಿರುವಂತೆ, ಇಲ್ಲಿ 10,000 ಕ್ಕೂ ಮಿಕ್ಕಿ ಶಿಕ್ಷಕರ ತರಬೇತಿ ಸಂಸ್ಥೆಗಳು (TEI) ಬಹುತೇಕವಾಗಿ ಶಿಕ್ಷಕ ತರಬೇತಿಯನ್ನು ಗಂಭೀರವಾಗಿ ಪರಿಗಣಿಸಿಲ್ಲ. ಆದರೆ ಅವರು ಪದವಿಗಳನ್ನು ಮಾತ್ರ ಬೆಲೆಗೆ ಮಾರಾಟ ಮಾಡುವುದನ್ನೂ ಬಿಟ್ಟಿಲ್ಲ. ಇದನ್ನು ನಿಯಂತ್ರಿಸಲು ರೂಪಿಸಲಾಗಿರುವ ನಿಬಂಧನಾ ಪ್ರಯತ್ನಗಳೂ ಸಹಿತ ಈ ರೀತಿಯ ಅಕ್ರಮವನ್ನು ತಡೆಯುವಲ್ಲಿ ಸಫಲತೆಯನ್ನು ಗಳಿಸಿಲ್ಲ. ಅಲ್ಲದೇ, ಅಲ್ಲಿ ಅವಶ್ಯಕವಿರುವ ಗುಣಾತ್ಮಕ ಮಾನಕಗಳನ್ನೂ ಅಳವಡಿಸಿಲ್ಲ. ಹೀಗಾಗಿ ಅದು ದುಷ್ಪರಿಣಾಮಕಾರಿಯಾದ –ನಿಷೇಧಾತ್ಮಕವಾದ–ವ್ಯವಸ್ಥೆಯಿಂದಾಗಿ, ಈ ವಲಯದಲ್ಲಿ ಪರಿಣತಿ ಹಾಗೂ ಆವಿಷ್ಕಾರಗಳನ್ನು ಅದುಮಿರುತ್ತದೆ. ಹೀಗಾಗಿ ಈ ವಲಯ ಮತ್ತು ನಿಬಂಧನಾ ವ್ಯವಸ್ಥೆಯನ್ನು ಕಠೋರವಾದ ಕ್ರಮಗಳಿಂದಲೇ ಪುನರುಜ್ಜೀವನಗೊಳಿಸಬೇಕಿದೆ. ಈ ಮೂಲಕ ಎಲ್ಲ ಗುಣಾತ್ಮಕತೆಯನ್ನು ಉನ್ನತಿಗೊಳಿಸುವ, ಸಮಗ್ರತೆಯನ್ನು ಪುನರ್–ಸ್ಥಾಪಿಸುವ, ವಿಶ್ವಾಸಪರತೆಯನ್ನು ಹೆಚ್ಚಿಸುವ, ಪರಿಣಾಮಕಾರಿತ್ವವನ್ನು ರೂಪಿಸುತ್ತ ಮತ್ತು ಈ ಶಿಕ್ಷಕರ ಶಿಕ್ಷಣ ನೀತಿಯಲ್ಲಿ ಉಚ್ಚ ಗುಣಾತ್ಮಕತೆಯನ್ನು ರೂಪಿಸಬೇಕಾಗಿರುತ್ತದೆ.

**15.3.** ಈ ಶಿಕ್ಷಕ ವೃತ್ತಿಗಿರುವ ಘನತೆ ಗೌರವಗಳನ್ನು ಪುನರ್ ಸ್ಥಾಪಿಸುವ ಸಲುವಾಗಿ, ಈ ಮೂಲಕ ವಿಶ್ವಾಸಾರ್ಹತೆ ಮತ್ತು ಸಮಗ್ರತೆಯನ್ನೂ ಸಾಧಿಸುವ ಹಂತವನ್ನು ತಲುಪುವ ಸಲುವಾಗಿ, ಅದನ್ನು ಸುಧಾರಿಸುವ ನಿಟ್ಟಿನಲ್ಲಿ, ಈ ನಿಯಾಮಕ ನೀತಿಯನ್ನು ಬಲಪಡಿಸುವದರ ಸಲುವಾಗಿ, ಕಟ್ಟುನಿಟ್ಟಾದ ಕ್ರಮಗಳನ್ನು ರೂಪಿಸಿ, ನಿಷ್ಕ್ರಿಯಗೊಂಡಿರುವ ಮತ್ತು ಗುಣಮಟ್ಟದಲ್ಲಿ ಕುಸಿತಗೊಂಡಿರುವ ಶಿಕ್ಷಕರ ತರಬೇತಿ ಸಂಸ್ಥೆಗಳ ವಿರುದ್ಧ, ಅಂದರೆ ಯಾರು ಅವಶ್ಯವಿದ್ದ ಮಾನಕಗಳನ್ನು ಪಾಲಿಸಿರುವದಿಲ್ಲವೋ – ಅವರಿಗೆ, ತಮ್ಮ ತಪ್ಪುಗಳನ್ನು ಸುಧಾರಿಸಿಕೊಳ್ಳಲು ಒಂದು ವರ್ಷದ ಕಾಲಾವಧಿಯನ್ನು ನಿಗದಿಗೊಳಿಸಿ, ನಂತರದಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಒಟ್ಟಿನಲ್ಲಿ, ವರ್ಷ 2030ರ ವೇಳೆಗೆ ಒಂದು ಸಮರ್ಥ, ಬಹುಶಿಸ್ತೀಯ ವ್ಯವಸ್ಥೆ ಹಾಗೂ ಸಮಗ್ರ ಶಿಕ್ಷಣ ತರಬೇತಿಗಳು ಮಾತ್ರ ಅಸ್ತಿತ್ವದಲ್ಲಿರಬೇಕು.

**15.4.** ಬೋಧಕ ಶಿಕ್ಷಣ ವ್ಯವಸ್ಥೆಯಲ್ಲಿ ಬಹುಶಿಸ್ತುಗಳ ಒಳಪೂರಣಗಳನ್ನು ಹಾಗೂ ಉತ್ತಮ ಗುಣಮಟ್ಟದ ಪಠ್ಯ ಹಾಗೂ ಬೋಧನಾ ಶಾಸ್ತ್ರದೊಂದಿಗಿನ ಶಿಕ್ಷಣವು ಅಗತ್ಯವಾಗಿದೆ. ಆದ್ದರಿಂದ ಬೋಧಕ ಶಿಕ್ಷಣ ಕೋರ್ಸ್‌ಗಳನ್ನು ಸಂಯುಕ್ತ ಬಹುಶಿಸ್ತುಗಳ ಸಂಸ್ಥೆಗಳೊಂದಿಗೆ ನಡೆಸಬೇಕು. ಹೀಗಾಗಿ, ಎಲ್ಲಾ ಬಹುಶಿಸ್ತೀಯ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ಶಿಕ್ಷಣ ವಿಭಾಗಗಳನ್ನು ತೆರೆಯುವ ಗುರಿ ಹೊಂದಿರಲಿವೆ. ಇವು ಶಿಕ್ಷಣಕ್ಕೆ ಸಂಬಂಧಿಸಿದ ಹಲವಾರು ವಿಷಯಗಳ ಬಗ್ಗೆ ಆಧುನಿಕ ಸಂಶೋಧನೆಗಳನ್ನು ನಡೆಸುವ ಜೊತೆಗೆ B.Ed ಕೋರ್ಸ್‌ಗಳನ್ನು ನಡೆಸಲಿವೆ. ಮನೋವಿಜ್ಞಾನ, ತತ್ತ್ವಶಾಸ್ತ್ರ, ಸಮಾಜ ವಿಜ್ಞಾನ ಮತ್ತು ಗಣಿತ ದಂತಹ ವಿಭಾಗಗಳ ಸಹಭಾಗಿತ್ವದಲ್ಲಿ ಅವು ಇದನ್ನು ಮಾಡಲಿವೆ. ಇಂತಹ ಸ್ಟ್ಯಾಂಡ್ ಅಲೋನ್ TEI ಗಳು 2030ರ ವೇಳೆಗೆ ಬಹುಶಿಸ್ತೀಯ ಸಂಸ್ಥೆಗಳಾಗಿ ಮಾರ್ಪಾಡುಗೊಳ್ಳಬೇಕಿದೆ. ಇವು 4 ವರ್ಷಗಳ ಅವಧಿಯ ಸಂಯೋಜಿತ ಬೋಧಕ ಸಿದ್ಧತಾ ಕೋರ್ಸ್ ಅನ್ನು ಕೊಡಬೇಕಾಗಿರುವುದರಿಂದ ಇದು ಅತ್ಯವಾಗಲಿದೆ.

**15.5.** 4–ವರ್ಷಗಳ ಅವಧಿಯ ಸಮಗ್ರ ಶಿಕ್ಷಣ ಶಾಸ್ತ್ರದ ಪದವಿಯಿ(ಬಿ.ಉಡಿ), ಶಿಕ್ಷಣ ಪದ್ಧತಿಯ ಇಂತಹ ಬಹುಶಿಸ್ತೀಯ ವ್ಯವಸ್ಥೆ ಹೊಂದಿದ ಉನ್ನತ ಶಿಕ್ಷಣ ಸಂಸ್ಥೆಗಳು ಪ್ರಾರಂಭಿಸಬಹುದು. ಒಟ್ಟಿನಲ್ಲಿ ವರ್ಷ 2030 ರ ಸಮಯಕ್ಕೆ, ಶಾಲಾ ಶಿಕ್ಷಕರಿಗೆ ಕನಿಷ್ಠ ವಿದ್ಯಾರ್ಹತೆ ಎಂದರೆ ಪದವಿ ಹಂತವಾಗಿರುತ್ತದೆ. ಈ 4–ವರ್ಷಗಳ ಕಾಲಾವಧಿಯ ಶಿಕ್ಷಕರ ಪದವಿ ಶಿಕ್ಷಣ(ಬಿ.ಈಡಿ) ಎರಡು ರೀತಿಯಲ್ಲಿ – ಸಮಗ್ರ ಸ್ನಾತಕಪೂರ್ವ ಪದವಿಯಾಗಿರುವದು. – ಒಂದು ಭಾಷೆಯಲ್ಲಿ, ಇತಿಹಾಸದಲ್ಲಿ,ಸಂಗೀತದಲ್ಲಿ, ಗಣಿತ ಶಾಸ್ತ್ರಗಳಲ್ಲಿ, ಗಣಕ–ತಂತ್ರ–ವಿಜ್ಞಾನದಲ್ಲಿ, ರಸಾಯನ ಶಾಸ್ತ್ರದಲ್ಲಿ, ಅರ್ಥಶಾಸ್ತ್ರದಲ್ಲಿ, ಕಲೆ ವಿಷಯಗಳಲ್ಲಿ, ಶಾರೀರಿಕ ಶಿಕ್ಷಣ ಮುಂತಾದ ಇತರೆ ವಿಷಯಗಳಲ್ಲಿಯೂ ಇರುತ್ತದೆ. ಈ ನಿಖರಾತ್ಮಕವಾಗಿ ರೂಪಣೆಗೊಳಿಸಿರುವ ಶಿಕ್ಷಣ ಶಾಸ್ತ್ರದ ಜೊತೆಜೊತೆಗೆ ಈ ಶಿಕ್ಷಕರ ತರಬೇತಿ ಶಿಕ್ಷಣವು ಸಮಾಜ ಶಾಸ್ತ್ರದಲ್ಲಿ, ಇತಿಹಾಸದಲ್ಲಿ, ವಿಜ್ಞಾನದಲ್ಲಿ, ಮನೋವಿಜ್ಞಾನದಲ್ಲಿ, ಪೂರ್ವಬಾಲ್ಯಾವಸ್ಥೆಯ ಶಿಕ್ಷಣ ಮತ್ತು ಆರೈಕೆಯಲ್ಲಿ ಮೂಲಭೂತ ಸಾಕ್ಷರತೆ ಹಾಗೂ ಗಣಿತಜ್ಞಾನದಲ್ಲಿ, ಭಾರತದಲ್ಲಿರುವ ಜ್ಞಾನಪದ್ಧತಿ ಮತ್ತು ನೀತಿಗಳು, ಕಲೆ ಹಾಗೂ ಸಂಪ್ರದಾಯಗಳು ಹೀಗೆ ಮತ್ತೂ ಅಧಿಕ ವಿಷಯಗಳನ್ನು ಹೊಂದಿದೆ. ಯಾವ ಉಚ್ಚ ಶಿಕ್ಷಣ ಸಂಸ್ಥೆಯು 4–ವರ್ಷಗಳ ಕಾಲಾವಧಿಯ ಈ ಸಮಗ್ರ ಶಿಕ್ಷಣ ತರಬೇತಿಯ (ಬಿ.ಇಡಿ) ಅವಕಾಶಗಳನ್ನು ಒದಗಿಸುತ್ತದೆಯೋ ಅವರು 2–ವರ್ಷಗಳ ಕಾಲಾವಧಿಯ ವ್ಯವಸ್ಥೆಯನ್ನೂ ರೂಪಿಸಿಕೊಳ್ಳಬಹುದಾಗಿದೆ. ಯಾರು ಪದವಿ–ವಿಭಾಗಗಳಲ್ಲಿ ಈ ರೀತಿಯಲ್ಲಿ ವಿಶೇಷ ಅಧ್ಯಯನ ಮಾಡಿರುತ್ತಾರೆಯೋ, ಅವರಿಗೆ 2–ವರ್ಷಗಳ ಕಾಲಾವಧಿಯ ತರಬೇತಿ(ಕೋರ್ಸ್) ಇರುತ್ತದೆ. ಯಾರು 4–ವರ್ಷಗಳ ಅವಧಿಯ ಪದವಿ–ಪೂರ್ವ ಅವಧಿಯಲ್ಲಿ ವಿಶೇಷ–ವಿಷಯಗಳನ್ನು ಅಧ್ಯಯನ ಮಾಡಿರುತ್ತಾರೆಯೋ ಅವರಿಗೆ ಕೇವಲ 1–ವರ್ಷದ ಅವಧಿಯ ಬಿ–ಈಡಿ ಕಾರ್ಯಕ್ರಮವನ್ನು ರೂಪಿಸಲಾಗುವುದು. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ಸ್ಥಾಪಿಸಬೇಕಾಗುವುದು. ಈ ಮೂಲಕ ಪ್ರತಿಭಾವಂತ ವಿದ್ಯಾರ್ಥಿಗಳನ್ನು 4–ವರ್ಷಗಳ ಅವಧಿಯ, 2–ವರ್ಷಗಳ ಅವಧಿಯ, ಹಾಗೂ 1–ವರ್ಷದ ಅವಧಿಯ ಈ "ಶಿಕ್ಷಕರ ತರಬೇತಿ ಶಿಕ್ಷಣಕ್ಕೆ (ಬಿ.ಇಡಿ) ಆಕರ್ಷಿಸಬಹುದು.

**15.6.** ಈ ರೀತಿಯಾಗಿ "ಶಿಕ್ಷಕರ ತರಬೇತಿ ಶಿಕ್ಷಣವನ್ನು" ಒದಗಿಸುವ ಉಚ್ಚ ಶಿಕ್ಷಣ ಸಂಸ್ಥೆಗಳು, ತಮ್ಮಲ್ಲಿ ಇರುವ ವಿವಿಧ ವಿಷಯಗಳಿಗೆ ಮತ್ತು ಸಂಬಂಧಿತ ವಿಷಯಗಳಲ್ಲಿ ಪರಿಣಿತರ ಲಭ್ಯತೆಯನ್ನು ಖಚಿತಗೊಳಿಸಬೇಕಾಗುತ್ತದೆ. ಜೊತೆಜೊತೆಗೆ, ವಿಶೇಷ ಅಧ್ಯಯನದ ವಿಷಯಗಳಿಗೂ ಸಹಿತ ಈ ಸೌಲಭ್ಯವನ್ನು ಒದಗಿಸಬೇಕಾಗಿರುತ್ತದೆ. ಪ್ರತಿಯೊಂದೂ ಉಚ್ಚ ಶಿಕ್ಷಣ ಸಂಸ್ಥೆಯು , ಅದು ಸರಕಾರೀ ಅಥವಾ ಖಾಸಗೀ ಶಾಲೆಗಳ ಜೊತೆಗೆ ಕಾರ್ಯ ನಿರ್ವಹಿಸುವ ಉದ್ದೇಶದ ಒಂದು "ಸಂಪರ್ಕ–ಜಾಲ"ವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಎಲ್ಲ ಸಮರ್ಥ ಶಿಕ್ಷಕರು, ಈ ವಿದ್ಯಾರ್ಥಿಯ ಜೊತೆ ಭಾಗವಹಿಸುವದರಿಂದ, ಹಾಗೂ ಸಮುದಾಯ ಸೇವೆಯ ಅವಕಾಶವೂ ಲಭ್ಯವಾಗುವುದರಿಂದ, ವಯಸ್ಕರ ಶಿಕ್ಷಣ ಹಾಗೂ ವೃತ್ತಿಯಾಧಾರಿತ ಶಿಕ್ಷಣ ಮುಂತಾದವುಗಳಲ್ಲಿ ಶಿಕ್ಷಕ ತರಬೇತಿ ವಿದ್ಯಾರ್ಥಿ ಭಾಗವಹಿಸುವ ಮೂಲಕ ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಳ್ಳಬಹುದಾಗಿದೆ.

**15.7.** ಈ ಶಿಕ್ಷಕರ ಶಿಕ್ಷಣದಲ್ಲಿ ಏಕರೂಪದ ಮಾನಕಗಳಲ್ಲಿ ಸ್ಥಿತಗೊಳಿಸುವ ಸಲುವಾಗಿ, ಸೇವಾ–ಪೂರ್ವ ಶಿಕ್ಷಕರನ್ನು ಸಿದ್ಧಗೊಳಿಸುವ ಸಲುವಾಗಿ ಕಾರ್ಯಕ್ರಮಗಳನ್ನು– ಆಯಾ ವಿಷಯಗಳ ಮೂಲಕ ಹಾಗೂ "ಬುದ್ಧಿಮತ್ತೆಯ ಪರೀಕ್ಷೆ (ಅಪ್ಟಿಟ್ಯೂಡ್ ಟೆಸ್ಟ್)" ನ್ನು "ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(N T I)" ಮೂಲಕ ಮಾಡಲಾಗುತ್ತದೆ. ಇಲ್ಲೆ ದೇಶದ ಸಾಂಸ್ಕೃತಿಕ ಹಾಗೂ ಭಾಷಾ ವೈವಿಧ್ಯತೆಗಳನ್ನು ಆಧರಿಸಿಯೇ ಮಾನಕಗಳನ್ನು ರೂಪಿಸಿದೆ.

**15.8.** ಶಿಕ್ಷಣದ ಈ ವಿಭಾಗದಲ್ಲಿ ಇರುವ ಈ ಬೋಧಕ ವ್ಯವಸ್ಥೆಯು ಅವಶ್ಯವಾಗಿಯೇ ವೈವಿಧ್ಯತೆಯಿಂದ ಕೂಡಿರುವ ಗುರಿ ಇರಬೇಕಾಗಿದೆ.ಇದರ ಜೊತೆಗೆ, ಕಲಿಯುವಿಕೆಯ / ಕ್ಷೇತ್ರದ / ಸಂಶೋಧನೆಯ ಅನುಭವಗಳು ಮಾತ್ರ ಇಲ್ಲಿ ಹೆಚ್ಚಿನ ಮೌಲ್ಯಗಳಿಗೆ ಗಣಿಸಲಾಗುತ್ತದೆ. ಸಮಾಜ ವಿಜ್ಞಾನದ ವಿಷಯಗಳ ತರಬೇತಿಯಲ್ಲಿನ ಬೋಧಕ ಸಿಬ್ಬಂದಿ, ಅದರಲ್ಲೂ ನೇರಾನೇರವಾಗಿ ಪ್ರಚಲಿತ ಶಾಲಾ ಶಿಕ್ಷಣದ ವಿಷಯಕ್ಕೆ ಉದಾಹರಣೆ ಎಂದರೆ – ಮನೋವಿಜ್ಞಾನ, ಮಕ್ಕಳ ವಿಕಾಸ, ಭಾಷಾ ಶಾಸ್ತ್ರಗಳು, ಸಮಾಜಶಾಸ್ತ್ರ, ತತ್ತ್ವಶಾಸ್ತ್ರ, ಅರ್ಥಶಾಸ್ತ್ರ ಮತ್ತು ರಾಜಕೀಯ ವಿಜ್ಞಾನಗಳ ಜೊತೆಗೆ ವಿಜ್ಞಾನ ಶಿಕ್ಷಣ, ಗಣಿತ ಶಿಕ್ಷಣ, ಸಮಾಜ ವಿಜ್ಞಾನ ಶಿಕ್ಷಣ, ಮತ್ತು ಭಾಷಾ ವಿಜ್ಞಾನ ಶಿಕ್ಷಣಗಳನ್ನೂ, ಈ ಶಿಕ್ಷಕ ತರಬೇತಿ ಶಿಕ್ಷಣ ಪಡೆದುಕೊಳ್ಳಲು ಈ ಶಿಕ್ಷಣ ತರಬೇತಿ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳನ್ನು ಆಕರ್ಷಿಸಲು ಹಾಗೂ ಸಂಸ್ಥೆಯಲ್ಲಿ ಉಳಿಸಿಕೊಳ್ಳಲು, ಈ ಹಂತದ ಬಹುಶಿಸ್ತೀಯ ಶಿಕ್ಷಣವನ್ನು ಬಲಪಡಿಸುವ ಹಾಗೂ ದೃಢತಾಪೂರ್ಣವಾದ ಪರಿಕಲ್ಪನಾ ಪ್ರಗತಿಯನ್ನು ಸಾಧಿಸಬಹುದಾಗಿದೆ.

**15.9.** ಹೊಸದಾಗಿ ಪಿ.ಎಚ್‌ಡಿ ಪಡೆದ ಎಲ್ಲರೂ ಅವರು ಯಾವುದೇ ವಿಷಯಕ್ಕೆ ಸಂಬಂಧಿಸಿದವರಾಗಿದ್ದರೂ ಸಹಿತ, ಅವರು ಬೋಧನೆಯಲ್ಲಿ/ಶಿಕ್ಷಣದಲ್ಲಿ/ಶಿಕ್ಷಣ ಶಾಸ್ತ್ರದಲ್ಲಿ ಅವರು ಪಿಎಚ್‌ಡಿ ಮಾಡಿರುವ ವಿಷಯದ ಅವರ ಡಾಕ್ಟರಲ್ ಅವಧಿಯಲ್ಲಿ (ವಿಶೇಷ ಅಧ್ಯಯನದ ಅವಧಿಯಲ್ಲಿ) ಅವರು ಅಧ್ಯಯನ ಮಾಡಿರುವ ವಿಷಯದ ಕುರಿತು ಲೇಖನಗಳನ್ನು ರೂಪಿಸಿ

ಶ್ರೇಯಾಂಕ ಆಧಾರಿತ ವರ್ಗಗಳನ್ನು ಪೂರೈಸಿಕೊಳ್ಳಬೇಕಾಗುತ್ತದೆ. ಶಿಕ್ಷಣ ಶಾಸ್ತ್ರದ ಪ್ರಕಟಣೆಗಾಗಿ/ ಅನ್ವಯಿಕೆಗಾಗಿ ಇರುವ ಅವಕಾಶವು, ಪಠ್ಯಕ್ರಮವನ್ನು ರೂಪಿಸುವಲ್ಲಿ, ವಿಶ್ವಾಸಾರ್ಹ ಮೌಲ್ಯಮಾಪನ ವ್ಯವಸ್ಥೆಯಲ್ಲಿ, ಸಂವಹನದಲ್ಲಿ, ಮತ್ತು ಇಂತಹ ಹಲವು ವಿಷಯಗಳಿಗೆ ಸಂಬಂಧಪಟ್ಟಂತೆ, ಇಲ್ಲಿ ಬೋಧಕರಾಗಲು ಖಚಿತತೆಯನ್ನು ಹಲವು ಸಂಶೋಧನಾ ಪರಿಣಿತರಿಗೆ ಒದಗಿಸುವ ಅಥವಾ ಸಾರ್ವಜನಿಕ ಪ್ರತಿನಿಧಿತ್ವ/ಸಮಾಜ ಸಮಾಲೋಚಕರ– ಅಂದರೆ ಅವರವರ ಅಧ್ಯಯನದ ವಿಷಯಕ್ಕೆ ಸಂಬಂಧಪಟ್ಟಂತೆ ಇಲ್ಲಿ ಅವಕಾಶ ಖಚಿತತೆಯನ್ನು ಒದಗಿಸಲಾಗುವದು. ಈ "ಪಿಎಚ್‌ಡಿ" ವಿದ್ಯಾರ್ಥಿಗಳೂ ಸಹಿತ ನಿಗದಿಗೊಳಿಸಲಾಗುವ ಅವಧಿಗಳಲ್ಲಿ ಬೋಧಿಸುವ ಅನುಭವವನ್ನೂ ಪಡೆಯಬೇಕು, ಈ ಮೂಲಕವೂ ಬೋಧನಾ ವಿಷಯಗಳಲ್ಲಿ ಸಹಾಯಕ ಅಂಶಗಳನ್ನು ಮತ್ತು ಹೆಚ್ಚುವರಿ ವಿಧಾನಗಳಲ್ಲಿ ಪಡೆಯಬಹುದು. ಈ ವಿಷಯಕ್ಕಾಗಿ ಇಡೀ ದೇಶದಲ್ಲಿ ಎಲ್ಲ ವಿಶ್ವವಿದ್ಯಾಲಯಗಳೂ ಈ "ಪಿಎಚ್‌ಡಿ" ಅಧ್ಯಯನ ವ್ಯವಸ್ಥೆಯ ಹಂತವನ್ನು ಪುನರ್ ಸಂಘಟಿಸಬೇಕಾಗುತ್ತದೆ.

**15.10**. ಸೇವಾವಧಿಯಲ್ಲಿ ಇರುವಾಗಲೇ, ಮಹಾವಿದ್ಯಾಲಯಗಳ ಹಾಗೂ ವಿಶ್ವವಿದ್ಯಾಲಯಗಳ ಬೋಧಕ ಸಿಬ್ಬಂದಿಯು ವೃತ್ತಿ ಪರಿಣಿತಿಯನ್ನು ಪ್ರಗತಿಯ ಸಲುವಾಗಿ ನಿರಂತರವಾಗಿ ಇರಲು, ಸದ್ಯ ಅಸ್ತಿತ್ವದಲ್ಲಿರುವ ಸಾಂಸ್ಥಿಕ ವ್ಯವಸ್ಥೆಯ ಮೂಲಕ ಹಾಗೂ ಬರಲಿರುವ ಅವಧಿಯಲ್ಲಿ ರೂಪಣೆಗೊಳ್ಳುವ ಸಂಸ್ಥೆಗಳ ಮೂಲಕ ಒದಗಿಸಲಾಗುವದು; ಇವುಗಳನ್ನು ಮತ್ತೂ ಬಲಪಡಿಸುವುದರ ಜೊತೆಗೆ ಗಣನೀಯವಾಗಿಯೇ ವಿಸ್ತರಿಸುತ್ತ, ಈ ಗುಣಾತ್ಮಕ ಶಿಕ್ಷಣಕಾಗಿ ಈ ಬೋಧನಾ–ಕಲಿಕಾ ಪ್ರಕ್ರಿಯೆಯನ್ನು ಸಮೃದ್ಧಗೊಳಿಸುವ ಮೂಲಕ ಅವಶ್ಯಕಗಳ ಪರಿಹಾರವನ್ನು ಪಡೆದುಕೊಳ್ಳಬಹುದು. ಇಲ್ಲಿ ತಂತ್ರಜನ್ಯದ–ಲಭ್ಯತೆಗಳ ಅವಕಾಶವನ್ನೂ –"ಸ್ವಯಂ/ದೀಕ್ಷಾ" ದಂಥ ವ್ಯವಸ್ಥೆಯನ್ನು ಆನ್–ಲೈನ್ ತರಬೇತಿಗಾಗಿ –ಅದರಲ್ಲೂ ಶಿಕ್ಷಕರ ಆನ್–ಲೈನ್ ತರಬೇತಿಗಾಗಿ ಪ್ರೋತ್ಸಾಹಿಸಲಾಗುವದು. ಆದ್ದರಿಂದ ನಿಗದಿಗೊಳಿಸಲಾಗಿರುವ ಮಾನಕಗಳ ಹಂತದ ತರಬೇತಿ ಕಾರ್ಯಕ್ರಮಗಳನ್ನು ಈ ರೀತಿಯಲ್ಲಿ ನಿರ್ವಹಿಸಬಹುದಾಗಿದೆ. ಇದರಿಂದ ಅತ್ಯಂತ ಅಲ್ಪಕಾಲಾವಧಿಯಲ್ಲಿಯೇ ಬಹುದೊಡ್ಡ ಸಂಖ್ಯೆಯ ಶಿಕ್ಷಕರನ್ನು ತಲುಪಲು ಸಾಧ್ಯವಾಗುತ್ತದೆ.

**15.11**. ಒಂದು "ರಾಷ್ಟ್ರೀಯ ಮಾನಿಟರಿಂಗ್ ಮಿಷನ್" (National Monitoring Mission) ಸ್ಥಾಪಿಸಲಾಗುವದು. ಅದರಲ್ಲಿ ಅಪಾರ ಸಂಖ್ಯೆಯ ಪ್ರತಿಭಾನ್ವಿತ ಹಿರಿಯರ/ ನಿವೃತ್ತ ಬೋಧಕರನ್ನು ಒಳಗೊಂಡಂತೆ – ಅವರು ಭಾರತೀಯ ಭಾಷೆಗಳನ್ನು ಬೋಧಿಸುವ ಸಾಮರ್ಥ್ಯವನ್ನು ಹೊಂದಿ ಹಾಗೂ ಯಾರು ಅಲ್ಪಾವಧಿಯ ಅಥವಾ ದೀರ್ಘಾವಧೀಯ ವೃತ್ತಿಪರ ಸಹಕಾರವನ್ನು ವಿಶ್ವವಿದ್ಯಾಲಯಗಳಿಗೆ ಅಥವಾ ಮಹಾವಿದ್ಯಾಲಯಗಳಿಗೆ ಮಾರ್ಗದರ್ಶನದ ಮೂಲಕ ಇಲ್ಲವೇ ವೃತ್ತಿಪರ ಸಹಕಾರವನ್ನು ವಿಶ್ವವಿದ್ಯಾಲಯಗಳ ಬೋಧಕರಿಗೆ ನೀಡಲು ಸಿದ್ಧರಿದ್ದಲ್ಲಿ ಅವರನ್ನೂ ಒಳಗೊಂಡಿರುತ್ತದೆ.

## 16. ವೃತ್ತಿಪರ ಶಿಕ್ಷಣದ ಪುನರ್ ಸಂಯೋಜನೆ

**16.1.** 12ನೇ ಪಂಚವಾರ್ಷಿಕ ಯೋಜನೆ(2012–17)ಯಲ್ಲಿ ಅಂದಾಜು ಪಡಿಸಲಾದಂತೆ ಭಾರತದಲ್ಲಿ 19–24 ವರ್ಷದ ವಯೋಮಾನದ ಕಾರ್ಯಕ್ಷಮತಾ ಹಂತದಲ್ಲಿ ಕೇವಲ 5% ಮಾತ್ರ ವೃತ್ತಿಪರ ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ ಎನ್ನುವದು ಗೋಚರವಾಗಿದೆ. ಆದರೆ ಇದು ಅಮೆರಿಕೆಯಲ್ಲಿ 52%, ಜರ್ಮನಿಯಲ್ಲಿ 25%, ದಕ್ಷಿಣ ಕೋರಿಯಾದಲ್ಲಿ ಅತ್ಯಂತ ಹೆಚ್ಚು 96% ಇದೆ. ಈ ದಾಖಲಾತಿಗಳೇ ಭಾರತದಲ್ಲಿ ಸದ್ಯ ಈ ವೃತ್ತಿಪರ ಶಿಕ್ಷಣವನ್ನು ಅನುಷ್ಠಾನಿಸುವಲ್ಲಿ ಇರುವ ತುರ್ತುಸ್ಥಿತಿಯು ಸ್ಪಷ್ಟವಾಗಿಯೇ ಈ ಅಂಕಿ–ಸಂಖ್ಯೆಗಳು ತೋರಿಸುತ್ತಿವೆ.

**16.2.** ಇಲ್ಲಿ ಈ ರೀತಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಈ ವೃತ್ತಿಪರ ಶಿಕ್ಷಣವನ್ನು ಪಡೆದುಕೊಳ್ಳುತ್ತಿರುವದಕ್ಕೆ ಕಾರಣವೆಂದರೆ, ಈ ವೃತ್ತಿಪರ ಶಿಕ್ಷಣವನ್ನು– ಹಳೆಯ ವಿಧಾನದಲ್ಲಿಯೇ ಅಂದರೆ– 11 ಅಥವಾ 12 ನೇ ತರಗತಿ ಪೂರೈಸಿದ ಅಥವಾ 8ನೇ ವರ್ಗದ ಅವಧಿಯಲ್ಲಿ ಶಿಕ್ಷಣವನ್ನು ತೊರೆದಿರುವವರಿಗೆ ಎಂದೇ ರೂಪಿತಗೊಂಡಿದೆ. ಅದಕ್ಕಿಂತ ಹೆಚ್ಚಾಗಿ, ಒಂದು ವೇಳೆ 11–12 ನೇ ತರಗತಿಗಳನ್ನು ಪೂರೈಸಿದ ನಂತರದಲ್ಲಿ ವಿದ್ಯಾರ್ಥಿಗಳು ಈ ವೃತ್ತಿಪರ ಶಿಕ್ಷಣವನ್ನು ಪಡೆದುಕೊಂಡಿದ್ದರೂ ಸಹಿತ, ಅವರಿಗೆ ಸೂಕ್ತವಾಗಿರುವ ಹಾಗೂ ನಿಖರವಾಗಿಯೇ ಅಧಿಕೃತಗೊಳಿಸಲಾಗಿರುವ ಜೀವನದ ಪಥಗಳು ಲಭ್ಯವಾಗಲಿಲ್ಲ. ಹೀಗಾಗಿ ಅವರು, ತಾವು ಆಯ್ಕೆ ಮಾಡಿಕೊಂಡ ವೃತ್ತಿಪರ ವಿಷಯಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ. ಅದೇ ಸಮಯಕ್ಕೆ ಸಾಮಾನ್ಯವಾಗಿ ಉನ್ನತ ಶಿಕ್ಷಣದ ಹಂತದಲ್ಲಿಯೂ ಸಹಿತ ಇಂತಹ ವೃತ್ತಿಪರ ವಿಷಯಗಳಿಗೆ ಪ್ರವೇಶದ ಪರಿಗಣನೆಯೂ ಇರಲಿಲ್ಲ. ಅದೂ ಅಲ್ಲದೇ ಈ ವೃತ್ತಿಪರ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ, ಹೊಸ ಅವಕಾಶಗಳನ್ನು ಒದಗಿಸುವಂತೆಯೇ ಇರಲಿಲ್ಲ. ಹೀಗಾಗಿ, ಅವರನ್ನು ಶಿಕ್ಷಣದ ಮುಖ್ಯವಾಹಿನಿಯಿಂದ ಅಥವಾ ಶೈಕ್ಷಣಿಕ ವಲಯದಿಂದಲೇ ದೂರವಿಡಲಾಯಿತು. ಇಲ್ಲಿ ಅವರನ್ನು 'ನಾಗರಿಕರಲ್ಲದ' "ದೇಶಿಮೂಲದವರು" ಎನ್ನುವ

ಭಾವದಲ್ಲಿಯೇ ದೂರವಿಡುತ್ತಲೇ ಬರಲಾಗಿದೆ. ಈ ವಿಷಯವೇ ತೀರ ಇತ್ತೀಚಿಗೆ ಅಂದರೆ–2013 ರಲ್ಲಿ "ರಾಷ್ಟ್ರೀಯ ಕೌಶಲ್ಯಗಳ ಅರ್ಹತೆಯ ರೂಪುರೇಷೆ(NSQF)ಗಳ ಮೂಲಕ ಘೋಷಿಸಲ್ಪಟ್ಟಿದೆ.

**16.3.** ಮುಖ್ಯವಾಹಿನಿಗೆ ಹೋಲಿಸಿ ಈ ವೃತ್ತಿಪರ ಶಿಕ್ಷಣವನ್ನು ಕೀಳರಿಮೆಯಿಂದಲೂ ಕಾಣಲಾಗಿದೆ. ಅದೂ ಅಲ್ಲದೇ ಈ ವೃತ್ತಿಪರ ವಿದ್ಯಾರ್ಥಿಗಳು ಮುಖ್ಯವಾಹಿನಿಯ ವಿದ್ಯಾರ್ಥಿಗಳ ಸಂಗಡ ಹೊಂದಾಣಿಕೆಯಾಗಲು ಸಾಧ್ಯವಾಗಲಿಲ್ಲ. ಈ ಗ್ರಹಿಕೆಯೇ ವಿದ್ಯಾರ್ಥಿಯು ಈ ವಷಯಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ತನ್ನ ಪ್ರಭಾವ ಬೀರಿದೆ. ಹೀಗಾಗಿ ಭವಿಷ್ಯದಲ್ಲಿ ಈ ವೃತ್ತಿಪರ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ತಲುಪಿಸುವಲ್ಲಿ ಪುನರ್–ನಿರೂಪಣೆಗೊಳಿಸುವಲ್ಲಿ ಅತ್ಯಂತ ತೀವ್ರತರವಾಗಿ ಅನುಷ್ಠಾನಗೊಳಿಸಬೇಕಾಗಿದೆ.

**16.4.** ಈ ನೀತಿಯು, ಈ ವೃತ್ತಿಪರ ಶಿಕ್ಷಣದ ವ್ಯವಸ್ಥೆಗಾಗಿ, ಸಮಾಜದಲ್ಲಿ ರೂಪಿತವಾಗಿರುವ ಶ್ರೇಣೀಕೃತ ಗುರುತಿಸುವಿಕೆಯ ಹಂತವನ್ನು ಮೀರಿ ಹೊರಬರಬೇಕಿದೆ. ಇದಕ್ಕಾಗಿ ಈ ವೃತ್ತಿಪರ ಶಿಕ್ಷಣ ವ್ಯವಸ್ಥೆಯನ್ನು ಶಿಕ್ಷಣದ ಮುಖ್ಯವಾಹಿನಿಯ ಒಳಗೇ ಅಂದರೆ– ಎಲ್ಲ ಸಂಸ್ಥೆಗಳೂ ರೂಪಿಸಿಕೊಂಡಿರುವ ಶಿಕ್ಷಣದ ರೂಪುರೇಷೆಗಳಲ್ಲಿ ಅಂತರ್ಗತವಾಗಿರುವಂತೆಯೇ ಸಮಗ್ರಗೊಳಿಸಬೇಕಾಗಿದೆ. ಮಾಧ್ಯಮಿಕ ಶಾಲಾ ಅವಧಿಯ ಈ ಪ್ರಾರಂಭದ ವರ್ಷಗಳಲ್ಲಿಯೇ ಈ ರೀತಿಯ ವೃತ್ತಿಪರ ಶಿಕ್ಷಣದ ಬಗೆಗೆ ಅವಕಾಶವನ್ನು ಒದಗಿಸಿಕೊಟ್ಟಲ್ಲಿ,ಆಗ ಈ ವೃತ್ತಿಪರ ಶಿಕ್ಷಣವನ್ನೂ ಸುಗಮವಾಗಿ ಉನ್ನತ ಶಿಕ್ಷಣದ ಜೊತೆಜೊತೆಗೆ ಮುಂದುವರೆಸಬಹುದಾಗಿದೆ. ಇದರಿಂದಾಗಿ ಪ್ರತಿಯೊಂದು ಮಗುವೂ ಕನಿಷ್ಠಪಕ್ಷ ಒಂದಾದರೂ ವೃತ್ತಿಪರ ವಿಷಯದಲ್ಲಿ ಜ್ಞಾನವನ್ನು ದೊರಕಿಸಿಕೊಳ್ಳುತ್ತದೆ. ಜೊತೆಗೆ ಹಲವು ವೃತ್ತಿಗಳ ಬಗೆಗೆ ಅರಿವನ್ನೂ ಮೂಡಿಸಿಕೊಳ್ಳುತ್ತದೆ. ಇದು ಕ್ರಮೇಣ ಹಲವಾರು ವೃತ್ತಿಗಳನ್ನು ಒಳಗೊಂಡ ವಿಷಯಗಳಲ್ಲಿ "ಶ್ರಮ ಗೌರವ"ದ ಘನತೆಯನ್ನೂ ಹಾಗೂ ಮಹತ್ವವನ್ನೂ ಪಡೆದುಕೊಳ್ಳುತ್ತದೆ. ಇದು ಭಾರತೀಯ ಕಲೆಗಳು ಮತ್ತು ಕುಶಲ–ಕರ್ಮಿಗಳ ವಿಷಯಗಳನ್ನೂ ಒಳಗೊಂಡಿರುತ್ತದೆ.

**16.5.** ವರ್ಷ 2025 ರ ಸಮಯಕ್ಕೆ ಈ ಉಚ್ಚ ಶಿಕ್ಷಣ ನೀತಿಯ ಅಡಿಯಲ್ಲಿ ವೃತ್ತಿಪರ ವಿಷಯಗಳಲ್ಲಿ ಅನುಭವವನ್ನು/ ಅಧ್ಯಯನವನ್ನು ಪೂರೈಸಿದ 50% ವಿದ್ಯಾರ್ಥಿಗಳು ಪಡೆದುಕೊಂಡಿರುತ್ತಾರೆ. ಅದಕ್ಕಾಗಿ ಸ್ಪಷ್ಟವಾಗಿರುವ ಕಾಲಮಿತಿಯನ್ನು ಹೊಂದಿರುವ ಗುರಿಗಳನ್ನು ಕುರಿತು ಒಂದು ಕ್ರಿಯಾ ಯೋಜನೆಯನ್ನು ರೂಪಿಸಿಕೊಳ್ಳಬೇಕು. ಇದು "ಸುಸ್ಥಿರ ಅಭಿವೃದ್ಧಿಯ ಗುರಿ (ಎಸ್ ಡಿ ಜಿ 4.4) ದಲ್ಲಿ ರೂಪಿಸಿರುವ ಅಂಶವೂ ಆಗಿದೆ. ಹೀಗಾಗಿ ಇದು ಜನಸಂಖ್ಯಾ ವಿಷಯದಲ್ಲಿ ಒಂದು ಫಲಪ್ರದವಾಗಿಯೇ ಇರುವ ಭಾರತದ ಕ್ಷಮತೆಯನ್ನು ಸಂಪೂರ್ಣವಾಗಿ ಕಾರ್ಯದಲ್ಲಿ ತೊಡಗಿಸಬಹುದಾಗಿದೆ. ಅದಕ್ಕಾಗಿ, ಈ ವೃತ್ತಿಪರ ಶಿಕ್ಷಣವನ್ನು ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆಯನ್ನು "ಜಿ ಈ ಆರ್" ದ ಅನುಪಾತದ ಗುರಿಯನ್ನು ಸಾಧಿಸುವಲ್ಲಿಯೂ ಪರಿಗಣಿಸಲಾಗುವದು. ಈ ವೃತ್ತಿಪರ ಶಿಕ್ಷಣದ ಪ್ರಗತಿಯು ಪರಸ್ಪರ ಸಹಕಾರ ತತ್ವದ ಅಡಿಯಲ್ಲಿ 'ಅಕಾಡೆಮಿಕ್ ಪ್ರಗತಿ" ಅಥವಾ ಇತರೇ ಸಾಮರ್ಥ್ಯಗಳಲ್ಲಿ ರೂಪಿವಾಗುತ್ತದೆ. ಹೀಗಾಗಿ ಎಲ್ಲಾ ಮಾಧ್ಯಮಿಕ ಶಾಲೆಗಳಲ್ಲಿ ಈ ವೃತ್ತಿಪರ ಶಿಕ್ಷಣವನ್ನು ಸಮಗ್ರ ಶಿಕ್ಷಣದ ವ್ಯವಸ್ಥೆಯಲ್ಲಿಯೇ ಒದಗಿಸಲಾಗುವುದು. ಮುಂದಿನ ಹತ್ತು ವರ್ಷಗಳ ಅವಧಿಯಲ್ಲಿ ಇದನ್ನು ಎಲ್ಲಾ ಮಾಧ್ಯಮಿಕ ಶಾಲೆಗಳಲ್ಲಿ ಅಳವಡಿಸಲಾಗುವದು. ಅದರ ಸಲುವಾಗಿ ಮಾಧ್ಯಮಿಕ ಶಾಲೆಗಳನ್ನು, ಕೈಗಾರಿಕಾ ತರಬೇತಿ ಸಂಸ್ಥೆ (ಐ.ಟಿ.ಐ), ಪಾಲಿಟೆಕ್ನಿಕ್, ಸ್ಥಳೀಯ ಕೈಗಾರಿಕೆಗಳು ಮತ್ತಿತರ ವ್ವಸ್ಥೆಯೊಡನೆ ಸಹಯೋಗಗೊಳಿಸಲಾಗುವದು. ಕೌಶಲ್ಯಾಭಿವೃದ್ಧಿಯ ಪ್ರಯೋಗಾಲಯಗಳನ್ನು ಶಾಲೆಗಳ ವಲಯದಲ್ಲಿ ಜಾಲದ ಸ್ವರೂಪದಲ್ಲಿ ದೊರೆಯುವಂತೆ ಬಳಸಿಕೊಳ್ಳಬಹುದು. ಇದರಿಂದ ಇತರೆ ಶಾಲೆಗಳೂ ಸಹಿತ ಈ ಕೌಶಲ್ಯಾಭಿವೃದ್ಧಿಯ ಪ್ರಯೋಗಾಲಯವನ್ನು ತಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಬಳಸಿಕೊಳ್ಳಬಹುದು. ಅದೇ ಸಮಯಕ್ಕೆ ಉಚ್ಚ ಶಿಕ್ಷಣ ಸಂಸ್ಥೆಗಳೂ ಸಹಿತ, ವೃತ್ತಿಪರ ತರಬೇತಿ ವರ್ಗಗಳನ್ನು ತಮ್ಮ ಶಿಕ್ಷಣ ಪದ್ಧತಿಯಲ್ಲಿ ರೂಪಿಸಿರುವದರಿಂದ, ಅದು ಅವರದೇ ಆದ ವಿನ್ಯಾಸದಲ್ಲಿ ಇರುವದರಿಂದ, ಅಥವಾ ಸ್ಥಳೀಯ ಕೈಗಾರಿಕೆ ಮತ್ತು ಸೇವಾಸಂಸ್ಥೆಯ ಪಾಲುದಾರಿಕೆಯಲ್ಲೂ ರೂಪುಗೊಳ್ಳಬಹುದು.

ಇದಕ್ಕಾಗಿ ವರ್ಷ 2013 ರಲ್ಲಿ ರೂಪಿಸಲ್ಪಟ್ಟರುವ ವೃತ್ತಿಪರ ಪದವಿ (ಬಿ.ವೋಕ್ ಪದವಿ)ವ್ಯವಸ್ಥೆಯನ್ನು ಮುಂದುವರೆಸಲಾಗುವದು.ಆದರೂ ಈ ವೃತ್ತಿಪರ ವಿಷಯಗಳು ಮತ್ತು ವರ್ಗಗಳು, ಇತರೇ ವಿಷಯಗಳ ವಿದ್ಯಾರ್ಥಿಗಳಿಗೂ ಲಭ್ಯವಾಗಿರಬೇಕು. ಇದರಲ್ಲಿ 4–ವರ್ಷಗಳ ಅವಧಿಯ ಬಹುಶಿಸ್ತೀಯ ಪದವಿ ಪರೀಕ್ಷೆಯ ಅಧ್ಯಯನದ ವಿದ್ಯಾರ್ಥಿಗಳೂ ಒಳಗೊಂಡಿರುತ್ತಾರೆ. ಉಚ್ಚ ಶಿಕ್ಷಣ ಸಂಸ್ಥೆಗಳು ಇದರ ಜೊತೆಗೆ ಅಲ್ಪಾವಧಿಯ ವರ್ಗಗಳನ್ನು ಸಂಘಟಿಸಿ ಪ್ರಮಾಣ ಪತ್ರವನ್ನು ಕೊಡಬಹುದಾಗಿದೆ, ಅದರಲ್ಲು ವಿವಿಧ ಕೌಶಲದ ಜೊತೆಗೆ ಸೂಕ್ಷ್ಮ ಕೌಶಲ್ಯದ( ತಂತ್ರಜ್ಞಾನದ ವರ್ಗಗಳನ್ನು) ರೂಪಿಸಬಹುದು. ಇದಕ್ಕಾಗಿ "ಲೋಕ ವಿದ್ಯಾ" ಎನ್ನುವ ವಿಧಾನವನ್ನು ರೂಪಿಸಬಹುದು. ಏಕೆಂದರೆ ಈ "ಲೋಕ ವಿದ್ಯಾ" ಎನ್ನುವದು ಭಾರತದಲ್ಲಿ ಈ ವೃತ್ತಿಪರ ಜ್ಞಾನವು ಸಮಗ್ರಗೊಂಡೇ ಇದೆ. ಇದನ್ನು ಶಿಕ್ಷಣ ವ್ಯವಸ್ಥೆಯಲ್ಲಿ

ಸಮಗ್ರೀಕರಿಸಿದರೆ,ವೃತ್ತಿಪರ ವರ್ಗಗಳು ಎಂದು ವಿದ್ಯಾರ್ಥಿಗಳಿಗೆ ದೊರೆಯುವಂತೆ ಮಾಡಲಾಗುವದು. ಅದೇ ರೀತಿಯಲ್ಲಿ "ದೂರ ಶಿಕ್ಷಣ ಅಧ್ಯಯನದ" ವ್ಯವಸ್ಥೆಯಲ್ಲಿಯೂ ಸಹಿತ ಈ ವೃತ್ತಿಪರ ಶಿಕ್ಷಣದ ಸಾಧ್ಯತೆಗಳನ್ನು ರೂಪಿಸಿಕೊಳ್ಳಲು ಅವಕಾಶವಿರುತ್ತದೆ.

**16.6.** ಬರಲಿರುವ ಒಂದು ದಶಕದ ಅವಧಿಯಲ್ಲಿ ಈ ವೃತ್ತಿಪರ ಶಿಕ್ಷಣವು ವ್ಯವಸ್ಥಿತವಾಗಿ ಸಮಗ್ರ ಶಿಕ್ಷಣದ ಅಂಶವಾಗಿಯೇ ಎಲ್ಲ ಶಾಲೆಗಳಲ್ಲಿಯೂ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಮತ್ತು ಉಚ್ಚ ಶಿಕ್ಷಣ ಸಂಸ್ಥೆಗಳಲ್ಲಿಯೂ ಸಹಿತ ಸ್ಥಾಪಿತಗೊಳ್ಳಲಿವೆ. ಈ ರೀತಿಯ ವೃತ್ತಿಪರ ಶಿಕ್ಷಣವನ್ನು ಎಲ್ಲೆಲ್ಲಿ ಸ್ಥಳೀಯ ಅವಕಾಶಗಳು ಲಭ್ಯವಿರುತ್ತವೆಯೋ ಅದನ್ನು ನಿಖರವಾಗಿ ಗುರುತಿಸಿ,ಮತ್ತು ಕೌಶಲ್ಯಗಳ ಅನುಷ್ಠಾನದಲ್ಲಿ ಇರಬಹುದಾದ ಕಂದಕಗಳನ್ನು ನಿಖರವಾಗಿ ಗುರುತಿಸಿ, ವಿಶ್ಲೇಷಣೆ ಮಾಡಿ, ಅದರ ಆಧಾರದ ಮೇಲೆ ಈ ವೃತ್ತಿಪರ ವರ್ಗಗಳನ್ನು ಪ್ರಾರಂಭಿಸುವಂತೆ ಲಕ್ಷ್ಯ ವಹಿಸಲಾಗುವುದು. "ಎಂ ಎಚ್ ಆರ್ ಡಿ" ವೃತ್ತಿಪರ ಶಿಕ್ಷಣದ ಸಮಗ್ರೀಕರಣಕ್ಕೆ ರಾಷ್ಟ್ರೀಯ ಸಮಿತಿಯನ್ನು(NCIVE) ರಚಿಸುವುದು. ವೃತ್ತಿಪರ ಶಿಕ್ಷಣದ ಪರಿಣಿತರು ಮತ್ತು ಎಲ್ಲ ಮಂತ್ರಾಲಯಗಳ ಪ್ರತಿನಿಧಿಗಳು, ಕೈಗಾರಿಕೆಗಳ ಸಹಯೋಗದೊಂದಿಗೆ, ಈ ಸಮಿತಿಯನ್ನು ನಿಭಾಯಿಸಲಾಗುವುದು.

**16.7.** ಈಗಾಗಲೇ ಈ ರೀತಿಯಲ್ಲಿ ಶಿಕ್ಷಣ ಪದ್ಧತಿಯನ್ನು ಅಳವಡಿಸಿಕೊಂಡಿರುವ ವ್ಯಕ್ತಿಗಳು/ ಸಂಸ್ಥೆಗಳು ಇದೀಗ ಆವಿಷ್ಕಾರದಲ್ಲಿ ತೊಡಗಿ ನವನವೀನ ಮಾದರಿಗಳನ್ನು ಹಾಗೂ ಅನುಷ್ಠಾನದ ಮೂಲಕ ಬಳಕೆಗೊಳ್ಳುವುದನ್ನು ರೂಪಿಸುವಲ್ಲಿ ತೊಡಗಿಕೊಂಡು, ಅದನ್ನು ಈ ಎನ್ ಸಿ ಆಯ್ ವಿ ಈ ಯ ಪ್ರಕಾರವಾಗಿ ಸ್ಥಾಪಿಸಲ್ಪಟ್ಟಿರುವ ವ್ಯವಸ್ಥೆಯ ಅಡಿಯಲ್ಲಿ ಕಾರ್ಯ ಮಾಡುತ್ತಿರುವ ಸಂಸ್ಥೆಗಳೊಡನೆ ಹಂಚಿಕೊಳ್ಳಬೇಕು. ಇದು ವೃತ್ತಿಪರ ಶಿಕ್ಷಣದ ಗುರಿಯನ್ನು ತಲುಪಲು ಸಾಧ್ಯವಾಗುತ್ತದೆ. ವೃತ್ತಿಪರ ಶಿಕ್ಷಣದ ವಿವಿಧ ಮಾದರಿಗಳು ಹಾಗೂ ಪ್ರಶಿಕ್ಷಣ ಹಂತದ ಅನುಭವಗಳೂ ಸಹಿತ ಈ ಉಚ್ಚ ಶಿಕ್ಷಣದ ಸಂಸ್ಥೆಗಳಿಂದ ರೂಪುಗೊಳ್ಳಬಹುದಾಗಿದೆ. ಉಚ್ಚ ಶಿಕ್ಷಣ ಸಂಸ್ಥೆಗಳು ಕೈಗಾರಿಕೆಗಳ ಪಾಲುದಾರಿಕೆಯ ಜೊತೆಗೆ "ಪೋಷಣಾ ಕೇಂದ್ರ"(incubation centre) ಗಳನ್ನು ಸ್ಥಾಪಿಸಬಹುದಾಗಿದೆ.

**16.8.** ವೃತ್ತಿ ಹಾಗೂ ವೃತ್ತಿಪರಿಣಿತಿಯ ಪ್ರತಿಯೊಂದು ವಿಭಾಗಕ್ಕೂ ಒಂದು ರಾಷ್ಟ್ರೀಯ ಕೌಶಲ್ಯಾರ್ಹತೆಗಳ ರೂಪುರೇಷೆಯನ್ನು ವಿವರವಾಗಿಯೇ ರೂಪಿಸಲಾಗುವುದು. ಮತ್ತೂ ಮುಂದೆ, ಇದು 'ಅಂತಾರಾಷ್ಟ್ರೀಯ ಶ್ರಮ ಸಂಸ್ಥೆ (ಐಎಲ್ಓ) ಯ ಅಂತಾರಾಷ್ಟ್ರೀಯ ವೃತ್ತಿಪರ ವರ್ಗೀಕರಣದ ವಿನ್ಯಾಸದ ಮಾನಕಗಳಲ್ಲಿಯೇ ಇದ್ದು, ಮತ್ತೆ ಇಲ್ಲಿ ಭಾರತೀಯ ಮಾನಕಗಳನ್ನು ಸಂಯೋಜಿಸಲಾಗುವುದು. ಈ ರೂಪು ರೇಷೆಯು ಅಧಿಕೃತಗೊಂಡು ಪೂರ್ವ ಅಧ್ಯಯನದ ಆಧಾರದಲ್ಲಿಯೇ ಈ ಶಿಕ್ಷಣ ವ್ಯವಸ್ಥೆ ಇರುವಂತೆ ರೂಪಿತವಾಗುತ್ತದೆ. ಇವೆಲ್ಲವುಗಳ ಮೂಲಕ, ಶಾಲಾ ಅವಧಿಯಲ್ಲಿಯೇ ಶಿಕ್ಷಣವನ್ನು ಮಧ್ಯದಲ್ಲಿ ಬಿಟ್ಟುಬಿಡುವ ಕ್ರಿಯೆಗಳನ್ನು ನಿಯಂತ್ರಣಕ್ಕೆ ತರಬಹುದು. ಇಲ್ಲಿ ಪುನರ್ ಸಂಯೋಗದೊಡನೆ ಪುನರ್ ಸಮಗ್ರೀಕರಣಗೊಳಿಸಿರುವ ಪ್ರಾಯೋಗಿಕ ಅನುಭವವನ್ನು ಈ ಆರೂ ಹಂತದಲ್ಲಿ ಇರುವಂತೆ ರೂಪಿಸಲಾಗುವುದು. ಶ್ರೇಯಾಂಕ ಆಧಾರಿತ ಪದ್ದತಿಯೂ ಸಹಿತ ಸಾಮಾನ್ಯ ಶಿಕ್ಷಣಕ್ಕೆ ಇದ್ದಂತೆ, ಇಲ್ಲಿಯೂ ಅಳವಡಿಸಿ ವೃತ್ತಿಪರ ಶಿಕ್ಷಣದಲ್ಲಿ ಚಲನಶೀಲತೆಯನ್ನು ಸ್ಥಾಪಿಸಲಾಗುತ್ತದೆ.

## 17. ನೂತನ ರಾಷ್ಟ್ರೀಯ ಸಂಶೋಧನಾ ಸಂಸ್ಥೆಯ ಸ್ಥಾಪನೆ. ಶೈಕ್ಷಣಿಕ ಗುಣಾತ್ಮಕ ಸಂಶೋಧನೆಗಳ ವೇಗವರ್ಧನೆ

**17.1.** ಜ್ಞಾನ ಸೃಷ್ಟಿ ಮತ್ತು ಸಂಶೋಧನೆ ಎನ್ನುವ ವಿಷಯಗಳು – ಅಭಿವೃದ್ಧಿಶೀಲ ಹಾಗೂ ಸುಸ್ಥಿರತೆಯನ್ನು ಸಾಧಿಸುತ್ತಿರುವ ಬೃಹತ್ ಹಾಗೂ ತೀವ್ರ ಸ್ಪಂದನಶೀಲತೆಯನ್ನು ಹೊಂದಿರುವ ಆರ್ಥಿಕ ವ್ಯವಸ್ಥೆಗಳಲ್ಲಿ, ಸಮಾಜವನ್ನು ಸುಧಾರಣೆಯತ್ತ ಒಯ್ಯುವಲ್ಲಿ ಮತ್ತು ರಾಷ್ಟ್ರವನ್ನು ಸದಾ ಸ್ಫೂರ್ತಿಗೊಳಿಸುತ್ತಾ ಉನ್ನತ ಗುರಿಯನ್ನು ತಲುಪುವಂತೆ ಮಾಡುವಲ್ಲಿ ಸದಾ ಮಹತ್ವ ಹೊಂದಿರುತ್ತದೆ.ಕೆಲವು ಸಮೃದ್ಧ, ಪ್ರಸಿದ್ಧ ನಾಗರಿಕತೆಗಳಾಗಿರುವ (ಭಾರತ. ಮೆಸೊಪೋಟೊಮಿಯಾ, ಈಜಿಪ್ತ, ಮತ್ತು ಗ್ರೀಸ್)ಗಳಾಗಿದ್ದರೆ, ಈ ಯುಗದ ಅವಧಿಯಲ್ಲಿ ಅಮೇರಿಕಾ, ಜರ್ಮನಿ, ಇಸ್ರೇಲ್, ದಕ್ಷಿಣ ಕೊರಿಯಾ ಮತ್ತು ಜಪಾನಗಳೆಲ್ಲವೂ ಸಮರ್ಥವಾಗಿಯೇ ಇದ್ದು, ಅಲ್ಲಿ ಸಾಮರ್ಥ್ಯಶೀಲ ಜ್ಞಾನಸಮೃದ್ಧ ಸಾಮಾಜಿಕ ವ್ಯವಸ್ಥೆಗಳಿವೆ. ಇವು ಬೌದ್ಧಿಕವಾಗಿ ಹಾಗೂ ಭೌತಿಕ ಸಂಪತ್ತಿನಲ್ಲಿಯೂ ಸಹಿತ ಅಪಾರ ಪ್ರಮಾಣದಲ್ಲಿಯೇ ಇರುತ್ತವೆ. ಜೊತೆಗೆ ಈ ಮೂಲಕವೇ ಮೂಲಭೂತ ಅನುಭವಗಳ ಕೊಡುಗೆಗಳನ್ನು ನವೀನ–ಜ್ಞಾನದ ಅಧ್ಯಯನಕ್ಕೂ ಒದಗಿಸುತ್ತಾ, ಅದೂ ವಿಜ್ಞಾನದ ವಿಷಯದಲ್ಲಂತೂ ಜೊತೆ ಜೊತೆಗೇ ಎಲ್ಲ ವಿಭಾಗಗಳಲ್ಲಿಯೂ ಸಹಿತ, ಭಾಷೆ ಮತ್ತು ಸಂಸ್ಕೃತಿಯಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿಕೊಂಡಿರುವದಲ್ಲದೇ, ಅದೂ ಕೇವಲ ತಮ್ಮ ನಾಗರೀಕತೆಗೆ ಮಾತ್ರ ಸೀಮಿತವಾಗದಂತೆ ಈ ಭೂಮಿಯ ಎಲ್ಲೆಡೆಯಲ್ಲಿಯೂ ಲಭ್ಯವಾಗುವಂತೆಯೇ ರೂಪಿಸಿಕೊಂಡಿದ್ದಾರೆ.

**17.2.** ಸಂಶೋಧನೆಗೆ ಒಂದು ಸದೃಢವಾದ ವಾತಾವರಣವಿರಬೇಕಾದುದು ಬಹುತೇಕವಾಗಿ ಅತ್ಯಂತ ಮುಖ್ಯವಾದ ಅಂಶವಾಗಿದೆ. ಇದು ಜಗತ್ತಿನಾದ್ಯಂತವೂ ಘಟಿಸುತ್ತಿರುವ ತೀವ್ರ ತರಹದ ಪರಿವರ್ತನೆಗಳನ್ನು ಎದುರಿಸುವುದಕ್ಕಿಂತ, ಅದರಲ್ಲೂ ಪರಿಸರದ ವಿಷಯದಲ್ಲಂತೂ ತೀವ್ರಾತಿತೀವ್ರ ಪರಿವರ್ತನೆ, ಜನಸಂಖ್ಯಾ ಗತಿ–ವಿಜ್ಞಾನ ಮತ್ತು ನಿರ್ವಹಣೆ, ಜೈವಿಕ ತಂತ್ರಜ್ಞಾನ, ವಿಸ್ತಾರಗೊಳ್ಳುತ್ತಿರುವ ಡಿಜಿಟಲ್ ಮಾರುಕಟ್ಟೆಯ ವ್ಯಾಪಕತೆ ಮತ್ತು ಕೃತಕ ಬುದ್ಧಿಮತ್ತೆ, ಯಾಂತ್ರೀಕೃತ ವ್ಯವಸ್ಥೆಯ ಅಧ್ಯಯನ ವಿನ್ಯಾಸಗಳೆಲ್ಲವೂ ಇಲ್ಲಿ ಮುಖ್ಯವಾಗಿವೆ. ಒಂದು ವೇಳೆ ಭಾರತವು ಈ ವಿಭಿನ್ನ–ಅಸದೃಶ ವಿಷಯಗಳಲ್ಲಿ ಮಾರ್ಗದರ್ಶಿಯಾಗ ಬಯಸಿದಲ್ಲಿ ಹಾಗೂ ತಾನು ಹೊಂದಿರುವ ಸಾಮರ್ಥ್ಯಶೀಲತೆಯನ್ನು ಹಾಗೂ ಅದರ ಅಪಾರ ವ್ಯಾಪ್ತಿಯನ್ನು ನಿಜವಾಗಿಯೂ ಜ್ಞಾನದ ವಿಷಯದಲ್ಲಿ ಅಗ್ರಪಂಕ್ತಿಯಲ್ಲಿಯೇ ಇರುವಂತೆ ಸಾಧಿಸಿದಲ್ಲಿ, ಈ ಸಂಶೋಧನಾ ಸಾಧ್ಯತೆಗಳನ್ನು ವಿಸ್ತೃತಗೊಳಿಸುವ ಹಾಗೂ ಎಲ್ಲಾ ವಿಷಯಗಳಲ್ಲಿಯೂ ಫಲಿತಾಂಶಗಳನ್ನು ಕಾಣಲು ಸಾಧ್ಯವಾಗುತ್ತದೆ. ಈ ಸಂಶೋಧನಾ ರಂಗದಲ್ಲಿ ಸಂಕೀರ್ಣತೆಯು ಮೊದಲಿನಿಂದಲೂ ಅತ್ಯಧಿಕವಾಗಿಯೇ ಇದೆ. ಅದು ಆರ್ಥಿಕವಾಗಿ, ಬೌದ್ಧಿಕವಾಗಿ, ಸಾಮಾಜಿಕವಾಗಿ, ಪರಿಸರದ ವಿಷಯವಾಗಿ ಮತ್ತು ತಂತ್ರಜ್ಞಾನದ ಸುವ್ಯವಸ್ಥೆ ಹಾಗೂ ರಾಷ್ಟ್ರದಲ್ಲಿ ಅದರ ಪ್ರಗತಿಯ ವಿಷಯದಲ್ಲಂತೂ ಅತೀ ಪ್ರಮುಖ ಪಾತ್ರ ವಹಿಸಿದೆ.

**17.3.** ಅತಿ ಪ್ರಾಮುಖ್ಯತೆಯ ಹೊರತಾಗಿಯೂ ಭಾರತದಲ್ಲಿ ಸಂಶೋಧನೆ ಹಾಗೂ ಆವಿಷ್ಕಾರಗಳ ಸಲುವಾಗಿ ಹೂಡಿಕೆಯಾಗುತ್ತಿರುವುದು ಒಟ್ಟು ದೇಶೀಯ ಉತ್ಪನ್ನದ ಶೇಕಡಾ 0.69 ಮಾತ್ರ (0.69%). ಇದು ಅಮೇರಿಕಾದಲ್ಲಿ 2.8% ಇದೆ. ಇಸ್ರೇಲ್‌ನಲ್ಲಿ 4.3% ಇದೆ. ದಕ್ಷಿಣ ಕೋರಿಯಾದಲ್ಲಿ 4.2% ಇದೆ.

**17.4.** ಸಾಮಾಜಿಕ ಸವಾಲುಗಳ ವಿಷಯದಲ್ಲಿ, ಭಾರತವು ಸದ್ಯ ಲಕ್ಷ್ಯ ವಹಿಸಲೇಬೇಕಾಗಿದೆ. ಅದರಲ್ಲೂ ಎಲ್ಲರಿಗೂ ಕುಡಿಯಲು ನೀರು, ಸ್ವಚ್ಛತೆ, ಗುಣಾತ್ಮಕ ಶಿಕ್ಷಣ ಹಾಗೂ ಆರೋಗ್ಯ ಸುರಕ್ಷೆ, ಸುಧಾರಿತ ಸಾರಿಗೆ ವ್ಯವಸ್ಥೆ, ಪರಿಶುದ್ಧ ಹವೆ, ವಿದ್ಯುತ್ ಮತ್ತು ಮೂಲ ಭೂತಸೌಲಭ್ಯಗಳನ್ನು ಒದಗಿಸುವ ವಿಷಯಗಳಲ್ಲಿ ಹೆಚ್ಚಿನ ಲಕ್ಷ್ಯ ಕೊಡಬೇಕಿದೆ. ಇದು ಕೇವಲ ಗೋಪುರ ತುದಿಯಲ್ಲಿರುವ ವಿಜ್ಞಾನದ ವಲಯಗಳಿಗಿಂತ ಮತ್ತು ತಂತ್ರಜ್ಞಾನದ ವಲಯಗಳಿಂದ ಹೇಳಲ್ಪಡುವ ರೀತಿಯಲ್ಲಿಯೇ ಪರಿಹಾರಗಳನ್ನು ರೂಪಿಸುವುದರ ಬದಲು ಸಾಮಾಜಿಕ ವಿಜ್ಞಾನಗಳ ಮೂಲ ವಿಷಯಗಳನ್ನು ಆಧರಿಸಿ ಮತ್ತು ಮಾನವಿಕಗಳನ್ನು ಗೌರವಿಸಿ, ಜೊತೆಗೆ ಸಹಜವಾಗಿಯೇ ಇರುವ ಸಾಮಾಜಿಕ–ಸಾಂಸ್ಕೃತಿಕ ವೈವಿಧ್ಯತೆಯನ್ನು ಮತ್ತು ವಾತಾವರಣದ ಆಯಾಮದಲ್ಲಿ ರಾಷ್ಟ್ರವನ್ನು ಗಮನಿಸಿ, ರೂಪಣೆಗೊಂಡಂತೆ ಇರಬೇಕು. ಈ ಗಂಭೀರ ಸವಾಲುಗಳನ್ನು ಎದುರಿಸಲು, ಮತ್ತು ಅವುಗಳಿಗೆ ಪರಿಹಾರಗಳನ್ನು ಪಡೆಯಲು ಉನ್ನತ ಗುಣಾತ್ಮಕವಾಗಿರುವ ವಿಷಯಗಳ ಪರಸ್ಪರ ಸಂಬಂಧದ ಅಂತರ್ ಶಿಸ್ತೀಯ ಸಂಶೋಧನೆಗಳ ಮೂಲಕ ಎಲ್ಲಾ ವಲಯಗಳಲ್ಲಿಯೂ ಖಚಿತವಾಗಿಯೇ ಭಾರತದಲ್ಲಿಯೇ ಪರಿಹಾರ ಕಂಡುಕೊಳ್ಳಬೇಕೇ ಹೊರತು ಇದನ್ನು ಯಾವುದೇ ಕಾರಣಕ್ಕೂ ಆಮದು ಮಾಡಿಕೊಳ್ಳುವಂತಿಲ್ಲ. ತನ್ನನ್ನು ತಾನೇ ಸಂಶೋಧನೆಗೆ ಒಳಪಡಿಸಿಕೊಳ್ಳುವ ಸಾಮರ್ಥ್ಯವು ರಾಷ್ಟ್ರವನ್ನೂ ಸಹಿತ ಸಮರ್ಥಶೀಲವನ್ನಾಗಿಸುತ್ತದೆ. ಜೊತೆಗೆ ಸಂಬಂಧಿತ ಪ್ರಚಲಿತ ಸಂಶೋಧನೆಗಳನ್ನು ವಿದೇಶದಿಂದ ಆಮದು ಮಾಡಿಕೊಳ್ಳುವದನ್ನೂ ತಡೆಯುತ್ತದೆ.

**17.5.** ಇವೆಲ್ಲದರ ಜೊತೆಗೆ ಮತ್ತೆ, ಸಾಮಾಜಿಕ–ಸಮಸ್ಯೆಗಳ ಪರಿಹಾರಗಳನ್ನು ಅವುಗಳನ್ನು ಮೌಲ್ಯಾಂಕನಗೊಳಿಸುವಲ್ಲಿ, ಯಾವುದೇ ದೇಶದ ಅಸ್ಮಿತೆ, ಪುನರುದ್ಧಾರದ ಪ್ರಯತ್ನವಾಗುವಂತೆ. ಆಧ್ಯಾತ್ಮಿಕ/ಬೌದ್ಧಿಕವಾಗಿ ತೃಪ್ತಿದಾಯಕವಾಗಿರುವ ಹಾಗೂ ಸೃಜನಾತ್ಮಕವಾಗಿರುವದೂ ಸಹಿತ, ಅದರಲ್ಲೂ ಆಯಾ ದೇಶದ ಇತಿಹಾಸ, ಕಲೆ, ಭಾಷೆ, ಸಂಸ್ಕೃತಿಯ ಪಥದಲ್ಲಿಯೇ ಸಾಧಿಸಲ್ಪಡಬೇಕಾಗುತ್ತದೆ. ಕಲಾ ವಿಷಯಗಳಲ್ಲಿ ಮತ್ತು ಮಾನವಿಕಗಳಲ್ಲಿ ಸಂಶೋಧನೆಯು, ಅದೇ ರೀತಿಯಲ್ಲಿ ವಿಜ್ಞಾನ ಮತ್ತು ಸಮಾಜ ವಿಜ್ಞಾನದ ವಿಷಯಗಳಲ್ಲಿನ ಆವಿಷ್ಕಾರಗಳು ಇಲ್ಲಿ, ಪ್ರಗತಿಯನ್ನು ಸಾಧಿಸುವಲ್ಲಿ ಹಾಗೂ ರಾಷ್ಟ್ರದ ಅಸ್ಮಿತೆಯನ್ನು ಪ್ರಕಾಶಮಾನಗೊಳಿಸುವದರಲ್ಲಿ ಅತೀ ಮುಖ್ಯವಾಗಿರುವ ಅಂಶಗಳಾಗಿವೆ.

**17.6.** ಸದ್ಯ ಭಾರತದಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿರುವ ಸಂಶೋಧನೆ ಮತ್ತು ಆವಿಷ್ಕಾರಗಳಲ್ಲಿ, ಅದರಲ್ಲೂ ಉಚ್ಚ ಶಿಕ್ಷಣ ಸಂಸ್ಥೆಗಳಲ್ಲಿ ನಡೆಯುವ ಈ ಸಂಶೋಧನೆ ಮತ್ತು ಆವಿಷ್ಕಾರಗಳಂತೂ ಬಹಳ ಸಂಕೀರ್ಣತೆಯಿಂದ ಕೂಡಿವೆ. ಜಗತ್ತಿನಾದ್ಯಂತ ಅತ್ಯುತ್ತಮ ವಿಶ್ವವಿದ್ಯಾಲಯಗಳೆಂದು ಕರೆಯಲಾಗುತ್ತಿರುವಲ್ಲಿಯೂ ಸಹಿತ, ಇತಿಹಾಸದುದ್ದಕ್ಕೂ ತೋರಿ ಬರುತ್ತಿರುದೇನೆಂದರೆ, – ಅತ್ಯುತ್ತಮ ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಗಳು, ಅದರಲ್ಲೂ ಉಚ್ಚ ಶಿಕ್ಷಣ ಸಂಸ್ಥೆಗಳ ವಲಯಗಳಲ್ಲಿ, ಘಟಿಸುತ್ತಿರುವ ವಾತಾವರಣದಲ್ಲಿ, ಒಂದು ಸಾಮರ್ಥ್ಯಪೂರ್ಣ ಸಂಶೋಧನಾ ಸಂಸ್ಕೃತಿಯೂ, ಜ್ಞಾನಸೃಷ್ಟಿಯೂ ಸಾಧ್ಯವಾಗುತ್ತಿದೆ. ಇದಕ್ಕೆ ವಿರುದ್ಧವಾಗಿ ಶ್ರೇಷ್ಠ ಸಂಶೋಧನೆಗಳೂ ಜಗತ್ತಿನಾದ್ಯಂತ ಕೇವಲ ಬಹುಶಿಸ್ತೀಯ ವ್ಯವಸ್ಥೆ ಹೊಂದಿದ ವಿಶ್ವವಿದ್ಯಾಲಯಗಳಲ್ಲಿಯೇ ರೂಪುಗೊಳ್ಳುತ್ತಿವೆ ಎನ್ನುವುದನ್ನೂ ತೋರಿಸುತ್ತಿವೆ.

**17.7.** ಜ್ಞಾನ ಸೃಷ್ಟಿ ಹಾಗೂ ಸಂಶೋಧನಾ ವಿಷಯದಲ್ಲಿ ಭಾರತವು ದೀರ್ಘಕಾಲೀನ ಪರಂಪರೆಯನ್ನು ಹೊಂದಿದೆ. ಅದರಲ್ಲೂ ವಿಷಯ/ವಲಯಗಳ ಆಧಾರದಲ್ಲಿ –ವಿಜ್ಞಾನ ಮತ್ತು ಗಣಿತ ಶಾಸ್ತ್ರಗಳಿಂದ ಪ್ರಾರಂಭಗೊಂಡು, ಕಲೆ ಮತ್ತು ಸಾಹಿತ್ಯ , ಅದರ ಮೂಲಕ ಧ್ವನ್ಯಾತ್ಮಕ/ ಭಾಷಾ ಶಾಸ್ತ್ರದಿಂದ, ಮತ್ತೆ ಔಷಧಿ ತಯಾರಿಕೆ ವಿಷಯಗಳು ಹಾಗೂ ಕೃಷಿಗೆ ಸಂಬಂಧಿತ ವಿಷಯಗಳಲ್ಲಿಯೂ ಸಹಿತ ಈ ರೀತಿಯ ವಾತಾವರಣವಿದ್ದ ವಿಷಯವಿದೆ. ಇದು ಮತ್ತೂ ಮುಂದೆ ಸಾಗಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವಲ್ಲಿ ಜೊತೆಗೆ 21 ನೇ ಶತಮಾನದಲ್ಲಿ ಭಾರತವು ಒಂದು ಜ್ಞಾನಸಮೃದ್ಧ ಸಮಾಜ ಹಾಗೂ ಜಾಗೃತಗೊಂಡ ಸಮಾಜದ ಮೂಲಕ ಜಗತ್ತಿನ ಪ್ರಮುಖ ಮೂರು ಬೃಹತ್ ಆರ್ಥಿಕ ವಲಯಗಳಲ್ಲಿಯೇ ಮುಂಚೂಣಿಯಲ್ಲಿ ಇರುವಂತೆ ಈ ಸಂಶೋಧನೆ ಮತ್ತು ಆವಿಷ್ಕಾರಗಳು ರೂಪಿತಗೊಳ್ಳಬೇಕಾಗಿದೆ.

**17.8.** ಈ ರೀತಿಯಲ್ಲಿ "ಈ ಶಿಕ್ಷಣ ನೀತಿಯು" ವ್ಯಾಪಕಾರ್ಥವನ್ನು ಒಳಗೊಂಡಿರುವಂತೆ ರೂಪಾಂತರಣದ ದೃಷ್ಟಿಕೋನವನ್ನು ಪರಿಕಲ್ಪಿಸಿಕೊಂಡು, ಭಾರತದಲ್ಲಿ ಗುಣಾತ್ಮಕ ಹಾಗೂ ಹೆಚ್ಚಿನ ಪ್ರಮಾಣದ ಸಂಶೋಧನೆಗಳನ್ನು ಕೈಕೊಳ್ಳಲು ಅವಕಾಶವೀಯುತ್ತಿದೆ. ಇದು ಖಚಿತವಾಗಿಯೂ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಹೊಸ ಆಯಾಮವನ್ನೇ ರೂಪಿಸಿ, ಕ್ರೀಡೆಗಳ ಮೂಲಕ ಹಾಗೂ ಶೋಧನಾತ್ಮಕತೆಯನ್ನು ಆಧರಿಸಿದ ವಿನ್ಯಾಸದ ಕಲಿಕಾ ಮಾದರಿಗೆ ಸಾಗುತ್ತದೆ.ವೈಜ್ಞಾನಿಕ ಹಾಗೂ ವಿಮರ್ಶಾತ್ಮಕವಾದ ಚಿಂತನಾ ವಿಧಾನದಲ್ಲಿಯೇ ಕಲಿಕೆ ಇರುವಂತೆ ಹೆಚ್ಚು ಮಹತ್ವ ಕೊಡುವದರ ಮೂಲಕ ಉನ್ನತೀಕರಣಗೊಳಸಿಲಾಗುತ್ತಿದೆ. ಇಲ್ಲಿ ಉದ್ಯೋಗಾವಕಾಶಗಳ ವಿಷಯವೂ ಒಳಗೊಂಡಿರುತ್ತದೆ. ಅದು ವಿದ್ಯಾರ್ಥಿಯ ಆಸಕ್ತಿಗಳು ಮತ್ತು ಪ್ರತಿಭಾ ಸಾಮರ್ಥ್ಯಗಳನ್ನು ಗುರುತಿಸುವದರ ಮೂಲಕ ಸಾಧ್ಯವಾಗುತ್ತದೆ. ವಿಶ್ವವಿದ್ಯಾಲಯಗಳಲ್ಲಿ ಈ ಮೂಲಕ ಸಂಶೋಧನೆಗಳನ್ನು ಉತ್ತೇಜಿಸುವ ಮೂಲಕ, ಉಚ್ಚ ಶಿಕ್ಷಣ ಸಂಸ್ಥೆಗಳು ಬಹುಶಿಸ್ತೀಯ ವ್ಯವಸ್ಥೆಯ ಲಭ್ಯತೆಯ ಸಹಜ ವಾತಾವರಣದ ಮೂಲಕ ಮತ್ತು ಸಮಗ್ರವಾಗಿರುವ ಶಿಕ್ಷಣವನ್ನು ಲಭ್ಯವಾಗಿಸುವ ಕಡೆಗೆ ಹೆಚ್ಚಿನ ಗಮನ ಕೊಡಬೇಕಿದೆ. ಅದೇ ರೀತಿಯಲ್ಲಿ ಪದವಿ–ಪೂರ್ವ ವಲಯದಲ್ಲೂ ಸಹಿತ ಈ ರೀತಿಯ ಶೋಧನಾಧಾರಿತ ಸಂಗತಿಗಳನ್ನು ಅಳವಡಿಸುವ ಮೂಲಕ ಮತ್ತು ಪ್ರಶಿಕ್ಷಣದ ಅವಕಾಶವನ್ನು ಒದಗಿಸುವ ಮೂಲಕ, ಈ ಪದವಿ–ಪೂರ್ವ ಅವಧಿಯ ಪಠ್ಯಕ್ರಮದಲ್ಲಿಯೇ ಅದನ್ನು ಅಳವಡಿಸುವ ಮೂಲಕ ಹಾಗೂ ಸಮರ್ಥ ಬೋಧಕರ ವೃತ್ತಿ ನಿರ್ವಹಣಾ ನೀತಿಗಳನ್ನು ನಿಬಂಧನಾತ್ಮಕವಾಗಿಸುತ್ತ, ಪರಿಚಾಲನಗೊಳಿಸಿ, ಆ ಮೂಲಕ ಈ ಆವಿಷ್ಕಾರಗಳಿಗೆ ಹಾಗೂ ಸಂಶೋಧನೆಗಳಿಗೆ ಅರ್ಹ ಗುರುತ್ವವನ್ನು ರೂಪಿಸಲು ಸಹಕಾರಿಯಾಗುತ್ತದೆ ಹಾಗೂ ಇಂತಹ ವಾತಾವರಣವನ್ನು ರೂಪಿಸುತ್ತದೆ. ಈ ಎಲ್ಲ ಸಂಗತಿಗಳೂ ಸಹಿತ, ಒಂದು ದೇಶದಲ್ಲಿ ಈ ರೀತಿಯ ಸಂಶೋಧನಾ ಮನೋವೃತ್ತಿಯನ್ನು ಬೆಳೆಸುವಲ್ಲಿ ಇರುವ ಮಹತ್ವದ ವಿಷಯಗಳೂ ಆಗಿವೆ.

**17.9.** ಈ ಎಲ್ಲ ಅಂಶಗಳನ್ನೂ ಒಗ್ಗೂಡಿಸುವಲ್ಲಿ–ಸಂಯೋಗಗೊಳಿಸುವಲ್ಲಿ, ಮತ್ತು ಅಲ್ಲಿ ನೈಜ ಪ್ರಗತಿಯನ್ನು ಮತ್ತು ದೇಶದಲ್ಲಿ ಗುಣಾತ್ಮಕವಾಗಿರುವ ಸಂಶೋಧನೆಗಳ ವೇಗವರ್ಧನೆಗೊಳಿಸುವಲ್ಲಿ, "ಈ ನೀತಿಯು" ಒಂದು "ರಾಷ್ಟ್ರೀಯ ಸಂಶೋಧನಾ ಸಂಸ್ಥೆ (NRF)" ಯನ್ನು ಸ್ಥಾಪಿಸಲು ಪರಿಕಲ್ಪನೆಗಳನ್ನು ಹೊಂದಿರುತ್ತದೆ. ಈ "ಎನ್ ಅರ್ ಎಫ್" ಕೂಡ ಈ ರೀತಿಯ ವ್ಯಾಪಕವಾಗಿಯೇ ಆವೃತಗೊಳ್ಳುವ ಈ ಗುರಿಯು ನಮ್ಮ ವಿಶ್ವವಿದ್ಯಾಲಯಗಳನ್ನೂ ಸಹಿತ ತನ್ನಲ್ಲಿ ಅಂತರ್ಗತಗೊಳಿಸಿಕೊಂಡಿರುವಂತೆ ಇದೆ. ಅದು ಸಂಶೋಧನಾ ಪ್ರವೃತ್ತಿಯನ್ನು/ಸಂಸ್ಕೃತಿಯನ್ನು ರೂಪುಗೊಳಿಸುವಲ್ಲಿ ಸಮರ್ಥಕವಾಗಿರುವದು. ಅದರಲ್ಲೂ ವಿಶೇಷವಾಗಿ ಎನ್ ಆರ್ ಎಫ್ ಇದಕ್ಕೆ ವಿಶ್ವಾಸಾರ್ಹವಾದ ಆಧಾರವನ್ನು ಅರ್ಹತೆಯನ್ನು ಆಧರಿಸಿಯೇ ಒದಗಿಸುತ್ತದೆ. ಆದರೆ ಇದು ಸಹಕರ್ಮಿ–ಪರಿವೀಕ್ಷಣೆಯಲ್ಲಿ ಸಂಶೋಧನಾ ನಿಧಿಗಳನ್ನು ಒದಗಿಸುವುದು. ಈ ಮೂಲಕ ದೇಶದಲ್ಲಿ ಒಂದು ಸಂಶೋಧನಾ ಸಂಸ್ಕೃತಿಯು ಪ್ರಗತಿ ಹೊಂದುವದಕ್ಕೆ ಸಹಾಯ ದೊರೆಯುತ್ತದೆ. ಅದಕ್ಕಾಗಿ ಸೂಕ್ತವಾಗಿರುವ, ಅರ್ಹ–ಪ್ರೋತ್ಸಾಹನಾ ಸೌಲಭ್ಯಗಳನ್ನು ಅಪೂರ್ವವಾಗಿರುವ ಸಂಶೋಧನೆಗಳಿಗೆ ಒದಗಿಸುವುದು. ಅದರ ಜೊತೆಗೆ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ– ಸದ್ಯದಲ್ಲಿ ಎಲ್ಲೆಲ್ಲಿ ಕಡಿಮೆ ಪ್ರಮಾಣದಲ್ಲಿ ಇದೆಯೋ ಅಲ್ಲೆಲ್ಲಾ ಈ ರೀತಿಯ ಸಂಶೋಧನಾ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಹೆಜ್ಜೆಗಳನ್ನು ಇಡುವುದು. ಎನ್ ಆರ್ ಎಫ್ ಎಲ್ಲ ವಿಷಯಗಳಿಗೂ ಪ್ರತಿಸ್ಪರ್ಧಾತ್ಮಕವಾಗಿರುವ ರೀತಿಯಲ್ಲಿಯೇ ಧನ ಸಹಾಯ ಒದಗಿಸುವುದು. ಯಶಸ್ವೀ ಸಂಶೋಧನೆಗಳನ್ನು ಅವುಗಳ ಪ್ರಸ್ತುತತೆಯಲ್ಲಿ ಸರಕಾರೀ ವ್ಯವಸ್ಥೆಯೊಂದಿಗೆ ಮತ್ತು ಸರಕಾರೀ ಏಜನ್ಸಿಗಳೊಂದಿಗೆ, ಹಾಗೂ ಕೈಗಾರಿಕಾ ವಲಯ, ಖಾಸಗೀ/ ಧಾರ್ಮಿಕ ಸೇವಾ ಸಂಸ್ಥೆಗಳ ಸಹವರ್ತಿ ಸಂಪರ್ಕದೊಡನೆ, ಅನುಷ್ಠಾನಿಸಲು ಇರುವ ಸಾಧ್ಯತೆಗಳನ್ನು ಗಮನಿಸಿ ಅಧಿಕೃತಗೊಳಿಸುವುದು.

**17.10.** ಸದ್ಯದಲ್ಲಿ ಸಂಶೋಧನೆಗಳಿಗೆ ಕೆಲವು ಹಂತದವರೆಗೆ ನಿಧಿಗಳನ್ನು ಒದಗಿಸುತ್ತಿರುವ –ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗಗಳು (DST), ಅಣುಶಕ್ತಿ ವಿಭಾಗ (DAE), ಜೈವಿಕ ತಂತ್ರಜ್ಞಾನ ವಿಭಾಗ (DBT), ಭಾರತೀಯ ಕೃಷಿ ಸಂಶೋಧನಾ ಮಂಡಳಿ(ICAR), ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ICMR), ಭಾರತೀಯ ಇತಿಹಾಸ ಸಂಶೋಧನಾ ಮಂಡಳಿ (ICHR) ಹಾಗೂ ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗ (UGC), ಇವುಗಳ ಜೊತೆಜೊತೆಗೆ

ಖಾಸಗೀ ಮತ್ತು ಲೋಕೋಪಕಾರೀ ಸಂಸ್ಥೆಗಳ ಮೂಲಕ ದೊರೆಯುತ್ತಿದೆ. ಇದನ್ನು ಮುಂದುವರೆಸಲಾಗುತ್ತದೆ. ಅವರವರ ಅವಶ್ಯಕತೆಗಳಿಗೆ ಹಾಗೂ ಆದ್ಯತೆಗೆ ಅನುಗುಣವಾಗಿ ನಿಧಿಗಳನ್ನು ಒದಗಿಸಲು ಅವಕಾಶವಿರುತ್ತದೆ.

ಆದಾಗ್ಯೂ. ಇಲ್ಲಿ ಎನ್ ಆರ್ ಎಫ್ – ಈ ರೀತಿಯ ನಿಧಿಗಳನ್ನು ಒದಗಿಸುತ್ತಿರುವ ಇತರ ಸಂಸ್ಥೆಗಳ ಜೊತೆಗೆ ಸಾವಧಾನದಲ್ಲಿಯೇ ಮತ್ತು ಸಮನ್ವಯತೆಯಲ್ಲಿಯೇ ಕಾರ್ಯ ನಿರ್ವಹಿಸುತ್ತದೆ. ಇದರ ಜೊತೆಗೆ ವಿಜ್ಞಾನ, ಇಂಜನೀಯರಿಂಗ್ ಮತ್ತು ಇತರ ಅಕಾಡೆಮಿಗಳ ಜೊತೆಗೆ ಕಾರ್ಯ ನಿರ್ವಹಿಸುವುದು. ಇಲ್ಲಿ ಉದ್ದೇಶವನ್ನು ಸಮನ್ವಯಗೊಳಿಸುವಲ್ಲಿ ಹಾಗೂ ನಕಲು ಅಥವಾ ಪುನರುಕ್ತಿಯಾಗಿರುವ ಪ್ರಯತ್ನಗಳನ್ನು ನಿಯಂತ್ರಿಸಲು ಕಾರ್ಯ ನಿರ್ವಹಿಸುತ್ತದೆ. ಈ ಎನ್ ಆರ್ ಎಫ್ ವ್ಯವಸ್ಥೆಯು ಸರಕಾರದಿಂದಲೇ ನೇರವಾಗಿ ಆಡಳಿತಕ್ಕೆ ಒಳಪಟ್ಟಿರುವದು.ಅದಕ್ಕಾಗಿ ಅಯಾ ವಿಷಯಗಳಲ್ಲಿ ಆವಿಷ್ಕಾರಗಳನ್ನು ಮಾಡಿರುವ ಹಾಗೂ ಅತ್ಯುತ್ತಮ ಸಂಶೋಧಕರನ್ನು ಒಳಗೊಂಡ ಒಂದು ನಿರ್ದೇಶಕರ ಮಂಡಳಿಯು ಇರುತ್ತದೆ. ಇದು ಆವರ್ತಿತ ಮಂಡಳಿಯ ರಚನೆಯಾಗಿರುತ್ತದೆ.

**17.11. ಈ ಎನ್ ಆರ್ ಎಫ್‌ನ ಪ್ರಮುಖ ಚಟುವಟಿಕೆಗಳು ಈ ರೀತಿಯಲ್ಲಿ ಇರುತ್ತವೆ;**

**ಅ)** ದೇಶದಾದ್ಯಂತ ಎಲ್ಲಾ ವಿಷಯಗಳಿಗೂ, ಸ್ಪರ್ಧಾತ್ಮಕವಾಗಿ ಹಾಗೂ ಸಹಕರ್ಮೀ–ಪರಿಶೀಲನೆಯಗೊಳಪಟ್ಟ ಅನುದಾನಗಳಿಗೆ ಬರುವ ಪ್ರಸ್ತಾವನೆಗಳಿಗೆ, ಸ್ಪರ್ಧಾತ್ಮಕವಾಗಿರುವಂತೆ ನಿಧಿಗಳನ್ನು ಒದಗಿಸುವುದು,

**ಆ)** ಅಕಾಡೆಮಿಕ್ ಸಂಸ್ಥೆಗಳಲ್ಲಿ ಸಂಶೋಧನೆಯನ್ನು ಪ್ರಾರಂಭಿಸಿ,ಪ್ರಗತಿಗೊಳಿಸಿ, ಅದಕ್ಕೆ ಅವಶ್ಯವಿರುವದನ್ನು ಒದಗಿಸುವದು. ಅದರಲ್ಲೂ ವಿಶೇಷವಾಗಿ ವಿಶ್ವವಿದ್ಯಾಲಯಗಳಲ್ಲಿ ಮತ್ತು ಮಹಾವಿದ್ಯಾಲಯಗಳಲ್ಲಿ– ಪ್ರಚಲಿತ ಅವಧಿಯಲ್ಲಿ ಎಲ್ಲೆಲ್ಲಿ ಈ ಸಂಶೋಧನಾ ಕಾರ್ಯವು ಇನ್ನೂ ಪ್ರಾರಂಭಿಕ ಹಂತದಲ್ಲಿದೆಯೋ, ಅಂತಹ ಸಂಸ್ಥೆಗಳಿಗೆ ಮಾರ್ಗದರ್ಶನವನ್ನು ಕೊಡುತ್ತಾ ನಿಭಾಯಿಸುವುದು,

**ಇ)** ಸಂಶೋಧನಾರ್ತಿಗಳ ಮತ್ತು ಸಂಬಂಧಪಟ್ಟ ವಿಭಾಗಗಳ ಹಾಗೂ ಕೈಗಾರಿಕೆಗಳ ಮಧ್ಯದಲ್ಲಿ 'ಸಂಪರ್ಕಾಧಿಕಾರಿಯಂತೆ' ಕಾರ್ಯ ನಿರ್ವಹಿಸುವದು. ಇದರಿಂದಾಗಿ, ರಾಷ್ಟ್ರವು ನಿರೀಕ್ಷಿಸುತ್ತಿರುವ ತುರ್ತು ಸಂಶೋಧನಾ ವಿಷಯಗಳ ಕುರಿತು ಸಂಶೋಧನಾರ್ತಿಗಳನ್ನು ಸದಾ ಜಾಗ್ರತಗೊಳಿಸಲು ಸಾಧ್ಯವಾಗುತ್ತದೆ. ಹೀಗಾಗಿ, ಈ ರೀತಿಯ ನೀತಿ ನಿರೂಪಕರು ಮಂಡಿಸಲ್ಪಡುತ್ತಿರುವ ನವನವೀನ ಸಂಶೋಧನೆಗಳ ಬಗೆಗೆ ಅರಿವು ಹೊಂದಿರಬೇಕಾಗುತ್ತದೆ. ಇದರಿಮದ ನೀತಿಯನ್ನು ನಿರೂಪಿಸಲೂ ಮತ್ತು ಭರವಸೆದಾಯಕವಾಗಿ ಅನುಷ್ಠಾನಗೊಳಿಸಲೂ ಸಾಧ್ಯವಾಗುತ್ತದೆ.

**ಈ)** ಅಪೂರ್ವ ಸಂಶೋಧನೆಗಳನ್ನು ಹಾಗೂ ಅವುಗಳ ಪ್ರಗತಿಯನ್ನು ಮಾನ್ಯತೆಗೊಳಿಸುವುದು.

## 18. ಉನ್ನತ ಶಿಕ್ಷಣದ ನಿಬಂಧನಾ ನೀತಿಯ ರೂಪಾಂತರಣ

**18.1.** ಕಳೆದ ದಶಕದಿಂದಲೂ ಈ ಉನ್ನತ ಶಿಕ್ಷಣದ ನಿಬಂಧನೆಗಳು ತುಂಬ ಜಡಗೊಂಡ ಸ್ಥಿತಿಯಲ್ಲಿಯೇ ಮುಂದುವರೆದುಕೊಂಡು ಬಂದಿವೆ. ಇವುಗಳನ್ನು ಸುಧಾರಿಸುವ ಅನೇಕಾನೇಕ ಪ್ರಯತ್ನಗಳೂ ನಡೆದಿವೆ, ನಡೆಯುತ್ತಿವೆ ಆದರೆ ಹೆಚ್ಚು ಫಲ ದೊರೆತಿಲ್ಲ. ಈ ನಿಬಂಧನಾ ನೀತಿಯ ಯಾಂತ್ರೀಕೃತ ವ್ಯವಸ್ಥೆಯ ಹಾಗೂ ನಿರುತ್ತೇಜಗೊಳಿಸುವಂತಹ ಸ್ವಭಾವದಿಂದಾಗಿ, ಮತ್ತು ಬಹುತೇಕವಾಗಿ ಪ್ರಚಂಡವಾಗಿರುವ ಮೂಲ ಸಮಸ್ಯೆಗಳಲ್ಲಿಯೇ ಸಿಲುಕಿದೆ. ಕೆಲವೇ ಕೆಲವು ವ್ಯಕ್ತಿಗಳಲ್ಲಿ ಅಧಿಕಾರವೂ ಹೆಚ್ಚು ಕೇಂದ್ರಿತವಾಗಿರುವುದು ಮತ್ತು ಮಂಡಳಿಗಳಲ್ಲಿ ಇರುವ ಸಂಘರ್ಷದಿಂದಾಗಲೀ, ಉತ್ತರದಾಯಿತ್ವದ ವಿಷಯದಲ್ಲಂತೂ ತೀರ ಹಿಂದೆ ಇದೆ. ಇವೆಲ್ಲ ಕಾರಣಗಳಿಂದಾಗಿ, ಈ ನಿಯಂತ್ರಣಾ–ನಿಬಂಧನೆಗಳ ನೀತಿಯನ್ನು ಆಮೂಲಾಗ್ರವಾಗಿ ಬದಲಿಸಬೇಕಾಗಿದೆ. ಅದನ್ನು – ಅದರಲ್ಲೂ ಈ ಉನ್ನತ ಶಿಕ್ಷಣ ವಲಯವನ್ನು ಪುನರ್–ಶಕ್ತಿಪೂರಣಗೊಳಿಸುವಲ್ಲಿ ಮತ್ತು ಸಮೃದ್ಧಗೊಳಿಸುವಲ್ಲಿ ಸಂಪೂರ್ಣವಾಗಿಯೇ ಪರಿಷ್ಕರಿಸಬೇಕಾಗಿದೆ.

**18.2.** ಈ ಮೇಲ್ಕಂಡ ವಿಷಯಗಳನ್ನು ವಿವರಿಸುವಲ್ಲಿ, ಈ ಉನ್ನತ ಶಿಕ್ಷಣದ ನಿಯಂತ್ರಣಾ ನೀತಿಯು, ನಿಬಂಧನೆಗಳ ಹಲವು ವಿನ್ಯಾಸದ ಕಾರ್ಯಗತಿಗಳನ್ನು ಹೊಂದಿದೆ. ಅವುಗಳಲ್ಲಿ ನಿಯಂತ್ರಣ, ಮಾನ್ಯತೆ ಒದಗಿಸುವದು, ಅನುದಾನ ಒದಗಿಸುವದು, ಶೈಕ್ಷಣಿಕ ಮಾನಕಗಳನ್ನು ನಿರ್ಧರಿಸುವುದು ಮತ್ತು ಅವುಗಳು ವಿಶಿಷ್ಟ ನೆಲೆಯಲ್ಲಿಯೇ ಅನುಷ್ಠಾನಗೊಳ್ಳುವಂತೆ, ಸ್ವತಂತ್ರವಾಗಿರುವಂತೆ, ಮತ್ತು ಇದಕ್ಕಾಗಿ ಮಂಡಳಿಗಳನ್ನು ಸಶಕ್ತಗೊಳಿಸುವ ಕ್ರಿಯೆಯನ್ನೂ ಒಳಗೊಂಡಿದೆ. ಇದು ನೀತಿಯ ಅನುಷ್ಠಾನದ ಪರಿವೀಕ್ಷಣೆಯ ಮೂಲಕ ಪರಿಶೀಲನೆ ಮಾಡಿ ಸಮನ್ವಯಗೊಳಿಸುವಲ್ಲಿ, ಸಂಘರ್ಷಗಳನ್ನು ಕಡಿಮೆ

ಮಾಡುವದರಲ್ಲಿ, ಮತ್ತು ಅಧಿಕಾರವು ಕೇಂದ್ರೀಕೃತಗೊಳ್ಳುವದನ್ನು ತೆಗೆದು ಹಾಕುವಲ್ಲಿ ಇದು ಅತ್ಯಾವಶ್ಯಕವಾಗಿರುವದನ್ನು ಪರಿಗಣಿಸಲಾಗುತ್ತದೆ. ಈ ನಾಲ್ಕೂ ಸಂಸ್ಥೆಗಳ ಸಂರಚನೆ ಹೊಂದಿರುವ ವ್ಯವಸ್ಥೆಯು ಮತ್ತು ಅವುಗಳು ನಿರ್ವಹಿಸುವ ಆ ನಾಲ್ಕು ಅವಶ್ಯಕ ಕ್ರಿಯಾಕಲಾಪಗಳ ಕಾರ್ಯಗಳನ್ನು ಸ್ವತಂತ್ರವಾಗಿಯೇ ನಿರ್ವಹಿಸುವವು. ಆದರೆ ಅದೇ ಸಮಯಕ್ಕೆ ಸಾಮಾನ್ಯವಾಗಿರುವ ಗುರಿಯನ್ನು ಸಾಧಿಸುವಲ್ಲಿಯೂ ಅದು ಸಮನ್ವಯತೆಯನ್ನು ಸಾಧಿಸಿಕೊಳ್ಳಬೇಕಾಗುತ್ತದೆ. ಈ ನಾಲ್ಕೂ ಸಂರಚನೆಗಳು ನೇರವಾಗಿಯೇ ನಾಲ್ಕು ಶೃಂಗಗಳಂತೆ ಇರುತ್ತವೆ. ಇವೆಲ್ಲವೂ ಭಾರತೀಯ ಉನ್ನತ ಶಿಕ್ಷಣ ಆಯೋಗವೆಂಬ ಒಂದೇ ರಕ್ಷಾಕವಚದ ಸಂಸ್ಥೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತವೆ.

**18.3.** ಭಾರತೀಯ ಉನ್ನತ ಶಿಕ್ಷಣ ಆಯೋಗದ ಪ್ರಥಮ ಶೃಂಗವಾಗಿ "ರಾಷ್ಟ್ರೀಯ ಉನ್ನತ ಶಿಕ್ಷಣ ನಿಯಂತ್ರಕ ಮಂಡಳಿ(NHERC) ಇರುತ್ತದೆ. ಇದು ಸಾಮಾನ್ಯವಾಗಿ ಉಚ್ಚ ಶಿಕ್ಷಣದ ಏಕವಿಷಯದ ನಿಬಂಧನಾ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಆದರೆ ವೈದ್ಯಕೀಯ ಮತ್ತು ಕಾನೂನು ಶಿಕ್ಷಣಗಳು ಇಲ್ಲಿ ಸೇರಿರುವುದಿಲ್ಲ. ಸದ್ಯದ ಸ್ಥಿತಿಯಲ್ಲಿ ಅಸ್ತಿತ್ವದಲ್ಲಿರುವ ಹಲವಾರು ನಿಯಂತ್ರಕ ಸಂಸ್ಥೆಗಳ ನಿರ್ಮಿತಿಗೊಳ್ಳುತ್ತಿರುವ ಪುನರಾವರ್ತನೆಗಳನ್ನು ಹಾಗೂ ಸಂಬಂಧಗಳ – ವಿಘಟನೆಯನ್ನು ತಡೆಯಲು ಸಾಧ್ಯವಾಗುತ್ತದೆ. ಇದು ಪುನರ್ವೀಕ್ಷಣೆಯ ಮೂಲಕ ಹಾಗೂ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ರದ್ದುಗೊಳಿಸುವ ಮೂಲಕ, ಮತ್ತು ಅಸ್ತಿತ್ವದಲ್ಲಿರುವ ನಿಬಂಧಕ ಮಂಡಳಿಯನ್ನು ಪುನರ್ ರೂಪಿಸುತ್ತ– ಏಕ–ನಿಬಂಧನೆಯ ಅಡಿಯಲ್ಲಿ ಸಮರ್ಥಗೊಳಿಸಲಾಗುವುದು. NHERC ಯು ಇಲ್ಲಿ ಸೌಹಾರ್ದದ ಆದರೆ ಬಿಗಿಬಂಧದ ಅಳವಡಿಕೆಯಲ್ಲಿ ನಿಯಂತ್ರಣಾ ಕಾರ್ಯವನ್ನು ನಡೆಸುತ್ತದೆ ಮತ್ತು ಇವು ಸುವಿಧಾಜನಕವಾಗಿರುವ ರೀತಿಯಲ್ಲಿ, ಅಂದರೆ ಕೆಲವೇ ಕೆಲವು ಮುಖ್ಯ ಸಂಗತಿಗಳಾಗಿರುವ – ಹಣಕಾಸಿನ ವಿಷಯದಲ್ಲಿ ಪರಿಶುದ್ಧತೆ, ಒಳ್ಳೆಯ ಆಡಳಿತ, ಎಲ್ಲ ಹಣಕಾಸಿನ ವ್ಯವಹಾರಗಳನ್ನೂ ಸಾರ್ವಜನಿಕರಿಗೆ ಆನ್–ಲೈನ್ ವ್ಯವಸ್ಥೆ ಅಥವಾ ಮುದ್ರಿತ ವಿಧಾನದಲ್ಲಿ ಸುಲಭವಾಗಿ ಲಭ್ಯವಾಗುವಂತೆ ಪ್ರಚುರ ಪಡಿಸಬೇಕು. ಲೆಕ್ಕ ಪರಿಶೋಧನೆಗಳು, ಕಾರ್ಯವಿಧಾನಗಳು ಮೂಲ ಸೌಕರ್ಯಗಳು, ಬೋಧಕ ಸಿಬ್ಬಂದಿ ಹಾಗೂ ಇತರ ಸಿಬ್ಬಂದಿ, ವರ್ಗಗಳು ವಿಭಾಗಗಳು, ಮತ್ತು ಶೈಕ್ಷಣಿಕವಾಗಿ ಲಭ್ಯವಾಗುವ ಫಲಿತಾಂಶಗಳನ್ನು ಎಲ್ಲ ಉಚ್ಚ ಶಿಕ್ಷಣ ಸಂಸ್ಥೆಗಳೂ NHERC ನಿರ್ವಹಿಸುವ ಸಾರ್ವಜನಿಕ ಸಂಪರ್ಕ ಜಾಲದಲ್ಲಿ ಸಹಜವಾಗಿಯೇ ಲಭ್ಯವಾಗುವಂತೆ ಇರಬೇಕು. ಜೊತೆ ಜೊತೆಗೆ ಈ ವಿಷಯಗಳು ಆಯಾ ಸಂಸ್ಥೆಯ ಜಾಲತಾಣಗಳಲ್ಲಿಯೂ ಲಭ್ಯವಿರಬೇಕು. ಯಾವುದೇ ಆಪಾದನೆ ಅಥವಾ ವ್ಯಾಜ್ಯವಿರುವ ಸಂದರ್ಭ ಕಂಡುಬಂದಲ್ಲಿ, ಮತ್ತು ಸಾರ್ವಜನಿಕ ಜಾಲತಾಣದಲ್ಲಿ ಪ್ರಕಟಗೊಳಿಸಿರುವ ವಿಷಯದಲ್ಲಿ ಯಾವುದೇ ವಿಷಯದ ಬಗ್ಗೆ ಆಕ್ಷೇಪ ಕೇಳಿ ಬಂದಲ್ಲಿ, ಇದನ್ನು ಈ NHERC ಸೂಕ್ತವಾಗಿ ನಿರ್ಣಯಿಸುತ್ತದೆ. ಆಯ್ಕೆ ಮಾಡಿದ ವಿದ್ಯಾರ್ಥಿಗಳಿಂದ ಬರುವ ಅಭಿಪ್ರಾಯಗಳನ್ನೂ ಯಾದೃಚ್ಛಿಕ ವಿಧಾನದಲ್ಲಿ ಆಯ್ಕೆ ಮಾಡಿಕೊಂಡು, ಉನ್ನತ ಶಿಕ್ಷಣ ಸಂಸ್ಥೆಗಳ ಕುರಿತ ಅವರ ಅಭಿಪ್ರಾಯಗಳನ್ನು ಪ್ರಕಟ ಮಾಡುವಂತೆ ವ್ಯವಸ್ಥೆ ರೂಪಿಸುವುದು.

**18.4.** ಈ ರೀತಿಯ ನಿಬಂಧನೆಯನ್ನು ರೂಪಿಸಲು ಇರುವ ಪ್ರಪ್ರಥಮ ಕ್ರಿಯಾವಿಧಿಯೆಂದರೆ ಅದು ಮಾನ್ಯತೆಯಾಗಿದೆ. ಇದು HECI ಸಂಸ್ಥೆಯ ಎರಡನೆಯ ಶೃಂಗ ಸಂಸ್ಥೆ "ಮೆಟಾ–ಮಾನ್ಯತಾ ನೀಡುವ ಮಂಡಳಿ"ಯಾಗಿದೆ. ಇದನ್ನು ನ್ಯಾಕ್ (ಎನ್.ಏ.ಸಿ) ರಾಷ್ಟ್ರೀಯ ಮಂಡಳಿ ಎಂದು ಕರೆಯಲಾಗಿದೆ. ಸಂಸ್ಥೆಗಳ ಮಾನ್ಯತೆಯನ್ನು ಮೊದಲು ಅವಶ್ಯಕವಾಗಿರುವ ಸಾಮಾನ್ಯ ನಿಯಮಗಳಿಗೆ ಅನುಗುಣವಾಗಿ ಇರುವದನ್ನು, ಸಾರ್ವಜನಿಕ ಸ್ವಯಂ–ವಿವರ ಪ್ರಕಟಣೆ, ಒಳ್ಳೆಯ ಆಡಳಿತ, ಸೂಕ್ತ ಫಲಿತಾಂಶಗಳನ್ನು ಆಧರಿಸಿರುತ್ತದೆ. ಇದು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಅಂದರೆ– ಮಾನ್ಯತೆಗೊಂಡಿರುವ ಸಂಸ್ಥೆಗಳನ್ನು ಮೇಲ್ವಿಚಾರಣೆ ಮಾಡುತ್ತಿರುವ ನ್ಯಾಕ್ ಮಾರ್ಗದರ್ಶನದಲ್ಲಿ, ಸ್ವತಂತ್ರ ಮಾನ್ಯತೆ ವಲಯದ ಬಗೆಗೆ ಸ್ವತಂತ್ರವಾಗಿಯೇ ಕಾರ್ಯ ನಿರ್ವಹಿಸುತ್ತಿರುವ ಸಮಿತಿಯಿಂದ ನಡೆಸಬೇಕಾಗುತ್ತದೆ. ಮಾನ್ಯತೆಯನ್ನು ಗುರುತಿಸುವ ವಿಶೇಷ ಸವಾಲಿನ ಕಾರ್ಯಗಳನ್ನು ಓರ್ವ "ಅಧಿಕೃತಗೊಳಿಸಲ್ಪಟ್ಟ" ಮಾನ್ಯತಾ ಪ್ರದಾನ ಮಾಡುವ ಸಂಸ್ಥೆಗಳೆಂದು ಗುರುತಿಸಿ ಅಧಿಕೃತಗೊಳಿಸಲಾಗುವುದು.

ಇದನ್ನು ಸಂಕ್ಷಿಪ್ತವಾಗಿ ವಿವರಿಸುವದಾದಲ್ಲಿ, ಒಂದು ಶ್ರೇಣಿಬದ್ಧ ಮಾನ್ಯತೆಗಾಗಿ, ಸುದೃಢ ವ್ಯವಸ್ಥೆಯ ನೀತಿಯನ್ನು ಸ್ಥಾಪಿಸಲಾಗುವುದು. ಇದು ಎಲ್ಲ ಉಚ್ಚ ಶಿಕ್ಷಣ ಸಂಸ್ಥೆಗಳಿಗೂ ಒಂದು ನಿರ್ದಿಷ್ಟಪಡಿಸಿರುವ ಮಾನದಂಡವನ್ನು ನಿರ್ಧರಿಸಲಾಗುವದು. ಇದು ಗುಣಾತ್ಮಕ ಅಂಶಗಳ ಎಲ್ಲ ಹಂತಗಳನ್ನು ಸ್ವಯೋ ಆಡಳಿತ ವ್ಯವಸ್ಥೆ ಮತ್ತು ಸ್ವಾಯತ್ತತೆಯನ್ನು ಹೊಂದಲು ರೂಪಿತವಾಗಿರುತ್ತದೆ. ಇದಕ್ಕೆ ಪ್ರತಿಯಾಗಿ ಎಲ್ಲ ಶಿಕ್ಷಣ ಸಂಸ್ಥೆಗಳೂ ಹೊಂದಿರಬೇಕಾದ ಗುರಿ ಎಂದರೆ,– ಅವರ ಸಾಂಸ್ಥಿಕ ಪ್ರಗತಿಯ ಯೋಜನೆ (ಐ.ಡಿ.ಪಿ)ಗಳ ಮೂಲಕವೇ, ಮಾನ್ಯತೆಯ ಉಚ್ಚ ಹಂತವನ್ನು, ಬರಲಿರುವ 15 ವರ್ಷಗಳ ಅವಧಿಯಲ್ಲಿ ತಲುಪುವದನ್ನು ಮತ್ತು ಅಂತಿಮವಾಗಿ, ಸ್ವಯಂ–ಆಡಳಿತ ವ್ಯವಸ್ಥೆಯಲ್ಲಿ ಪದವಿ–ಪ್ರದಾನಗೊಳಿಸುವ ಸಂಸ್ಥೆಗಳಾಗಿ/ವಲಯಗಳಾಗಿ ಕಾರ್ಯಮಾಡುವಂತೆ ಗುರಿ ಹೊಂದಿರಬೇಕು. ದೀರ್ಘಾವಧಿಯಲ್ಲಿ, ಈ ಮಾನ್ಯತೆ ಎನ್ನುವುದು ದ್ವಿಮಾನ (ಬೈನರಿ) ಪ್ರಕ್ರಿಯೆಯಾಗಿರುತ್ತದೆ. ಈಗ ಜಗತ್ತಿನಾದ್ಯಂತವೂ ಈ ವ್ಯವಸ್ಥೆ ಅನುಷ್ಠಾನಗೊಳ್ಳುತ್ತಿದೆ.

**18.5.** ಮೂರನೆಯ ವಿಷಯವೆಂದರೆ– ಈ HECI ಸಂಸ್ಥೆಯ ಉನ್ನತ ಶಿಕ್ಷಣ ಅನುದಾನ ಮಂಡಳಿ(HEGC)ಯಾಗಿರುವುದು. ಇದು ಉಚ್ಚ ಶಿಕ್ಷಣ ಸಂಸ್ಥೆಗಳ ಪಾರದರ್ಶಕ ಕಾರ್ಯಚಟುವಟಿಕೆಗಳ ಪ್ರಾಧಾನ್ಯತೆಯಲ್ಲಿಯೇ ಅನುದಾನ ಹಾಗೂ ಹಣಕಾಸಿನ ಸಹಾಯವನ್ನು– ಇದರಲ್ಲಿ ಸಂಸ್ಥೆಯು ಸಿದ್ಧಪಡಿಸಿರುವ 'ಸಂಸ್ಥೆಯ ಪ್ರಗತಿ ಯೋಜನೆ(ಆಯ್.ಡಿ.ಪಿ)ಯ ಸಿದ್ಧತೆಗಳನ್ನು ಒಳಗೊಂಡಂತೆ– ಮತ್ತು ಈ ಯೋಜನೆಯ ಅನುಷ್ಠಾನದಲ್ಲಿ ಸಾಧಿಸಿರುವ ಪ್ರಗತಿಯನ್ನು ಪರಿಗಣಿಸಲಾಗುತ್ತದೆ. ಈ HEGC ಯು ವಿದ್ಯಾರ್ಥಿ ವೇತನಗಳನ್ನುಸಹಿತ ವಿತರಿಸುವ ಮತ್ತು ಅಭಿವೃದ್ಧಿ ನಿಧಿಗಳನ್ನು ನೂತನ ವಿಷಯಗಳ/ ವಲಯಗಳ ರೂಪಣೆಗೊಳಿಸಲು ಹಾಗೂ ಉಚ್ಚ ಶಿಕ್ಷಣ ಸಂಸ್ಥೆಗಳಲ್ಲಿ ಗುಣಾತ್ಮಕವಾಗಿರುವ ಕಾರ್ಯಕ್ರಮಗಳ/ ವರ್ಗಗಳನ್ನು ವಿಸ್ತರಿಸುವ ಸಲುವಾಗಿ, ದೇಶಾದ್ಯಂತ ಇರುವ ಎಲ್ಲ ವಲಯಗಳಿಗೂ ಇದು ಅನ್ವಯಿಸುತ್ತದೆ.

**18.6.** ನಾಲ್ಕನೆಯದಾಗಿ, ಇದು "GEC"ಯ ವ್ಯಾಪಕ ಶಿಕ್ಷಣ ಸಮಿತಿಯಾಗಿದ್ದು, ಇದು ಉಚ್ಚ ಶಿಕ್ಷಣ ಕಾರ್ಯಕ್ರಮಗಳಲ್ಲಿ ನಿರ್ದಿಷ್ಟಗೊಳಿಸಿ ನಿರೀಕ್ಷಿಸಲಾಗುವ ಕಲಿಕಾ ಫಲಿತಾಂಶಗಳನ್ನು ರೂಪುರೇಷೆಗೊಳಿಸುತ್ತದೆ. ಒಂದು ರಾಷ್ಟ್ರೀಯ ಉನ್ನತ ಶಿಕ್ಷಣದ ಅರ್ಹತಾ ರೂಪುರೇಷೆ(ಎನ್.ಎಚ್.ಈ.ಕ್ಯೂ.ಎಫ್) ಈ "ಜಿಈಸಿ"ಯಿಂದ ರೂಪುಗೊಳಿಸಲಾಗುವದು. ಇದು ರಾಷ್ಟ್ರೀಯ ಕೌಶಲ್ಯಗಳ ಅರ್ಹತಾ ರೂಪುರೇಷೆಯ (ಎನ್.ಎಸ್.ಕ್ಯೂ.ಎಫ್) ಸಂಗಡ ಸಂಲಗ್ನಗೊಂಡಿರಬೇಕು. ಈ ಮೂಲಕ ವೃತ್ತಿಪರ ಶಿಕ್ಷಣವನ್ನು ಉನ್ನತ ಶಿಕ್ಷಣದಲ್ಲಿ ಸಮಗ್ರಗೊಳಿಸಲಾಗುತ್ತಿದೆ. ಈ ಉನ್ನತ ಶಿಕ್ಷಣದ ಅರ್ಹತೆಗಳು ಮುಂದೆ ಪದವಿ/ಡಿಪ್ಲೋಮಾ/ಪ್ರಮಾಣ ಪತ್ರದ ಹಂತಗಳಿಗೆ – ಈ ಎನ್.ಎಚ್.ಈ.ಕ್ಯೂ.ಎಫ್ ಸೂಚಿಸಿರುವಂತೆಯೇ ಇರುವ ನಿಯಮಗಳ ಪ್ರಕಾರದ ಕಲಿಕೆಯ ಫಲಿತಾಂಶವಾಗಿರುತ್ತದೆ.

ಇದಕ್ಕೆ ಜೋಡಣೆಯಾಗಿ, ವಿಷಯಗಳಿಗಾಗಿಯೂ ಸಹಕಾರಿಯಾಗಿರುವ ಯೋಜಿತ ವ್ಯವಸ್ಥೆಯನ್ನು– ಅಂದರೆ ಶ್ರೇಯಾಂಕಗಳ ವರ್ಗಾವಣೆ,ಸಮಾನತ್ವವನ್ನು ಹಾಗೂ ಇನ್ನಿತರ ವಿಷಯಗಳಲ್ಲಿ ಈ ಎನ್.ಎಚ್.ಈ.ಕ್ಯೂ.ಎಫ್ ಮೂಲಕ ರೂಪಿಸಬೇಕು.

ಈ "ಜಿ.ಈ.ಸಿ" ಯು ವಿಶೇಷ ಕೌಶಲ್ಯಗಳನ್ನು ಗುರುತಿಸಲು, ಅದರಲ್ಲೂ– ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡುತ್ತಿರುವ ವೇಳೆಯಲ್ಲಿಯೇ, ಅವರ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿಯೇ ಗುರುತಿಸುವಲ್ಲಿ ಬಾಧ್ಯಸ್ಥವಾಗಿರುತ್ತದೆ. ಇದೇ 21 ನೇ ಶತಮಾನದ ಕೌಶಲ್ಯಗಳನ್ನು ಸರ್ವ–ಆಯಾಮದಿಂದಲೂ ಪಡೆದುಕೊಳ್ಳಲು ಸಿದ್ಧಗೊಳಿಸುವ ಗುರಿಯನ್ನು ಹೊಂದಿದೆ.

**18.7.** ಈ ವೃತ್ತಿ ಪರಿಣಿತ ಮಂಡಳಿಗಳು, ಅಂದರೆ ಭಾರತೀಯ ಕೃಷಿ ಸಂಶೋಧನಾ ಮಂಡಳಿ(ICAR), ಪಶು–ಚಿಕಿತ್ಸಾ ಮಂಡಳಿ( VCI), ರಾಷ್ಟ್ರೀಯ ಶಿಕ್ಷಕರ ತರಬೇತಿ ಶಿಕ್ಷಣದ ಮಂಡಳಿಋಋಋಋ(NCTE), ವಾಸ್ತುಶಿಲ್ಪ ಮಂಡಳಿ(CoA), ರಾಷ್ಟ್ರೀಯ ವೃತ್ತಿಪರ ಶಿಕ್ಷಣ ಮತ್ತು ತರಬೇತಿ ಮಂಡಳಿ(NCVET) ಹಾಗೂ ಇತರೇ ವೃತ್ತಿಪರಿಣತಿಯ ಮಾನಕಗಳ ರೂಪಣೆಯ ಮಂಡಳಿಗಳು PSBCs ಯಾಗಿ ಕಾರ್ಯ ನಿರ್ವಹಿಸುವುವು. ಈ ಮಂಡಳಿಗಳು, ಪಿ.ಎಸ್.ಎಸ್.ಬಿ ಗಳನ್ನು ಪುನರ್–ರಚಿತಗೊಳಿಸಿದ ನಂತರದಲ್ಲಿ, ಇವು ಪಠ್ಯಕ್ರಮವನ್ನು ರೂಪಿಸುವಲ್ಲಿ, ಶೈಕ್ಷಣಿಕ ಮಾನಕಗಳನ್ನು ನಿರ್ಧರಿಸಲು ಮತ್ತು ಕಲಿಸುವ ಪ್ರಕ್ರಿಯೆಯ ಮಧ್ಯದಲ್ಲಿ ಸಮನ್ವಯದ ಕಾರ್ಯ ವಹಿಸುತ್ತ, ಅವರ/ಅವುಗಳ ಸಂಶೋಧನೆ ಹಾಗೂ ವಲಯಗಳನ್ನೂ ವಿಸ್ತರಿಸುವ, ವಿಷಯಗಳನ್ನೂ ಅಧಿಕಗೊಳಿಸುವ ಮತ್ತು ಸಂಶೋಧನಾ ವಿಷಯಗಳಲ್ಲಿ, ಜಿ ಈ ಸಿಯ ಸದಸ್ಯರಾಗಿರುವರು.

ಈ GECಯ ಸದಸ್ಯರಾಗಿರುವಂತೆಯೇ ಪಠ್ಯಕ್ರಮವನ್ನು ರೂಪುಗೊಳಿಸುವಲ್ಲಿ, ನಿರ್ದಿಷ್ಟ ಪಡಿಸುವಲ್ಲಿ,ಅವುಗಳನ್ನು ಸಿದ್ಧಗೊಳಿಸುವ ಮೂಲಕ, ಉಚ್ಚ ಶಿಕ್ಷಣ ಸಂಸ್ಥೆಗಳು ತಮ್ಮದೇ ವಿನ್ಯಾಸದ ಪಠ್ಯಕ್ರಮವನ್ನೂ ರೂಪಿಸಲು ಅವಕಾಶವಿರುವದು. ಈ ರೀತಿಯಾಗಿ ಈ ಪಿಎಸ್.ಎಸ್.ಬಿಯು ನಿರ್ದಿಷ್ಟಪಡಿಸುವ ವಲಯಗಳಲ್ಲಿ ಸಹಿತ – ನಿಬಂಧನಾ ಮಂಡಳಿಯ ಪಾತ್ರವಿರದೇ ಇರುವ ಸಂದರ್ಭದಲ್ಲಿ ಈ ರೀತಿಯಲ್ಲಿ ರೂಪಿಸಬೇಕಾಗುತ್ತದೆ ಮತ್ತು ಅನ್ವಯಗೊಳಿಸಬೇಕಾಗುತ್ತದೆ. ಎಲ್ಲ ಉಚ್ಚ ಶಿಕ್ಷಣ ಸಂಸ್ಥೆಗಳೂ ಈ ಮಾನಕಗಳಿಗೆ– ತಮ್ಮ ತಮ್ಮ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಹೇಗೆ ಸ್ಪಂದಿಸಬೇಕು, ಪ್ರತಿಕ್ರಿಯೆಯನ್ನು ಹೊಂದಬೇಕು ಎನ್ನುವುದನ್ನು ನಿರ್ಣಯಿಸಿಕೊಳ್ಳುವುದು. ಇನ್ನುಳಿದ ಪರಿಗಣನೆಗಳನ್ನು ಗಮನಿಸಿ, ಅವಶ್ಯವಿರುವಲ್ಲಿ ಈ ಪಿ.ಎಸ್.ಎಸ್.ಬಿ ಅಥವಾ ಮಾನಕಗಳನ್ನು ರೂಪಿಸುವ ಮಂಡಳಿಗಳು ಒದಗಿಸುವ ಸಹಕಾರದೊಂದಿಗೆ, ತಮ್ಮ ಗುರಿಯನ್ನು ಸಾಧಿಸಲು ಸಮರ್ಥವಾಗುವುದಕ್ಕೆ ಇರುತ್ತವೆ.

**18.8.** ಈ ರೀತಿಯ ಸುವ್ಯವಸ್ಥಿತ ಸಂರಚನೆಯು, ಹಲವು ವಿಭಾಗಗಳಲ್ಲಿ, ಪಾತ್ರಗಳಲ್ಲಿ ಉದ್ಭವಿಸುವ ವೈಯಕ್ತಿಕ ಆಸಕ್ತಿಗಳಿಂದ ರೂಪಿತಗೊಳ್ಳುವ ಸಂಘರ್ಷಗಳನ್ನು ಕಡಿಮೆ ಮಾಡುತ್ತ, ಕಾರ್ಯತತ್ಪರತೆಯ ವಿಭಾಗಗಳನ್ನು ಪ್ರತ್ಯೇಕವಾಗಿ ಗುರುತಿಸುವ ತತ್ವವನ್ನು ಖಾತ್ರಿಗೊಳಿಸುತ್ತದೆ. ಇದು ಉಚ್ಚ ಶಿಕ್ಷಣ ಸಂಸ್ಥೆಗಳನ್ನು ಬಲಪಡಿಸುವ ಯೋಜನೆಯನ್ನು ಹೊಂದಿದೆ. ಇದನ್ನು ಖಚಿತಗೊಳಿಸುವ ಸಲುವಾಗಿ, ಇಲ್ಲಿ ಕೆಲವು ಅತ್ಯಾವಶ್ಯಕ ಸೂತ್ರಗಳನ್ನು ಗಂಭೀರವಾಗಿ ಗಮನಿಸಬೇಕಾಗಿದೆ. ಹೊಣೆಗಾರಿಕೆ

ಮತ್ತು ಉತ್ತರದಾಯಿತ್ವಗಳು ಉಚ್ಚ ಶಿಕ್ಷಣ ಸಂಸ್ಥೆಗಳನ್ನು ಸಮನ್ವಿತ ಸ್ವರೂಪದಲ್ಲಿ ವಿಕಸನಗೊಳಿಸಬಹುದು. ಈ ಗುರಿಯನ್ನು ಸಾಧಿಸುವಲ್ಲಿ, ಖಾಸಗೀ ಮತ್ತು ಸರಕಾರೀ ಉಚ್ಚ ಶಿಕ್ಷಣ ಸಂಸ್ಥೆಗಳ ಹಿನ್ನೆಲೆಯಲ್ಲಿ ವ್ಯತ್ಯಾಸವನ್ನು ಮಾಡುವಂತಿಲ್ಲ.

**18.9**. ಇಂತಹ ರೂಪಾಂತರಣವನ್ನು ಸಾಧಿಸಲು, ಸದ್ಯ ಅಸ್ತಿತ್ವವಿರುವ ಸಂರಚನೆಗಳು ಹಾಗೂ ಸಂಸ್ಥೆಗಳು ತಮ್ಮಲ್ಲಿ ತಾವೇ ಮರುಶೋಧನೆಯ ಪ್ರಕ್ರಿಯೆಗೆ ಒಳಪಟ್ಟು, ಮತ್ತು ವಿಕಾಸದ ಹಂತದಲ್ಲಿ ಮುಂದುವರೆಯಬೇಕಾಗಿದೆ. ಇದರ ಅನ್ವಯಿಕಾ ಕಾರ್ಯಕ್ರಮದಲ್ಲಿ ವಿಭಾಗ ಮಾಡುವದೆಂದರೆ– ಅದು ಈ ಎಚ್.ಇ.ಸಿ.ಐನ ನೇರ ಕಾರ್ಯಕ್ರಮದಲ್ಲಿ ಒಂದು ನವೀನ ಹೆಜ್ಜೆಯಾಗುವದು. ಅವಶ್ಯವಿದ್ದಲ್ಲಿ, ಏಕ–ಪಾತ್ರದ ವಿನ್ಯಾಸವು ಸೂಕ್ತವಾಗಿರುವುದು. ಅರ್ಥಪೂರ್ಣವೂ ಆಗಿರುವುದು ಮತ್ತು ನೂತನ ನಿಬಂಧನಾ ವ್ಯವಸ್ಥೆಯಲ್ಲಿ ಇದು ಅತ್ಯಂತ ಮುಖ್ಯ ಸಂಗತಿಯಾಗಿರುತ್ತದೆ.

**18.10**. ಈ ಕಾರ್ಯವನ್ನು ನಿರ್ವಹಿಸುವ ಈ ಸ್ವತಂತ್ರ NHERC ಯ ನಿಬಂಧನೆಗಳ ಸಲುವಾಗಿ ಈ ಎಲ್ಲ NHERC ಗಳು, ಮಾನ್ಯತೆಗಾಗಿ ನ್ಯಾಕ್, ಧನಸಹಾಯಕ್ಕಾಗಿ HEGC ಮತ್ತು ಶೈಕ್ಷಣಿಕ ಮಾನಕಗಳ ರೂಪಣೆಗಾಗಿ ಜಿ.ಈ.ಸಿ ಮತ್ತು ಪೂರ್ಣ ರಕ್ಷಾತ್ಮಕ ಸ್ವಾಯತ್ತತಾ ಮಂಡಳಿ ಎಚ್.ಇ.ಸಿ.ಐ ಸಹಿತ ಸಾರ್ವಜನಿಕವಾಗಿ ಪಾರದರ್ಶಕತೆಯನ್ನು ಪ್ರದರ್ಶಿಸುವ ಆಧಾರದಲ್ಲಿಯೇ ರೂಪಿಸಲಾಗುತ್ತಿದೆ. ಇಲ್ಲಿ ತಂತ್ರಜ್ಞಾನವನ್ನು ಹೆಚ್ಚಿನ ಪ್ರಮಾಣದಲ್ಲಿ ವಿನಿಯೋಗಿಸಿಕೊಳ್ಳುವುದರಿಂದ ಮಾನವ ಹಸ್ತಕ್ಷೇಪಗಳನ್ನು ಕಡಿಮೆ ಮಾಡಿ. ಇಲ್ಲಿ ಕಾರ್ಯಗಳಲ್ಲಿ ಕ್ಷಮತೆಯನ್ನು ಹೆಚ್ಚಿಸಬಹುದಾಗಿದೆ. ಹೀಗಾಗಿ ಇಲ್ಲಿ ರೂಪಿತವಾಗುವ ತತ್ವವು ಯಾವುದೇ ವ್ಯಕ್ತಿ ಪ್ರಾಧಾನ್ಯತೆಯಿಂದ ಕೂಡಿರುವುದಿಲ್ಲ, ಹಾಗೂ ಪಾರದರ್ಶಕವಾದ ನಿಯಂತ್ರಕದ ನಿಯಂತ್ರಣದ ಮೂಲಕವೇ ಇರುವುದು. ಇಲ್ಲಿ ಅನುಸರಿಸಲಾಗುವ ನಿರ್ಧರಿತ ಪರಿಮಾಣಗಳು ಕರಾರುವಾಕ್ಕಾಗಿ, ಕಠಿಣ ಕ್ರಮಗಳಿಂದಲೇ ಕೂಡಿರುತ್ತವೆ. ಇದರಲ್ಲಿ ಶಾಸನಬದ್ಧವಾಗಿ ಸಲ್ಲಿಸಬೇಕಾಗಿರುವ ಮಾಹಿತಿಗಳಲ್ಲಿ ತಪ್ಪು ಘೋಷಣೆಗಳಾಗಿರುವ ಸಂದರ್ಭಗಳಲ್ಲಿ ದಂಡಗಳನ್ನು ವಿಧಿಸುವುದನ್ನೂ ಒಳಗೊಂಡಿದೆ.

ಈ ಮೂಲಕ ಉಚ್ಚ ಶಿಕ್ಷಣ ಸಂಸ್ಥೆಗಳಲ್ಲಿ ಅವಶ್ಯವಾಗಿ ಇರಲೇಬೇಕಾದ ವಿಷಯಗಳ ಕುರಿತು ರೂಪಿತ ನಿಯಮ ಮತ್ತು ಮಾನಕಗಳನ್ನು ಹೊಂದಲೇಬೇಕಾಗುತ್ತದೆ. ಏನಾದರೂ ವ್ಯಾಜ್ಯಗಳು ಉದ್ಭವಗೊಂಡಿರುವ ಸಂದರ್ಭವಿರುವಾಗ, ಅದನ್ನೂ ಈ ನಾಲ್ಕೂ–ಪ್ರಮುಖ ಸಂಸ್ಥೆಗಳ ವ್ಯವಸ್ಥೆಯ ವಿನ್ಯಾಸದಲ್ಲಿ ಪರಿಹರಿಸಬೇಕಾಗುವದು. ಈ ಏಚ್ ಸಿ ಈ ಯ ಅಡಿಯಲ್ಲಿ ಈ ಪ್ರತಿಯೊಂದು ಶೃಂಗ ಸಂಸ್ಥೆಯೂ ಸ್ವತಂತ್ರ ಮಂಡಳಿಯೇ ಆಗಿದೆ. ಇದು ಆಯಾ ವಿಷಯಕ್ಕೆ ಸಂಬಂಧಿಸಿದಂತೆ, ಪರಿಣಿತ ಅನುಭವಿಗಳನ್ನು ಹೊಂದಿರುತ್ತವೆ. ಅಲ್ಲಿ ಸಮಗ್ರತೆ, ಬದ್ಧತೆ, ಮತ್ತು ಸಾರ್ವಜನಿಕ ಸೇವಾವಧಿಯಲ್ಲಿ ಕಾರ್ಯಪಥದಲ್ಲಿ ಪ್ರದರ್ಶನಗೊಳ್ಳುವ ಪ್ರಕ್ರಿಯೆಯನ್ನು ಹೊಂದಿದೆ.

ಈ ಎಚ್.ಈ.ಸಿ.ಐ ಒಂದು ಸಣ್ಣ, ಸ್ವತಂತ್ರ ಮಂಡಳಿಯಾಗಿದ್ದು, ಇದರಲ್ಲಿ ಪ್ರಸಿದ್ಧ, ಸಾಮರ್ಥ್ಯಶೀಲ ಹಾಗೂ ಉಚ್ಚ ಶಿಕ್ಷಣದಲ್ಲಿ ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿರುವ ವ್ಯಕ್ತಿಗಳನ್ನು ಹೊಂದಿದ ಒಂದು ಚಿಕ್ಕ ಮಂಡಳಿಯಾಗಿರುತ್ತದೆ. ಈ ಮಂಡಳಿಯು ಈ ಎಚ್.ಈ.ಸಿ.ಐನ ಮೇಲುಸ್ತುವಾರಿ ಮಾಡುತ್ತ, ಅದಕ್ಕೆ ಮಾರ್ಗದರ್ಶನ ಕೊಡುತ್ತದೆ. ಸೂಕ್ತವಾಗಿರುವ ವಿಧಾನಗಳನ್ನು ಇಲ್ಲಿಯೇ ಸುಸ್ಪಷ್ಟಗೊಳಿಸಲು ಮತ್ತು ಕಾರ್ಯಾನುಷ್ಠಾನದಲ್ಲಿ ಮುಂದುವರೆಸಲು, ಮತ್ತೆ ನ್ಯಾಯ–ನಿರ್ಣಯಗಳನ್ನು ರೂಪಿಸುವುದನ್ನು ಒಳಗೊಂಡಿರುತ್ತದೆ.

**18.11**. ಹೊಸ ವಿನ್ಯಾಸದ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಈ ನಿಯಂತ್ರಕ ವ್ಯವಸ್ಥೆಯನ್ನು ಸುಲಭಗೊಳಿಸಲಾಗುವದು. ಎಲ್ಲ ಸಾರ್ವಜನಿಕ ಸೇವೆಯ ಆಸಕ್ತಿ ಹೊಂದಿ ಈ ಸಂಸ್ಥೆಗಳು ಮಹತ್ತರವಾಗಿಯೇ ಪರಿಣಾಮಕಾರಿಯಾಗಿರುವದನ್ನು ಖಚಿತಗೊಳಿಸುತ್ತಿರುವ ಸಂದರ್ಭದಲ್ಲಿ ಮತ್ತು ಇದಕ್ಕೆ ಅವಶ್ಯವಿರುವ ಹಣಕಾಸಿನ ದೃಢತೆಯಿಂದ ದೀರ್ಘಕಾಲದವರೆಗೂ ಸ್ಥಿರತೆಯನ್ನು ಸಾಧಿಸಲು ಅವಶ್ಯಕ ಸಂಗತಿಗಳಾಗಿವೆ.

ಕೇಂದ್ರ ಹಾಗೂ ರಾಜ್ಯ ಸರಕಾರಗಳು ತಮ್ಮ ಸಂಸ್ಥೆಗಳನ್ನು ವಿಸ್ತಾರಗೊಳಿಸುವಲ್ಲಿ, ಅವುಗಳ ಸಹಾಯದಿಂದ ಈ ಉಚ್ಚ ಶಿಕ್ಷಣ ಸಂಸ್ಥೆಗಳು, ವಿಶೇಷವಾಗಿ ಅಸಾಧಾರಣವಾಗಿರುವಂತೆಯೇ ಇರುವ ಕಾರ್ಯಾನುಷ್ಠಾನವನ್ನು ಉತ್ತಮವಾಗಿ ನಿರ್ವಹಿಸುವಲ್ಲಿ ಮತ್ತು ಆ ಮೂಲಕ ಬೃಹತ್ ಸಂಖ್ಯೆಯ ವಿದ್ಯಾರ್ಥಿಗಳನ್ನು ಹೊಂದುವ ಮೂಲಕ ಮತ್ತು ಬೋಧಕರನ್ನೂ ಹೊಂದುವ ಮೂಲಕ ಜೊತೆಜೊತೆಗೆ ಎಲ್ಲ ವಿಭಾಗಗಳಲ್ಲಿ/ಶಾಸ್ತ್ರೀಯ ವಿಷಯಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ಪ್ರಗತಿ ಸಾಧಿಸಬಹುದಾಗಿದೆ.

ಪಿಪಿಪಿ–ಯೋಜನೆಯ ಮೂಲಕ ಸಾರ್ವಜನಿಕ ಲೋಕೋಪಕಾರೀ ಪಾಲುದಾರಿಕಾ ವ್ಯವಸ್ಥೆ ಮಾದರಿಯ ಉಚ್ಚ ಶಿಕ್ಷಣ ಸಂಸ್ಥೆಗಳು ಮತ್ತೂ ವಿಸ್ತಾರವನ್ನು ಸಾಧಿಸಿ ಉನ್ನತ ಗುಣಾತ್ಮಕವಾಗಿರುವ ಉಚ್ಚ ಶಿಕ್ಷಣವನ್ನು ಅಧ್ಯಯನಕ್ಕೆ ಒದಗಿಸುವಲ್ಲಿ ಸಕ್ಷಮವಾಗುವುದು.

**18.12.** ಬಹು ಆಯಾಮದ ಕಾರ್ಯ ವಿಧಾನಗಳು–ತಮಗೆ ತಾವೇ ಪರೀಕ್ಷೆ ಮಾಡಿಕೊಳ್ಳುತ್ತ ಸಮತೋಲನವನ್ನು ಹೊಂದಿದ್ದಲ್ಲಿ, ಅದು ಉಚ್ಚ ಶಿಕ್ಷಣದ ವಾಣಿಜ್ಯೀಕರಣವನ್ನು ಯುದ್ಧಯೋಪಾದಿಯಲ್ಲಿ ನಿಗ್ರಹಿಸುವುದು. ಇದು ಈ ನೀತಿಯ ಅತೀ ಪ್ರಮುಖವಾಗಿರುವ ನಿಯಂತ್ರಕ ನಿಬಂಧನೆಯೂ ಆಗಿರುತ್ತದೆ. ಅದಕ್ಕಾಗಿ ಎಲ್ಲ ಶೈಕ್ಷಣಿಕ ಸಂಸ್ಥೆಗಳೂ ಇದೆ ಮಾನಕದಲ್ಲಿಯೇ ಲೆಕ್ಕಪರಿಶೋಧನೆಗಳನ್ನು ಹೊಂದಿ, 'ಲಾಭಕ್ಕಾಗಿ ರೂಪಿತಗೊಂಡಿರದ ಅಸ್ತಿತ್ವದ ಸಂಸ್ಥೆ' ಎಂದು ಪುರಾವಿಸಬೇಕಾಗುತ್ತದೆ ಮತ್ತು ಇದನ್ನು ಸಾರ್ವಜನಿಕವಾಗಿಯೂ ಪ್ರಕಟಗೊಳಿಸಬೇಕಾಗುತ್ತದೆ. ಒಂದು ವೇಳೆ 'ಮಿಗಿತಾಯ'ಗಳೇನಾದರೂ ಇರುವಲ್ಲಿ, ಅದನ್ನು ಪುನಃ ಶೈಕ್ಷಣಿಕ ವಲಯದಲ್ಲಿಯೇ ವಿನಿಯೋಗಿಸಬೇಕು. ಅದಕ್ಕಾಗಿ ಈ ಎಲ್ಲ ಹಣಕಾಸಿನ ವ್ಯವಹಾರಗಳನ್ನು ಪಾರದರ್ಶಕ ನೆಲೆಯಲ್ಲಿಯೇ ಸರ್ವಜನಿಕರಿಗೂ ಲಭ್ಯಗೊಳಿಸಬೇಕು. ಒಂದು ವೇಳೆ ಸಾರ್ವಜನಿಕವಾಗಿ ಒದಗಿಸಿರುವ ಸಂದರ್ಭಗಳಲ್ಲಿ ಕುಂದು–ಕೊರತೆಗಳ ವಿಷಯದಲ್ಲಿ ಸಂಪೂರ್ಣ ರಕ್ಷಣಾತ್ಮಕವಾಗಿಯೇ ಇರಬೇಕು. ರಾಷ್ಟ್ರೀಯ ಮಾನ್ಯತಾ ಮಂಡಳಿ(ನ್ಯಾಕ್) ಈ ಮಾನ್ಯತೆಯ ನೀತಿಯನ್ನು ಅಭಿವೃದ್ಧಿ ಪಡಿಸುತ್ತದೆ. ಇದು ಈ ನೀತಿಯಲ್ಲಿ ಒಂದು "ಪೂರಕ ಪರಿಶೀಲನಾ" ಕಾರ್ಯವನ್ನು ಒದಗಿಸುತ್ತಿದ್ದು ಮತ್ತು ಈ ಎನ್.ಎಚ್.ಈ.ಆರ್.ಸಿ ಯು ಅದನ್ನು 'ಪ್ರಮುಖ ನಿಯಂತ್ರಕ ನಿಬಂಧನೆಗಳ ವಸ್ತುನಿಷ್ಠತೆಯ ಸೂತ್ರದ ಹಿನ್ನೆಲೆಯಲ್ಲಿಯೇ ಇರುವಂತೆ ಈ ಪೂರಕ ಪರಿಶೀಲನಾ ವರದಿಯನ್ನು ಪರಿಗಣಿಸಲಾಗುವುದು.

**18.13.** ಎಲ್ಲಾ ಖಾಸಗೀ ಹಾಗೂ ಸರಕಾರಿ ಉಚ್ಚ ಶಿಕ್ಷಣ ಸಂಸ್ಥೆಗಳೆಲ್ಲವನ್ನೂ ಯಥಾವತ್ ಈ ನಿಯಂತ್ರಕ ನಿಬಂಧನಾ ಆಡಳಿತ ವ್ಯಾಪ್ತಿಯಲ್ಲಿಯೇ ಅಳವಡಿಸಲಾಗುವುದು. ಈ ನಿಯಂತ್ರಕ ಆಡಳಿತ ವ್ಯವಸ್ಥೆಯ ಖಾಸಗೀ ಲೋಕೋಪಕಾರಿ ಸಂಸ್ಥೆಗಳ ಪಾತ್ರವನ್ನೂ ಈ ಶಿಕ್ಷಣದಲ್ಲಿ ಅಳವಡಿಸಲ್ಪಡುವಂತೆ ಪ್ರೋತ್ಸಾಹವನ್ನು ಕೊಡಲಾಗುವುದು. ಅದಕ್ಕಾಗಿ ಒಂದು ಸರ್ವೇ ಸಾಮಾನ್ಯವಾಗಿರುವ ರಾಷ್ಟ್ರೀಯ ಶಾಸಕಾಂಗ–ಅಧಿನಿಯಮಗಳಿಗೂ ಮಾರ್ಗಸೂಚಿಯನ್ನು ರೂಪಿಸಿದ್ದು, ಅವು ಖಾಸಗೀ ಉಚ್ಚ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲು ರೂಪಿತಗೊಂಡಿವೆ. ಈ ರೀತಿಯಾಗಿ ಈ ಸಾಮಾನ್ಯ ಸಂಕ್ಷಿಪ್ತ ನಿಯಮಗಳು ಖಾಸಗೀ ಉಚ್ಚ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಎಲ್ಲ ಅಧಿನಿಯಮಗಳನ್ನು ಸಬಲಗೊಳಿಸುತ್ತವೆ. ಈ ಮೂಲಕ ಎಲ್ಲ ಖಾಸಗೀ ಮತ್ತು ಸರಕಾರಿ ಉಚ್ಚ ಶಿಕ್ಷಣ ಸಂಸ್ಥೆಗಳಿಗೆ ಒಂದು ಸರ್ವೆಸಾಮಾನ್ಯವಾಗಿರುವ ಮಾನಕಗಳನ್ನು ಹೊಂದಲು ಸಾಧ್ಯವಾಗುತ್ತದೆ.

**18.14.** ಈ ರೀತಿಯ ಖಾಸಗೀ ಉಚ್ಚ ಶಿಕ್ಷಣ ಸಂಸ್ಥೆಗಳು ಲೋಕೋಪಕಾರೀ ಮತ್ತು ಸಾರ್ವಜನಿಕ ಹಿತಾಸಕ್ತಿ ಉದ್ದೇಶದ ಸಮರ್ಥನೆಯನ್ನು ಹೊಂದಿದ್ದಲ್ಲಿ, ಇದು ಶಿಕ್ಷಣ ಶುಲ್ಕದ ನಿರ್ಧರಣೆಯಲ್ಲಿ ಒಂದು ಪ್ರಗತಿಪರವಾಗಿರುವ ವ್ಯವಸ್ಥೆಯನ್ನು ರೂಪಿಸಲು ಸಹಕಾರಿಯಾಗಿರುತ್ತದೆ. ಶುಲ್ಕ ನಿಗದಿಗಾಗಿ ಪಾರದರ್ಶಕವಾಗಿರುವ ನಿಯಮಾವಳಿಗಳ ವ್ಯವಸ್ಥೆ–ಅದರಲ್ಲೂ ಗರಿಷ್ಠ–ಮಿತಿಯನ್ನು ನಿರ್ಧರಿಸಿ, ಬೇರೆ ಬೇರೆ ಸಂಸ್ಥೆಗಳೂ ಹೊಂದಿರುವ ಮಾನ್ಯತಾ ವೈವಿಧ್ಯತೆಯನ್ನು ಆಧರಿಸಿ, ಬೇರೆ ಬೇರೆ ವಿನ್ಯಾಸದಲ್ಲಿ ಅನುಷ್ಠಾನಿಸಬಹುದು. ಇದರಿಂದ ಖಾಸಗೀ ಸಂಸ್ಥೆಗಳು ಯಾವುದೇ ರೀತಿಯಿಂದ ಪ್ರತಿಕೂಲ ಪರಿಸ್ಥಿತಿಯಿಂದ ಬಾಧಿತಗೊಳ್ಳುವುದಿಲ್ಲ. ಈ ಮೂಲಕ ಖಾಸಗೀ ಉಚ್ಚ ಶಿಕ್ಷಣ ಸಂಸ್ಥೆಗಳು ತಮ್ಮ ಸಂಸ್ಥೆಯ ಕಾರ್ಯಕ್ರಮಗಳಿಗೆ ಶುಲ್ಕ ನಿಗದಿಯನ್ನು ಸ್ವತಂತ್ರವಾಗಿಯೇ ನಿರ್ಧರಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದರೆ ಈ ಖಾಸಗೀ ಸಂಸ್ಥೆಗಳೂ ಸಹಿತ ಶುಲ್ಕ ವಿನಾಯಿತಿ ಮತ್ತು ವಿದ್ಯಾರ್ಥಿ ವೇತನವನ್ನು ಅರ್ಹವಾಗಿಯೇ ರೂಪಿಸಬೇಕು. ಖಾಸಗೀ ಉಚ್ಚ ಶಿಕ್ಷಣ ಸಂಸ್ಥೆಗಳು ವಿಧಿಸುವ ಶುಲ್ಕ ಹಾಗೂ ಇತರ ಖರ್ಚಿನ ವಿವರಗಳನ್ನೂ ಪಾರದರ್ಶಕವಾಗಿಯೇ ಪ್ರಕಟಗೊಳಿಸಿರಬೇಕು ಮತ್ತು ಯಾವುದೇ ವಿದ್ಯಾರ್ಥಿಯು ಪ್ರವೇಶ ಪಡೆಯುವ ಸಮಯಕ್ಕೆ ಇಲ್ಲಿ ಯಾವುದೇ ರೀತಿಯ ನಿರಂಕುಶತ್ವದ ಶುಲ್ಕವನ್ನು ವಿಧಿಸುವಂತಿಲ್ಲ. ಈ ಶುಲ್ಕ ನಿರ್ಧರಣೆಯ ವ್ಯವಸ್ಥೆಯು ಉಚ್ಚ ಶಿಕ್ಷಣ ಸಂಸ್ಥೆಯನ್ನು ತಾನು ಸಾರ್ವಜನಿಕ ಹೊಣೆಗಾರಿಕೆ ನಿರ್ವಹಣೆ ಮಾಡುವಲ್ಲಿ ಕಾರ್ಯ ನಿರ್ವಹಿಸುವಾಗಿನ ಸಂದರ್ಭದ ವೆಚ್ಚಗಳನ್ನು ನ್ಯಾಯಯುತವಾಗಿಯೇ ಮರಳಿ ಪಡೆಯುವಲ್ಲಿ ರೂಪಿತಗೊಂಡಿರುವುದನ್ನು ಸಾಬೀತು ಪಡಿಸುವಂತಿರಬೇಕು.

## 19. ಉನ್ನತ ಶಿಕ್ಷಣದ ಸಂಸ್ಥೆಗಳಿಗಾಗಿ ಪರಿಣಾಮಕಾರಿ ಆಡಳಿತ ಮತ್ತು ನೇತೃತ್ವ

**19.1.** ಒಂದು ಪರಿಣಾಮಕಾರೀ ಆಡಳಿತ ವ್ಯವಸ್ಥೆ ಮತ್ತು ನೇತೃತ್ವ ಉತ್ಕೃಷ್ಟತೆಯನ್ನು–ಸಂಸ್ಕೃತಿಯನ್ನು ಸೃಷ್ಟಿಸುವಲ್ಲಿ ಸಾಮರ್ಥ್ಯವನ್ನು ಒದಗಿಸುತ್ತದೆ. ಜೊತೆಗೆ ಉಚ್ಚ ಶಿಕ್ಷಣದ ಸಂಸ್ಥೆಗಳಲ್ಲಿ ಆವಿಷ್ಕಾರಕ್ಕೂ ಸಮರ್ಥನೆ ದೊರೆಯುತ್ತದೆ. ಜಾಗತಿಕ ಮಟ್ಟದಲ್ಲಿ ಸುವಿಖ್ಯಾತವಾಗಿರುವ – ಭಾರತವೂ ಸೇರಿದಂತೆ– ಎಲ್ಲ ಸಂಸ್ಥೆಗಳಲ್ಲಿಯೂ ಇರುವ ಒಂದು ಸಾಮಾನ್ಯ ಲಕ್ಷಣವೆಂದರೆ, ಅಲ್ಲಿ ಅಸ್ತಿತ್ವದಲ್ಲಿರುವ ಸಮರ್ಥ ಸ್ವ–ನಿಯಂತ್ರಿತ ಆಡಳಿತ ವ್ಯವಸ್ಥೆ ಮತ್ತು ಪ್ರತಿಭೆಯಾಧಾರಿತ ವ್ಯಕ್ತಿಗಳನ್ನು ಸಂಸ್ಥೆಯ ಮುಖ್ಯಸ್ಥರನ್ನಾಗಿಸಿರುವ ಸಂಗತಿ.

**19.2.** ಅದಕ್ಕಾಗಿ ಸೂಕ್ತಗೊಳಿಸಲಾಗಿರುವ ಶ್ರೇಣಿಬದ್ಧ ಮಾನ್ಯತೆ ಮತ್ತು ಶ್ರೇಣೀಕೃತ ಸ್ವಾಯತ್ತತೆಯ ಸೂಕ್ತ ನೀತಿಯನ್ನು, ಅದೂ ಹಂತ ಹಂತದ ಸ್ವರೂಪದಲ್ಲಿ 15 ವರ್ಷಗಳ ಅವಧಿಯವರೆಗೆ ನಿರ್ಧರಿಸಿ, ಭಾರತದಲ್ಲಿರುವ ಎಲ್ಲಾ ಉಚ್ಚ ಶಿಕ್ಷಣ ಸಂಸ್ಥೆಗಳು 'ಸ್ವಯಂ–ನಿಬಂಧಕ ವ್ಯವಸ್ಥೆ ಹೊಂದಿರುವ ಸ್ವತಂತ್ರ ಸಂಸ್ಥೆಗಳಾಗಿರುವಂತೆ ಗುರಿ ಹೊಂದಬೇಕಾಗಿದೆ. ಅದಕ್ಕಾಗಿ ಆವಿಷ್ಕಾರಗಳನ್ನು ಮತ್ತು ಪ್ರಾವೀಣ್ಯತೆಯನ್ನು ಹೊಂದಬೇಕಾಗಿದೆ. ಅದಕ್ಕಾಗಿ ಎಲ್ಲ ಉಚ್ಚ ಶಿಕ್ಷಣ ಸಂಸ್ಥೆಗಳು ಉನ್ನತ ಗುಣಾತ್ಮಕವಾಗಿರುವ ಮುಖಂಡತ್ವವನ್ನು ರೂಪಿಸಿ, ಜೊತೆಗೆ ಪ್ರಾವೀಣ್ಯಪೂರ್ಣ ಸಾಂಸ್ಥಿಕ ಸಂಸ್ಕೃತಿಯನ್ನು ಉತ್ತೇಜಿಸುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸುವುದನ್ನು ಎಲ್ಲ ಉಚ್ಚ ಶಿಕ್ಷಣ ಸಂಸ್ಥೆಗಳು ಖಚಿತಗೊಳಿಸಬೇಕಾಗಿದೆ.

ಸೂಕ್ತವಾಗಿರುವ ಶ್ರೇಣೀಕೃತ ಮಾನ್ಯತೆಯನ್ನು ಪಡೆದ ನಂತರದಲ್ಲಿ– ಆಯಾ ಸಂಸ್ಥೆಯು ಪ್ರಗತಿಯ ಪಥದಲ್ಲಿ ಚಲಿಸಲು ಸಿದ್ಧಗೊಂಡಿರುತ್ತದೆ, ಒಂದು ಆಡಳಿತ ಮಂಡಳಿ(BoG)ಯು ಇಲ್ಲಿ ಸ್ಥಾಪಿಸಲ್ಪಡಬೇಕಾಗುವದು. ಮತ್ತು ಅದರಲ್ಲಿ (ಮಂಡಳಿಯಲ್ಲಿ) ಉನ್ನತ ಶಿಕ್ಷಣ ತಜ್ಞರು ಸಕ್ಷಮವಾಗಿಯೇ ತಮ್ಮ ಸಾಮರ್ಥ್ಯಗಳಿಂದಲೇ ಪೂರ್ತಿಯಾಗಿ ತಮ್ಮನ್ನು ತೊಡಗಿಸಿಕೊಂಡು ಸಾಮರ್ಥ್ಯವನ್ನು ಪುರಾವಿಸಬೇಕು. ಜೊತೆಗೆ ಬದ್ಧತೆಯ ವಿಷಯದಲ್ಲಿಯೂ, ಸ್ಥಿರವಾದ ಸಂವೇದನೆಯನ್ನು ಹೊಂದಿ ಸಂಸ್ಥೆಗೆ ಬದ್ಧರಾಗಿರುವ ವಿಷಯವನ್ನು ಈ ಮಂಡಳಿಯು ಒಳಗೊಂಡಿರುತ್ತದೆ. ಈ 'ಆಡಳಿತ ಮಂಡಳಿಯು" ಈ ಸಂಸ್ಥೆಯನ್ನು ಯಾವುದೇ ಬಾಹ್ಯ ವಿಷಯಗಳ/ವ್ಯಕ್ತಿಗಳ ಹಸ್ತಕ್ಷೇಪವಿಲ್ಲದಂತೆ ಮುಕ್ತ ವಾತಾವರಣದಲ್ಲಿ ಕಾರ್ಯ ನಿರ್ವಹಿಸುವಂತೆ ಸಂಸ್ಥೆಯ ಮುಖ್ಯಸ್ಥನನ್ನು ಆಯ್ಕೆ ಮಾಡುವದನ್ನೂ ಒಳಗೊಂಡಿದೆ. ಮತ್ತು ಸಂಸ್ಥೆಯ ಆಡಳಿತಾತ್ಮಕವಾಗಿರುವ ವಿಷಯಗಳ ಎಲ್ಲ ನಿರ್ಣಯಗಳನ್ನು ರೂಪಿಸಬಹುದು

ಇಲ್ಲಿ ಯಾವುದೇ ವಿರೋಧಾಭಾಸದ ನಿಬಂಧನೆಗಳು – ಅವು ಈ ಪೂರ್ವದಲ್ಲಿ ಇದ್ದ ನಿಬಂಧನೆಯ ಅಡಿಯಲ್ಲಿ ರೂಪಿತವಾಗಿದ್ದಲ್ಲಿ, ಅದನ್ನು ತೆಗೆದು ಹಾಕಲಾಗುವುದು. ಅದಕ್ಕಾಗಿ ಇಲ್ಲಿ ಒಂದು ಸುರಕ್ಷಾತ್ಮಕವಾಗಿರುವ ಶಾಸನವೊಂದು ಇರುತ್ತದೆ ಮತ್ತು ಇದು ನಿಬಂಧನೆಗಳ ಸಂರಚನೆಗೆ, ಆಯ್ಕೆಯ ಪ್ರಕ್ರಿಯೆಗೆ, ಅನುಷ್ಠಾನಗೊಳಿಸುವಲ್ಲಿ ಇರಬೇಕಾದ ಗತಿ–ವಿಧಾನಗಳಿಗೆ, ನಿಯಮಗಳು ಹಾಗೂ ನಿಬಂಧನೆಗಳಿಗೆ, ಮತ್ತೂ ಈ ಆಡಳಿತ ಮಂಡಳಿಯ ಹೊಣೆಗಾರಿಕೆಗಳಿಗೂ ಇರುತ್ತದೆ. ಆಡಳಿತ ಮಂಡಳಿಗೆ ಹೊಸ ಸದಸ್ಯರನ್ನು ಆಯ್ಕೆ ಮಾಡುವ ಸಂದರ್ಭವಿರುವಲ್ಲಿ, ಅದಕ್ಕಾಗಿ ಆಡಳಿದಲ್ಲಿರುವ ಮಂಡಳಿಯೇ ನೇಮಿಸಲ್ಪಡುವ ಪರಿಣಿತರ ಸಮಿತಿಯು ಅಂತಹ ವ್ಯಕ್ತಿಗಳನ್ನು ಗುರುತಿಸುತ್ತದೆ, ತದನಂತರದಲ್ಲಿ, ಹೊಸ ಸದಸ್ಯನ ಆಯ್ಕೆಯನ್ನು ಈ "ಆಡಳಿತ ಮಂಡಳಿಯೇ" ನಿರ್ಣಯಿಸುತ್ತದೆ. ಈ ರೀತಿಯ ಆಯ್ಕೆ ಮಾಡುವಲ್ಲಿ ಸಮಾನತೆಯ/ಸಮತ್ವದ ಆಧಾರದಲ್ಲಿಯೇ ಇರುವಂತೆ ಸಮೀಕರಿಸಬೇಕಾಗುತ್ತದೆ. ಇದು ಎಲ್ಲ ಉಚ್ಚ ಶಿಕ್ಷಣ ಸಂಸ್ಥೆಗಳು ಪ್ರೋತ್ಸಾಹನವನ್ನು ಪಡೆಯುವಲ್ಲಿ ರೂಪಿತಗೊಳ್ಳುವಂತೆ, ಸಹಕಾರ ಪಡೆಯುವಂತೆ, ದೈನಂದಿನ ಪ್ರಕ್ರಿಯೆಯಲ್ಲಿ ಸೂಕ್ತವಾಗಿ ಮಾರ್ಗದರ್ಶನ ದೊರೆಯುವಂತೆ ರೂಪಿತಗೊಳ್ಳುವದನ್ನು ಪರಿಕಲ್ಪಿಸಲಾಗಿದೆ. ಮತ್ತು ಇದು ಕ್ರಮೇಣ ಸ್ವಾಯತ್ತತೆಯನ್ನು ಪಡೆದ ಸಂಸ್ಥೆಯಾಗುವದನ್ನು ಹಾಗೂ ಆ ಸಂಸ್ಥೆಯ ಹಿತವನ್ನು ಬಯಸುವವರಿಗೆ ಪಾರದರ್ಶಕವಾಗಿರುವ ಹಾಗೂ ಸಂಬಂಧಿತ ದಾಖಲೆಗಳನ್ನು ಪರಿಶೀಲನೆಗೆ ಮುಕ್ತವಾಗಿ ದೊರಕಿಸಿ ಕೊಡುವಲ್ಲಿ ಈ ಆಡಳಿತ ಮಂಡಳಿಯು ಹೊಣೆಗಾರನಾಗಿರುತ್ತದೆ. ಜೊತೆಗೆ ಬದ್ಧತೆಯನ್ನೂ ಹೊಂದಿರುತ್ತದೆ. ಈ ಮಂಡಳಿಯೂ ಎಚ್.ಈ.ಸಿ.ಎಲ್ ನಿಂದ ಶಾಸನಬದ್ಧಗೊಳಿಸಿರುವ ರಾಷ್ಟ್ರೀಯ ಉಚ್ಚ ಶಿಕ್ಷಣ ನಿಬಂಧಕ ಸಮಿತಿಯ ಮೂಲಕ ರೂಪಿತಗೊಂಡಿರುವ ಎಲ್ಲ ನಿಬಂಧನಾತ್ಮಕ ಮಾರ್ಗಸೂಚಿಗಳನ್ನು ಸಂಯೋಜಿಸುವಲ್ಲಿ ಹೊಣೆಗಾರಿಕೆಯನ್ನು ಹೊಂದಿರುವುದು. 2035ರ ಹೊತ್ತಿಗೆ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ಸ್ವಾಯತ್ತವಾಗಬೇಕೆಂಬ ಗುರಿಯಿದೆ.

**19.3.** ಆಡಳಿತ ಮಂಡಳಿಯು ಸಂಬಂಧಿಸಿದ ಎಲ್ಲ ದಾಖಲೆಗಳ ಪಾರದರ್ಶಕ ಸ್ವಯಂ–ಘೋಷಣೆಯನ್ನು ಮಾಡಲು ಜವಾಬ್ದಾರವಾಗಿರುತ್ತದೆ. ಎಲ್ಲ ಆಸ್ಥಿದಾರರಿಗೆ ಉತ್ತರದಾಯಿಯಾಗಿರುತ್ತದೆ.

**19.4.** ಸಂಸ್ಥೆಯ ಎಲ್ಲ ಮುಖಂಡತ್ವವನ್ನು ಹಾಗೂ ಸಂಸ್ಥೆಯ ಪ್ರಧಾನತ್ವವನ್ನು ಉಚ್ಚ ಶೈಕ್ಷಣಿಕ ಅರ್ಹತೆ ಹೊಂದಿರುವ ಮತ್ತು ಆಡಳಿತಾತ್ಮಕ ಅನುಭವವನ್ನು ಹೊಂದಿರುವ ಹಾಗೂ ಮುಖಂಡತ್ವದ ಸಾಮರ್ಥ್ಯ ಹೊಂದಿರುವ –ಅದರಲ್ಲೂ, ಸಂಕೀರ್ಣಮಯ ಸನ್ನಿವೇಶಗಳನ್ನೂ ನಿರ್ವಹಿಸುವ ಸಾಮರ್ಥ್ಯ ಹೊಂದಿರುವ ವ್ಯಕ್ತಿಗಳಿಗೇ ವಹಿಸಬೇಕಾಗುವುದು. ಸಾಂವಿಧಾನಾತ್ಮಕವಾಗಿ ರೂಪಿತವಾಗಿರುವ ಮೌಲ್ಯಗಳಿಗೆ ಈ ಉಚ್ಚ ಶಿಕ್ಷಣ ಸಂಸ್ಥೆಗಳ ಮುಖಂಡರುಗಳು ಮುಖಂಡತ್ವವನ್ನು ಅನುಷ್ಠಾನಿಸಬೇಕಾಗಿದೆ. ಇವುಗಳ ಜೊತೆಗೆ ಆ ಸಂಸ್ಥೆಯ ಸಂಪೂರ್ಣ ದೃಷ್ಟಿಕೋನ, ಸಾಮಾಜಿಕ ಬದ್ಧತೆಯ ಗುಣಲಕ್ಷಣಗಳು, ಸಮೂಹ–ಕಾರ್ಯಾನುಷ್ಠಾನದಲ್ಲಿ ವಿಶ್ವಾಸ, ವೈವಿಧ್ಯತೆಯ ಬಹುತ್ವವನ್ನು, ಭಿನ್ನ ಭಿನ್ನ ಮನೋಭಾವದ ಜನರೊಡನೆ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಮತ್ತು ಸದಾ ಧನಾತ್ಮಕವಾಗಿರುವ ದೃಷ್ಟಿಕೋನವನ್ನು ಹೊಂದಿರಬೇಕು.

ಈ ಆಯ್ಕೆಯು ಈ ಆಡಳಿತ ಮಂಡಳಿಯಿಂದಲೇ ರೂಪಿತಗೊಳ್ಳುತ್ತಿದ್ದು, ಅದನ್ನು ಅತ್ಯಂತ ತೀವ್ರ ನಿಷ್ಕರ್ಷೆಯಿಂದ, ಯಾವುದೇ ಪಕ್ಷಪಾತವಿಲ್ಲದೇ, ಪ್ರತಿಭೆಯನ್ನು ಆಧರಿಸಿಕೊಂಡ ಪ್ರಕ್ರಿಯೆಯಲ್ಲಿ ಇರಬೇಕು. ಅದಕ್ಕಾಗಿ, ಇದರಲ್ಲಿ ಪ್ರಖ್ಯಾತ ಪರಿಣಿತ ಸಮಿತಿಯ (EEC) ಪ್ರಕ್ರಿಯೆಯ ಮೂಲಕವೇ ಸೂಚಿತವಾಗಿರುವ ವ್ಯಕ್ತಿಯನ್ನು ಆಯ್ಕೆ ಮಾಡಬೇಕಾಗುವದು. ಒಂದು ಸೂಕ್ತ ಸಂಸ್ಕೃತಿಯನ್ನು ರೂಪಿಸಿ– ಸ್ಥಿರತೆಯನ್ನು ಒದಗಿಸಬೇಕಾದಲ್ಲಿ, ಒಂದು ನಿಶ್ಚಿತ ಅವಧಿಯ ಸ್ಥಿರತೆಯ/ಸುಭದ್ರತೆಯನ್ನು ಅಲ್ಲಿ ಒದಗಿಸಬೇಕಾಗುತ್ತದೆ. ಅದು ಅಲ್ಲಿ ಸೂಕ್ತ ಸಾಂಸ್ಕೃತಿಕ ಪ್ರಗತಿಯನ್ನು ಸಾಧಿಸುವಲ್ಲಿ ಈ ರೀತಿಯ ಸುಭದ್ರತೆಯನ್ನು ಒದಗಿಸಬೇಕಾಗುತ್ತದೆ. ಅದಕ್ಕಾಗಿ ಇದೇ ಅವಧಿಯಲ್ಲಿ ನಾಯಕತ್ವದ ಉತ್ತರಾಧಿಕಾರಿಯನ್ನೂ ಇಲ್ಲಿ ಯೋಜಿಸಬೇಕಾಗುತ್ತದೆ. ಈ ರೀತಿಯ ಯೋಜನೆ ರೂಪಿಸುವಲ್ಲಿ, ಓರ್ವ ವ್ಯಕ್ತಿಯ ನಾಯಕತ್ವದ ನಂತರದಲ್ಲಿ ಸಂಸ್ಥೆಯ ಪ್ರಕ್ರಿಯೆಗಳು ಅಂತಿಮವಾಗುವದಿಲ್ಲ ಎನ್ನುವದನ್ನು ಗಮನದಲ್ಲಿ ಇರಿಸಿಕೊಂಡು ಆಯ್ಕೆಯನ್ನು ನಿರ್ಣಯಿಸಬೇಕಾಗುತ್ತದೆ. ಒಂದು ವೇಳೆ ನಾಯಕತ್ವದ ಬದಲಾವಣೆ ಸಾಕಷ್ಟು ಅವಧಿಯ ನಂತರ ಮತ್ತು ಅಲ್ಲಿ ಶೂನ್ಯ ಸ್ಥಾನವನ್ನು ಎಂದಿಗೂ ಉಳಿಸಬಾರದು ಎನ್ನುವ ವಿಷಯದಲ್ಲಿ, ಸಂಕ್ರಮಣದ ಪ್ರಸಂಗಗಳಲ್ಲಿ, ಸೌಹಾರ್ದವಾಗಿ ಪರಿಹಾರಗಳನ್ನು ಕಾಣುವಂತೆ ಮತ್ತು ಖಚಿತಗೊಳಿಸುವಂತೆ ಇರಬೇಕು. ಅಪ್ರತಿಮ ಸಾಧನೆ ಮಾಡಿದವರನ್ನು, ನಾಯಕತ್ವದ ಗುಣವನ್ನು ಹೊಂದಿದವರನ್ನು ಖಚಿತಗೊಳಿಸುವಂತೆಯೇ ಪೂರ್ವಭಾವಿಯಾಗಿಯೇ ಗುರುತಿಸಿ, ಅಲ್ಲಿ ಪ್ರಗತಿ ಸಾಧಿಸಬೇಕೆಂದಿದ್ದಲ್ಲಿ, ಅವರು ಈ ನಾಯಕತ್ವದ ಹಂತಗಳಲ್ಲಿ ಇರುವ ಏಣಿ–ಮೆಟ್ಟಲುಗಳ ವಿನ್ಯಾಸದಲ್ಲಿಯೇ ಅನುರೂಪಗೊಳ್ಳಬೇಕು.

**19.5.** ಸಮುಚಿತವಾಗಿರುವ ಧನಸಹಾಯವನ್ನು ಒದಗಿಸಲ್ಪಟ್ಟ ನಂತರದಲ್ಲಿ, ವಿಧಾಯಕ ಸಾಮರ್ಥ್ಯ ಒದಗಿಸುವಿಕೆ ಮತ್ತು ಸ್ವಾಯತ್ತತಾ ಪ್ರದಾನತೆಗಳು ಒಂದು ನಿಗದಿತ ರೀತಿಯಲ್ಲಿಯೇ , ಎಲ್ಲ ಉಚ್ಚ ಶಿಕ್ಷಣ ಸಂಸ್ಥೆಗಳಿಗೆ ಪ್ರದತ್ತವಾದ ನಂತರದಲ್ಲಿ, ಅದಕ್ಕೆ ಪ್ರತಿಯಾಗಿ, ಇವೆಲ್ಲವೂ ಸಾಂಸ್ಥಿಕ ಸಕ್ಷಮತೆಯನ್ನು, ಪ್ರಾವೀಣ್ಯತೆಯನ್ನು ಸಾಧಿಸುವಲ್ಲಿ ಬದ್ಧತೆಯನ್ನು ತೋರುವಂತೆ ಪ್ರಕ್ರಿಯೆಗಳನ್ನು ರೂಪಿಸಿ,ಅನುಷ್ಠಾನಿಸಿ, ಪುರಾವಿಸಬೇಕಾಗುತ್ತದೆ. ತಮ್ಮ ಸ್ಥಳೀಯ ಸಮುದಾಯಗಳೊಡನೆ ಸಮನ್ವಯಗೊಳ್ಳುವಿಕೆಯಲ್ಲಿಯೂ, ಹಣಕಾಸಿನ ವಿಷಯಗಳಲ್ಲಿ ಅತೀ ಉಚ್ಚ ಮಟ್ಟದ ಪ್ರಾಮಾಣಿಕತೆ, ಮತ್ತು ಬದ್ಧತೆಯನ್ನು ಹೊಂದಬೇಕಾಗಿದೆ.

ಅದಕ್ಕಾಗಿ ಪ್ರತಿಯೊಂದು ಸಂಸ್ಥೆಯೂ ಒಂದು ಸುಶೀಲವಾಗಿರುವ ಕಾರ್ಯತಂತ್ರದ ಯೋಜನೆಯನ್ನು ಅಭಿವೃದ್ಧಿ ಪಡಿಸಲು ರೂಪಿಸಿರುವ ಉಪಕ್ರಮಗಳು , ತಮ್ಮ ಪ್ರಗತಿಯನ್ನು ತಾವೇ ಮೌಲ್ಯಾಂಕನಗೊಳಿಸಿಕೊಳ್ಳುತ್ತ, ಅಲ್ಲಿ ರೂಪಿತಗೊಂಡಿರುವ ಗುರಿಗಳನ್ನು ಸಾಧಿಸಲು ಕ್ರಿಯಾಶೀಲರಾಗಬೇಕಿದೆ. ಏಕೆಂದರೆ ಇವೇ ಮುಂದೆ ಸಾರ್ವಜನಿಕ ವಲಯದಿಂದ ನಿಧಿಗಳನ್ನು ಪಡೆಯಲು ಆಧಾರ ಒದಗಿಸುತ್ತವೆ. ಅದಕ್ಕಾಗಿ ಸಾಂಸ್ಥಿಕ ಪ್ರಗತಿ ಯೋಜನೆಯನ್ನು (ಐಡಿಪಿ) ಮಂಡಳಿಯ ಸದಸ್ಯರು, ಸಂಸ್ಥೆಯ ಮುಖ್ಯಸ್ಥರು, ಬೋಧಕ ಸಿಬ್ಬಂದಿ, ವಿದ್ಯಾರ್ಥಿಗಳು, ಮತ್ತು ಇತರೆ ಸಿಬ್ಬಂದಿಗಳ ಭಾಗವಹಿಸುವಿಕೆಯಿಂದ ಇದನ್ನು ರೂಪಿಸಬೇಕಾಗಿರುತ್ತದೆ.

# ಭಾಗ–3 : ಇತರೆ ಪ್ರಮುಖ ಕ್ಷೇತ್ರಗಳು

## 20. ವೃತ್ತಿಪರ ಶಿಕ್ಷಣ(Professional Education) :

**20.1.** ಈ ನೀತಿಯಲ್ಲಿ ವೃತ್ತಿಪರ ವ್ಯಕ್ತಿಗಳನ್ನು ತರಬೇತುಗೊಳಿಸುವದೂ ಒಂದು ಮುಖ್ಯ ಸಂಗತಿಯಾಗಿದ್ದು, ಮತ್ತು ಇದು ಎಲ್ಲೆಡೆಗೂ ಸಾರ್ವಜನಿಕವಾಗಿಯೇ ಅತ್ಯಂತ ಪ್ರಮುಖ ವಿಷಯವಾಗಿರುತ್ತದೆ. ಒಂದು ಸುವ್ಯವಸ್ಥಿತಗೊಂಡ ಶಿಕ್ಷಣದ ಒಂದು ವಿಭಾಗವಾಗಿ ಮತ್ತು ಕಾರ್ಯಾನುಷ್ಠಾನಗೊಳಿಸುವ ಸಲುವಾಗಿಯೇ ಇರುವ ಶಿಕ್ಷಣ ವ್ಯವಸ್ಥೆ ಇದಾಗಿರುತ್ತದೆ. ಇದು ಅಂತರ್–ಶೃಂಖಲೆಗಳ ಸಂಬಂಧವನ್ನು ಹೊಂದಿರುವ ಅಂತರ್–ಶಿಸ್ತೀಯ ಆಲೋಚನಾ ವಿಧಾನದ, ಸಂವಾದದ, ಚರ್ಚೆಯ, ಸಂಶೋಧನೆಯ ಮತ್ತು ಆವಿಷ್ಕಾರಗಳೆಲ್ಲವನ್ನೂ ವಿಮರ್ಶಾಪೂರ್ಣವಾಗಿಯೇ ಅಂತರ್ಗತಗೊಳಿಸಿಕೊಂಡಿರಲೇಬೇಕಾಗುತ್ತದೆ. ಇದನ್ನು ಸಿದ್ಧಿಸಿಕೊಳ್ಳುವ ಸಲುವಾಗಿ, ಯಾವಾಗಲೂ ಈ ವೃತ್ತಿಪರ ಶಿಕ್ಷಣವು ಕೇವಲ ಓರ್ವ ವ್ಯಕ್ತಿಯ ವಿಶೇಷತೆಯನ್ನು ಅವಲಂಬಿಸಿಕೊಂಡು, ಪ್ರತ್ಯೇಕತಾ ರೀತಿಯಲ್ಲಿಯೇ ಅನುಷ್ಠಾನಿಸುವಂತೆ ಇರುವುದಿಲ್ಲ.

**20.2.** ಈ ರೀತಿಯಲ್ಲಿ ಈ ವೃತ್ತಿಪರ ಶಿಕ್ಷಣವು ಒಟ್ಟೂ ಉಚ್ಚ ಶಿಕ್ಷಣದ ಸಮಗ್ರತೆಯಲ್ಲಿ ಅಂತರ್ಗತವಾಗಿರುವ ಒಂದು ಅಂಶವೇ ಆಗಿರುತ್ತದೆ. ಅದಕ್ಕಾಗಿಯೇ ನಿಗದಿಗೊಂಡಿರುವ ಕೃಷಿವಿಶ್ವವಿದ್ಯಾಲಯಗಳು, ಕಾನೂನು ವಿಶ್ವವಿದ್ಯಾಲಯಗಳು, ಆರೋಗ್ಯ–ವಿಜ್ಞಾನ ವಿಶ್ವವಿದ್ಯಾಲಯಗಳು, ತಾಂತ್ರಿಕ ವಿಶ್ವವಿದ್ಯಾಲಯಗಳು, ಮತ್ತು ಇನ್ನಿತರ ವಲಯಗಳಲ್ಲಯೂ ಈ ರೀತಿಯಲ್ಲಿಯೇ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳು, ಇನ್ನು ಮುಂದೆ ಇವೆಲ್ಲವೂ ಬಹುಶಿಸ್ತೀಯ ಅಧ್ಯಯನ ವ್ಯವಸ್ಥೆಯನ್ನು ಹೊಂದಿರುವ ಸಂಸ್ಥೆಗಳಾಗಿ ಪರಿವರ್ತಿತವಾಗುವ ಗುರಿಯನ್ನು ಹೊಂದಬೇಕಾಗಿದೆ ಮತ್ತು ಅಲ್ಲಿ ಸಮಗ್ರವಾಗಿರುವ ಹಾಗೂ ಬಹುಶಿಸ್ತೀಯ ಶಿಕ್ಷಣವನ್ನು ಒದಗಿಸುವ ಗುರಿಯನ್ನು ಅಳವಡಿಸಿಕೊಳ್ಳಬೇಕಾಗಿದೆ. ವೃತ್ತಿಪರ ಶಿಕ್ಷಣವನ್ನಾಗಲಿ ಅಥವಾ ಸಾಮಾನ್ಯ ಶಿಕ್ಷಣವನ್ನಾಗಲಿ ಒದಗಿಸುತ್ತಿರುವ ಎಲ್ಲ ಸಂಸ್ಥೆಗಳೂ, ಇವೆಲ್ಲವೂ ಸಂಯೋಗಾತ್ಮವಾಗಿರುವ ಸಂಸ್ಥೆಗಳಾಗಿ/ ವಲಯಗಳಾಗಿ ಈ ಎರಡೂ ವಿಷಯಗಳಲ್ಲಿ ಯಾವುದೇ ಅಡೆ ತಡೆ ಇಲ್ಲದೇ ಶಿಕ್ಷಣವನ್ನು ಒದಗಿಸುವ ರೀತಿಯಲ್ಲಿ, ಅದರಲ್ಲೂ 2030 ರ ಸಮಯಕ್ಕೆ, ಈ ರೀತಿಯ ಸಮಗ್ರತೆಯ ವ್ಯವಸ್ಥೆಯು ಎಲ್ಲೆಡೆಗೂ ಇರುವಂತೆ ವಿಕಸನಗೊಳ್ಳಬೇಕಾಗಿದೆ.

**20.3.** ಕೃಷಿ ಶಿಕ್ಷಣವನ್ನು, ಅದಕ್ಕೆ ಯುಕ್ತ ಸಂಬಂಧವಾಗಿರುವ ಶಾಸ್ತ್ರಗಳ ಹಿನ್ನೆಲೆಯಲ್ಲಿ ಪುನರುಜ್ಜೀವನಗೊಳಿಸಲಾಗುತ್ತಿದೆ. ಈಗಾಗಲೇ ರಾಷ್ಟ್ರದಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಶೇಕಡಾ 9 ರಷ್ಟು ವಿಶ್ವ ವಿದ್ಯಾಲಯಗಳಲ್ಲಿ ಈ ಶಿಕ್ಷಣವನ್ನು ಸಮಾವೇಶಿತಗೊಳಿಸಲಾಗಿದ್ದರೂ ಸಹಿತ, ಇಲ್ಲಿ ಶಿಕ್ಷಣಕ್ಕೆ ಪ್ರವೇಶ ಪಡೆದಿರುವುದು – ಉಚ್ಚ ಶಿಕ್ಷಣಕ್ಕೆ ಪ್ರವೇಶ ಪಡೆದಿರುವ ಸಂಖ್ಯೆಯಲ್ಲಿ ಕೇವಲ ಶೇಕಡಾ 1 ರಷ್ಟು ಮಾತ್ರ ಇದೆ. ಹೀಗಾಗಿ ಈ "ಕೃಷಿ" ಶಿಕ್ಷಣದ ಸಾಮರ್ಥ್ಯವನ್ನು ಮತ್ತು ಅದರ ಗುಣಾತ್ಮಕತೆಯನ್ನು ಮತ್ತು ಸಂಬಂಧ–ಯುಕ್ತ ಶಾಸ್ತ್ರಗಳನ್ನು ಕಡ್ಡಾಯವಾಗಿ ಸುಧಾರಣೆ ಮಾಡಲೇಬೇಕಾಗಿದೆ. ಈ ಮೂಲಕ ಈ ಪ್ರಗತಿಯನ್ನು ಸಾಧಿಸಲು ಮತ್ತು ಅದರ ಉಪಯುಕ್ತತೆಯನ್ನು ಹೆಚ್ಚಿಸುವ ಸಲುವಾಗಿ ಉತ್ತಮ ಕೌಶಲ್ಯವನ್ನು ಹೊಂದಿರುವ ಪದವೀಧರರು ಹಾಗೂ ತಂತ್ರಜ್ಞರು, ಆವಿಷ್ಕಾರಪೂರ್ಣವಾಗಿರುವ ಸಂಶೋಧನೆಗಳು ಮತ್ತು ಮಾರುಕಟ್ಟೆಯಾಧಾರಿತ ವಿಸ್ತರಣೆಗಳನ್ನು ಆಧುನಿಕ ತಂತ್ರಜ್ಞಾನದ ವ್ಯವಸ್ಥೆಯೊಡನೆ ಸಂಯೋಜಿಸಿ, ಅನುಷ್ಠಾನಗೊಳಿಸುವದು ಅವಶ್ಯವಿದೆ. ಇದಕ್ಕಾಗಿ ಕೃಷಿ ವೃತ್ತಿಪರಿಣತರನ್ನು ಮತ್ತು ಪಶು ವೈದ್ಯಕೀಯ(ವಿಜ್ಞಾನ)ದ ವೃತ್ತಿಪರಿಣತರನ್ನು ಸಿದ್ಧಗೊಳಿಸುವಲ್ಲಿ, ಈ ಶಿಕ್ಷಣವನ್ನೂ ಸಾಮಾನ್ಯ ಶಿಕ್ಷಣದ ವ್ಯವಸ್ಥೆಯೊಡನೆಯೇ ಸಂಯೋಜಿಸಿ, ಸಮಗ್ರ ಶಿಕ್ಷಣದ ವ್ಯವಸ್ಥೆಯಲ್ಲಿಯೇ ಕಾರ್ಯಕ್ರಮಗಳನ್ನು (ಶಿಕ್ಷಣ ಪದ್ಧತಿಯನ್ನು) ಶೀಘ್ರದಲ್ಲಿಯೇ ಅಧಿಕಗೊಳಿಸಲಾಗುವದು. ಕೃಷಿ ವಿಜ್ಞಾನದ ಶಿಕ್ಷಣವನ್ನು ಆಯಾ ಸ್ಥಳೀಯ ಜ್ಞಾನವನ್ನು ಅರ್ಥೈಸಿಕೊಳ್ಳುವಂತೆ ಹಾಗೂ ಅದನ್ನು ಉಪಯೋಗಿಸಿಕೊಳ್ಳುವಂತೆ ಪಾರಂಪರಿಕ ಜ್ಞಾನವನ್ನೂ ಒಳಗೊಂಡಂತೆ, ಜಮೀನಿನ ಉತ್ಪಾದಕತೆಯು ಕುಸಿಯುತ್ತಿರುವಂತಹ ಸಂಕೀರ್ಣ ವಿಷಯಗಳನ್ನೂ ಒಳಗೊಂಡಂತೆ ಇದನ್ನು ತಡೆಗಟ್ಟುವ ಸಲುವಾಗಿ ಸಂಪೂರ್ಣ ಅರಿವನ್ನು ಹೊಂದುವಂತೆ ಹಾಗೂ ಸ್ಥಳೀಯ ಭಾಷೆಯಲ್ಲಿಯೂ ಸಂವಹನ ಹೊಂದಿರುವ, ಸಾಮರ್ಥ್ಯಪೂರ್ಣವಾಗಿರುವ ವೃತ್ತಿಪರಿಣತರನ್ನು,ಅದರಲ್ಲೂ ಹೆಚ್ಚುತ್ತಿರುವ ಜನಸಂಖ್ಯೆಯನ್ನು ಪರಿಶೀಲಿಸಿಯೇ ರೂಪಿಸಬೇಕಾಗಿದೆ, ಕೃಷಿ–ಶಿಕ್ಷಣವನ್ನು ನೀಡುತ್ತಿರುವ ಶಿಕ್ಷಣ ಸಂಸ್ಥೆಗಳು ಕಡ್ಡಾಯವಾಗಿ ಸ್ಥಳೀಯ ಸಮುದಾಯಗಳಿಗೆ ನೇರವಾಗಿ ಸಹಕಾರಿಯಾಗಿರುವಂತೆ ಹಾಗೂ ಫಲಪ್ರದವಾಗಿರುವಂತೆಯೇ ಇರಬೇಕು; ಅದಕ್ಕಾಗಿ "ಕೃಷಿ ತಾಂತ್ರಿಕ ಪಾರ್ಕ್"(ATP) ಗಳನ್ನು ಪ್ರಾರಂಭಿಸುವ ಒಂದು ವಿಧಾನವನ್ನು ರೂಪಿಸಲಾಗುವುದು. ಆ ಮೂಲಕ ತಂತ್ರಜ್ಞಾನವನ್ನೂ ಇಲ್ಲಿ ಪರಿಪಾಲನಗೊಳಿಸುವ(Incubation) ಹಂತದ ಮೂಲಕ ಮತ್ತು ಸುಸ್ಥಿರ ಕಾರ್ಯಪ್ರಣಾಳಿಕೆಗಳ ಅನುಷ್ಠಾನದ ಮೂಲಕ ವಿಸ್ತರಣೆಗೊಳಿಸುವದು( Dissemination).

**20.4.** ಕಾನೂನು ಶಿಕ್ಷಣವು ಇದೀಗ ಜಾಗತಿಕವಾಗಿಯೇ ಸ್ಪರ್ಧಾತ್ಮಕವಾಗುತ್ತಿರುವ ರೀತಿಯಲ್ಲಿಯೇ ಇರುವುದನ್ನು ಅಪೇಕ್ಷಿಸುತ್ತದೆ. ಅತ್ಯುತ್ತಮವಾಗಿರುವ ಪ್ರಾಯೋಗಿಕಗಳನ್ನು ಅಳವಡಿಸಿಕೊಳ್ಳುವ ಮೂಲಕ ಹಾಗೂ ಅತ್ಯಾಧುನಿಕ ತಂತ್ರಜ್ಞಾನವನ್ನೂ

ಸ್ವೀಕರಿಸುವ ಮೂಲಕ, ಸಕಾಲದಲ್ಲಿಯೇ ನ್ಯಾಯವು ದೊರೆಯುವಂತೆ ಹಾಗೂ ಎಲ್ಲೆಡೆಗೂ ಸುಲಭವಾಗಿ ಲಭ್ಯವಾಗುವಂತೆ– ಅಳವಡಿಸಿಕೊಳ್ಳಬೇಕಾಗಿದೆ. ಇದೇ ಸಮಯದಲ್ಲಿ, ಇದು ಮಾನವ–ಹಕ್ಕುಗಳ, ಶಾಸನಗಳ ಅನುಷ್ಠಾನದ, ಪ್ರಜಾಪ್ರಭುತ್ವವನ್ನು ಪುನರ್–ಸಂಯೋಜನೆಗೊಳಿಸುವದನ್ನು ರೂಪಿಸುವ ಸಲುವಾಗಿ –ಹಾಗೂ ಸಂವಿಧಾನವು ಒದಗಿಸಿರುವ– ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಮೌಲ್ಯಗಳ ಜೊತೆಗೆ ಜ್ಞಾನಪೂರ್ಣತೆಯಿಂದ ಕೂಡಿರುವಂತೆ ಹಾಗೂ ಕಡ್ಡಾಯವಾಗಿಯೇ ತಿಳಿಸಬೇಕಾಗಿದೆ. ಕಾನೂನು ಶಿಕ್ಷಣದ ಪಠ್ಯಕ್ರಮವು ಸಾಮಾಜಿಕ–ಸಾಂಸ್ಕೃತಿಕ ವಿಷಯಗಳನ್ನು –ಪೂರ್ವಾಪರ ಸಂಬಂಧಗಳನ್ನು– ಒಳಗೊಂಡಿರಬೇಕಾಗಿದೆ. ಸಾಕ್ಷ್ಯಾಧಾರಿತ ರೀತಿಯಲ್ಲಿ ಕಾನೂನು ಚಿಂತನದ ಇತಿಹಾಸದ ಹಿನ್ನೆಲೆಯಲ್ಲಿ, ನ್ಯಾಯದ ತತ್ತ್ವಗಳಲ್ಲಿ, ನ್ಯಾಯ ಶಾಸ್ತ್ರವನ್ನು ಅನ್ವಯಗೊಳಿಸುವಲ್ಲಿ ಮತ್ತು ಇದಕ್ಕೆ ಸಂಬಂಧಪಟ್ಟಿರುವ ಸೂಕ್ತವಾಗಿರುವ ಹಾಗು ಸಮರ್ಪಕವಾಗಿರುವ ವಿಷಯಗಳು; ಈ ಶಿಕ್ಷಣವನ್ನು ಒದಗಿಸುತ್ತಿರುವ ಆಯಾ ರಾಜ್ಯದ ಶಿಕ್ಷಣ ಸಂಸ್ಥೆಗಳು, ಈ ಕಾನೂನು ಶಿಕ್ಷಣವನ್ನು ದ್ವಿ–ಭಾಷಾ ವ್ಯವಸ್ಥೆಯಲ್ಲಿಯೇ ಕಡ್ಡಾಯಗೊಳಿಸಿ ಇನ್ನು ಮುಂದೆ ಬರಲಿರುವ ವಕೀಲರುಗಳಿಗೆ ಹಾಗೂ ನ್ಯಾಯಾಧೀಶರಿಗೆ ಇಂಗ್ಲೀಷಿನಲ್ಲಿ ಹಾಗೂ ಆಯಾ ರಾಜ್ಯಗಳಲ್ಲಿ ಸ್ಥಾಪಿತಗೊಂಡಿರುವ ರಾಜ್ಯದ ಭಾಷಾ ವ್ಯವಸ್ಥೆಯಲ್ಲಿ ಶಿಕ್ಷಣವನ್ನು ನೀಡಬೇಕಾಗಿದೆ.

**20.5.** ಆರೋಗ್ಯ–ಸುರಕ್ಷಾ ಶಿಕ್ಷಣವನ್ನು ಪುನರ್–ಪರಿಕಲ್ಪನೆಗೊಳಿಸುವದು ಅತ್ಯಾವಶ್ಯಕವಾಗಿದೆ. ಈ ಮೂಲಕ ಈ ಶಿಕ್ಷಣದ ಕಾರ್ಯಕ್ರಮಗಳ/ಯೋಜನೆಗಳ ಸಂರಚನೆ ಮತ್ತು ವಿನ್ಯಾಸಗಳನ್ನು ಜೊತೆಗೆ ಅವಧಿಯನ್ನು ನಿಗದಿಗೊಳಿಸುವ ಮೂಲಕ, ಇಲ್ಲಿ ಪದವೀಧರರು ಪ್ರಮುಖ ಪಾತ್ರವನ್ನು ವಹಿಸುವಂತೆ ಹೊಂದಾಣಿಕೆ ಮಾಡಬೇಕಿದೆ. ಅದಕ್ಕಾಗಿ ನಿಗದಿತಗೊಳಿಸಲಾಗಿರುವ ಅವಧಿ ಯಲ್ಲಿ ನಿರಂತರವಾಗಿ ವಿದ್ಯಾರ್ಥಿಗಳನ್ನು– ಸೂಕ್ತವಾಗಿಯೇ ವ್ಯಾಖ್ಯಾನಿಸಲ್ಪಟ್ಟಿರುವ ಹಾಗೂ ಮೂಲಭೂತವಾಗಿ ಕಾರ್ಯನಿರ್ವಹಿಸುವಲ್ಲಿ ಅವಶ್ಯವಾಗಿರುವ ಪ್ರಥಮೋಪಚಾರ ಹಾಗೂ ನಂತರದಲ್ಲಿ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಣೆ (Primary Health Care and Secondary Hospital), ಆರೋಗ್ಯ ರಕ್ಷಣೆಯ ವಿಷಯಗಳಲ್ಲಿ ಜನಸಮೂಹವು ಸಾಮಾನ್ಯವಾಗಿ ಬಹುಮುಖೀ ಅವಕಾಶಗಳನ್ನು ಅಪೇಕ್ಷಿಸುತ್ತದೆ. ಅದಕ್ಕಾಗಿ ನಮ್ಮ ಈ ಆರೋಗ್ಯ–ಸುರಕ್ಷಾ ಶಿಕ್ಷಣವು –ಅಲೋಪತಿ ಮಾದರಿಯ ಶಿಕ್ಷಣದ ವಿದ್ಯಾರ್ಥಿಗಳೂ ಸಹಿತ– ಕಡ್ಡಾಯವಾಗಿಯೇ ಆಯುರ್ವೇದ, ಯೋಗ, ನಿಸರ್ಗ ಚಿಕಿತ್ಸೆ, ಯುನಾನಿ, ಸಿದ್ಧ ಮತ್ತು ಹೋಮಿಯೋಪತಿ (AYUSH) ಗಳ ಬಗೆಗೆ ಮೂಲ ತಿಳುವಳಿಕೆಗಳನ್ನು ಹೊಂದಬೇಕಾಗಿದೆ. ಇದಕ್ಕೆ ಪ್ರತಿಯಾಗಿ ಈ ಆಯುಷ್ ವಿದ್ಯಾರ್ಥಿಗಳೂ ಸಹಿತ ಅಲೋಪತಿಯ ಮೂಲ ತಿಳುವಳಿಕೆಯನ್ನು ಹೊಂದಿರಬೇಕಾಗಿದೆ .ರೋಗನಿರೋಧಕ ಆರೋಗ್ಯ ಸುರಕ್ಷತೆಯ ಬಗೆಗೆ ಹಾಗೂ ಸಾಮುದಾಯಿಕ ಔಷಧಿ(ಪಾರಂಪರಿಕ ಚಿಕಿತ್ಸೆ)ಗಳು ಈ ಆರೋಗ್ಯ ಸುರಕ್ಷಣೆಯ ಶಿಕ್ಷಣದ ಎಲ್ಲಾ ವಿನ್ಯಾಸಗಳಲ್ಲಿಯೂ ಬಹು ಪ್ರಮುಖವಾದ ಪಾತ್ರವನ್ನೇ ಹೊಂದಿವೆ.

**20.6**. ತಾಂತ್ರಿಕ ಶಿಕ್ಷಣವು ಪದವಿ ಮತ್ತು ಡಿಪ್ಲೋಮಾ ವಿಭಾಗಗಳನ್ನು ಹೊಂದಿದ್ದು, ಇಂಜಿನೀಯರಿಂಗ್, ತಂತ್ರಜ್ಞಾನ, ನಿರ್ವಹಣೆ, ಕಟ್ಟಡ ರಚನೆ, ನಗರ ಯೋಜನೆ, ಔಷಧಿ ಮಾರಾಟ, ಹೋಟೇಲ್ ನಿರ್ವಹಣೆ, ಆಹಾರ ತಯಾರಿಕೆ ತಂತ್ರಜ್ಞಾನ ಇತ್ಯಾದಿಗಳೆಲ್ಲವೂ ಭಾರತದ ಸಮಗ್ರ ಪ್ರಗತಿಗೆ ನಿರ್ಣಯಾತ್ಮಕವಾಗಿಯೇ ಇರುವ ಅಂಶಗಳಾಗಿವೆ. ಶ್ರೇಷ್ಠ ಗುಣಾತ್ಮಕವಾಗಿರುವ ಅರ್ಹತೆಯನ್ನು ಹೊಂದಿರುವ ಮಾನವ ಶಕ್ತಿಗೆ ಈ ವಲಯದಲ್ಲಿ ಅಪಾರ ಬೇಡಿಕೆ ಇರುವುದಷ್ಟೇ ಅಲ್ಲದೇ ಇದು ಈ ರೀತಿಯ ಉದ್ಯಮಕ್ಕೂ ಹಾಗೂ ಉಚ್ಚ ಶಿಕ್ಷಣದ ಸಂಸ್ಥೆಗಳ ಮಧ್ಯದಲ್ಲಿ ಒಂದು ನಿಕಟ ಸಹಯೋಗವನ್ನು ಅಪೇಕ್ಷಿಸುತ್ತದೆ. ಈ ಮೂಲಕ, ಈ ವಲಯಗಳಲ್ಲಿ ಆವಿಷ್ಕಾರ ಮತ್ತು ಸಂಶೋಧನೆಗಳನ್ನು ರೂಪಿಸಲು ಸಾಧ್ಯವಾಗುತ್ತದೆ. ಇದರ ಜೊತೆಜೊತೆಗೆ ಮಾನವ ಪ್ರಯತ್ನಗಳಿಗೆ ತಂತ್ರಜ್ಞಾನದ ಪ್ರಭಾವವು ತಾಂತ್ರಿಕ ಶಿಕ್ಷಣ ಮತ್ತು ಶಾಸ್ತ್ರೀಯ ಅಧ್ಯಯನದ ಮಧ್ಯದಲ್ಲಿ ನಿರ್ಮಿತಗೊಂಡಿರುವ ಕಂದಕವನ್ನು ಕಿತ್ತು ಹಾಕುತ್ತದೆ. ಈ ರೀತಿಯಾಗಿ, ಈ ತಾಂತ್ರಿಕ ಶಿಕ್ಷಣವನ್ನು 'ಹಲವು ವಿಷಯಗಳ ಅಧ್ಯಯನದ ವ್ಯವಸ್ಥೆ'ಯ ಸಂಸ್ಥೆಗಳಲ್ಲಿ ಹಾಗೂ ಅಲ್ಲಿನ ಪಠ್ಯಕ್ರಮಗಳಲ್ಲಿ ಕಲ್ಪಿಸಿಕೊಡುವ ಅವಕಾಶಗಳು ಲಭ್ಯವಾಗುವಂತೆ ಪುನರ್–ಸಂಯೋಜನೆಗೊಳಿಸುವಂತೆ ಲಕ್ಷ್ಯ ಕೊಡಲಾಗುವುದು. ಒಟ್ಟಿನಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿರುವ ಅಂದರೆ– ಕೃತಕ ಬುದ್ಧಿ ಮತ್ತೆ(Artificial Intelligence), ಮೂರನೇ–ಆಯಾಮದ (3) ಮಶಿನ್ ಬೃಹತ್–ಪ್ರಮಾಣದ ದತ್ತಾಂಶಗಳ ವಿಶ್ಲೇಷಣೆ, ಯಂತ್ರ–ಕಲಿಕೆ (Machine Learnig) ಜೊತೆಜೊತೆಗೆ ವಂಶವಾಹಿ ಅಧ್ಯಯನ (Genomics Study)ದಲ್ಲಿ ಮಾನವನಿಗೆ ಸಂಬಂಧಿಸಿದಂತೆ ಪ್ರತಿಯೊಂದು ವಂಶವಾಹಿನಿಯ ಸ್ಥಾನವನ್ನು ಮತ್ತು ನ್ಯೂಕ್ಲಿಯೋಡ್‌ಗಳ ಅನುಕ್ರಮಣಿಕೆಗಳನ್ನು ದಾಖಲಿಸುವುದು(ಇದು 1990 ರಲ್ಲಿ ಪ್ರಾರಂಭಗೊಂಡು 2000ನೇ ಇಸ್ವಿಯಿಂದ ಯಶಸ್ವಿಯಾಗಿ ಅಧ್ಯಯನದಲ್ಲಿ ಅಳವಡಿಸಲಾಗಿದೆ), ಜೈವಿಕ ತಂತ್ರಜ್ಞಾನ, ನ್ಯಾನೋ ತಂತ್ರಜ್ಞಾನ, ನರ ವಿಜ್ಞಾನ, ಆರೋಗ್ಯ ಸಂಬಂಧಿತವಾಗಿ ಮುಖ್ಯವಾಗಿಯೇ ಅನ್ವಯಗೊಂಡಿರುವ, ಪರಿಸರ, ಮತ್ತು ಸುಸ್ಥಿರ ಜೀವನದ ವಿಷಯಗಳನ್ನು, ಭಾರತದಲ್ಲಿ ಪದವಿ–ಪೂರ್ವ ಶಿಕ್ಷಣ ಹಂತದಲ್ಲಿ ಸಂಯೋಜನೆಗೊಳಿಸುವ ಮೂಲಕ, ಯುವಕರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಲಾಗುತ್ತಿದೆ.

## 21. ವಯಸ್ಕರ ಶಿಕ್ಷಣ ಮತ್ತು ಜೀವನ ಪರ್ಯಂತ ಕಲಿಕೆ

**21.1.** ಮೂಲಭೂತ ಸಾಕ್ಷರತೆ, ಶಿಕ್ಷಣವನ್ನು ಪಡೆದುಕೊಳ್ಳುವುದು ಹಾಗೂ ಜೀವನ ನಿರ್ವಹಣೆಗೆ ಅವಕಾಶಗಳನ್ನು ಕಂಡುಕೊಳ್ಳುವುದು ಮತ್ತು ಅದನ್ನು ಪಡೆದುಕೊಳ್ಳುವುದು ಪ್ರತಿಯಬ್ಬ ನಾಗರಿಕನ ಮೂಲಭೂತ ಹಕ್ಕುಗಳಲ್ಲಿ ಒಂದಾಗಿದೆ. ಸಾಕ್ಷರತೆ ಮತ್ತು ಬುನಾದಿ ಶಿಕ್ಷಣಗಳು ವೈಯಕ್ತಿಕವಾಗಿ, ಸಾಮಾಜಿಕವಾಗಿ ಆರ್ಥಿಕ, ಹಾಗೂ ಜೀವಮಾನ ಪರ್ಯಂತವೂ ಕಲಿಕೆಗೆ ಅವಕಾಶಗಳನ್ನು ಪ್ರತಿಯೊಬ್ಬರಿಗೂ ಕಲ್ಪಿಸಲಾಗುತ್ತಿರುವುದರಿಂದ ಇವು ವ್ಯಕ್ತಿಗತವಾಗಿಯೂ ಮತ್ತು ವೃತ್ತಿಪರತೆಯಲ್ಲಿಯೂ ಪ್ರಗತಿ ಸಾಧಿಸಲು ಸಮರ್ಥತೆಯನ್ನು ಒದಗಿಸುತ್ತವೆ. ಸಮಾಜದ ಹಾಗೂ ರಾಷ್ಟ್ರದ ಹಂತಗಳಲ್ಲಿ, ಸಾಕ್ಷರತೆ ಮತ್ತು ಬುನಾದಿ ಶಿಕ್ಷಣಗಳು ಸಾಮರ್ಥ್ಯಪೂರ್ಣ ಶಕ್ತಿಯನ್ನು ವೃದ್ಧಿಸುವ ಅಂಶಗಳಾಗಿದ್ದು, ಈ ಮೂಲಕ ಇನ್ನುಳಿದ ಎಲ್ಲ ಅಭಿವೃದ್ಧಿಗಳಲ್ಲಿಯೂ ಯಶಸ್ಸನ್ನು ಅಪಾರ ಪ್ರಮಾಣದಲ್ಲಿ ಹೆಚ್ಚಿಸಲು ಸಾಧ್ಯವಾಗುತ್ತದೆ. ಇಡೀ ಜಗತ್ತಿನಾದ್ಯಂತ ಇರುವ ಅಂಕಿ–ಅಂಶಗಳು ತೋರಿಸುತ್ತಿರುವ ಪ್ರಕಾರ, ಸಾಕ್ಷರತಾ ಪ್ರಮಾಣ ಹಾಗೂ ತಲಾ ಒಟ್ಟು ದೇಶೀಯ ಉತ್ಪನ್ನ (per capita GDP) ಮಧ್ಯದಲ್ಲಿ ಒಂದು ಮಹತ್ತರವಾಗಿರುವ ಉಚ್ಚ–ಸಹಸಂಬಂಧ ಇರುವುದನ್ನು ಸೂಚಿಸುತ್ತಿವೆ.

**21.2.** ಈ ಹಂತದಲ್ಲಿ, ಒಂದು ಸಮುದಾಯದ ಮಧ್ಯೆ ಅನಕ್ಷರಸ್ಥನಾಗಿರುವ ಸದಸ್ಯನಿರುವ ಸಂದರ್ಭವಿರುವಲ್ಲಿ, ಆಗ ಅವನು ಅಗಣಿತ ಪ್ರಮಾಣದ ತೊಂದರೆಗಳನ್ನು ಎದುರಿಸಬೇಕಾಗುತ್ತದೆ –ಜೊತೆಗೆ ಜೀವನಾವಶ್ಯಕವಾಗಿರುವ ಹಣಕಾಸಿನ ವ್ಯವಹಾರಗಳನ್ನು ನಡೆಸಲು ಬೆಲೆ ನೀಡಿ ಖರೀದಿಸಲಾಗಿರುವ ವಸ್ತುವಿನ ಗುಣ ಹಾಗೂ ಗಾತ್ರಗಳ ಹೋಲಿಕೆ ಕೆಲಸಕ್ಕಾಗಿ ನಿಗದಿತ ನಮೂನೆಗಳನ್ನು ಭರ್ತಿ ಮಾಡುವಲ್ಲಿ ತೊಂದರೆ ಸಾಲಕ್ಕಾಗಿ ಅರ್ಜಿ ಸಲ್ಲಿಸುವಲ್ಲಿ ಸೇವೆಗಳನ್ನು ಪಡೆದುಕೊಳ್ಳುವಲ್ಲಿ ನಮೂನೆಗಳನ್ನು ತುಂಬಬೇಕಾಗಿರುವ ಸಮಯದಲ್ಲೆಲ್ಲ ಅಸಮರ್ಥನಾಗಿರುತ್ತಾನೆ. ಇವರಿಗೆ ಸೂಕ್ತ ಶಿಕ್ಷಣವನ್ನು ಕೊಡುವ ಮೂಲಕ, ಅವರು ಸಾರ್ವಜನಿಕ ಸುತ್ತೋಲೆಗಳನ್ನು ಅರ್ಥೈಸಿಕೊಳ್ಳಲು ಮತ್ತು ಮಾಧ್ಯಮಗಳಲ್ಲಿ ಬರುವ ಲೇಖನಗಳನ್ನು ಓದಲು, ಅಂತರ್ಜಾಲದ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳುವದನ್ನು ಕಲಿಯುವ ಮೂಲಕ ಹಾಗೂ ಇತರೇ ತಂತ್ರಜ್ಞಾನದ ಉಪಯೋಗವನ್ನು ತೆಗೆದುಕೊಳ್ಳುವದನ್ನು ಕಲಿಯುವ ಮೂಲಕ ಆಯಾ ವ್ಯಕ್ತಿಯ/ವ್ಯಕ್ತಿಗಳ ವೃತ್ತಿಯಲ್ಲಿ ಹಾಗೂ ವ್ಯಕ್ತಿಗತ ಜೀವನದಲ್ಲಿಯೂ ಪ್ರಗತಿ ಸಾಧಿಸಬಹುದು. ಇಲ್ಲಿ ಅತ್ಯಾವಶ್ಯಕವಾಗಿರುವ – ರಸ್ತೆಗಳಲ್ಲಿ ನಮೂದಿಸಿರುವ ಸುರಕ್ಷಾ ನಿರ್ದೇಶನಗಳನ್ನು ಗ್ರಹಿಸುವುದು ಔಷಧದ ವಿಷಯಗಳಲ್ಲಿ ಹಾಗೂ ಇಂತಹ ಹಲವು ಅತ್ಯಾವಶ್ಯಕ ವಿಷಯಗಳಲ್ಲಿ ಸಮರ್ಥತೆಯನ್ನು ಒದಗಿಸುತ್ತದೆ. ಇದು ಮುಂದುವರೆದು, ಈ ಶಿಕ್ಷಣದ ಮೂಲಕವಾಗಿ ಚಿಕ್ಕ ಮಕ್ಕಳಿಗೂ ಸಹಾಯಕವಾಗಿದೆ. ಭಾರತೀಯ ನಾಗರಿಕನಾಗಿ ಹೊಂದಿರುವ ಹಕ್ಕು ಹಾಗೂ ಕರ್ತವ್ಯಗಳ ಬಗೆಗೆ ಜಾಗೃತಿ, ಸಾಹಿತ್ಯಿಕ ಕೃತಿಗಳ ಮೆಚ್ಚುಗೆ, ಮಾಧ್ಯಮ ಹಾಗೂ ಆರ್ಥಿಕ–ಉತ್ಪಾದಕತೆಯನ್ನು ಹೊಂದಿರುವ ವಲಯಗಳಲ್ಲಿ ಉದ್ಯೋಗಾವಕಾಶಗಳನ್ನು ಪಡೆದುಕೊಳ್ಳುವಲ್ಲಿ ಸಹಕಾರಿಯಾಗಿರುತ್ತದೆ. ಇಲ್ಲೆಲ್ಲ ಸಾಕ್ಷರತೆಯ ಅವಶ್ಯಕತೆ ಇದ್ದೇ ಇದೆ. ಇಲ್ಲಿ ನಮೂದಿಸಿರುವ ಸಾಮರ್ಥ್ಯಗಳೆಲ್ಲವನ್ನೂ ಈ ವಯಸ್ಕ–ಶಿಕ್ಷಣ ವಿಧಾನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಾಧಿಸಲಾಗುವ ಸಾಮರ್ಥ್ಯಪೂರ್ಣ ಫಲಿತಾಂಶಗಳ ವಿವರಣಾತ್ಮಕ ಪಟ್ಟಿಯೇ ಇಲ್ಲಿ ಇದೆ.

**21.3.** ಭಾರತವನ್ನು ಒಳಗೊಂಡಂತೆ ಜಗತ್ತಿನಾದ್ಯಂತವೂ ಕೈಕೊಳ್ಳಲಾಗಿರುವ ಕ್ಷೇತ್ರ–ಅಧ್ಯಯನಗಳು ಮತ್ತು ವಿಶ್ಲೇಷಣೆಗಳು ಅತ್ಯಂತ ಸ್ಪಷ್ಟವಾಗಿಯೇ ಪ್ರದರ್ಶಿಸುತ್ತಿರುವುದೇನೆಂದರೆ, ಸ್ವಯಂಸೇವಾ ವ್ಯವಸ್ಥೆಯ ಮತ್ತು ಸಮುದಾಯದ ಒಳಗೊಳ್ಳುವಿಕೆ ಮತ್ತು ಸಂಘಟನಾತ್ಮಕಗೊಳಿಸುವಿಕೆಗಳು ಈ "ವಯಸ್ಕರ ಶಿಕ್ಷಣ"ದ ಯಶಸ್ಸಿಗೆ ಮುಖ್ಯ ಸೂತ್ರಗಳಾಗಿವೆ. ಇದರ ಜೊತೆಗೆ ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಹಾಗೂ ಸ್ವಯಂಸೇವಕರ ಉಚ್ಚ ಸಾಮರ್ಥ್ಯವೂ ಕಾರಣವಾಗಿದೆ. ಇದರ ಜೊತೆಗೆ ರಾಜಕೀಯ ಇಚ್ಛಾ ಶಕ್ತಿಯ ಸೂಕ್ತ ಜೋಡಣೆಯೊಂದಿಗೆ, ಸಂಘಟನಾತ್ಮಕವಾಗಿರುವ ಸಂರಚನೆಯನ್ನು ರೂಪಿಸುವ ಮೂಲಕ, ಪರ್ಯಾಪ್ತ ಹಣಕಾಸಿನ ಸಹಾಯವನ್ನು ಸೂಕ್ತ ಸಮಯದಲ್ಲಿಯೇ ಒದಗಿಸುವ ಮೂಲಕ, ಈ ರೀತಿಯ ಸಾಕ್ಷರತಾ ಕಾರ್ಯಕ್ರಮಗಳು ವಯಸ್ಕರಿಗೆ ಕೇವಲ ಸಾಕ್ಷರತೆಯನ್ನು, ಪ್ರಗತಿಯನ್ನು ಕಲಿಸುವುದಷ್ಟೇ ಮಾತ್ರ ಆಗಿರದೇ ಅಲ್ಲಿ ಮಕ್ಕಳಿಗೂ ಸಹಿತ ಇದರಿಂದ ಸೂಕ್ತ ಶಿಕ್ಷಣದ ವಾತಾವರಣದ ಬೇಡಿಕೆಯನ್ನು ಅಧಿಕಗೊಳಿಸುತ್ತದೆ. ಈ ಮೂಲಕ ಆ ಸಮುದಾಯಗಳಿಂದಲೂ ಸಾಮಾಜಿಕ ಪರಿವರ್ತನೆಗಳಿಗೆ ದೊಡ್ಡ ಪ್ರಮಾಣದ ಕೊಡುಗೆಗಳನ್ನು ಕಾಣಬಹುದು. 1988 ರಲ್ಲಿ ರಾಷ್ಟ್ರೀಯ ಸಾಕ್ಷರತಾ ನಿಯೋಗವು ಸ್ಥಾಪಿಸಲ್ಪಟ್ಟಲ್ಲಿಂದ, ಬಹುತೇಕವಾಗಿ ಅದು 'ಸ್ವಯಂ ಸೇವಾ ವಿಧಾನ"ದಲ್ಲಿಯೇ ಅಂದರೆ, ಜನಸಮುದಾಯದ ಒಳಗೊಳ್ಳುವಿಕೆಯಿಂದಲೇ ಸಹಕಾರ ಪಡೆದುಕೊಂಡಿತ್ತು.ಆ ಮೂಲಕ ಸಾಕ್ಷರತಾ ಪ್ರಮಾಣದಲ್ಲಿ ಮಹತ್ವದ ಪ್ರಗತಿಯನ್ನೂ 1991–2011 ರಲ್ಲಿ ಸಾಧಿಸಿತ್ತು.ಇದು ಸ್ತ್ರೀ ಸಮುದಾಯವನ್ನೂ ಒಳಗೊಂಡಂತೆ – ಆಯಾ ಸಾಮಾಜಿಕ ಸಂಬಂಧದ ವಿಷಯಗಳ ಚರ್ಚೆಯನ್ನು ಹಾಗೂ ಸಂವಾದಗಳನ್ನು ಒಳಗೊಂಡಿತ್ತು.

**21.4.** ಈ ವಯಸ್ಕರ ಶಿಕ್ಷಣದ ಸಲುವಾಗಿ, ಸರಕಾರವು ಉಪಕ್ರಮಿಸಿರುವ ಸಮರ್ಥನೀಯವಾದ ಹಾಗೂ ಆವಿಷ್ಕಾರ ಪೂರ್ಣವಾಗಿರುವ –ಅದರಲ್ಲೂ ವಿಶೇಷವಾಗಿ –ಸಮುದಾಯದ ಒಳಗೊಳ್ಳುವಿಕೆಯನ್ನು ಸುಗಮಗೊಳಿಸುವ ಹಾಗೂ ತಂತ್ರಜ್ಞಾನವನ್ನು ಲಾಭದಾಯಕವಾಗಿರುವಂತೆ ಜೊತೆಗೆ ಸರಳವೂ ಆಗಿರುವಂತೆ ಅಳವಡಿಸಿದಲ್ಲಿ, ಆಗ ಖಂಡಿತವಾಗಿಯೂ ನೂರಕ್ಕೆ ನೂರರಷ್ಟು ಸಾಕ್ಷರತೆಯನ್ನು ಪರಿಣಾಮಕಾರಿಯಾಗಿಯೇ ಸಾಧಿಸಲು ಸಾಧ್ಯವಾಗುತ್ತದೆ.

**21.5.** ಪ್ರಥಮದಲ್ಲಿ, ಒಂದು ಅಪೂರ್ವವಾಗಿರುವ ವಯಸ್ಕರ ಶಿಕ್ಷಣದ ಪಠ್ಯಕ್ರಮವನ್ನು – ಇದಕ್ಕಾಗಿಯೇ ರೂಪಿಸಲ್ಪಟ್ಟಿರುವ ಹಾಗೂ ಸಮರ್ಪಿಸಿಕೊಂಡಿರುವ 'ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಮಂಡಳಿ" (NCERT) ಯು ರೂಪು ರೇಷೆಗೊಳಿಸುವುದು. ಈ ರೀತಿಯಾಗಿ ಸಮನ್ವಯವನ್ನು ಸಾಧಿಸಲು ಪ್ರಚಲಿತ ಅವಧಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪರಿಣಿತರಿಂದ– ಸಾಕ್ಷರತೆಯ ಸಲುವಾಗಿ, ಗಣಿತ ಕೌಶಲ್ಯದ ಸಲುವಾಗಿ, ಬುನಾದಿ ಶಿಕ್ಷಣಕ್ಕಾಗಿ, ವೃತ್ತಿಪರ ಕೌಶಲ್ಯಗಳಿಗಾಗಿ ಮತ್ತು ಸಂಬಂಧಿತ ಇತರ ಎಲ್ಲ ವಿಷಯಗಳ ಕುರಿತು– ಒಂದು ಸಂರಚನೆಯನ್ನು ಅಭಿವೃದ್ಧಿ ಪಡಿಸಲಾಗುವದು. ಈ ವಯಸ್ಕರ ಶಿಕ್ಷಣದ ಸಲುವಾಗಿ ಹಾಗೂ ಪಠ್ಯಕ್ರಮವನ್ನು ರೂಪಿಸುವ ಸಲುವಾಗಿ ಕನಿಷ್ಠ ಐದು ವಿಧಾನಗಳ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಬೇಕಾಗುವುದು.ಇವುಗಳಲ್ಲಿ ಪ್ರತಿಯೊಂದೂ ನಿರ್ದಿಷ್ಟಪಡಿಸಲಾಗಿರುವ ಫಲಿತಾಂಶಗಳನ್ನು ಉದ್ದೇಶಿಸಿಯೇ ಇರಬೇಕಾಗುತ್ತದೆ.

**ಅ)** ಮೂಲಭೂತ ಸಾಕ್ಷರತೆ ಮತ್ತು ಗಣಿತ ಕೌಶಲ್ಯ

**ಆ)** ವಿಮರ್ಶಾತ್ಮಕ ಜೀವನ ಕೌಶಲ್ಯ (ಹಣಕಾಸು ನಿರ್ವಹಣಾ ಜ್ಞಾನ, ಡಿಜಿಟಲ್ ಸಾಕ್ಷರತೆ, ವಾಣಿಜ್ಯ–ವ್ಯವಹಾರ ಕೌಶಲ್ಯಗಳು, ಆರೋಗ್ಯ ಸುರಕ್ಷಾ ಕುಶಲತೆ ಮತ್ತು ಜಾಗ್ರತೆ, ಶಿಶು–ಮಕ್ಕಳ ಸಂರಕ್ಷಣೆ ಹಾಗು ಶಿಕ್ಷಣ ಮತ್ತು ಕುಟುಂಬ ಕಲ್ಯಾಣ ಇತ್ಯಾದಿ ವಿಷಯಗಳು)

**ಇ)** ವೃತ್ತಿಪರ ಕೌಶಲ್ಯಗಳ ಪ್ರಗತಿ (ಇದರ ಮೂಲಕ ಉದ್ಯೋಗಾವಕಾಶಗಳನ್ನು ಹೊಂದುವ ದೃಷ್ಟಿಕೋನವಿರುವಂತೆ)

**ಈ)** ಬುನಾದಿ ಶಿಕ್ಷಣ(ಬುನಾದಿ ಹಂತ, ಪೂರ್ವ ಸಿದ್ಧತಾ ಹಂತ, ಮಾಧ್ಯಮಿಕ ಹಂತ ಮತ್ತು ಪ್ರೌಢ ಹಂತಗಳ ಅನುರೂಪಕತೆ) ಮತ್ತು

**ಉ)** ಶಿಕ್ಷಣದ ನಿರಂತರ ಮುಂದುವರಿಕೆ (ಇದರಲ್ಲಿ ವಯಸ್ಕರ ಶಿಕ್ಷಣವನ್ನೂ ಒಳಗೊಂಡಂತೆ ಸಮಗ್ರವಾಗಿ ಕಲಾ ವಿಷಯಗಳು, ವಿಜ್ಞಾನ, ತಂತ್ರಜ್ಞಾನ, ಸಂಸ್ಕೃತಿ, ಆಟಗಳು ಮತ್ತು ಮನೋರಂಜನೆಗಳು, ಇವುಗಳ ಜೊತೆಗೆ ಆಸಕ್ತಿದಾಯಕವಾಗಿರುವ ಇತರ ವಿಷಯಗಳು ಅಥವಾ ಸ್ಥಳೀಯವಾಗಿ ಕಲಿಯುವವರ ಉಪಯೋಗಕ್ಕಾಗಿ, ಅತ್ಯಾಧುನಿಕವಾಗಿರುವ ಭೌತಿಕ–ವಿಮರ್ಶಾತ್ಮಕ ಜೀವನ ಕೌಶಲ್ಯ. ಈ ರೂಪು–ರೇಷೆಯನ್ನು ಮನದಟ್ಟು ಮಾಡಿಕೊಂಡೇ –ಏಕೆಂದರೆ, ಹಲವಾರು ಸಂದರ್ಭಗಳಲ್ಲಿ ವಯಸ್ಕರು ಬೇರೆಯದೇ ಆದ ರೀತಿಯಲ್ಲಿ ಕಲಿಯುವ– ಕಲಿಸುವ ವಿನ್ಯಾಸಗಳನ್ನು ಬಯಸುತ್ತಾರೆ. ಮಕ್ಕಳಿಗಾಗಿ ರೂಪಿಸಿರುವ ಉಪಕರಣಗಳಿಗಿಂತ ಭಿನ್ನವಾಗಿರುವದನ್ನೇ ನಿರೀಕ್ಷಿಸುತ್ತದೆ.

**21.6.** ಎರಡನೆಯದಾಗಿ, ಆಸಕ್ತಿ ಹೊಂದಿರುವ ಎಲ್ಲ ವಯಸ್ಕರಿಗೂ ಈ ವಯಸ್ಕರ ಶಿಕ್ಷಣ ಸೌಲಭ್ಯವು ದೊರೆಯುವಂತೆ –ನಿರಂತರವಾಗಿ ಜೀವಮಾನ ಪರ್ಯಂತ ದೊರೆಯುವಂತೆ– ಮೂಲಭೂತವಾಗಿಯೇ ಸೌಲಭ್ಯಗಳನ್ನು ಒದಗಿಸುವದನ್ನು ಖಚಿತಗೊಳಿಸಬೇಕಾಗಿದೆ. ಇಲ್ಲಿ, ಈ ದಿಸೆಯಲ್ಲಿ, ಒಂದು ಪ್ರಮುಖ ಉಪಕ್ರಮದ ಸೂತ್ರವಾಗಿ– ಶಾಲೆಗಳನ್ನು/ಶಾಲಾ ಆವರಣಗಳನ್ನು, ಆಯಾ ಶಾಲಾ ಅವಧಿಯು ಮುಗಿದ ನಂತರದಲ್ಲಿ ಬಳಸಿಕೊಳ್ಳಲು ಮತ್ತು ವಾರಾಂತ್ಯದ ದಿನಗಳಲ್ಲಿ ಹಾಗೂ ರಜಾ ದಿನಗಳಲ್ಲಿ ಉಪಯೋಗಿಸಿಕೊಳ್ಳುವದನ್ನು, ಇದರ ಜೊತೆಗೆ ಸಾರ್ವಜನಿಕ ವಾಚನಾಲಯಗಳ ಆವರಣದಲ್ಲಿ, ಈ ವಯಸ್ಕರ ಶಿಕ್ಷಣದ ಕಾರ್ಯಕ್ರಮಗಳನ್ನು –ಸಾಧ್ಯವಿರುವಲ್ಲೆಲ್ಲ 'ಮಾಹಿತಿ ಹಾಗೂ ಸಂವಹನಾ ತಂತ್ರಜ್ಞಾನ (ICT)ದಿಂದ ಸುಸಜ್ಜಿತವಾಗಿರುವಂತೆ ಇರುವ, ಹಾಗೂ ಇತರ ಸಮುದಾಯಗಳಿಗೆ ಅವರೂ ಇಲ್ಲಿ ತೊಡಗಿಸಿಕೊಳ್ಳುವಂತೆ ಚಟುವಟಿಕೆಗಳಿಂದ ಕೂಡಿರುವಂತೆ ರೂಪಿಸಬಹುದಾಗಿದೆ. ಈ ರೀತಿಯಾಗಿ, ಮೂಲಭೂತ ಸೌಕರ್ಯಗಳನ್ನು ಹಂಚಿಕೊಳ್ಳುತ್ತಿರುವ ಶಾಲೆಗಳ, ಉಚ್ಛ ಶಿಕ್ಷಣದ, ವಯಸ್ಕರ ಶಿಕ್ಷಣದ ಮತ್ತು ವೃತ್ತಿಪರ ಶಿಕ್ಷಣದ ಮತ್ತು ಇತರೆ ಸಮುದಾಯದ ಚಟುವಟಿಕೆಗಳು, ಇಲ್ಲಿ, ಮಾನವ ಸಂಪನ್ಮೂಲ ಹಾಗೂ ಭೌತಿಕ ಸಂಪನ್ಮೂಲಗಳನ್ನು ನಿರ್ಣಯಾತ್ಮಕವಾಗಿಯೇ ಉಪಯೋಗಿಸಿಕೊಳ್ಳಲು, ಹಾಗೂ ಈ ಮೇಲ್ಕಂಡ ಐದೂ ವಿಧಾನದ ಶಿಕ್ಷಣದಲ್ಲಿ ಹಾಗೂ ಅದರಾಚೆಗೂ ಸಹಿತ ಸಮತೋಲನವನ್ನು ರೂಪಿಸಲು ಉಪಯೋಗಿಸಿಕೊಳ್ಳಲಾಗವುದು. ಈ ಎಲ್ಲ ಕಾರಣಗಳಿಗಾಗಿ, 'ವಯಸ್ಕ ಶಿಕ್ಷಣ ಕೇಂದ್ರ'ಗಳನ್ನು ಸಹಿತ, ಇತರ ಉಚ್ಚ ಶಿಕ್ಷಣ ಸಂಸ್ಥೆ, ವೃತ್ತಿಪರ ತರಬೇತಿ ಸಂಸ್ಥೆಗಳಂತಹ ಹಾಗೂ ಇತರೇ ಸಾರ್ವಜನಿಕ ಸಂಸ್ಥೆಗಳೊಡನೆ ಸಮನ್ವಯಗೊಳ್ಳುವಂತೆ ರೂಪಿಸಲಾಗುವುದು.

**21.7.** ಮೂರನೆಯದಾಗಿ, ಈ ರೀತಿಯಾಗಿ, ವಯಸ್ಕರ ಶಿಕ್ಷಣದ ಪಠ್ಯಕ್ರಮದ ಅನುಗುಣವಾಗಿ ವಿವೇಚಿಸಲಾಗಿರುವ ಈ ಐದೂ ವಿಧಾನಗಳ ವಯಸ್ಕರ ಶಿಕ್ಷಣದಲ್ಲಿ ಹಿರಿಯ ಕಲಿಕಾರ್ಥಿಗಳಿರುವ ಸಂದರ್ಭಗಳಲ್ಲಿ, ನಿಗದಿಪಡಿಸಲಾಗುವ ರೂಪು–ರೇಷೆಯ ಪಠ್ಯಕ್ರಮದ ಪ್ರಕಾರ ಕಲಿಸುವ ಬೋಧಕರು/ಶಿಕ್ಷಕರು "ಆ ರೀತಿಯಲ್ಲಿಯೇ' ಕಲಿಸಬೇಕಾಗುತ್ತದೆ. ಈ ಶಿಕ್ಷಕರಿಗೆ, ರಾಷ್ಟ್ರೀಯ,

ರಾಜ್ಯದ ಮತ್ತು ಜಿಲ್ಲಾ ಮಟ್ಟದಲ್ಲಿ ಸಂಪನ್ಮೂಲ ಸೌಲಭ್ಯ ಒದಗಿಸುತ್ತಿರುವ ಸಂಸ್ಥೆಗಳಿಂದ, ಈ ವಯಸ್ಕರ ಶಿಕ್ಷಣ ಕೇಂದ್ರಗಳ ಸಂಘಟನೆ ಹಾಗೂ ಕಲಿಸುವಿಕೆ/ಕಲಿಯುವಿಕೆಯ ಕುರಿತು ಚಟುವಟಿಕೆಗಳನ್ನು ಮುಂದುವರೆಸಲು ತರಬೇತಿಯನ್ನು ಕೊಡಲಾಗುವದು.ಅದೇ ರೀತಿಯ ಸ್ವಯಂ ಸೇವಾ ಹಂತದಲ್ಲಿರುವ ಬೋಧಕರ ಸಂಗಡ ಸಹಸಂಬಂಧವನ್ನು ಹೊಂದಿರಬೇಕಾಗಿದೆ. ಉಚ್ಚ ಶಿಕ್ಷಣದ ಸಂಸ್ಥೆಗಳಿಂದ, ಸಮುದಾಯದಲ್ಲಿರುವ ಅರ್ಹ ವ್ಯಕ್ತಿಗಳನ್ನು ಒಳಗೊಂಡಂತೆ,– ಅವು/ಅವರು ಅಂದರೆ ಪ್ರತಿಯೊಂದೂ ಉಚ್ಚ ಶಿಕ್ಷಣ ಸಂಸ್ಥೆಯು ತೊಡಗಿಸಿಕೊಂಡಿರುವ ಯೋಜನೆಗಳಲ್ಲಿ ಇದೂ ಒಂದು ಅಂಶವೇ ಆಗಿರುವದರಿಂದ– ಸ್ಥಳೀಯ ಸಮುದಾಯವನ್ನೂ ಈ ದಿಸೆಯಲ್ಲಿ ಪ್ರೋತ್ಸಾಹಿಸುತ್ತ, ಮತ್ತು ಅಲ್ಪಾವಧಿ ತರಬೇತಿಯನ್ನು ಪಡೆದುಕೊಳ್ಳುವಂತೆ ಅವರನ್ನು ಪ್ರೋತ್ಸಾಹಿಸುತ್ತ, ಮತ್ತು ಸ್ವಯಂಸೇವಾ ವ್ಯವಸ್ಥೆಯಲ್ಲಿ ಭಾಗಿಯಾಗುವಂತೆ, ಅದೂ ಈ ವಯಸ್ಕರ ಸಾಕ್ಷರತಾ ಕಾರ್ಯಕ್ರಮದಲ್ಲಿ ಬೋಧಕರಾಗಿ ಕಾರ್ಯ ನಿರ್ವಹಿಸುವಂತೆ, ಅಥವಾ "ಓರ್ವ–ವ್ಯಕ್ತಿಗೆ–ಓರ್ವ" ಬೋಧಕ ಎನ್ನುವ ಪದ್ಧತಿಯಲ್ಲಿ ಸೇವೆ ಸಲ್ಲಿಸುವಂತೆ, ಮತ್ತು ಅವರ ಈ ಸೇವೆಯು ರಾಷ್ಟ್ರದ ಸಲುವಾಗಿ ನಿರ್ಣಯಾತ್ಮಕವಾಗಿರುವದನ್ನು ಗುರುತಿಸಲಾಗುವದು. ರಾಜ್ಯಗಳೂ ಸಹಿತ ಈ ದಿಸೆಯಲ್ಲಿ ಸರ್ಕಾರೇತರ ಸಂಸ್ಥೆಗಳು ಹಾಗೂ ಇತರ ಸಮುದಾಯ ಸಂಘಟನೆಗಳ ಸಂಗಡ ಕಾರ್ಯ ರೂಪಿಸುವ ಮೂಲಕ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವ ಮತ್ತು ವಯಸ್ಕ ಶಿಕ್ಷಣವನ್ನು ಅನುಷ್ಠಾನಿಸಲು ಪ್ರಯತ್ನಗಳನ್ನು ರೂಪಿಸಬೇಕಾಗುತ್ತದೆ.

**21.8.** ನಾಲ್ಕನೆಯದಾಗಿ, ಈ ವಯಸ್ಕ ಶಿಕ್ಷಣದ ಕಾರ್ಯಕ್ರಮದಲ್ಲಿ ಸಮುದಾಯದ ಸದಸ್ಯರೆಲ್ಲರ ಭಾಗವಹಿಸುವಿಕೆಯನ್ನು ಖಚಿತಗೊಳಿಸಿಕೊಳ್ಳುವಂತೆಯೇ ಪ್ರಯತ್ನಗಳನ್ನು ರೂಪಿಸಬೇಕಾಗುತ್ತದೆ. ಸಮಾಜ ಸೇವಕರು/ಸಮಾಲೋಚಕರು ಅವರವರ ಸಮುದಾಯಗಳ ಮಧ್ಯ ಸಂಪರ್ಕ ಸಾಧಿಸಿ ದಾಖಲಾತಿಗೊಳ್ಳದ ವಿದ್ಯಾರ್ಥಿಗಳನ್ನು, ಅರ್ಧಕ್ಕೆ ಶಾಲೆಯನ್ನು ಬಿಟ್ಟವರನ್ನು ಸಹಿತ ವಿನಂತಿಸಿಕೊಳ್ಳುತ್ತ, ತಮ್ಮ ದೈನಂದಿನ ಕಾರ್ಯ ಸಂಚಾರದಲ್ಲಿ, ಹದಿಹರಯದ ವಿದ್ಯಾರ್ಥಿಗಳ ಮತ್ತು ಆಯಾ ವಿದ್ಯಾರ್ಥಿಗಳ ಪಾಲಕರ ಅಂಕಿ–ಅಂಶಗಳನ್ನು ಸಂಗ್ರಹ ಮಾಡಿ, ಈ ವಯಸ್ಕ ಶಿಕ್ಷಣದ ವಿಷಯದಲ್ಲಿ ಆಸಕ್ತಿ ಹೊಂದಿದ ಇತರರನ್ನೂ ಅಥವಾ ಕಲಿಯುವ/ಕಲಿಸುವ ಸಲುವಾಗಿ ಮತ್ತು ಇಲ್ಲಿ ಶಿಕ್ಷಕರಾಗಿ/ ಬೋಧಕರಾಗಲು ಇಚ್ಛೆ ಇದ್ದವರ ವಿವರಗಳನ್ನು ಸಂಗ್ರಹಿಸುವುದು. ತದನಂತರದಲ್ಲಿ ಈ ಸಮಾಜ ಸೇವಕರು/ ಸಮಾಲೋಚಕರು ಇವರನ್ನು ಸ್ಥಳೀಯ ವಯಸ್ಕ ಶಿಕ್ಷಣ ಕೇಂದ್ರಗಳಿಗೆ ಸಂಪರ್ಕಗೊಳಿಸಬೇಕು. ಈ ರೀತಿಯಾಗಿ ವಯಸ್ಕರ ಶಿಕ್ಷಣದ ವಿಷಯವನ್ನು ಅದೂ ಜಾಹೀರಾತುಗಳ ಮೂಲಕ, ಘೋಷಣೆಗಳ ಮೂಲಕ, ಮತ್ತು ಸ್ವಯಂ ಸೇವಾ ಸಂಸ್ಥೆ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ಕಾರ್ಯಕ್ರಮಗಳ ಮತ್ತು ಉಪಕ್ರಮಗಳ ಮೂಲಕ ಇದನ್ನು ರೂಪುಗೊಳಿಸುತ್ತ, ಸಾಧ್ಯವಿದ್ದಷ್ಟೂ ಸಾರ್ವಜನಿಕರಿಗೆ ಲಭ್ಯವಾಗಿಸಬೇಕು.

**21.9.** ಐದನೆಯದಾಗಿ, ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ಸಮುದಾಯಗಳಲ್ಲೆಲ್ಲ ಓದುವ ಹವ್ಯಾಸವನ್ನು ಬಿತ್ತುವುದು ಅವಶ್ಯಕವಾಗಿದೆ. ಅದಕ್ಕಾಗಿ ಪುಸ್ತಕಗಳು ಸುಲಭವಾಗಿಯೇ ಎಲ್ಲರಿಗೂ ಲಭ್ಯವಾಗುವಂತೆ, ಹಾಗೂ ಅವು ಅವರನ್ನು ಸುಲಭವಾಗಿ ತಲುಪುವಂತೆ ಇರುವ ವ್ಯವಸ್ಥೆಯನ್ನು ಸುಧಾರಿಸಬೇಕಾಗಿದೆ. ಈ ನೀತಿಯು ಈ ಮೂಲಕ ಶಿಫಾರಸ್ಸು ಮಾಡುತ್ತಿರುದೇನೆಂದರೆ, – ಎಲ್ಲಾ ಸಮುದಾಯಗಳೂ ಹಾಗೂ ಶೈಕ್ಷಣಿಕ ಸಂಸ್ಥೆಗಳು –ಶಾಲೆಗಳು, ಮಹಾವಿದ್ಯಾಲಯಗಳು, ವಿಶ್ವವಿದ್ಯಾಲಯಗಳು ಮತ್ತು ಸಾರ್ವಜನಿಕ ಗ್ರಂಥಾಲಯಗಳನ್ನು ಮತ್ತೂ ಬಲಪಡಿಸಿಕೊಳ್ಳಬೇಕಾಗಿದೆ. ಜೊತೆಜೊತೆಗೆ ಅವುಗಳನ್ನು ಆಧುನೀಕರಣಗೊಳಿಸಿ ಒದಗಿಸಬೇಕಾಗಿದೆ. ಈ ಮೂಲಕ ಸಾಕಷ್ಟು ಪುಸ್ತಕಗಳ ಪೂರೈಕೆಯ ಮೂಲಕ – ಅದೂ ಎಲ್ಲ ವಿದ್ಯಾರ್ಥಿಗಳ ಆಸಕ್ತಿಯನ್ನು ಹಾಗೂ ಆಶಯಗಳನ್ನು ಪೂರೈಸುವಂತೆ – ಒದಗಿಸಬೇಕಾಗುತ್ತದೆ. ಇಲ್ಲಿ ದೈಹಿಕವಾಗಿ ಅಶಕ್ತರಾಗಿರುವವರ ಮತ್ತು ಇತರೆ ಕಾರಣಗಳಿಂದಾಗಿ ವಿಕಲ–ಚೇತನರಾಗಿರುವ ವಿದ್ಯಾರ್ಥಿಗಳ ಆಶಯಗಳನ್ನೂ ಸಹಿತ ತಣಿಸುವಂತೆ ಇರಬೇಕು. ಇದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು, ಇಡೀ ದೇಶಾದ್ಯಂತ, ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ವಲಯಗಳನ್ನೂ ಸೇರಿಸಿದಂತೆ, ಜೊತೆಗೆ ಗ್ರಾಮೀಣ ಭಾಗದಲ್ಲಿ ಹಾಗೂ ಅತ್ಯಂತ ಕುಗ್ರಾಮದ ಪ್ರದೇಶಗಳಲ್ಲಿಯೂ ಸಹಿತ– ಪುಸ್ತಕಗಳು ಸುಲಭವಾಗಿ ಲಭ್ಯವಾಗುವಂತೆ ಒದಗಿಸುವ ವ್ಯವಸ್ಥೆಯನ್ನು ರೂಪಿಸುವತ್ತ ಹೆಜ್ಜೆಗಳನ್ನು ಇಡಬೇಕಾಗಿದೆ. ಇದಕ್ಕಾಗಿ ಸಾರ್ವಜನಿಕ ಹಾಗೂ ಖಾಸಗೀ ವಲಯಗಳ ಸಂಸ್ಥೆಗಳು/ ಏಜನ್ಸಿಗಳು, ಭಾರತೀಯ ಭಾಷೆಗಳಲ್ಲಿ ಪ್ರಕಟಗೊಳ್ಳುತ್ತಿರುವ ಪುಸ್ತಕಗಳ ಗುಣಮಟ್ಟವನ್ನು ಮತ್ತು ಅವುಗಳನ್ನು ಆಕರ್ಷಗೊಳಿಸುವ ಕ್ರಿಯೆಯಲ್ಲಿ ಸೂಕ್ತ ತಂತ್ರಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಅದೇ ರೀತಿಯಲ್ಲಿ ಆನ್‌ಲೈನ್ ಸೇವಾ ವ್ಯವಸ್ಥೆಯಲ್ಲಿ ವಾಚನಾಲಯಗಳಲ್ಲಿರುವ ಪುಸ್ತಕಗಳನ್ನು ಪಡೆದುಕೊಳ್ಳುವ ವ್ಯವಸ್ಥೆಯನ್ನು ರೂಪಿಸಬೇಕಾಗಿದೆ. ಇದು ಇನ್ನು ಪ್ರಗತಿಗೊಂಡಂತೆ, ಈ–ಪುಸ್ತಕಗಳು ವ್ಯಾಪಕವಾಗಿಯೇ ಲಭ್ಯವಾಗುವಂತೆ ಡಿಜಿಟಲ್–ವಾಚನಾಲಯಗಳನ್ನು ಸ್ಥಾಪಿಸಬೇಕಾಗಿದೆ. ಈ ರೀತಿಯಲ್ಲಿ, ಸಮುದಾಯಗಳಲ್ಲಿ, ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ವಾಚನಾಲಯಗಳು ಸದಾ ಸ್ಪಂದನಶೀಲವಾಗಿರುವುದನ್ನು ಖಚಿತಗೊಳಿಸಬೇಕಾಗಿದೆ. ಅದಕ್ಕಾಗಿ ಅಲ್ಲಿ, ಅನಿವಾರ್ಯವಾಗಿಯೇ ಸಾಕಷ್ಟು ಸಂಖ್ಯೆಯ ವಾಚನಾಲಯ ಸಿಬ್ಬಂದಿಗಳನ್ನು ಹೊಂದಬೇಕಾಗಿದೆ. ಮತ್ತು ಇದಕ್ಕಾಗಿ ಒಂದು ವೃತ್ತಿಯಾಧಾರಿತವಾಗಿರುವ ಸೂಕ್ತ ಮಾರ್ಗವೊಂದನ್ನು ರೂಪಿಸಬೇಕಾಗಿದೆ. ಇವರನ್ನು 'ನಿರಂತರ ವೃತ್ತಿಪರ ಪ್ರಗತಿ'(CPD)ಯ ಅಡಿಯಲ್ಲಿ ರೂಪಿಸಬೇಕಾಗಿದೆ. ಇನ್ನುಳಿದ ಕ್ರಮಗಳ ಪ್ರಕಾರ, ಈಗ ಕಾರ್ಯ ನಿರ್ವಹಿಸುತ್ತಿರುವ

ವಾಚನಾಲಯಗಳನ್ನು ಬಲಪಡಿಸುವದನ್ನು ಮತ್ತು ಗ್ರಾಮೀಣ ಭಾಗದಲ್ಲಿ ವಾಚನಾಲಯಗಳನ್ನು ಪ್ರಾರಂಭಿಸುವದನ್ನು ಮತ್ತು ಓದುವ ಅವಕಾಶಗಳನ್ನು ಹಿಂದುಳಿದ ವಲಯಗಳಲ್ಲಿಯೂ ಒದಗಿಸಬೇಕಾಗಿದೆ. ಭಾರತೀಯ ಭಾಷೆಗಳಲ್ಲಿ ಲಭ್ಯವಿರುವ ಎಲ್ಲಾ ಪುಸ್ತಕಗಳು ಲಭ್ಯವಾಗುವಂತೆ ಕಾರ್ಯ ರೂಪಿಸಬೇಕಿದೆ. ಮಕ್ಕಳ ವಾಚನಾಲಯಗಳನ್ನು ಪ್ರಾರಂಭಿಸುವ ಮತ್ತು ಸಂಚಾರಿ–ವಾಚನಾಲಯಗಳನ್ನು ಆರಂಭಿಸುವ ಮೂಲಕ –ಭಾರತದಾದ್ಯಂತ– ಎಲ್ಲ ವಿಷಯಗಳಲ್ಲಿಯೂ ಲಭ್ಯಗೊಳಿಸುವ ಮೂಲಕ, ಶಿಕ್ಷಣ ಸಂಸ್ಥೆಗಳ ಮತ್ತು ವಾಚನಾಲಯಗಳ ಮಧ್ಯೆ ಮಹತ್ತರವಾದ ಸಹಯೋಗವನ್ನು ಸಾಧಿಸಬೇಕಾಗಿದೆ.

**21.10**. ಅಂತಿಮವಾಗಿ, ಈ ಎಲ್ಲ ಉಪಕ್ರಮಗಳನ್ನು ಸಮರ್ಥವಾಗಿಯೇ ನಿರ್ವಹಿಸುವ ತಂತ್ರಜ್ಞಾನವನ್ನು ವೃದ್ಧಿ ಪಡಿಸಬೇಕಾಗಿದೆ. ವಯಸ್ಕರ ಶಿಕ್ಷಣದಲ್ಲಿ ಗುಣಾತ್ಮಕವಾಗಿರುವ ತಂತ್ರಜ್ಞಾನಾಧಾರಿತವಾಗಿರುವ ತಂತ್ರಾಂಶವನ್ನು ಆ್ಯಪ್‌ಗಳ ಸೇವಾ ವಿಧಾನಗಳನ್ನು, ಆನ್‌ಲೈನ್ ಅಭ್ಯಾಸ ವರ್ಗಗಳ ವಿನ್ಯಾಸ ಘಟಕಗಳು ಉಪಗ್ರಹದ ಸೇವೆಯನ್ನು ಪಡೆದುಕೊಳ್ಳುವ ದೂರದರ್ಶನ–ಸಂಪರ್ಕಗಳು, ಆನ್‌ಲೈನ್ ಪುಸ್ತಕಗಳು ಮತ್ತು ಮಾಹಿತಿ ಹಾಗೂ ಸಂವಹನಾ ತಂತ್ರಜ್ಞಾನದದಿಂದ ರೂಪುಗೊಂಡಿರುವ ವಾಚನಾಲಯಗಳು ಹಾಗೂ ವಯಸ್ಕರ ಶಿಕ್ಷಣ ಕೇಂದ್ರಗಳು ಹಾಗೂ ಇತರೆ ಅಂಶಗಳನ್ನು ಅಭಿವೃದ್ಧಿ ಪಡಿಸಲಾಗುವುದು. ಇವೆಲ್ಲವನ್ನೂ ಸರಕಾರ ಹಾಗೂ ಲೋಕೋಪಕಾರೀ ವ್ಯವಸ್ಥೆಯ ಉಪಕ್ರಮಗಳಿಂದ, ಜನಸಮುದಾಯದ ಮೂಲದಿಂದಲೇ ರೂಪಿಸಲಾಗುವುದು ಜೊತೆ ಜೊತೆಗೆ ಸ್ಪರ್ಧೆಗಳನ್ನು ಏರ್ಪಡಿಸುವದರಿಂದಲೂ ರೂಪಿತಗೊಳಿಸಲಾಗುವುದು. ಬಹುತೇಕ ಪ್ರಕರಣಗಳಲ್ಲಿ ಈ ಗುಣಾತ್ಮಕವಾಗಿರುವ ವಯಸ್ಕರ ಶಿಕ್ಷಣವನ್ನು ಈ ರೀತಿಯಲ್ಲಿ ಆನ್‌ಲೈನ್ ವ್ಯವಸ್ಥೆಯಲ್ಲಿ ಅಥವಾ ಸಂಯೋಜಿತ ವಿಧಾನದಲ್ಲಿ ನಿರ್ವಹಿಸಲಾಗುವುದು.

## 22. ಭಾರತೀಯ ಭಾಷೆಗಳು, ಕಲೆ ಮತ್ತು ಸಂಸ್ಕೃತಿಯ ಅಭಿವೃದ್ಧಿ :

**22.1.** ಭಾರತವು ಸಂಸ್ಕೃತಿಯಿಂದ ಸಂಪದ್ಭರಿತವಾಗಿರುವ ಖಜಾನೆಯೇ ಆಗಿದೆ. ಸಾವಿರಾರು ವರ್ಷಗಳಿಂದಲೂ ಇದು ಪ್ರಗತಿಗೊಳ್ಳುತ್ತ –ವಿಕಾಸಗೊಳ್ಳುತ್ತ ಬಂದಿದೆ. ಇದು ಕಲೆಗಳಲ್ಲಿ, ಸಾಹಿತ್ಯದ ಕೃತಿಗಳಲ್ಲಿ, ರೀತಿ–ರಿವಾಜುಗಳಲ್ಲಿ, ಸಂಪ್ರದಾಯಗಳಲ್ಲಿ, ಭಾಷಾ ಅಭಿವ್ಯಕ್ತಿಗಳಲ್ಲಿ, ಶಿಲ್ಪಕಲಾಕೃತಿಗಳಲ್ಲಿ, ಪಾರಂಪರಿಕ ತಾಣಗಳಲ್ಲಿ ಮತ್ತೂ ಹೆಚ್ಚಿನ ವಲಯಗಳಲ್ಲಿ ಸಂಪದ್ಭರಿತವಾಗಿರುವ ಖಜಾನೆಯೇ ಆಗಿದೆ. ಜಗತ್ತಿನಾದ್ಯಂತವೂ ಸಹಿತ ಕೋಟ್ಯಾಂತರ ಜನರು ಈ ವಿಷಯಗಳಲ್ಲಿ ಪಾಲ್ಗೊಂಡು, ಸಂತೋಷ ಹೊಂದಿ ಮತ್ತು ಸಾಂಸ್ಕೃತಿಕ ಆಯಾಮವನ್ನು ದಿನವೂ ಹೆಚ್ಚಿಸಿಕೊಳ್ಳುತ್ತಿದ್ದಾರೆ. ಅದರಲ್ಲೂ ಪ್ರವಾಸೋದ್ಯಮದ ಹಿನ್ನೆಲೆಯಲ್ಲಿ ಭಾರತವನ್ನು ಸಂದರ್ಶಿಸುವ ಮೂಲಕ, ಭಾರತೀಯ ಆದರಾತಿಥ್ಯವನ್ನೂ ಸವಿಯುವ ಮೂಲಕ, ಭಾರತೀಯ ಕರಕುಶಲ ವಸ್ತುಗಳನ್ನು ಮತ್ತು ಕೈಯಿಂದಲೇ ತಯಾರಿಸಲಾಗಿರುವ ವಸ್ತ್ರಗಳನ್ನು ಖರೀದಿಸುವ ಮೂಲಕ, ಭಾರತದ ಶಾಸ್ತ್ರೀಯ ಸಾಹಿತ್ಯ ಓದುವುದರ ಮೂಲಕ, ಧ್ಯಾನ ಮತ್ತು ಯೋಗಗಳನ್ನು ಅನುಷ್ಠಾನಗೊಳಿಸಿಕೊಳ್ಳುವ ಮೂಲಕ, ಭಾರತೀಯ ತತ್ತ್ವಜ್ಞಾನದ ಪ್ರೇರಣೆಯನ್ನು ಪಡೆಯುವುದರ ಮೂಲಕ, ಭಾರತದ ವಿಶಿಷ್ಟ ರೀತಿಯ ಹಬ್ಬ–ಹರಿದಿನಗಳಲ್ಲಿ ಭಾಗವಹಿಸುವ ಮೂಲಕ, ವೈವಿಧ್ಯತೆಯಿಂದ ಕೂಡಿರುವ ಭಾರತೀಯ ಸಂಗೀತ ಹಾಗೂ ಕಲೆಗಳನ್ನು ಅಭಿಮಾನದಿಂದ ಗೌರವಿಸುವುದರ ಮೂಲಕ, ಭಾರತೀಯ ಚಲನಚಿತ್ರಗಳನ್ನು ವೀಕ್ಷಿಸುವ ಮೂಲಕ, ಇಂತಹ ಹಲವಾರು ವಿಷಯಗಳಲ್ಲಿ, ಈ ಸಾಂಸ್ಕೃತಿಕ ಹಾಗೂ ನೈಸರ್ಗಿಕ ಸಾಂಸ್ಕೃತಿಕ ಸಂಪತ್ತೇ ನಿಜವಾಗಿ ಭಾರತವನ್ನು ರೂಪಿಸಿದೆ. 'ಅವಿಸ್ಮರಣೀಯ! ಭಾರತ" ವಾಗಿಸಿದೆ. ಇದೇ ಭಾರತೀಯ ಪ್ರವಾಸೋದ್ಯಮದ ಘೋಷವಾಕ್ಯವೂ ಆಗಿದೆ. ಈ ರೀತಿಯಲ್ಲಿ ಭಾರತೀಯ ಸಾಂಸ್ಕೃತಿಕ ಸಂಪತ್ತನ್ನು ಸಂರಕ್ಷಿಸುವುದರ ಜೊತೆ ಜೊತೆಗೆ ಔನ್ನತ್ಯಕ್ಕೇರಿಸುವುದೂ ದೇಶದ ಸಲುವಾಗಿ ಹೆಚ್ಚಿನ ಪ್ರಾಶಸ್ತ್ಯದಿಂದಲೇ ಪರಿಗಣಿಸಲೇಬೇಕಾಗಿದೆ. ಇದು ಭಾರತದ ಅಸ್ಮಿತೆಗೆ ಮತ್ತು ಅದರ ಆರ್ಥಿಕ ವ್ಯವಸ್ಥೆಗೆ ನಿಜವಾಗಿಯೂ ಮುಖ್ಯವಾಗಿರುತ್ತದೆ.

**22.2.** ಭಾರತೀಯ ಕಲೆ ಹಾಗು ಸಂಸ್ಕೃತಿಯನ್ನು ಉನ್ನತಿಗೊಳಿಸುವುದು ರಾಷ್ಟ್ರದ ಸಲುವಾಗಿ ಮಾತ್ರ ಅಲ್ಲ ಇದು ಪ್ರತಿ ವ್ಯಕ್ತಿಗೂ ಅವಶ್ಯಕವಿದೆ. ಸಾಂಸ್ಕೃತಿಕ ಜಾಗೃತಿ ಮತ್ತು ಅಭಿವ್ಯಕ್ತಿಗಳು ಇಲ್ಲಿ ಪ್ರಮುಖ ಶಕ್ತಿಗಳಾಗಿದ್ದು ಇದು ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ, ಆ ಮೂಲಕ ಅವರಿಗೆ ಅವರವರ ಅಸ್ಮಿತೆಯ ಬಗೆಗೆ ಭಾವನೆಗಳನ್ನು, ಭಾಷೆಗಳು ಮತ್ತು ಪರಂಪರೆಗಳ ಬಗೆಗೆ ಭದ್ರವಾದ ಸಂವೇದನೆಯನ್ನು ರೂಪಿಸುವುದರಿಂದ, ಪ್ರಗತಿಗೊಳಿಸುವುದರಿಂದ, ಮಕ್ಕಳು ಸಾಂಸ್ಕೃತಿಕ ಅಸ್ಮಿತೆಯ ಬಗೆಗೆ ಹಾಗೂ ಆತ್ಮಾಭಿಮಾನದ ಬಗೆಗೆ ಒಂದು ಧನಾತ್ಮಕವಾದ ದೃಷ್ಟಿಕೋನವನ್ನು ರೂಪಿಸಿಕೊಳ್ಳಲು ಅವರಿಗೆ ಸಾಧ್ಯವಾಗುತ್ತದೆ. ಈ ರೀತಿಯಲ್ಲಿ, ಸಾಂಸ್ಕೃತಿಕ ಜಾಗೃತಿ ಮತ್ತು ಅಭಿವ್ಯಕ್ತಿಗಳೆರಡೂ ಅತೀ ಮಹತ್ವದ ಕೊಡುಗೆಗಳೇ ಆಗಿವೆ. ಇವು ವ್ಯಕ್ತಿಗತವಾಗಿಯೂ ಹಾಗೂ ಸಾಮಾಜಿಕವಾಗಿಯೂ ಸುಸಂಗತ–ಜೀವಿಯಾಗಲು ಅವಶ್ಯಕವಿರುವ ಸಂಗತಿಗಳಾಗಿವೆ.

**22.3.** ಸಂಸ್ಕೃತಿಯನ್ನು ವ್ಯಾಪ್ತಗೊಳಿಸಲು ಕಲೆಗಳೇ ಅತ್ಯಂತ ಪ್ರಧಾನವಾಗಿರುವ ಸಾಧನಗಳಾಗಿವೆ. ಸಂಜ್ಞಾನಾತ್ಮಕ ಹಾಗೂ ಸೃಜನಶೀಲ ಸಾಮರ್ಥ್ಯಗಳಾದ ಈ ಕಲೆಗಳು– ಸಾಂಸ್ಕೃತಿಕ ಅಸ್ಮಿತೆಯನ್ನು ಸಮರ್ಥಗೊಳಿಸುತ್ತಿರುವುದಷ್ಟೇ ಅಲ್ಲದೇ ಜಾಗೃತಿ ಮತ್ತು ಸಮಾಜದ ಉನ್ನತಿಗಳಿಗೂ ಕಾರಣವಾಗಿವೆ. ಜೊತೆಗೆ ವೈಯಕ್ತಿಕವಾಗಿಯೂ ಇದು ನೆಮ್ಮದಿಯನ್ನು ಸಂತೋಷವನ್ನೂ ಹೆಚ್ಚಿಸುತ್ತದೆ.

ಸಂತಸದಾಯಕವಾಗಿರುವ/ಸ್ವಾಸ್ಥ್ಯಪೂರ್ಣ ಜೀವನದ, ಜ್ಞಾನಸಂಬಂಧೀ ಪ್ರಗತಿಯ ಮತ್ತು ಪ್ರತಿಯೊಬ್ಬನ ಸಾಂಸ್ಕೃತಿಕ ಅಸ್ಮಿತೆಗಳು ಭಾರತದ ಎಲ್ಲ ಪ್ರಕಾರದ ಕಲೆಗಳಿಗೆ ಪ್ರಮುಖ ಕಾರಣಗಳಾಗಿವೆ. ಹೀಗಾಗಿ ಇವುಗಳನ್ನು ವಿದ್ಯಾರ್ಥಿಗಳಿಗೆ ಶಿಕ್ಷಣದ ಮೂಲಕ, ಅದರಲ್ಲೂ ಪೂರ್ವ ಬಾಲ್ಯಾವಸ್ಥೆಯ ಪೋಷಣೆ ಮತ್ತು ಶಿಕ್ಷಣ ವ್ಯವಸ್ಥೆಯ ಮೂಲಕವೇ ಕಲಿಸಿಕೊಡಬೇಕಾಗುತ್ತದೆ.

**22.4.** ಭಾಷೆಯೂ ಕಲೆ ಮತ್ತು ಸಂಸ್ಕೃತಿಯ ಸಂಗಡ ಬೇರ್ಪಡಿಸಲಾಗದ ಬೆಸುಗೆ ಹೊಂದಿದೆ. ವಿವಿಧ ಭಾಷೆಗಳು ಜಗತ್ತನ್ನು "ವಿವಿಧ ದೃಷ್ಟಿಕೋನದಿಂದಲೇ" ನೋಡುತ್ತಿವೆ. ಪ್ರತಿ ಭಾಷೆಯ ಸಂರಚನೆಯ ವ್ಯವಸ್ಥೆಯಲ್ಲಿ ಆಯಾ ಸ್ಥಳೀಯ ನಿವಾಸಿಯು ಮಾತನಾಡುವ ಭಾಷೆಯಲ್ಲಿಯೇ ಅವನ ಅನುಭವದ ಗ್ರಹಿಕೆಗಳು ನಿರ್ಧರಣೆಗೊಂಡಿರುತ್ತವೆ. ಅದರಲ್ಲೂ ವಿಶೇಷವಾಗಿ ಜನರು, ಮತ್ತೊಬ್ಬರೊಡನೆ ಮಾತನಾಡುವಾಗಲಂತೂ ಈ ಭಾಷಾ–ಪ್ರಭಾವವು ಅತ್ಯಂತ ಮುಖ್ಯ ಸಂಗತಿಯಾಗಿದೆ. ಕುಟುಂಬದ ಸದಸ್ಯರೊಡನೆ ಮಾತನಾಡುವಾಗ ಅಧಿಕಾರ ಸ್ಥಾನದಲ್ಲಿ ಇರುವವರ ಸಂಗಡ ಮಾತನಾಡುವಾಗ, ಸಹಪಾಠಿಗಳ ಅಥವಾ ಗೆಳೆಯರ ಸಂಗಡ ಮಾತನಾಡುವಾಗ ಮತ್ತು ಅಪರಿಚಿತರೊಡನೆ ಮಾತನಾಡುವಾಗ, ಮತ್ತು ಸಂಭಾಷಣೆಯ ಸಮಯದಲ್ಲೆಲ್ಲವೂ ಈ 'ಧ್ವನಿ'(ಸ್ವರೂಪ ಅಥವಾ ಮನೋಭಾವ)ಗಳೆಲ್ಲದರ ಮೇಲೂ ಈ ಭಾಷಾ ಪ್ರಭಾವವಿದ್ದೇ ಇರುತ್ತದೆ. ಈ ಧ್ವನಿ ವಿನ್ಯಾಸ, ಅನುಭವದ ಗ್ರಹಿಕೆ, ಮತ್ತು ಆತ್ಮೀಯತೆಗಳೆಲ್ಲವೂ ಸಂಭಾಷಣೆಯಲ್ಲಿ ಅಂತರ್ನಿಹಿತಗೊಂಡೇ ಮಾತನಾಡುವವರಲ್ಲಿ ಒಂದು ಸಾಮಾನ್ಯ ಸಂವಹನಾಪೂರ್ಣ ಭಾಷೆಯಾಗಿ ರೂಪುಗೊಳ್ಳುತ್ತಲೇ ಇವೆಲ್ಲವೂ ಪ್ರತಿಫಲಿಸಿಕೊಂಡು, ಕಲೆಯ ಒಂದು ದಾಖಲೆಯಾಗುತ್ತದೆ. ಈ ರೀತಿಯಲ್ಲಿ, ಸಂಸ್ಕೃತಿ ಎನ್ನುವುದು ನಮ್ಮ ಭಾಷೆಗಳಲ್ಲಿ ಸಮಗ್ರವಾಗಿಯೇ ಸಂಗ್ರಹಗೊಂಡಿದೆ. ಕಲೆ, ಸಾಹಿತ್ಯದ ಪ್ರಕಾರದಲ್ಲಿ ನಾಟಕಗಳಲ್ಲಿ, ಸಂಗೀತದಲ್ಲಿ, ಚಲನಚಿತ್ರಗಳಲ್ಲಿ ಹೀಗೆ ಇತರೆ ಅಂಶಗಳಲ್ಲಿ, ಒಟ್ಟಿನಲ್ಲಿ ಭಾಷಾ ವ್ಯವಸ್ಥೆ ಇಲ್ಲದೇ ಸೂಕ್ತ ಅಭಿವ್ಯಕ್ತಿ ಪಡೆಯಲು ಸಾಧ್ಯವೇ ಇಲ್ಲ. ಸಂಸ್ಕೃತಿಯನ್ನು ಸಂರಕ್ಷಿಸಲು ಹಾಗೂ ವಿಕಾಸಗೊಳಿಸಲು ಭಾಷೆಗಳನ್ನು ರಕ್ಷಿಸಿ ಬೆಳೆಸಬೇಕಾಗುತ್ತದೆ.

**22.5.** ದುರ್ದೈವವಶಾತ್ ಭಾರತೀಯ ಭಾಷೆಗಳು ಸೂಕ್ತವಾಗಿ ಪರಿಗಣಿಸಲ್ಪಡಲಿಲ್ಲ ಮತ್ತು ಅವುಗಳ ಕುರಿತು ಸರಿಯಾದ ಕಾಳಜಿಯನ್ನೂ ತೋರಿಸಲಾಗಿಲ್ಲ. ಈ ಮೂಲಕ ಭಾರತ ದೇಶವು ಕಳೆದ 50–ವರ್ಷಗಳ ಅವಧಿಯಲ್ಲಿ 220ಕ್ಕೂ ಹೆಚ್ಚಿನ ಭಾಷೆಗಳನ್ನು ಕಳೆದುಕೊಂಡಿದೆ. ಯುನೆಸ್ಕೋ ಘೋಷಿಸಿರುವಂತೆ ಭಾರತದ 197 ಭಾಷೆಗಳು ಅಪಾಯದ ಅಂಚಿನಲ್ಲಿವೆ. ಲಿಪಿಯನ್ನು ಹೊಂದಿರದ ಹಲವಾರು ಆಡು–ಭಾಷೆಗಳು ಬಹುತೇಕವಾಗಿ ಈ ರೀತಿಯ ಅಪಾಯದ ಅಂಚಿಗೆ ಬರುತ್ತವೆ. ಒಂದು ಸ್ಥಳೀಯ/ಗುಡ್ಡಗಾಡು ಅಥವಾ ಸಮುದಾಯದ ಹಿರಿಯ ವ್ಯಕ್ತಿಗಳು ಮಾತನಾಡುತ್ತಿದ್ದ 'ಆಡು ಭಾಷೆಯು", ಆ ವ್ಯಕ್ತಿಯ/ವ್ಯಕ್ತಿಗಳ ಮರಣಾನಂತರದಲ್ಲಿ ಕಣ್ಮರೆಯಾಗಿ ಬಿಡುತ್ತದೆ. ಅವರೊಡನೆ ಆ ಭಾಷೆಯೂ ಲುಪ್ತವಾಗುತ್ತದೆ. ಇಂತಹ ಸಮೃದ್ಧ ಭಾಷೆಗಳನ್ನು/ಸಾಂಸ್ಕೃತಿಕ ಅಭಿವ್ಯಕ್ತಿಗಳನ್ನು ರಕ್ಷಿಸಲು ಸಂಯೋಜಿತ ಕಾರ್ಯಕ್ರಮಗಳನ್ನು ರೂಪಿಸಲು ಸಾಧ್ಯವಾಗಲಿಲ್ಲ ಅಥವಾ ಅದಕ್ಕೆ ಸೂಕ್ತವಾಗಿರುವ ಪರಿಹಾರಗಳನ್ನು ಹುಡುಕಲಾಗಿಲ್ಲ.

**22.6.** ಇದಕ್ಕಿಂತ ಮಿಗಿಲಾಗಿ, ಭಾರತದ ಯಾವ ಭಾಷೆಗಳನ್ನು ಅಪಾಯದ ಅಂಚಿನಲ್ಲಿವೆ ಎನ್ನುವ ಪಟ್ಟಿಯಲ್ಲಿ ಸೇರಿಸಿಲ್ಲವೋ ಮತ್ತು ಭಾರತದ ಸಂವಿಧಾನದ ಎಂಟನೇ ಪರಿಶಿಷ್ಟದಲ್ಲಿ ನಮೂದಿಸಲಾಗಿರುವ 22 ಭಾಷೆಗಳೂ ಸಹಿತ ತೀವ್ರ ತೊಂದರೆಗಳನ್ನು ಎದುರಿಸುತ್ತಿವೆ. ಅದಕ್ಕಾಗಿ ಭಾರತೀಯ ಭಾಷೆಗಳಲ್ಲಿಯೇ ಕಲಿಯುವ ಮತ್ತು ಕಲಿಸುವುದನ್ನು ಸಮಗ್ರವಾಗಿಯೇ ರೂಪಿಸಿ, ಶಾಲೆಗಳು ಮತ್ತು ಉಚ್ಚ ಶಿಕ್ಷಣದ ಪ್ರತಿ ಹಂತದಲ್ಲೂ ಅಳವಡಿಸಬೇಕಾಗಿದೆ. ಭಾಷೆಗಳ ಸಲುವಾಗಿಯೇ ಅವು ಸಾಮಯಿಕವಾಗಿ ಹಾಗೂ ಸ್ಪಂದನಶೀಲವಾಗಿಯೇ ಉಳಿಯುವಂತೆ, ಅಲ್ಲಿ ಕಡ್ಡಾಯವಾಗಿಯೇ ಉಚ್ಚ ಗುಣಾತ್ಮಕ ಕಲಿಕೆ ಮತ್ತು ಪಠ್ಯ ಪುಸ್ತಕಗಳನ್ನು ಒಳಗೊಂಡಂತೆ ಮುದ್ರಿತ ಪುಸ್ತಕಗಳು, ಕಾರ್ಯ–ಚಟುವಟಿಕೆಗಳ ಪುಸ್ತಕಗಳು, ವಿಡಿಯೋಗಳು, ನಾಟಕಗಳು, ಕವನಗಳು, ಕಾದಂಬರಿಗಳು, ನಿಯತಕಾಲಿಕಗಳು ಇರಲೇಬೇಕಾಗಿದೆ. ಇದರ ಜೊತೆಗೆ ಭಾಷೆಗಳನ್ನು ಅಧಿಕೃತವಾಗಿ ನವೀಕರಿಸುತ್ತಲೇ, ಪರಿಷ್ಕರಿಸುತ್ತಲೇ ಇರುವಂತೆ, ಮತ್ತು ಈ ಕ್ರಿಯೆಯನ್ನು ನಿರಂತರವಾಗಿ ನಡೆಯುತ್ತಿರುವಂತೆ, ಆಯಾ ಭಾಷೆಯ ಶಬ್ದ ಕೋಶಗಳನ್ನು ಮತ್ತು ನಿಘಂಟುಗಳನ್ನು ಪರಿಷ್ಕರಿಸುತ್ತಲೇ ಇರಬೇಕಾಗುತ್ತದೆ ಹಾಗೂ ಪ್ರಚಾರಗೊಳಿಸಬೇಕಾಗುತ್ತದೆ. ಆ ಮೂಲಕ ಹೆಚ್ಚಿನ ಹಾಗೂ ಪ್ರಸ್ತುತದ ಸಂಗತಿಗಳು ಮತ್ತು ಪರಿಕಲ್ಪನೆಗಳನ್ನು ಪರಿಣಾಮಕಾರಿಯಾಗಿಯೇ, ಆಯಾ ಭಾಷೆಯಗಳಲ್ಲಿಯೇ ಚರ್ಚಿಸಬಹುದಾಗಿದೆ. ಇಂತಹ ಕಲಿಕಾ ಉಪಕರಣಗಳನ್ನು, ಮುದ್ರಿತ ವಿಷಯಗಳನ್ನು ಮತ್ತು ಪ್ರಮುಖವಾಗಿರುವ ವಿಷಯಗಳನ್ನು ಜಗತ್ತಿನ ಇತರ ಭಾಷೆಯಿಂದ ಭಾಷಾಂತರಗೊಳಿಸುವುದು ಮತ್ತು ಇದಕ್ಕಾಗಿ ನಿರಂತರವಾಗಿಯೇ ಶಬ್ದಕೋಶಗಳನ್ನು ಪರಿಷ್ಕರಿಸುತ್ತ, ಅವುಗಳನ್ನು ಅಧ್ಯಯನಕ್ಕೆ/ ಕಲಿಕೆಗೆ ಒದಗಿಸುವ ಮೂಲಕ ಜಗತ್ತಿನಲ್ಲಿ ಎಲ್ಲೆಡೆಗೂ ರೂಪಿಸಲಾಗಿರುವ ಭಾಷೆಗಳಾದ ಇಂಗ್ಲಿಷ್, ಫ್ರೆಂಚ್, ಜರ್ಮನ್, ಹೀಬ್ರೂ, ಕೊರಿಯನ್ ಮತ್ತು ಜಪಾನಿ ಭಾಷೆಗಳು ಈ ನಿರಂತರತೆಯನ್ನು ಕಾಯ್ದುಕೊಂಡಿವೆ. ಆದಾಗ್ಯೂ ಭಾರತವು ಈ ವಿಷಯದಲ್ಲಿ ಅಂದರೆ ಕಲಿಕಾ ಹಾಗೂ ಮುದ್ರಿತ ವಿಷಯಗಳನ್ನು ಒದಗಿಸುವಲ್ಲಿ ಮತ್ತು ಶಬ್ದಕೋಶಗಳನ್ನು

ರೂಪಿಸುವಲ್ಲಿ ಮತ್ತು ಆ ಮೂಲಕ ಭಾಷೆಗಳನ್ನು ಸದಾ ಅನುಕೂಲ ಭಾವದಲ್ಲಿಯೇ ಸ್ಪಂದನಗೊಳ್ಳುವಂತೆ ರೂಪಿಸಲು ಜೊತೆಗೆ ಸಮಗ್ರತೆಯಿಂದ ಸಶಕ್ತಗೊಳಿಸುವ ಕ್ರಿಯೆಯಲ್ಲಿ ಅತ್ಯಂತ ನಿಧಾನ ಗತಿಯನ್ನು ಅನುಸರಿಸಿಕೊಂಡೇ ಉಳಿದಿದೆ.

**22.7.** ಇದಕ್ಕೆ ಜೋಡಣೆಯಾಗಿರುವಂತೆ, ಇಷ್ಟೆಲ್ಲಾ ಪರಿಹಾರದ ಪ್ರಯತ್ನಗಳನ್ನು ಮಾಡಿದ್ದರೂ ಸಹಿತ ಭಾರತದಲ್ಲಿ ಕುಶಲ ಭಾಷಾ ಪರಿಣತರ ಕೊರತೆಯು ಅಧಿಕವಾಗಿಯೇ ಇದೆ. ಹೀಗಾಗಿ ಭಾಷಾ ಕಲಿಕೆಯನ್ನು ಕಡ್ಡಾಯವಾಗಿ ಸುಧಾರಿಸಲೇಬೇಕಾಗಿದೆ. ಅದನ್ನು ಹೆಚ್ಚು ಅನ್ವಯಿಕವಾಗಿರುವಂತೆ ಅನುಭವದ ಹಿನ್ನೆಲೆಯಲ್ಲಿ ಇದ್ದು ಮತ್ತು ಸಂಭಾಷಣೆಗೆ ಸಮರ್ಥತೆಯನ್ನು ಒದಗಿಸುವ ವಿಷಯದತ್ತ ಲಕ್ಷ್ಯವನ್ನು ಕೊಡಬೇಕಾಗಿದೆ ಮತ್ತು ಆಯಾ ಭಾಷೆಗಳಲ್ಲಿಯೇ ಸಂವಹನಗೊಳ್ಳುವತ್ತ ಸಾಗಬೇಕಾಗಿದೆ. ಇದು ಕೇವಲ ಸಾಹಿತ್ಯಕ್ಕೆ, ಶಬ್ದ ಕೋಶಗಳಿಗೆ ಮತ್ತು ಆ ಭಾಷೆಯ ವ್ಯಾಕರಣಕ್ಕೆ ಮಾತ್ರವೇ ಸಂಬಂಧಿಸಿರುವುದಿಲ್ಲ. ಭಾಷೆಗಳನ್ನು ಹೆಚ್ಚು ಹೆಚ್ಚು ವ್ಯಾಪಕವಾಗಿ ಬಳಸಿಕೊಳ್ಳುವ ಸಲುವಾಗಿ ಮತ್ತು ಕಲಿಕೆಗೆ ಹಾಗೂ ಕಲಿಸುವುದಕ್ಕೆ ಕಡ್ಡಾಯವಾಗಿ ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಳ್ಳಬೇಕಾಗಿದೆ.

**22.8.** ಶಾಲಾ ಮಕ್ಕಳಿಗೆ ಭಾಷೆಗಳನ್ನು, ಕಲೆಗಳನ್ನು ಮತ್ತು ಸಂಸ್ಕೃತಿಯ ಕಲಿಕೆಯನ್ನು ಹೆಚ್ಚಿಸುವ ಸಲುವಾಗಿ ಇರುವ ಉಪಕ್ರಮಗಳ ಬಗೆಗೆ ಭಾಗ – 4 ರಲ್ಲಿ ವಿವರಿಸಲಾಗಿದೆ. ಇದರಲ್ಲಿ ಶಾಲಾ ವ್ಯವಸ್ಥೆಯ ಎಲ್ಲ ಹಂತಗಳಲ್ಲಿಯೂ ಸಂಗೀತ, ಕಲೆಗಳು, ಕರಕುಶಲತೆಯ ವಿಷಯಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಲಾಗಿದೆ. ಶಾಲಾ ಪ್ರಾರಂಭದ ಹಂತದಲ್ಲಿಯೇ ತ್ರಿಭಾಷಾ ಸೂತ್ರವನ್ನು ಅನುಷ್ಠಾನಗೊಳಿಸುವುದರಿಂದ ಈ 'ಬಹು ಭಾಷಾ ಸಿದ್ಧಾಂತ'ವನ್ನು ಅತ್ಯುತ್ತಮ ಸ್ವರೂಪದಲ್ಲಿಯೇ ರೂಪಿಸಬಹುದಾಗಿದೆ.ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಸ್ಥಳೀಯ/ ಮನೆ ಭಾಷೆಯಲ್ಲಿಯೇ ಕಲಿಸಲಾಗುವುದು. ಹೆಚ್ಚು ಅನುಭವಾತ್ಮಕವಾಗಿರುವಂತೆ ಭಾಷಾ ಕಲಿಕೆಯನ್ನು ಬೋಧನೆಯನ್ನು ಪ್ರಾರಂಭಿಸಬೇಕಾಗುತ್ತದೆ. ಅಪ್ರತಿಮ ಸಾಧನೆ ಮಾಡಿರುವ ಸ್ಥಳೀಯ ಕಲಾಕಾರರು, ಲೇಖಕರು, ಕುಶಲ ಕೆಲಸಗಾರರು ಮತ್ತು ಇತರೆ ಪರಿಣತರನ್ನು, ಪ್ರಮುಖ ತರಬೇತುದಾರರನ್ನಾಗಿ ನಿಯೋಗಗೊಳಿಸಿಕೊಳ್ಳುವುದು; ಪಠ್ಯಕ್ರಮಗಳಲ್ಲಿ ಎಲ್ಲ ಮಾನವಿಕಗಳಲ್ಲಿ, ವಿಜ್ಞಾನದ ವಿಷಯಗಳಲ್ಲಿ, ಕಲೆಗಳಲ್ಲಿ, ಕರಕುಶಲತೆಯಲ್ಲಿ ಮತ್ತು ಕ್ರೀಡೆಗಳಲ್ಲಿ ಹೀಗೆ ಯಾವುದು ಪ್ರಾಸಂಗಿಕವಾಗಿರುವುದೋ ಅದನ್ನು, ಭಾರತೀಯ ಪಾರಂಪರಿಕ ಜ್ಞಾನದ ಸಂಯೋಗವಾಗುವಂತೆ ಹಾಗೂ ಸ್ಥಳೀಯ ಬುಡಕಟ್ಟು ಸಮುದಾಯಗಳ ಜ್ಞಾನವನ್ನು ಒಳಗೊಂಡಂತೆ ಇರುವ ಪಠ್ಯಕ್ರಮಗಳನ್ನು ರೂಪಿಸಬೇಕು ಮತ್ತು ಮುಖ್ಯವಾಗಿ ಇಂತಹ ಪಠ್ಯಕ್ರಮದಲ್ಲಿ ಹೆಚ್ಚು ನಮ್ಯತೆ –ಅದರಲ್ಲೂ ಮಾಧ್ಯಮಿಕ ಶಾಲೆ ಮತ್ತು ಉಚ್ಚ ಶಿಕ್ಷಣದ ಹಂತದಲ್ಲಿ– ಇರಬೇಕು. ಈ ಮೂಲಕ ವಿದ್ಯಾರ್ಥಿಗಳು ತಾವು ಅಧ್ಯಯನ ಮಾಡಲು ಆಯ್ಕೆ ಮಾಡಿಕೊಳ್ಳುವ ವಿಷಯಗಳಲ್ಲಿ, ತಮ್ಮಲ್ಲಿ ತಾವೇ ತಮ್ಮದೇ ಆದ ಸೃಜನಾತ್ಮಕ, ಕಲಾತ್ಮಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪಥದಲ್ಲಿ ಪ್ರಗತಿಯನ್ನು ಸುಲಭಗೊಳಿಸಿಕೊಳ್ಳಬಹುದು.

**22.9.** ತದನಂತರದಲ್ಲಿನ ಉಪಕ್ರಮಗಳನ್ನು ಸಶಕ್ತಗೊಳಿಸುವ ಸೂತ್ರವಾಗಿ, ಈ ಉಚ್ಚ ಶಿಕ್ಷಣದ ಹಾಗೂ ಅದರಾಚೆಯ ಹಂತಗಳಲ್ಲಿ ಕ್ರಮಬದ್ಧವಾಗಿ ಯೋಜನೆಗಳನ್ನು ರೂಪಿಸಲಾಗುವುದು; ಪ್ರಥಮದಲ್ಲಿ, ಈ ಮೇಲ್ಕಂಡಂತೆ ಇರುವ ವಿವಿಧ ಕೋರ್ಸ್‌ಗಳನ್ನು ಕಲಿಸುವ ವ್ಯವಸ್ಥೆಯನ್ನು ಪ್ರಗತಿಗೊಳಿಸುವುದಕ್ಕಾಗಿ, ಅತ್ಯುತ್ತಮ ಶಿಕ್ಷಕರ ಹಾಗೂ ಬೋಧನಾ ವಿಭಾಗವನ್ನು ಹೊಂದಿರುವ ಒಂದು ತಂಡವನ್ನು ವಿಕಸಿತಗೊಳಿಸಲಾಗುವುದು. ಭಾರತೀಯ ಭಾಷೆಗಳ ಸಮರ್ಥಪೂರ್ಣವಾದ ವಿಭಾಗಗಳು ಮತ್ತು ಕಾರ್ಯ ಯೋಜನೆಗಳು, ತುಲನಾತ್ಮಕ ಸಾಹಿತ್ಯ ಅಧ್ಯಯನ, ಸೃಜನಾತ್ಮಕ ಬರವಣಿಗೆ, ಕಲೆಗಳು, ಸಂಗೀತ, ತತ್ತ್ವಜ್ಞಾನ, ಇತ್ಯಾದಿ ವಿಷಯಗಳ ಕಲಿಕೆಯನ್ನು ದೇಶದಾದ್ಯಂತವೂ ಸ್ಥಾಪಿಸಲಾಗುತ್ತದೆ ಮತ್ತು 4–ವರ್ಷಗಳ ಅವಧಿಯ ಶಿಕ್ಷಕರ ತರಬೇತಿ ಒಳಗೊಂಡಂತೆ ಪದವಿಗಳನ್ನು ಪಡೆಯುವ ವಿಧಾನದಲ್ಲಿ ಈ ವಿಷಯವಾಗಿ ರೂಪಿಸಲಾಗುತ್ತದೆ. ಈ ವಿಭಾಗಗಳು ಮತ್ತು ಕೋರ್ಸ್‌ಗಳು –ಶ್ರೇಷ್ಠ ಗುಣಾತ್ಮಕವಾಗಿರುವ ಭಾಷಾ ವ್ಯವಸ್ಥೆಯನ್ನು ಕಲಿಸುವ ಒಂದು ವಿಶಾಲ ವ್ಯಾಪ್ತಿಯ ಚೌಕಟ್ಟನ್ನು –ಪರಿಣತ ಶಿಕ್ಷಕರ ಸಮೂಹವನ್ನು– ರೂಪುಗೊಳಿಸುವಲ್ಲಿ ಸಹಾಯಕವಾಗಿರುತ್ತದೆ. ಜೊತೆ ಜೊತೆಗೇ ಇದು ಸಂಗೀತ, ಕಲೆ, ತತ್ತ್ವಜ್ಞಾನ, ಲೇಖನ ಕಲೆಯ ಶಿಕ್ಷಕರನ್ನು ಹೊಂದಿರುತ್ತದೆ. ಇದು ಈ ನೀತಿಯನ್ನು ದೇಶಾದ್ಯಂತವೂ ರೂಪಿಸುವ ಸಲುವಾಗಿ ಅವಶ್ಯಕವಾಗಿರುತ್ತದೆ. ಇದಕ್ಕಾಗಿ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ (NRF) ವು, ಗುಣಾತ್ಮಕವಾಗಿರುವ ಸಂಶೋಧನೆಗಳಿಗೆ –ಈ ಎಲ್ಲಾ ವಲಯಗಳಲ್ಲಿಯೂ – ಸೂಕ್ತವಾದ ಧನಸಹಾಯವನ್ನು ಒದಗಿಸುತ್ತದೆ. ಇಲ್ಲಿ ಪ್ರಸಿದ್ಧವಾಗಿರುವ–ಸಾಧನೆ ಮಾಡಿರುವ ಸ್ಥಳೀಯ ಕಲಾವಿದರು, ಕರಕುಶಲಗಾರರನ್ನು, ಸೂಕ್ತ ಗೌರವ ಧನದೊಂದಿಗೆ 'ಅತಿಥಿ ಬೋಧಕರೆಂದು' ನೇಮಕ ಮಾಡಿಕೊಂಡು, ಸ್ಥಳೀಯವಾಗಿ ಸಂಗೀತ, ಕಲೆ, ಭಾಷೆಗಳು ಮತ್ತು ಕರಕುಶಲತೆಗಳನ್ನು ಬೆಳೆಸಬಹುದಾಗಿದೆ. ಈ ಮೂಲಕ ಎಲ್ಲ ವಿದ್ಯಾರ್ಥಿಗಳು ತಾವು ಕಲಿಯುತ್ತಿರುವ ಸ್ಥಳದ ಬಗೆಗೆ ಅಲ್ಲಿನ ಸಂಸ್ಕೃತಿ, ಪ್ರಾದೇಶಿಕ ವಿಶಿಷ್ಟ ಜ್ಞಾನದ ಬಗೆಗೆ ತಿಳುವಳಿಕೆ ಪಡೆದುಕೊಳ್ಳಲು ಸಹಾಯವಾಗುತ್ತದೆ. ಪ್ರತಿಯೊಂದು ಉಚ್ಚ ಶಿಕ್ಷಣ ಸಂಸ್ಥೆಯೂ ಜೊತೆಗೆ ಪ್ರತಿಯೊಂದು ಶಾಲೆ ಹಾಗೂ ಶಾಲಾ ಆವರಣದಲ್ಲಿ 'ಕಲಾವಿದರು ಲಭ್ಯವಾಗುವಂತೆ ಮಾಡಿ' ವಿದ್ಯಾರ್ಥಿಗಳಿಗೆ ಕಲೆ, ಸೃಜನಾತ್ಮಕತೆ ಹಾಗೂ ಸ್ಥಳೀಯ ಮತ್ತು ರಾಷ್ಟ್ರದ ಸಮೃದ್ಧ ಸಾಂಸ್ಕೃತಿಕ ಖಜಾನೆಯ ಬಗೆಗೆ ಜ್ಞಾನವನ್ನು ಒದಗಿಸುವುದು.

**22.10**. ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಉಚ್ಚ ಶಿಕ್ಷಣ ಸಂಸ್ಥೆಗಳು ಅವುಗಳಲ್ಲಿ ಮತ್ತೆ ಹೆಚ್ಚು ವಿಷಯಗಳ ವಿಭಾಗಗಳನ್ನು ರೂಪಿಸುವುದರಿಂದ ಹಾಗೂ ಸ್ಥಳೀಯ ಭಾಷೆಯನ್ನೇ/ಮಾತೃಭಾಷೆಯನ್ನೇ 'ಕಲಿಸುವ/ಬೋಧಿಸುವ ಸಂಪರ್ಕ ಭಾಷೆಯನ್ನಾಗಿಸಿಕೊಳ್ಳುವದರಿಂದ' ಮತ್ತು ದ್ವಿಭಾಷಾ ಪದ್ಧತಿಯಲ್ಲಿ ಅವುಗಳ ಲಭ್ಯತೆಯನ್ನು ಒದಗಿಸುವುದರಿಂದ, ಮತ್ತು ಅದು ಹೆಚ್ಚು ಹೆಚ್ಚು ಲಭ್ಯವಾಗುವಂತೆಯೇ ರೂಪಿಸುವುದಕ್ಕೋಸ್ಕರ ಹಾಗೂ ಒಟ್ಟು ದಾಖಲಾತಿ ಅನುಪಾತ(GER) ವನ್ನು ಅಧಿಕಗೊಳಿಸುವ ಮೂಲಕ ಮತ್ತು ಭಾರತೀಯ ಭಾಷೆಗಳನ್ನು ಬಳಸುವ ಮೂಲಕ, ಈ ರೀತಿಯಲ್ಲಿ ಇವುಗಳನ್ನೂ ಸಶಕ್ತಗೊಳಿಸುವ ಮೂಲಕ ಹೆಚ್ಚು ಸ್ಪಂದನಶೀಲವನ್ನಾಗಿಸಲು ಸಾಧ್ಯವಾಗುತ್ತದೆ. ಖಾಸಗೀ ಶಿಕ್ಷಣ ಸಂಸ್ಥೆಗಳೂ ಸಹಿತ, ಭಾರತೀಯ ಭಾಷೆಗಳನ್ನು ಬಳಸುವುದನ್ನು ಮತ್ತು ಅವುಗಳನ್ನು ಕಲಿಕಾ ಮಾಧ್ಯಮವನ್ನಾಗಿಸಿಕೊಳ್ಳುವಲ್ಲಿ /ಅಥವಾ ದ್ವಿಭಾಷಾ ಪದ್ಧತಿಯ ವ್ಯವಸ್ಥೆಯಲ್ಲಿ ಬೋಧನೆಯನ್ನು ಉತ್ತೇಜಿತಗೊಳಿಸಿಕೊಳ್ಳಬೇಕು. ನಾಲ್ಕು ವರ್ಷಗಳ ಅವಧಿಯ ಬಿ.ಈಡಿ ಪದವಿ ವ್ಯವಸ್ಥೆಯೂ ಸಹಿತ ಇಲ್ಲಿ ಸಹಾಯಕವಾಗಿರುತ್ತದೆ. ಉದಾಹರಣೆಗೆ, ವಿಜ್ಞಾನ ಮತ್ತು ಗಣಿತ ವಿಷಯಗಳ "ಶಿಕ್ಷಕರಿಗೆ ತರಬೇತಿ" ವಿನ್ಯಾಸದ ಮೂಲಕ ವಿಜ್ಞಾನದ ವಿಷಯಗಳನ್ನು ದೇಶದಾದ್ಯಂತ ಎಲ್ಲಾ ಶಾಲೆಗಳಲ್ಲಿ ದ್ವಿಭಾಷಾ ಪದ್ಧತಿಯಲ್ಲಿ ಕಲಿಸಬಲ್ಲ ಶಿಕ್ಷಕರನ್ನು ರೂಪಿಸಲಾಗುತ್ತದೆ.

**22.11**. ಭಾಷಾಂತರ ಮತ್ತು ವ್ಯಾಖ್ಯಾನದ ವಿಷಯದಲ್ಲಿ, ಉತ್ತಮ ಗುಣಾತ್ಮಕವಾದ ಕಾರ್ಯಕ್ರಮಗಳು ಮತ್ತು ಪದವಿಗಳು, ಕಲೆ ಮತ್ತು ವಸ್ತು–ಸಂಗ್ರಹಾಲಯಗಳ ನಿರ್ವಹಣೆ/ಆಡಳಿತ, ಪ್ರಾಕ್ತನ ಶಾಸ್ತ್ರ, ಕಲಾಕೃತಿಗಳ ಸಂರಕ್ಷಣೆ, ಚಿತ್ರಾತ್ಮಕ ವಿನ್ಯಾಸ (ಗ್ರಾಫಿಕ್ ಡಿಸೈನ್) ಮತ್ತು ವೆಬ್ ವಿನ್ಯಾಸಗಳ ರೀತಿಯ ವಿಷಯಗಳನ್ನು ಉಚ್ಚ ಶಿಕ್ಷಣದ ವ್ಯವಸ್ಥೆಯಲ್ಲಿಯೇ ಸೃಷ್ಟಿಸಲಾಗುತ್ತಿದೆ. ಭಾಷೆಗಳಲ್ಲಿರುವ ಕಲೆಗಳನ್ನು ಮತ್ತು ಸಂಸ್ಕೃತಿಗಳನ್ನು ಸಂರಕ್ಷಿಸುದರ ಸಲುವಾಗಿ ಭಾರತೀಯ ಭಾಷೆಗಳಲ್ಲಿ ಶ್ರೇಷ್ಠ ಗುಣಾತ್ಮಕವಾಗಿರುವ ವಸ್ತು ವಿಷಯಗಳನ್ನು ರೂಪಿಸುವುದು, ಕಲಾಕೃತಿಗಳ ಸುರಕ್ಷತೆ, ವಸ್ತು–ಸಂಗ್ರಹಾಲಯಗಳನ್ನು ನಿರ್ವಹಿಸುವ ಮತ್ತು ನಡೆಸುವ ಸಲುವಾಗಿ ಉಚ್ಚ ಅರ್ಹತೆಯನ್ನು ಹೊಂದಿದ ವ್ಯಕ್ತಿಗಳನ್ನು ಸಿದ್ಧಗೊಳಿಸುವುದಕ್ಕಾಗಿ ಪಾರಂಪರಿಕ ಕ್ಷೇತ್ರಗಳನ್ನು ಮತ್ತು ಪ್ರವಾಸಿ ತಾಣಗಳನ್ನು ನಿರ್ವಹಿಸುವ ಅರ್ಹತೆಗಳನ್ನು ಹೊಂದಿರುವ ವ್ಯಕ್ತಿಗಳನ್ನು ಸಿದ್ಧಗೊಳಿಸಲಾಗುತ್ತದೆ. ಈ ಮೂಲಕ ಪ್ರವಾಸೋದ್ಯಮವನ್ನೂ ಸಹ ಬಲಪಡಿಸಬಹುದಾಗಿದೆ.

**22.12**. ಈ ನೀತಿಯು – ಭಾರತದ ಸಮೃದ್ಧ ವೈವಿಧ್ಯಮಯತೆಯನ್ನು ಕಲಿಯುವವರು ನೇರಾನೇರವಾಗಿ ಆತ್ಮಗತಗೊಳಿಸಿಕೊಳ್ಳಬೇಕು ಎಂದು ಗುರುತಿಸುತ್ತದೆ. ಇದರರ್ಥವೆಂದರೆ ಮುಂತಾದ ಸರಳ ಚಟುವಟಿಕೆಗಳಿಗೆ ವಿದ್ಯಾರ್ಥಿಗಳನ್ನು ದೇಶದ ಬೇರೆ ಬೇರೆ ಭಾಗಗಳಿಗೆ ಪ್ರವಾಸಕ್ಕೆ ಕರೆದೊಯ್ಯುವಂತಹ ಇತರ ಸರಳ ಚಟುವಟಿಕೆಗಳನ್ನು ಮಾಡುವುದರಿಂದ ಇದು ಕೇವಲ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹವನ್ನು ಕೊಡುವುದಷ್ಟೇ ಅಲ್ಲದೇ ದೇಶದ ವೈವಿಧ್ಯತೆಯನ್ನು, ಸಂಸ್ಕೃತಿಯನ್ನು, ಪರಂಪರೆಗಳನ್ನು ಮತ್ತು ಭಾರತದ ಬೇರೆ ಬೇರೆ ಭಾಗಗಳ ಬಗೆಗೆ ಜ್ಞಾನವನ್ನು ಒದಗಿಸಿ ಕೊಡುವ ಮೂಲಕ ಸುಲಭವಾಗಿ ಅರ್ಥೈಸಿಕೊಳ್ಳುವುದನ್ನು, ಆ ಮೂಲಕ ಆದರಿಸುವುದನ್ನು ಕಲಿಸುತ್ತದೆ. ಈ ಮಾರ್ಗದಲ್ಲಿ ಸಾಗುವ ಹಂತದಲ್ಲಿ "ಏಕ ಭಾರತ ಶ್ರೇಷ್ಠ ಭಾರತ"ಅಡಿಯಲ್ಲಿ ದೇಶದ ಒಂದು ನೂರು ಪ್ರವಾಸೀ ತಾಣಗಳನ್ನು ಗುರುತಿಸುವ ಮೂಲಕ, ಮತ್ತು ಶಿಕ್ಷಣ ಸಂಸ್ಥೆಗಳು ತಮ್ಮ ವಿದ್ಯಾರ್ಥಿಗಳನ್ನು ಅಲ್ಲಿಗೆ ಕಳಿಸುವ ಮೂಲಕ, ಆಯಾ ತಾಣಗಳ ಬಗೆಗೆ, ವಿಷಯಗಳ ಬಗೆಗೆ ಅಧ್ಯಯನವನ್ನು ಕೈಕೊಳ್ಳಲು, ಜೊತೆಗೆ ಅವುಗಳ ಇತಿಹಾಸ, ವೈಜ್ಞಾನಿಕ ಕೊಡುಗೆಗಳು, ಪರಂಪರೆಗಳು, ಜಾನಪದ ಸಾಹಿತ್ಯ ಮತ್ತು ಜ್ಞಾನ ಇತ್ಯಾದಿ ವಿಷಯಗಳ ಬಗೆಗೆ ಅವಕಾಶ ದೊರೆತು, ಅವರ ಜ್ಞಾನವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

**22.13**. ಇಂತಹ ರೂಪು–ರೇಷೆಗಳನ್ನು ಹೊಂದಿರುವ ಕಾರ್ಯ–ಯೋಜನೆಗಳನ್ನು, ಮತ್ತು ಉಚ್ಚ ಶಿಕ್ಷಣದ ಹಂತದಲ್ಲಿ ಪದವಿಗಳನ್ನು ಈ ವಿಷಯದಲ್ಲಿ ಸೃಷ್ಟಿಸುವ ಮೂಲಕ – ಅಂದರೆ ಕಲೆಗಳ ಎಲ್ಲ ಪ್ರಕಾರಗಳಿಗೆ, ಭಾಷೆಗಳಿಗೆ, ಮಾನವಿಕಗಳಿಗೆ, ಉದ್ಯೋಗಾವಕಾಶ–ಗಳನ್ನು ಹೆಚ್ಚು ಮಾಡುವುದರ ಮೂಲಕ, ಅವರು ಪಡೆದುಕೊಂಡಿರುವ ಶ್ರೇಷ್ಠ ಗುಣಾತ್ಮಕ ಅರ್ಹತೆಗೆ ಪರಿಣಾಮಕಾರಿಯಾಗಿರುವ ಫಲಿತಾಂಶಗಳನ್ನೇ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ನೂರಾರು ಅಕಾಡೆಮಿಗಳು, ವಸ್ತು–ಸಂಗ್ರಹಾಲಯಗಳು, ಕಲಾ–ಸಂಗ್ರಹಾಲಯಗಳು, ಪರಂಪರಾ ತಾಣಗಳಲ್ಲಿ ಅವುಗಳ ದೈನಂದಿನ ಕಾರ್ಯ ಕಲಾಪಕ್ಕೆ ಅರ್ಹತೆ ಹೊಂದಿರುವ ವ್ಯಕ್ತಿಗಳ ಬೇಡಿಕೆ ಅತ್ಯಧಿಕವಾಗಿಯೇ ಇದೆ. ಯಾವಾಗ ಈ ಹುದ್ದೆಗಳನ್ನು ಸೂಕ್ತ ಅರ್ಹತೆಯನ್ನು ಹೊಂದಿದ ವ್ಯಕ್ತಿಯ ಆಯ್ಕೆಯ ಮೂಲಕ ಭರ್ತಿ ಮಾಡಲಾಗುತ್ತದೆಯೋ ನಂತರದಲ್ಲಿ ಅಲ್ಲಿನ ಕಲಾಕೃತಿಗಳ ಸುರಕ್ಷತೆ, ಸಂರಕ್ಷಣೆಗಳ ವಿಷಯದಲ್ಲಿ ಮತ್ತೆ ಹೊಸ ಹೊಸ ವಸ್ತು–ಸಂಗ್ರಹಾಲಯಗಳನ್ನು ಪ್ರಾರಂಭಿಸುವಲ್ಲಿ ಅದರಲ್ಲೂ ವರ್ಚುವಲ್ ಸಂಗ್ರಹಾಲಯಗಳೂ ಸೇರಿದಂತೆ ಗ್ಯಾಲರಿಗಳು ಮತ್ತು ಸಾಂಪ್ರದಾಯಿಕ ತಾಣಗಳೆಲ್ಲವೂ ನಮ್ಮ ಪರಂಪರೆಯನ್ನು ಸಂರಕ್ಷಿಸುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತಿರುವದಲ್ಲದೇ "ಭಾರತೀಯ ಪ್ರವಾಸೋದ್ಯಮವೂ" ಸಹಿತ ಹೆಚ್ಚುತ್ತದೆ.

**22.14.** ಈ ಭಾಷಾಂತರ ಹಾಗೂ ವ್ಯಾಖ್ಯಾನಿಕೆಗಳ ಸಲುವಾಗಿ, ಇಂತಹ ಕ್ರಮಗಳನ್ನು ಅನುಷ್ಠಾನಿಸುವ ದಿಕ್ಕಿನಲ್ಲಿ, ಉತ್ತಮ ಗುಣಮಟ್ಟದ ಕಲಿಕಾ ಸಾಮಗ್ರಿಗಳನ್ನು ಮತ್ತು ಅತ್ಯಾವಶ್ಯಕವಾಗಿರುವ ಲಿಖಿತ ಹಾಗೂ ವಾಕ್–ಶ್ರವಣ ಕಲಿಕಾ ಸಾಮಗ್ರಿಗಳು, ಭಾರತದ ಹಲವು ಭಾಷೆಗಳಲ್ಲಿ ಜೊತೆಗೆ ವಿದೇಶಿ ಭಾಷೆಗಳಲ್ಲಿಯೂ ಸಹಿತ ಸಂರಚನೆಗೊಂಡು, ಅವು ಸಾರ್ವಜನಿಕವಾಗಿ ಸುಲಭವಾಗಿ ಲಭ್ಯವಾಗಿಸಲೇಬೇಕಾದ –ಅದೂ ತುರ್ತು ಅವಶ್ಯಕತೆಯೂ ಆಗಿರುವುದರಿಂದ– ಭಾರತವೂ ಸಹಿತ ಈ ಕಾರ್ಯಕ್ಕಾಗಿ, ಭಾರತೀಯ ಭಾಷಾಂತರ ಹಾಗೂ ವ್ಯಾಖ್ಯಾನಿಕಾ ಸಂಸ್ಥೆ( IITI) ಗಳನ್ನು ಸ್ಥಾಪಿಸಲಾಗುವುದು. ಇಂತಹ ಸಂಸ್ಥೆಯು ಖಚಿತವಾಗಿಯೂ ರಾಷ್ಟ್ರದ ಸಲುವಾಗಿ ಉತ್ತಮ ಸೇವೆಯನ್ನೇ ಒದಗಿಸುತ್ತದೆ.ಇದರ ಜೊತೆಗೆ ಬಹು ಭಾಷೆಗಳಲ್ಲಿ ಅಪಾರ ಪ್ರಮಾಣದ ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತದೆ. ಇಲ್ಲಿ ವಿಷಯ ಪರಿಣಿತರಿಗೆ, ಭಾಷಾಂತರ ಹಾಗೂ ವ್ಯಾಖ್ಯಾನ ತಜ್ಞರಿಗೆ ಉದ್ಯೋಗಾವಕಾಶಗಳು ಹೆಚ್ಚುತ್ತವೆ. ಈ ಮೂಲಕ ಭಾರತದ ಎಲ್ಲ ಭಾಷೆಗಳನ್ನೂ ಮತ್ತೆ ಸಮೃದ್ಧಗೊಳಿಸಬಹುದಾಗಿದೆ. ಈ ಭಾರತೀಯ ಭಾಷಾಂತರ ಹಾಗೂ ವ್ಯಾಖ್ಯಾನಿಕಾ ಸಂಸ್ಥೆಯು ಭಾಷಾಂತರ ಹಾಗೂ ಅರ್ಥವಿವರಣೆಯ ಪ್ರಯತ್ನಗಳ ಸಲುವಾಗಿ, ತಂತ್ರಜ್ಞಾನದ ಪೂರ್ಣ ಪ್ರಯೋಜನವನ್ನು ಉಪಯೋಗಿಸಿಕೊಳ್ಳುವಂತೆ ಸಹಕರಿಸುತ್ತದೆ. ಈ ಸಂಸ್ಥೆಯು ಸಮಯದ ಅವಶ್ಯಕತೆಗೆ ತಕ್ಕಂತೆ, ಸ್ವಾಭಾವಿಕವಾಗಿಯೇ ಪ್ರಗತಿ ಹೊಂದುವುದು ಜೊತೆಗೆ ದೇಶದ ವಿವಿಧ ಭಾಗಗಳಲ್ಲಿಯೂ ಕಾರ್ಯ ನಿರ್ವಹಿಸುವ ಮೂಲಕ –ಉಚ್ಚ ಶಿಕ್ಷಣದ ಸಂಸ್ಥೆಗಳಲ್ಲಿ ಇತರೆ ಸಂಶೋಧನಾ ವಿಭಾಗಗಳ ಜೊತೆಗೆ ಸಹಭಾಗಿತ್ವವನ್ನು ಹೊಂದುವುದರ ಮೂಲಕ ಅಲ್ಲಿರುವ ಬೇಡಿಕೆ ಮತ್ತು ಅರ್ಹತಾಪೂರ್ಣ ಅಭ್ಯರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ.

**22.15.** ಇದರ ಸುವ್ಯಾಪ್ತ ಹಾಗೂ ಮಹತ್ವಪೂರ್ಣ ಕೊಡುಗೆಗಳಿಂದಾಗಿ, ಮತ್ತು ದೇಶದಾದ್ಯಂತ ಇರುವ ಈ ಎಲ್ಲ ಶೈಲಿಗಳ ಮತ್ತು ವಿಷಯಗಳ ಸಾಹಿತ್ಯದಿಂದ, ಇದರ ಸಾಂಸ್ಕೃತಿಕ ಮಹತ್ವದಿಂದ ಮತ್ತು ಇದರ ವೈಜ್ಞಾನಿಕ ದೃಷ್ಟಿಕೋನದಿಂದ ಸಂಸ್ಕೃತ ಪಾಠಶಾಲೆಗಳು ಮತ್ತು ವಿಶ್ವವಿದ್ಯಾಲಯಗಳ ಹಾಗೆ ಕೇವಲ "ಏಕಮುಖೀಯಾಗಿ ನಿರ್ಬಂಧಿಸಿಕೊಳ್ಳುವದಕ್ಕಿಂತ' ಹಾಗೂ ಸಂಸ್ಕೃತವನ್ನು ಶೈಕ್ಷಣಿಕ ವ್ಯವಸ್ಥೆಯಲ್ಲಿ ಮುಖ್ಯವಾಹಿನಿಯಲ್ಲಿಯೇ ಸಮರ್ಥವಾಗಿಯೇ –ಶಾಲೆಗಳಲ್ಲಿ ಅಳವಡಿಸುವುದರಿಂದ– ತ್ರಿಭಾಷಾ ಸೂತ್ರದ ವ್ಯವಸ್ಥೆಯಲ್ಲಿ ಇದನ್ನೂ ಒಂದು ಭಾಷೆಯನ್ನಾಗಿ ಆಯ್ಕೆ ಮಾಡಿಕೊಳ್ಳಲು ಅವಕಾಶವನ್ನು ಕೊಡುವುದರಿಂದ ತರಲಾಗುತ್ತದೆ. ಇದು ಉಚ್ಚ ಶಿಕ್ಷಣದ ಹಂತದಲ್ಲಿಯೂ ಇರುತ್ತದೆ. ಇದನ್ನು ಕೇವಲ ಪ್ರತ್ಯೇಕಗೊಳಿಸಿ ಕಲಿಸುವಂತಿಲ್ಲ. ಬದಲಿಗೆ ಇದನ್ನೂ ಒಂದು ಆಸಕ್ತಿದಾಯಕವಾಗಿರುವ ಮತ್ತು ಆವಿಷ್ಕಾರಯುಕ್ತ ಮಾರ್ಗದಲ್ಲಿಯೇ ಕಲಿಸಬೇಕಾಗುತ್ತದೆ. ಇದರ ಜೊತೆಗೆ ಸಮಕಾಲೀನ ಹಾಗೂ ಸಾಮಯಿಕವಾಗಿರುವ ಇತರ ವಿಷಯಗಳೂ ಒಳಗೊಂಡಂತೆ– ಅಂದರೆ ಗಣಿತ ವಿಷಯಗಳು, ಖಗೋಳ ವಿಜ್ಞಾನ, ತತ್ತ್ವಶಾಸ್ತ್ರ, ಭಾಷಾ ಶಾಸ್ತ್ರ, ನಾಟಕ ಶಾಸ್ತ್ರ, ಯೋಗಗಳನ್ನೂ ಕಲಿಸಬೇಕಾಗುತ್ತದೆ. ಈ ರೀತಿಯಲ್ಲಿ, ಈ ನೀತಿಯ ಉಳಿದೆಲ್ಲ ವಿಷಯಗಳಿಗೂ ಸುಸಂಗತಗೊಳ್ಳುವುದಕ್ಕೆ, ಸಂಸ್ಕೃತ ವಿಶ್ವವಿದ್ಯಾಲಯಗಳೂ ಸಹಿತ, ಈ ಉಚ್ಚ ಶಿಕ್ಷಣದ ವ್ಯವಸ್ಥೆಯಲ್ಲಿ ಬೃಹತ್–ಬಹುಶಿಸ್ತೀಯ ಸಂಸ್ಥೆಗಳಾಗುವ ದಿಕ್ಕಿನಲ್ಲಿ ಚಲಿಸಬೇಕಾಗುತ್ತದೆ. ಸಂಸ್ಕೃತದ ವಿಭಾಗಗಳನ್ನು ಸ್ಥಾಪಿಸುವ ಮೂಲಕ, ಆ ವಿಭಾಗವು ಬೋಧಿಸುವ ಹಾಗೂ ಅದು ಶ್ರೇಷ್ಠವಾದ ಅಸಾಧಾರಣವಾಗಿರುವ 'ಅಂತರ್–ಶಿಸ್ತೀಯ ಸಂಬಂಧದ" ಸಂಶೋಧನೆಗಳನ್ನು ಸಂಸ್ಕೃತ ವಿಷಯಗಳಲ್ಲಿ ಹಾಗೂ ಸಂಸ್ಕೃತ ಜ್ಞಾನ ವ್ಯವಸ್ಥೆಗಳ ಕುರಿತು ಕಾರ್ಯ ನಿರ್ವಹಿಸುವಂತೆ ರೂಪುಗೊಳಿಸಿ ಸ್ಥಾಪಿಸಲಾಗುವುದು. ಇದು ನೂತನ ಬಹುಶಿಸ್ತೀಯ ಉಚ್ಚ ಶಿಕ್ಷಣದ ವ್ಯವಸ್ಥೆಯಲ್ಲಿಯೇ ದೇಶದ ಎಲ್ಲ ಕಡೆಗೂ ಪ್ರಾರಂಭಿಸಲಾಗುವುದು. ಒಂದು ವೇಳೆ ವಿದ್ಯಾರ್ಥಿಯು ಆಯ್ಕೆ ಮಾಡಿಕೊಳ್ಳುವ ಇಚ್ಛೆ ವ್ಯಕ್ತಪಡಿಸಿದಲ್ಲಿ ಸಂಸ್ಕೃತವೂ ಸಹಿತ ಈ ಬಹುಶಿಸ್ತೀಯ ಉಚ್ಚ ಶಿಕ್ಷಣದ ಸಮಗ್ರತೆಯಲ್ಲಿಯೇ ಇರುವಂತೆ ಹಾಗೂ ಅದು ಸಮಗ್ರತೆಯ ಒಂದು ಸ್ವಾಭಾವಿಕ ಅಂಶವೇ ಆಗಿರುತ್ತದೆ. ಇದರ ಸಲುವಾಗಿ ದೇಶಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಸಂಸ್ಕೃತ ಶಿಕ್ಷಕರನ್ನು ವೃತ್ತಿಪರಿಣತರನ್ನಾಗಿಸುವ ನಿಖರವಾದ ಗುರಿಯನ್ನು ಇಟ್ಟುಕೊಂಡು ಅದಕ್ಕಾಗಿ ನಾಲ್ಕು ವರ್ಷಗಳ ಅವಧಿಯ ಸಮಗ್ರ ಬಹುಶಿಸ್ತೀಯ ಬಿ.ಇಡಿ ಪದವಿಯನ್ನು ಸಂಸ್ಕೃತವನ್ನು ಒಳಗೊಂಡಂತೆ ಎರಡು ವಿಷಯಗಳಲ್ಲಿ ಪದವಿ ಪ್ರದಾನ ಹಂತವನ್ನು ರೂಪಿಸಲಾಗುತ್ತಿದೆ.

**22.16.** ಇದರ ಜೊತೆ ಜೊತೆಗೆ ಶಾಸ್ತ್ರೀಯ ಭಾಷೆಗಳನ್ನು ಹಾಗೂ ಸಾಹಿತ್ಯಗಳನ್ನು ಅಧ್ಯಯನ ಮಾಡುತ್ತಿರುವ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳನ್ನು ಸಹಿತ ವಿಸ್ತರಿಸಲಾಗುತ್ತದೆ. ಅದರ ಸಲುವಾಗಿ ಲಕ್ಷಾಂತರ ಸಂಖ್ಯೆಯಲ್ಲಿ ಇರುವ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಭಾಷಾಂತರ ಮತ್ತು ಅಧ್ಯಯನವನ್ನೂ ವಿಸ್ತರಿಸಲಾಗುತ್ತದೆ. ಏಕೆಂದರೆ ಇಲ್ಲಿಯವರೆಗೂ ಈ ವಿಷಯಕ್ಕೆ ಸೂಕ್ತವಾಗಿರುವ ಲಕ್ಷ್ಯವನ್ನು ಕೊಡಲಾಗಿಲ್ಲ. ದೇಶಾದ್ಯಂತವಿರುವ ಸಂಸ್ಕೃತ ಮತ್ತು ಭಾರತದ ಭಾಷೆಗಳ ಸಂಸ್ಥೆಗಳನ್ನು ಹಾಗೂ ವಿಭಾಗಗಳನ್ನು ಮಹತ್ವಪೂರ್ಣವಾಗಿರುವಂತೆಯೇ ಸಮರ್ಥಗೊಳಿಸಲಾಗುವದು. ಇದರ ಅಧ್ಯಯನಕ್ಕೆ ಬರುವ ಅಪಾರ ಪ್ರಮಾಣದ ವಿದ್ಯಾರ್ಥಿಗಳ ನೂತನ ತಂಡಗಳಿಗೆ ಪರ್ಯಾಪ್ತ ತರಬೇತಿ ಕೊಡುವುದರ ಮೂಲಕ ಅದರಲ್ಲೂ ವಿಶೇಷವಾಗಿ ಅಪಾರ ಪ್ರಮಾಣದ ಹಸ್ತಪ್ರತಿಗಳ ಹಾಗೂ ಅವುಗಳು ಇತರ ವಿಷಯಗಳೊಡನೆ ಹೊಂದಿರುವ ಅನ್ಯೋನ್ಯ ಸಂಬಂಧದ ಕುರಿತು ಶಾಸ್ತ್ರೀಯ ಭಾಷಾ ಸಂಸ್ಥೆಗಳನ್ನು ವಿಶ್ವವಿದ್ಯಾಲಯಗಳೊಡನೆ ಸಂಯೋಜಿಸುವ ಗುರಿಯನ್ನು ಹೊಂದಲಾಗಿದೆಯಲ್ಲದೇ ಅವುಗಳ ಸ್ವಾಯತ್ತತೆಯನ್ನು ಕಾಯ್ದುಕೊಳ್ಳುವಲ್ಲಿ ಮತ್ತು ಅಲ್ಲಿ ಕಾರ್ಯ ನಿರ್ವಹಿಸುವ ಬೋಧಕ

ಸಿಬ್ಬಂದಿ ಮತ್ತು ವಿದ್ಯಾರ್ಥಿಗಳೂ ಸಹಿತ ದೃಢವಾದ ಹಾಗೂ ಕಠಿಣ ಪರಿಶ್ರಮದಿಂದಲೇ ಬಹುಶಿಸ್ತೀಯ ವಿಧಾನಗಳಲ್ಲಿಯೇ ಅಧ್ಯಯನ ಮಾಡುವಂತೆಯೇ ತರಬೇತುಗೊಳಿಸಬೇಕಾಗುತ್ತದೆ.

ಭಾಷೆಗಳಿಗಾಗಿಯೇ ಸಮರ್ಪಿಸಿಕೊಂಡಿರುವ ವಿಶ್ವವಿದ್ಯಾಲಯಗಳು ಇನ್ನು ಮುಂದೆ ಬಹುಶಿಸ್ತೀಯ ವ್ಯವಸ್ಥೆಯಲ್ಲಿ, ಅಂದರೆ, ಈ ವ್ಯವಸ್ಥೆಯಲ್ಲಿಯೇ ಪರಿವರ್ತನಗೊಳ್ಳಲಿವೆ. ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಶಿಕ್ಷಣ ಹಾಗೂ ಭಾಷಾ ವಿಷಯಗಳ–ಎರಡು–ಪದವಿ" ವ್ಯವಸ್ಥೆಯಲ್ಲಿ ತರಗತಿಗೆ ಅವಕಾಶಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಈ ಮೂಲಕ ಆಯಾ ಭಾಷೆಯಲ್ಲಿ ಶ್ರೇಷ್ಠ ಪರಿಣತ ಶಿಕ್ಷಕರನ್ನು ರೂಪಿಸಬಹುದಾಗಿದೆ. ಮತ್ತೂ ಮುಂದುವರೆದಂತೆ ಭಾಷೆಗಳ ಸಲುವಾಗಿಯೇ ಒಂದು ಸಂಸ್ಥೆಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಪಾಲಿ ಭಾಷೆಗಾಗಿ ರಾಷ್ಟ್ರೀಯ ಸಂಸ್ಥೆ, ಪರ್ಶಿಯನ್ ಮತ್ತು ಪ್ರಾಕೃತ ಭಾಷೆಗಳ ಸಂಸ್ಥೆಗಳನ್ನು ವಿಶ್ವವಿದ್ಯಾಲಯಗಳ ಆವರಣಗಳಲ್ಲಿಯೇ ಸ್ಥಾಪಿಸಲು ಉದ್ದೇಶಿಸಲಾಗಿರುತ್ತದೆ. ಇದೇ ರೀತಿಯಲ್ಲಿಯೇ ಇರುವ ಉಪಕ್ರಮಗಳನ್ನು ಭಾರತೀಯ ಕಲೆಗಳನ್ನು ಅಧ್ಯಯನ ಮಾಡುತ್ತಿರುವ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳು, ಕಲಾ ಇತಿಹಾಸ, ಭಾರತೀಯ ತತ್ತ್ವಶಾಸ್ತ್ರ(ಇಂಡಾಲಜಿ)ಗಳಿಗೂ ಸಹಿತ ಅವಕಾಶ ಒದಗಿಸಲಾಗುತ್ತಿದೆ.

ಈ ಎಲ್ಲ ವಿಷಯಗಳಲ್ಲಿ ಶ್ರೇಷ್ಠ ಸಂಶೋಧನಾ ಕಾರ್ಯಗಳಿಗೆ ರಾಷ್ಟ್ರೀಯ ಸಂಶೋಧನಾ ಮಂಡಳಿಯು ಸಹಕಾರ ನೀಡುತ್ತದೆ.

**22.17**. ಭಾರತದ ಎಲ್ಲ ಭಾಷೆಗಳನ್ನು–ಶಾಸ್ತ್ರೀಯ ಭಾಷೆಗಳನ್ನು ಒಳಗೊಂಡಂತೆ– ಹಾಗೂ ಗುಡ್ಡಗಾಡು ಮತ್ತು ಅಪಾಯದ ಅಂಚಿನಲ್ಲಿರುವ ಭಾಷೆಗಳೆಂದು ಪರಿಶಿಷ್ಟಗೊಳಿಸಲಾಗಿರುವ ಭಾಷೆಗಳನ್ನು ರಕ್ಷಿಸಲು ಮತ್ತು ಪುನರುಜ್ಜೀವನಗೊಳಿಸಲು ಹಾಗೂ ನವಚೇತನವನ್ನು ಪಡೆಯುವಲ್ಲಿ ಎಲ್ಲ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ. ಇಲ್ಲಿ ತಂತ್ರಜ್ಞಾನ ಹಾಗೂ ಲೋಕಜ್ಞಾನಗಳ ಜನಸಮುದಾಯದ ಭಾಗವಹಿಸುವಿಕೆಯು ಹೆಚ್ಚಿನ ಪ್ರಮಾಣದಲ್ಲಿ ನಿರ್ಣಾಯಕ ಪಾತ್ರದಲ್ಲಿ ಇರುತ್ತದೆ.

**22.18**. ಭಾರತದ ಸಂವಿಧಾನದ ಎಂಟನೇ ಪರಿಶಿಷ್ಟದಲ್ಲಿ ಉಲ್ಲೇಖಿಸಲಾಗಿರುವ ಭಾಷೆಗಳಲ್ಲಿ, ಪ್ರತಿಯೊಂದು ಭಾಷೆಗೂ ಅಕಾಡೆಮಿಗಳು ಸ್ಥಾಪಿಸಲ್ಪಡುತ್ತವೆ. ಇದರಲ್ಲಿ ಮಹಾನ್ ಸಾಧಕರ ಮತ್ತು ಸ್ಥಳೀಯ ಪರಿಣತ ಭಾಷಿಕರನ್ನೂ ಒಳಗೊಂಡಿರುತ್ತದೆ. ಇದು ಆಯಾ ಭಾಷೆಯ ನಿಖರವಾಗಿರುವ ಶಬ್ದಗಳನ್ನು ಸರಳವಾಗಿಯೇ ತೀರಾ ಇತ್ತೀಚಿನವರೆಗೂ ಅದರ ಪರಿಕಲ್ಪನೆಗಳ ಕುರಿತು ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಸಹಾಯಕವಾಗಿರುತ್ತದೆ ಮತ್ತು ನಿರಂತರವಾಗಿ ಪರಿಷ್ಕರಣೆಗೊಳ್ಳುವ ಆಧಾರದ ಮೇಲೆ, ಆಯಾ ಭಾಷೆಯಲ್ಲಿ ಶಬ್ದಕೋಶವನ್ನು ಪ್ರಕಾಶನಗೊಳಿಸುವುದು (ಜಗತ್ತಿನಾದ್ಯಂತ ಹಲವು ಭಾಷೆಗಳಲ್ಲಿ ಈ ದಿಸೆಯಲ್ಲಿ ನಡೆದಿರುವ ಯಶಸ್ವೀ ಪ್ರಯತ್ನಗಳಿಗೆ ಅನುರೂಪವಾಗಿಯೇ) ಇದನ್ನು ರೂಪಿಸಲಾಗುತ್ತಿದೆ. ಈ ಅಕಾಡೆಮಿಗಳು ಸಹಿತ ಪರಸ್ಪರರಲ್ಲಿ ಸಮಾಲೋಚನೆ ನಡೆಸುವ ಮೂಲಕ ಉತ್ತಮ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ಯಾವಾಗ ಯಾವಾಗ ಸಾಧ್ಯವೋ ಆಗೆಲ್ಲವೂ ಸರ್ವೇಸಾಮಾನ್ಯವಾಗಿರುವ ಶಬ್ದಗಳನ್ನು ಒಳಗೊಳ್ಳುವ ಹಾಗೆ ಶಬ್ದಕೋಶಗಳನ್ನು ರಚಿಸಬೇಕಾಗುತ್ತದೆ.

ಈ ಶಬ್ದಕೋಶಗಳನ್ನು ಎಲ್ಲೆಡೆಗೂ ಪ್ರಸಾರ ಮಾಡಬೇಕಿದೆ. ಅವು ಶಿಕ್ಷಣದಲ್ಲಿ, ಪ್ರವಾಸೋದ್ಯಮದಲ್ಲಿ, ಲೇಖನಗಳಲ್ಲಿ, ಭಾಷಣಗಳನ್ನು ಸಿದ್ಧಪಡಿಸುವಲ್ಲಿ ಮತ್ತೂ ಇವೆಲ್ಲವುಗಳ ಆಚೆಯೂ ಸಹಿತ ಸಿಗುವಂತೆ ಮತ್ತು ಇವೆಲ್ಲವೂ ಅಂತರ್ಜಾಲ ವ್ಯವಸ್ಥೆಯಲ್ಲಿಯೂ ಲಭ್ಯವಾಗುವಂತೆ ಇರಬೇಕು. ಈ ಎಂಟನೇ ಪರಿಶಿಷ್ಟದಲ್ಲಿ ಉಲ್ಲೇಖಿತವಾಗಿರುವ ಭಾಷೆಗಳ ಅಕಾಡೆಮಿಗಳು, ಆಯಾ ರಾಜ್ಯದ ಸಲಹೆ ಹಾಗೂ ಅವುಗಳ ಸಹಭಾಗಿತ್ವದಲ್ಲಿ– ಕೇಂದ್ರದಿಂದಲೇ ಸ್ಥಾಪಿಸಲ್ಪಡುತ್ತವೆ. ಅಪಾರ ಪ್ರಮಾಣದಲ್ಲಿ ಜನರು ಮಾತನಾಡುವ ಭಾರತದ ಇತರೇ ಭಾಷೆಗಳ ಅಕಾಡೆಮಿಗಳನ್ನೂ ಸಹಿತ ಇದೇ ಮಾದರಿಯಲ್ಲಿಯೇ ಕೇಂದ್ರ/ಅಥವಾ ರಾಜ್ಯಗಳಿಂದ ಸ್ಥಾಪಿಸಬಹುದಾಗಿದೆ.

**22.19**. ಭಾರತದ ಎಲ್ಲ ಭಾಷೆಗಳನ್ನು ಹಾಗೂ ಅದರೊಡನೆ ಸಹಸಂಗತಗೊಂಡಿರುವ ಕಲೆಗಳು ಮತ್ತು ಸಂಸ್ಕೃತಿಯ ವಿಷಯಗಳನ್ನು ಅಂತರ್–ಜಾಲ ಆಧಾರಿತವಾಗಿರುವ ವ್ಯವಸ್ಥೆಯಲ್ಲಿ ದಾಖಲೀಕರಣಗೊಳಿಸಲಾಗುತ್ತಿದೆ. ಅದರಲ್ಲೂ ಅವಸಾನದ ಅಂಚಿನಲ್ಲಿ ಇರುವ ಭಾಷೆಗಳನ್ನು, ಅದರೊಡನೆ ಸಂಯೋಗಗೊಂಡಿರುವ ಸಮೃದ್ಧವಾದ ಸ್ಥಳೀಯ ಕಲೆಗಳು ಮತ್ತು ಸಂಸ್ಕೃತಿಯನ್ನು ದಾಖಲಾತಿಗೊಳಿಸಲಾಗುತ್ತಿದೆ. ಈ ವ್ಯವಸ್ಥೆಯಲ್ಲಿ ವಿಡಿಯೋಗಳು, ಶಬ್ದ ಕೋಶಗಳು, ಧ್ವನಿಸುರುಳಿಗಳು ಮತ್ತು ಅದಕ್ಕಿಂತ ಮುಖ್ಯವಾಗಿ ಆಯಾ ಸಮುದಾಯದ (ವಿಶೇಷವಾಗಿ ಹಿರಿಯ ಜನರು) ಮಾತನಾಡುವ ಭಾಷಾಶೈಲಿ, ಕಥೆ ಹೇಳುವುದನ್ನು, ಗೀತೆಗಳನ್ನು ಹಾಡುವದನ್ನು, ನಾಟಕಗಳ ಪ್ರದರ್ಶನವನ್ನು, ಜಾನಪದ ಹಾಡುಗಳು ಹಾಗೂ ನೃತ್ಯಗಳನ್ನು, ಇಂತಹ ಮತ್ತಿತರ ಸಂಗತಿಗಳನ್ನು ದಾಖಲಾತಿಗೊಳಿಸಲಾಗುವುದು. ಈ ಪ್ರಯತ್ನಗಳಿಗೆ ಸಹಕರಿಸಲು ದೇಶದಾದ್ಯಂತ ಇದಕ್ಕೆ ಸೂಕ್ತ ಸಾಮಯಿಕ ಸಾಮಗ್ರಿಗಳನ್ನು ಒದಗಿಸುವಂತೆ ಹಾಗೂ ಈ ಅಂತರ್ಜಾಲ ಸಂಪರ್ಕಕ್ಕೆ/ಪೋರ್ಟಲ್‌ಗಳಿಗೆ ಸಲ್ಲಿಸುವಂತೆ ಕರೆ ಕೊಡಲಾಗುತ್ತಿದೆ. ಮತ್ತು ಇದರೊಡನೆ ಸಹಯೋಗಗೊಂಡಿರುವ ಸಂಶೋಧನಾ ಯೋಜನೆಗಳು; ಉದಾಹರಣೆಗೆ,

ಇತಿಹಾಸ, ಪ್ರಾಕ್ತನ ಶಾಸ್ತ್ರ, ಭಾಷಾ ಶಾಸ್ತ್ರ ಇತ್ಯಾದಿಗಳಿಗೆ ಈ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನವು ಧನಸಹಾಯವನ್ನು ಒದಗಿಸುತ್ತದೆ.

**22.20.** ಭಾರತೀಯ ಭಾಷೆಗಳ, ಕಲೆಗಳ ಮತ್ತು ಸಂಸ್ಕೃತಿಯ ವಿಷಯಗಳನ್ನು ಅಧ್ಯಯನಕ್ಕೆ ತೆಗೆದುಕೊಳ್ಳುವ ಎಲ್ಲ ವಯೋಮಾನದ ಜನರಿಗೂ ಇಲ್ಲಿ ಅಧ್ಯಯನ ಮಾಡಲು –ಸ್ಥಳೀಯ ಪರಿಣತರ ಜೊತೆಗೆ ಅಥವಾ /ಮತ್ತು ಉಚ್ಚ ಶಿಕ್ಷಣ ವ್ಯವಸ್ಥೆಯಲ್ಲಿ ಅಧ್ಯಯನ ಮಾಡಲು ವಿದ್ಯಾರ್ಥಿ ವೇತನಗಳನ್ನು ಸ್ಥಾಪಿಸಲಾಗುವುದು. ಭಾರತೀಯ ಭಾಷೆಗಳನ್ನು ದಿನನಿತ್ಯ ಬಳಸುವುದರಿಂದ ಮಾತ್ರ ಅವುಗಳನ್ನು ಕಲಿಯುವಲ್ಲಿ ಮತ್ತು ಕಲಿಸುವಲ್ಲಿ ಉಳಿಸಿಕೊಳ್ಳಬಹುದಾಗಿದೆ. ಇದನ್ನು ಉತ್ತೇಜಿಸುವ ಸಲುವಾಗಿ ಇಲ್ಲಿ ಪ್ರೋತ್ಸಾಹ ಧನವನ್ನು ಅಂದರೆ ಎಲ್ಲಾ ಭಾರತೀಯ ಭಾಷೆಗಳಲ್ಲಿ ಸ್ಪಂದನಶೀಲ ಕಾವ್ಯ, ಕಾದಂಬರಿಗಳು, ಸೃಜನೇತರ ವಿಷಯದ ಪುಸ್ತಕಗಳು, ಪಠ್ಯ ಪುಸ್ತಕಗಳು, ಪತ್ರಿಕೋದ್ಯಮ ಇತ್ಯಾದಿಗಳನ್ನು ಪ್ರೋತ್ಸಾಹಿಲು ಅಪರೂಪದ ಸಾಧನೆ ಮೂಲಕ ರಚಿತಗೊಂಡಿರುವ ಗದ್ಯ ಹಾಗೂ ಪದ್ಯ ಕೃತಿಗೆ ಬಹುಮಾನವನ್ನು ನೀಡಲಾಗುವುದು. ಜೊತೆಗೆ ಇಲ್ಲಿ ಉದ್ಯೋಗದ ಅವಕಾಶಗಳನ್ನು ಒದಗಿಸುವಲ್ಲಿ ಭಾರತದ ಭಾಷೆಗಳ ಮೇಲೆ ಇರುವ ಪ್ರಭುತ್ವವೂ ಸಹಿತ ಒಂದು ಅರ್ಹತಾಪೂರ್ಣ ಮಾನಕವೆಂದೇ ಅಳವಡಿಸಲಾಗುತ್ತದೆ.

## 23. ತಂತ್ರಜ್ಞಾನದ ಬಳಕೆ ಮತ್ತು ಸಂಯೋಜನೆ

**23.1.** ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಹಾಗೂ ಬಾಹ್ಯಾಕಾಶದಂತಹ ತೀವ್ರ ಪೈಪೋಟಿಯ ಕ್ಷೇತ್ರಗಳಲ್ಲಿ ಭಾರತವು ಜಾಗತಿಕವಾಗಿ ಮುಂಚೂಣಿಯಲ್ಲಿದೆ. ಡಿಜಿಟಲ್ ಭಾರತ ಆಂದೋಲನವು ದೇಶವನ್ನು ತಂತ್ರಜ್ಞಾನ ಕ್ಷೇತ್ರದಲ್ಲಿ ಸಬಲೀಕರಣಗೊಂಡ ಸಮಾಜವಾಗಿ ಹಾಗೂ ಜ್ಞಾನಾಧಾರಿತ ಆರ್ಥಿಕತೆಯಾಗಿ ಪರಿವರ್ತಿಸಲು ನೆರವಾಗುತ್ತಿದೆ. ಈ ಪರಿವರ್ತನೆಯಲ್ಲಿ ಶಿಕ್ಷಣವು ಮಹತ್ವದ ಪಾತ್ರ ವಹಿಸಲಿದೆ. ಶೈಕ್ಷಣಿಕ ಪ್ರಕ್ರಿಯೆಗಳು ಮತ್ತು ಫಲಶ್ರುತಿಗಳ ಸುಧಾರಣೆಯಲ್ಲಿ ತಾಂತ್ರಿಕತೆಯು ಪ್ರಮುಖ ಪಾತ್ರ ವಹಿಸಲಿದೆ. ಈ ರೀತಿಯಾಗಿ ಎಲ್ಲಾ ಹಂತಗಳಲ್ಲಿ ತಂತ್ರಜ್ಞಾನ ಮತ್ತು ಶಿಕ್ಷಣದ ಸಂಬಂಧವು ದ್ವಿಮುಖಿ ಆಗಿರುತ್ತದೆ.

**23.2.** ದೇಶದಲ್ಲಿ ಒಂದೆಡೆ ತಾಂತ್ರಿಕ ಅಭಿವೃದ್ಧಿಯು ಸ್ಫೋಟಕ ವೇಗದಲ್ಲಿ ಆಗುತ್ತಿದೆ. ಇದರೊಂದಿಗೆ ತಾಂತ್ರಿಕತೆಯೆಡೆಗೆ ಒಲವುಳ್ಳ ಶಿಕ್ಷಕರು ಹಾಗೂ ಉದ್ಯಮಶೀಲರು ಕ್ರಿಯಾಶೀಲತೆಯಲ್ಲಿ ತೊಡಗಿದ್ದಾರೆ. ಇದರ ಜೊತೆಗೆ ವಿದ್ಯಾರ್ಥಿ ಉದ್ಯಮಶೀಲರು ಕೂಡ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇವುಗಳಿಂದಾಗಿ, ತಾಂತ್ರಿಕತೆಯು ಶಿಕ್ಷಣವನ್ನು ಬಹುವಿಧದಲ್ಲಿ ಪ್ರಭಾವಿಸಲಿದೆ. ಇವುಗಳಲ್ಲಿ ಕೆಲವನ್ನು ಈಗ ಕಾಣಬಹುದಾಗಿದೆ. ಕೃತಕ ಬುದ್ಧಿಮತ್ತೆ, ಯಂತ್ರಗಳ ಮೂಲಕ ಕಲಿಕೆ, (ಮಷಿನ್ ಲರ್ನಿಂಗ್) ಬ್ಲಾಕ್ ಚೈನ್ ತಂತ್ರಜ್ಞಾನ, ಸ್ಮಾರ್ಟ್ ಬೋರ್ಡ್‌ಗಳು, ಕೈ ಹಿಡಿಕೆಯ ಗಣಕೀಯ ಉಪಕರಣಗಳು, ವಿದ್ಯಾರ್ಥಿ ಬೆಳವಣಿಗೆಗೆ ಅನುಕೂಲಕರ ಕಂಪ್ಯೂಟರ್ ಪರೀಕ್ಷೆಗಳನ್ನು ಒಳಗೊಂಡ ಹೊಸ ತಾಂತ್ರಿಕತೆಗಳು, ಇತರ ಬಗೆಯ ಶೈಕ್ಷಣಿಕ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್‌ಗಳು ತರಗತಿಯಲ್ಲಿ ವಿದ್ಯಾರ್ಥಿಗಳು ಏನನ್ನು ಕಲಿಯುತ್ತಾರೆ ಎಂಬುದನ್ನಷ್ಟೇ ಅಲ್ಲದೆ ಅವರು ಹೇಗೆ ಕಲಿಯುತ್ತಾರೆ ಎಂಬುದನ್ನೂ ಬದಲಾಯಿಸಲಿದೆ. ಈ ರೀತಿಯಾಗಿ ತಾಂತ್ರಿಕ ಹಾಗೂ ಶೈಕ್ಷಣಿಕ ನೆಲೆಗಳಲ್ಲಿ ಈ ಕ್ಷೇತ್ರಗಳು ಹಾಗೂ ಅವುಗಳಾಚೆಗೆ ವಿಸ್ತೃತ ಸಂಶೋಧನೆಗಳು ನಡೆಯುವ ಅಗತ್ಯವಿದೆ.

**23.3.** ಶಿಕ್ಷಣದ ಬಹು ಅಂಶಗಳನ್ನು ಸುಧಾರಿಸುವ ಸಲುವಾಗಿ ತಾಂತ್ರಿಕತೆಯ ಬಳಕೆ ಹಾಗೂ ಸಂಯೋಜನೆಯನ್ನು ಬೆಂಬಲಿಸಿ ಅಳವಡಿಸಿಕೊಳ್ಳಲಾಗುವುದು. ಆದರೆ ಇದರ ಪ್ರಮಾಣವನ್ನು ಹೆಚ್ಚಿಸುವ ಮುನ್ನ ಇವುಗಳನ್ನು ಸೂಕ್ತ ಸನ್ನಿವೇಶಗಳಲ್ಲಿ ಕಠಿಣವಾದ ಹಾಗೂ ಪಾರದರ್ಶಕವಾದ ಮೌಲ್ಯಮಾಪನಕ್ಕೆ ಒಳಪಡಿಸಲಾಗುವುದು. ಈ ದಿಸೆಯಲ್ಲಿ ತಾಂತ್ರಿಕತೆಯ ಪರಿಕಲ್ಪನೆಗಳ ಬಗೆಗಿನ ಆಲೋಚನೆಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಸ್ವಾಯತ್ತ ಘಟಕವಾದ "ರಾಷ್ಟ್ರೀಯ ಶೈಕ್ಷಣಿಕ ತಂತ್ರಜ್ಞಾನ ವೇದಿಕೆ' (NETF)ಯನ್ನು ರಚಿಸಲಾಗುವುದು. ಶಾಲೆ ಹಾಗೂ ಉನ್ನತ ಶಿಕ್ಷಣ, ಇವೆರಡಕ್ಕೂ, ಕಲಿಕೆ, ಮಾಪನ, ಯೋಜನೆ, ಆಡಳಿತ ಹಾಗೂ ಮತ್ತಿತರ ಅಂಶಗಳನ್ನು ಉನ್ನತಿಗೇರಿಸುವುದು ಇದರ ಉದ್ದೇಶವಾಗಿರುತ್ತದೆ. ಸೇರ್ಪಡೆ, ನಿಯೋಜನೆ ಹಾಗೂ ತಾಂತ್ರಿಕ ಬಳಕೆ ಕುರಿತು ನಿರ್ಧಾರ ತಳೆಯಲು ಅನುವು ಮಾಡಿಕೊಡುವುದು NETF ಗುರಿಯಾಗಿರುತ್ತದೆ. ಶೈಕ್ಷಣಿಕ ಸಂಸ್ಥೆಗಳ ಮುಖಂಡರಿಗೆ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ, ಇತರೆ ಆಸ್ಥೆದಾರರಿಗೆ ಹೊಸ ಜ್ಞಾನ ಹಾಗೂ ಸಂಶೋಧನೆಯ ಜೊತೆಗೆ ಸಮಾಲೋಚನೆ ಹಾಗೂ ಅತ್ಯುತ್ತಮ ಕ್ರಮಗಳ ಕುರಿತು ವಿಚಾರ ವಿನಿಮಯಕ್ಕೆ ಅವಕಾಶಗಳನ್ನು ಒದಗಿಸುವ ಮೂಲಕ ಅದು ತನ್ನ ಗುರಿಯನ್ನು ಸಾಧಿಸಲಿದೆ. NETF ಈ ಕೆಳಗಿನ ಕೆಲಸ ಕಾರ್ಯಗಳ ನಿರ್ವಹಣೆಯನ್ನು ಹೊಂದಿರುತ್ತದೆ:

ಎ) ತಂತ್ರಜ್ಞಾನ ಆಧಾರಿತ ಮಧ್ಯಸ್ಥಿಕೆ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸಂಸ್ಥೆಗಳಿಗೆ ಸ್ವತಂತ್ರವಾದ ಸಾಕ್ಷಿ ಆಧಾರಿತ ಸಲಹೆಗಳನ್ನು ನೀಡುವುದು;

ಬಿ) ಶೈಕ್ಷಣಿಕ ತಂತ್ರಜ್ಞಾನದಲ್ಲಿ ಬೌದ್ಧಿಕ ಹಾಗೂ ಸಾಂಸ್ಥಿಕ ಸಾಮರ್ಥ್ಯಗಳನ್ನು ವೃದ್ಧಿಸುವುದು;

ಸಿ) ಈ ಕ್ಷೇತ್ರಗಳಲ್ಲಿ ಕಾರ್ಯತಂತ್ರದ ಆದ್ಯತಾ ವಲಯಗಳ ಬಗ್ಗೆ ಒಳನೋಟ;

ಡಿ) ಸಂಶೋಧನೆ ಮತ್ತು ಅನ್ವೇಷಣೆಗಾಗಿ ಹೊಸ ದಿಕ್ಕುಗಳನ್ನು ಸಾದರಪಡಿಸುವುದು.

**23.4.** ಶೈಕ್ಷಣಿಕ ತಂತ್ರಜ್ಞಾನದ ಕ್ಷಿಪ್ರ ಬದಲಾವಣೆಯ ಕ್ಷೇತ್ರದಲ್ಲಿ ಪ್ರಸ್ತುತವಾಗಿ ಉಳಿಯುವುದಕ್ಕಾಗಿ NETF ಬಹು ಮೂಲಗಳಿಂದ ನಿಯಮಿತವಾಗಿ ಒಳಬರುವ ಅಧಿಕೃತ ದತ್ತಾಂಶಗಳನ್ನು ನಿರ್ವಹಿಸಲಿದೆ. ಶೈಕ್ಷಣಿಕ ತಂತ್ರಜ್ಞಾನ ಅನ್ವೇಷಕರು ಮತ್ತು ಅದನ್ನು ಅಭ್ಯಸಿಸುವವರ ಸೇರಿದಂತೆ ಬಹುಮೂಲಗಳಿಂದ ಬರುವ ದತ್ತಾಂಶಗಳನ್ನು ವಿಶ್ಲೇಷಿಸುವ ಸಲುವಾಗಿ ವಿವಿಧ ವಲಯಗಳ ಸಂಶೋಧಕರೊಂದಿಗೆ ತೊಡಗಿಕೊಳ್ಳಲಿದೆ. ಜ್ಞಾನಿಗಳನ್ನು ಹಾಗೂ ಅಭ್ಯಾಸ ನಿರತರನ್ನು ಒಳಗೊಂಡ ಸತ್ವಶಾಲಿ ವಾತಾವರಣವನ್ನು ಬೆಂಬಲಿಸುವ ಸಲುವಾಗಿ ಬಹು ಪ್ರಾದೇಶಿಕ ಹಾಗೂ ರಾಷ್ಟ್ರೀಯ ಸಮಾವೇಶಗಳು, ಕಾರ್ಯಾಗಾರಗಳು ಇತ್ಯಾದಿಯನ್ನು NETF ಆಯೋಜಿಸಲಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಶೈಕ್ಷಣಿಕ ತಂತ್ರಜ್ಞಾನ ಸಂಶೋಧಕರು, ಉದ್ಯಮಶೀಲರು ಹಾಗೂ ಕಾರ್ಯನಿರತರಿಂದ ಸಲಹೆಗಳನ್ನು ಕೋರಲಾಗುವುದು.

**23.5.** ಬೋಧನೆ–ಕಲಿಕೆ ಮತ್ತು ಮೌಲ್ಯಮಾಪನ ಪ್ರಕ್ರಿಯೆಗಳ ಸುಧಾರಣೆ, ಬೋಧಕರ ಸಿದ್ಧತೆ ಹಾಗೂ ವೃತ್ತಿಪರ ಬೆಳವಣಿಗೆಗೆ ನೆರವು, ಶೈಕ್ಷಣಿಕ ಪ್ರವೇಶಾವಕಾಶಗಳ ಹೆಚ್ಚಿಸುವಿಕೆ, ಶೈಕ್ಷಣಿಕ ಯೋಜನೆ, ವ್ಯವಸ್ಥಾಪನೆ ಮತ್ತು ಪ್ರವೇಶಾತಿ, ಹಾಜರಾತಿ, ಮಾಪನ ಇತ್ಯಾದಿಗೆ ಸಂಬಂಧಿಸಿದ ಪ್ರಕ್ರಿಯೆಗಳು ಒಳಗೊಂಡಂತೆ ಸುಲಲಿತ ಆಡಳಿತಕ್ಕೆ ತಾಂತ್ರಿಕ ನೆರವಿಗೆ ಒತ್ತು ನೀಡಲಾಗುವುದು.

**23.6.** ಈ ಮೇಲಿನ ಎಲ್ಲಾ ಉದ್ದೇಶಗಳಿಗಾಗಿ ವೈವಿಧ್ಯಮಯವಾದ ಉತ್ತಮ ಸಾಫ್ಟ್‌ವೇರ್‌ಗಳನ್ನು ಅಭಿವೃದ್ಧಿಪಡಿಸಿ, ನಂತರ ಎಲ್ಲಾ ಹಂತಗಳಲ್ಲಿ ವಿದ್ಯಾರ್ಥಿಗಳು ಹಾಗೂ ಬೋಧಕರಿಗೆ ಸಿಗುವಂತೆ ಮಾಡಲಾಗುತ್ತದೆ. ಇಂತಹ ಎಲ್ಲಾ ಸಾಫ್ಟ್‌ವೇರ್ ಎಲ್ಲಾ ಪ್ರಮುಖ ಭಾರತೀಯ ಭಾಷೆಗಳಲ್ಲಿ ಲಭ್ಯವಾಗಿಸಲಾಗುವುದು. ಕುಗ್ರಾಮಗಳಲ್ಲಿರುವ ವಿದ್ಯಾರ್ಥಿಗಳು, ದಿವ್ಯಾಂಗ ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ರೀತಿಯ ಬಳಕೆದಾರರಿಗೆ ಇದು ಸಿಗುವ ವ್ಯವಸ್ಥೆ ಮಾಡಲಾಗುತ್ತದೆ. ಎಲ್ಲಾ ರಾಜ್ಯಗಳೂ ತಮ್ಮ ಪ್ರಾದೇಶಿಕ ಭಾಷೆಗಳಲ್ಲಿ ಬೋಧನೆ–ಕಲಿಕೆಯ ಇ–ಪಠ್ಯದ ಅಭಿವೃದ್ಧಿಯನ್ನು ಮುಂದುವರಿಸಲಿವೆ. ಜೊತೆಗೆ NCERT, CIET, CBSE, NIOS ಮತ್ತು ಇತರ ಘಟಕಗಳು/ ಸಂಸ್ಥೆಗಳು ಕೂಡ ಇದನ್ನು ಅಭಿವೃದ್ಧಿಪಡಿಸಲಿವೆ. ಹೀಗೆ ಸಿದ್ಧಗೊಂಡ ಇ–ಪಠ್ಯವನ್ನು DIKSHA ವೇದಿಕೆಗೆ ಅಪ್ ಲೋಡ್ ಮಾಡಲಾಗುತ್ತದೆ. ವೇದಿಕೆಯನ್ನು ಇ–ಪಠ್ಯದ ಮೂಲಕ ಬೋಧಕರ ವೃತ್ತಿಪರ ಬೆಳವಣಿಗೆಗೆ ಕೂಡ ಬಳಸಬಹುದು.DIKSHA ವನ್ನು ವಿಸ್ತರಿಸಲು ಮತ್ತು ಶೈಕ್ಷಣಿಕ ತಂತ್ರಜ್ಞಾನ ಉಪಕ್ರಮಗಳನ್ನು ಉತ್ತೇಜಿಸುವ ಸಲುವಾಗಿ CIET ಯನ್ನು ಬಲಗೊಳಿಸಲಾಗುವುದು. ಶಾಲೆಗಳಲ್ಲಿ ಬೋಧಕರಿಗೆ ಸೂಕ್ತ ಉಪಕರಣಗಳನ್ನು ಲಭ್ಯವಾಗಿಸಲಾಗುವುದು. ಇದರಿಂದಾಗಿ ಬೋಧಕರು ಬೋಧನೆ–ಕಲಿಕಾ ಕ್ರಮಗಳನ್ನು ಇ–ಪಠ್ಯಕ್ಕೆ ಸೂಕ್ತವಾದ ರೀತಿಯಲ್ಲಿ ಸಂಯೋಜಿಸಬಹುದಾಗಿರುತ್ತದೆ. DIKSHA/SWAYAM ದಂತಹ ತಾಂತ್ರಿಕತೆ ಆಧಾರಿತ ಶಿಕ್ಷಣ ವೇದಿಕೆಗಳನ್ನು ಶಾಲಾ ಹಂತ ಹಾಗೂ ಉನ್ನತ ಶಿಕ್ಷಣ ಹಂತದಲ್ಲಿ ಉತ್ತಮವಾದ ರೀತಿಯಲ್ಲಿ ಸಂಯೋಜಿಸಲಾಗುವುದು. ಇದು ಬಳಕೆದಾರರು ಕೊಡಮಾಡುವ ಪ್ರತಿಕ್ರಿಯೆ ಇತ್ಯಾದಿಯನ್ನು ಕೂಡ ಒಳಗೊಂಡಿರುತ್ತದೆ. ಇದು ಪಠ್ಯ ಸಿದ್ಧಪಡಿಸುವವರಿಗೆ ಬಳಕೆದಾರ ಸ್ನೇಹಿಯಾದ ಗುಣಾತ್ಮಕ ಪಠ್ಯವನ್ನು ರೂಪಿಸಲು ಅನುವು ಮಾಡಿಕೊಡುತ್ತದೆ.

**23.7.** ಶಿಕ್ಷಣ ವ್ಯವಸ್ಥೆಯನ್ನು ಪರಿವರ್ತಿಸುವಂತಹ ಹೊರಹೊಮ್ಮುತ್ತಿರುವ ತಾಂತ್ರಿಕತೆಗಳ ಬಗ್ಗೆ ನಿರ್ದಿಷ್ಟವಾದ ಗಮನ ನೀಡುವ ಅಗತ್ಯವಿದೆ.ಈ ಮುಂಚೆ, ರಾಷ್ಟ್ರೀಯ ಶಿಕ್ಷಣ ನೀತಿಯನ್ನು 1986/1992ರಲ್ಲಿ ರೂಪಿಸಿದಾಗ ಅಂತರ್ಜಾಲ ತರಲಿಕ್ಕಿದ್ದ ಪರಿಣಾಮಗಳನ್ನು ಊಹಿಸುವುದು ಕಷ್ಟವಾದ ಸಂಗತಿಯಾಗಿತ್ತು. ಈ ತ್ವರಿತ ಹಾಗೂ ಸ್ಥಿತ್ಯಂತರಗಳನ್ನು ಉಂಟು ಮಾಡಬಲ್ಲ ಬದಲಾವಣೆಗಳೊಂದಿಗೆ ಹೊಂದಿಕೊಳ್ಳುವುದರಲ್ಲಿನ ಅಸಾಮರ್ಥ್ಯವು ಸ್ಪರ್ಧಾತ್ಮಕಕಂತೆ ತೀವ್ರವಾಗುತ್ತಿರುವ ಈ ಪ್ರಪಂಚದಲ್ಲಿ ನಮ್ಮನ್ನು ವೈಯಕ್ತಿಕ ನೆಲೆಯಲ್ಲಿ ಹಾಗೂ ಒಂದು ದೇಶವಾಗಿ ಹಾನಿಕಾರಕ ಅನಾನುಕೂಲಗಳನ್ನು ಉಂಟುಮಾಡುತ್ತಿದೆ. ಉದಾಹರಣೆಗೆ, ಅಂಕಿ ಅಂಶ ಜ್ಞಾನ ಹಾಗೂ ಕ್ರಮವಿಧಾನಗಳ ಜ್ಞಾನವನ್ನು ಲಭ್ಯವಾಗಿಸುವಲ್ಲಿ ಕಂಪ್ಯೂಟರ್‌ಗಳು ಮನುಷ್ಯರನ್ನು ಹಿಂದಿಕ್ಕಿ ಬಲುಮುಂದೆ ಸಾಗಿವೆ. ಇದೇ ವೇಳೆ ನಮ್ಮ ಶಿಕ್ಷಣವು ಎಲ್ಲಾ ಹಂತಗಳಲ್ಲಿ ವಿದ್ಯಾರ್ಥಿಗಳ ಉನ್ನತ ಶ್ರೇಣಿಯ ಸ್ಪರ್ಧಾತ್ಮಕತೆಗಳನ್ನು ಕಡೆಗಣಿಸಿ, ಇಂತಹ ಜ್ಞಾನದ ಹೊರೆಯನ್ನು ಅವರಲ್ಲಿ ತುಂಬುತ್ತಿದೆ.

**23.8.** ಅದರಲ್ಲೂ ಕೃತಕ ಬುದ್ಧಿ ಮತ್ತೆ (A1)3D/7D ಗಳು ದೃಷ್ಟಿ ಗೋಚರದ ವಾಸ್ತವಿಕತೆಗಳನ್ನು ತೋರುವ–ವರ್ಚುವಲ್ ವ್ಯವಸ್ಥೆಯು ರೂಪುಗೊಂಡು ಬಂದಾಗ ಮತ್ತು ಇದು ಪ್ರಶ್ನಾತೀತವಾಗಿಯೇ ಭಂಜಕ–ತಂತ್ರಜ್ಞಾನವಾಗಿರುವ ಸಂದರ್ಭದಲ್ಲಿಯೂ ಸಹಿತ ಈ ನೀತಿಯನ್ನು ರೂಪುಗೊಳಿಸಲಾಗುತ್ತಿದೆ. ಏಕೆಂದರೆ ಕೃತಕಬುದ್ಧಿ ಮತ್ತೆ ಆಧಾರಿತ

ಊಹೆಗಳು ಇದೀಗ ಕುಸಿತ ಕಂಡಿವೆ. ಈ ಕೃತಕಬುದ್ಧಿಮತ್ತೆಯ ವ್ಯವಸ್ಥೆಯು ಕೇವಲ ಬಾಹ್ಯದಲ್ಲಿ ಮೇಲ್ತೋರಿಕೆಯಲ್ಲಿ ಇದ್ದು, ಕೇವಲ ಹೊಂದಾಣಿಕೆ ಮಾಡಲು ಇದ್ದದ್ದರಿಂದ ಅದನ್ನೂ ಒಂದು ಉಪಯುಕ್ತ ಸಲಕರಣೆಯನ್ನಾಗಿಸಿಕೊಂಡು ಅದೂ ಕುಶಲತೆಯ ವೃತ್ತಿಪರಿಣತರಿಗೆ ಅಂದರೆ ವೈದ್ಯರಿಗೆ ಕೆಲವೊಂದು ಮುನ್ಸೂಚನೆಗಳನ್ನು ಕೊಡುವ ಕಾರ್ಯಗಳಲ್ಲಿ ಅನುಕೂಲಕರವಾಗಿಕೊಳ್ಳಲಾಗಿದೆ. ಒಟ್ಟಿನಲ್ಲಿ ಈ ಭಂಜಕ–ತಂತ್ರಜ್ಞಾನದ ಕ್ಷಮತೆಯು ಇದೀಗ ಸ್ಪಷ್ಟವಾಗಿದೆ. ಅದಕ್ಕಾಗಿ ಈಗ ಈ ಶಿಕ್ಷಣ ನೀತಿಯು ಕಡ್ಡಾಯವಾಗಿಯೇ ಇದಕ್ಕೆ ಉತ್ತರಿಸಲು ಶ್ರುತಿಬದ್ಧಗೊಳಿಸಲ್ಪಟ್ಟಿದೆ. ಇಲ್ಲಿ NETF ಹೊಂದಿರುವ ಖಾಯಂ ಸವಾಲುಗಳಲ್ಲಿ ಒಂದಾಗಿರುವ ಇದನ್ನು ಗುರುತಿಸಿ, ವರ್ಗೀಕರಿಸಿ, ಇದನ್ನು ವಿಘಟನೆಗೊಳಿಸುವ ಸಲುವಾಗಿ ಸಮಯ ನಿಗದಿಗೊಳಿಸಿರುವ ಹಾಗೆಯೇ ಆ ಅವಧಿಯಲ್ಲಿಯೇ ನವನವೀನ ತಂತ್ರಜ್ಞಾನ ಆಧಾರಿತವಾಗಿರುವ ಅವುಗಳ ಕಾರ್ಯಕ್ರಮತೆಯ ಅನುಗುಣವಾಗಿಯೇ ಮತ್ತು ನಿಗದಿತ ಸಮಯದಲ್ಲಿಯೇ ವರ್ಗೀಕರಣಗೊಳಿಸಬೇಕಾಗುತ್ತದೆ ಮತ್ತು ನಿಯತಕಾಲಿಕವಾಗಿಯೇ ಇವುಗಳ ವಿಶ್ಲೇಷಣೆಗಳನ್ನು MHRD ಗೆ ಸಲ್ಲಿಸಬೇಕು. ಈ ರೀತಿಯಲ್ಲಿ ಲಭ್ಯವಾಗುವ ಸಂಗ್ರಹವಾಗುವ ಅಂಶಗಳ ಆಧಾರದ ಮೇಲೆ ಈ MHRD ಯು ಈ ಶಿಕ್ಷಣ ನೀತಿಯ ಮೂಲಕ ಯಾವ ರೀತಿಯ ಬೇಡಿಕೆಗಳು ಉದ್ಭವವಾಗುತ್ತವೆಯೋ ಎನ್ನುವುದನ್ನು ಗಮನಿಸಿ ಈ ತಂತ್ರಜ್ಞಾನಗಳನ್ನು ವಿಧ್ಯುಕ್ತವಾಗಿಯೇ ಗುರುತಿಸಬೇಕಾಗುತ್ತದೆ.

**23.9.** ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು (MHRD) ಸ್ಥಿತ್ಯಂತರಕ್ಕೆ ಕಾರಣವಾಗಬಲ್ಲ ತಾಂತ್ರಿಕತೆಯನ್ನು ಗುರುತಿಸುತ್ತಿದ್ದಂತೆ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನವು ಆ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಸಂಶೋಧನಾ ಪ್ರಯತ್ನಗಳಿಗೆ ಚಾಲನೆ ನೀಡುವ ಅಥವಾ ಅವುಗಳನ್ನು ವಿಸ್ತರಿಸುವ ಕೆಲಸವನ್ನು ಮಾಡಲಿದೆ. ಕೃತಕ ಬುದ್ಧಿಮತ್ತೆಯ (AI) ಈ ಸನ್ನಿವೇಶದಲ್ಲಿ ಮೂರು ಮಾರ್ಗೋಪಾಯಗಳನ್ನು ನೀತಿಯನ್ನು NRF ಪರಿಗಣಿಸಬಹುದಾಗಿರುತ್ತದೆ: (ಅ) ಪ್ರಧಾನ AI ಸಂಶೋಧನೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವುದು, (ಆ) ಆನ್ವಯಿಕತೆ ಆಧಾರಿತ ಸಂಶೋಧನೆಯನ್ನು ಅಭಿವೃದ್ಧಿ ಪಡಿಸುವುದು ಹಾಗೂ ನಿಯೋಜಿಸುವುದು; ಮತ್ತು (ಇ) ಜಾಗತಿಕ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ AI ಬಳಸಿ ಆರೋಗ್ಯಸೇವೆ, ಕೃಷಿ ಮತ್ತು ಹವಾಮಾನ ಬದಲಾವಣೆಯಂತಹ ಕ್ಷೇತ್ರಗಳಲ್ಲಿ ಅಂತರರಾಷ್ಟ್ರೀಯ ಸಂಶೋಧನೆಯ ಪ್ರಯತ್ನಗಳನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವುದು.

**23.10.** HEI (ಉನ್ನತ ಶಿಕ್ಷಣ ಸಂಸ್ಥೆ) ಗಳು ಸ್ಥಿತ್ಯಂತರ ಉಂಟುಮಾಡಬಲ್ಲ ತಾಂತ್ರಿಕತೆಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸುವ ಜೊತೆಗೆ ಬೋಧನಾ ಸಾಮಗ್ರಿ ಮತ್ತು ಕೋರ್ಸ್‌ಗಳ ಆರಂಭಿಕ ಆವೃತ್ತಿಗಳನ್ನು ರೂಪಿಸುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತವೆ. ಪ್ರಮುಖ ಕ್ಷೇತ್ರಗಳಲ್ಲಿ ಆನ್ ಲೈನ್ ಕೋರ್ಸ್ ಗಳು ಹಾಗೂ ವೃತ್ತಿಪರ ಶಿಕ್ಷಣದ ನಿರ್ದಿಷ್ಟ ಕ್ಷೇತ್ರದ ಮೇಲೆ ಅವುಗಳ ಪ್ರಭಾವವನ್ನು ಮಾಪನ ಮಾಡುವುದನ್ನೂ ಇದು ಒಳಗೊಂಡಿರುತ್ತದೆ. ಒಮ್ಮೆ ತಾಂತ್ರಿಕತೆಯು ಪಕ್ವತೆಯ ಹಂತವನ್ನು ಮುಟ್ಟುತ್ತಿದ್ದಂತೆಯೇ ಸಾವಿರಾರು ವಿದ್ಯಾರ್ಥಿಗಳಿರುವ HEI ಗಳನ್ನು ಈ ಬೋಧನಾ ಮತ್ತು ಕೌಶಲದ ಪರಿಶ್ರಮಗಳ ಪ್ರಮಾಣವನ್ನು ಹೆಚ್ಚಿಸಲು ಸೂಕ್ತವಾದ ರೀತಿಯಲ್ಲಿ ಅಣಿಗೊಳಿಸಲಾಗುವುದು, ಸ್ಥಿತ್ಯಂತರ ತಾಂತ್ರಿಕತೆಗಳು ಕೆಲವು ಉದ್ಯೋಗಗಳನ್ನು ಅಪ್ರಸ್ತುತಗೊಳಿಸುತ್ತವೆ. ಆದ್ದರಿಂದ ದಕ್ಷತೆ ಹಾಗೂ ಗುಣಮಟ್ಟವನ್ನು ಖಾತ್ರಿಗೊಳಿಸುವ 'ಕೌಶಲಗೊಳ್ಳುವ' ಹಾಗೂ 'ಅಕೌಶಲಗೊಳ್ಳುವ' ದೃಷ್ಟಿಕೋನವು ಉದ್ಯೋಗವನ್ನು ಸೃಷ್ಟಿಸಲು ಹಾಗೂ ಅದನ್ನು ಉಳಿಸಿಕೊಳ್ಳಲು ಹೆಚ್ಚು ಮುಖ್ಯವಾಗುತ್ತದೆ. ಅಂತಹ ತರಬೇತಿ ನೀಡಲು ಸಾಂಸ್ಥಿಕ ಹಾಗೂ ಅಸಾಂಸ್ಥಿಕ ಪಾಲುದಾರರಿಗೆ ಅಂಗೀಕಾರ ನೀಡುವ ಸ್ವಾಯತ್ತತೆಯು ಸಂಸ್ಥೆಗಳಿಗೆ ಇರುತ್ತದೆ.

**23.11.** ವಿಶ್ವವಿದ್ಯಾಲಯಗಳು ಯಂತ್ರಗಳ ಮೂಲಕ ಕಲಿಕೆ ಮಷಿನ್ ಲರ್ನಿಂಗ್ ಯಂತಹ ಪ್ರಧಾನ ಕ್ಷೇತ್ರಗಳು, "AI + X" ನಂತಹ ಬಹುಶಿಸ್ತೀಯಾ ಕ್ಷೇತ್ರಗಳು ಮತ್ತು ಆರೋಗ್ಯ ಸೇವೆ, ಕೃಷಿ ಹಾಗೂ ಕಾನೂನಿನಂತಹ ವೃತ್ತಿಪರ ಕ್ಷೇತ್ರಗಳಲ್ಲಿ ಪಿಎಚ್.ಡಿ ಮತ್ತು ಸ್ನಾತಕೋತ್ತರ ಕೋರ್ಸ್ ಗಳನ್ನು ನೀಡುವ ಗುರಿ ಹೊಂದಿರುತ್ತವೆ. ಅವರು ಇಂತಹ ಕೋರ್ಸ್ ಗಳನ್ನು ಅಭಿವೃದ್ಧಿಪಡಿಸಿ SWAYAM ದಂತಹ ಡಿಜಿಟಲ್ ವೇದಿಕೆ ಮೂಲಕ ಇವನ್ನು ಕಲಿಕಾರ್ಥಿಗಳಿಗೆ ಸಿಗುವಂತೆ ಮಾಡಬಹುದು. ತ್ವರಿತವಾಗಿ ಅಳವಡಿಸಿಕೊಳ್ಳುವುದಕ್ಕೆ ಪೂರಕವಾಗಿ HEI ಗಳು ಪದವಿಪೂರ್ವ ಮತ್ತು ಔದ್ಯೋಗಿಕ ಶಿಕ್ಷಣದ ಆನ್ ಲೈನ್ ಕೋರ್ಸ್ ಗಳನ್ನು ಸಾಂಪ್ರದಾಯಕ ಬೋಧನೆಯೊಂದಿಗೆ ಸಮ್ಮಿಶ್ರಗೊಳಿಸಬಹುದು. HEI ಗಳು ದತ್ತಾಂಶ ಆನೋಟೇಷನ್ ಚಿತ್ರ ವರ್ಗೀಕರಣ (ಇಮೇಜ್ ಕ್ಲ್ಯಾಸಿಫಿಕೇಷನ್) ಮತ್ತು ವಾಕ್ ಲಿಪ್ಯಂತರ (ಸ್ಪೀಚ್ ಟ್ರ್ಯಾನ್ ಸ್ಕ್ರಿಪ್ಷನ್) ನಂತಹ AI ಪ್ರಕ್ರಿಯೆಗಳಿಗೆ ನೆರವು ನೀಡುವ ಸಲುವಾಗಿ ಕಡಿಮೆ ಪರಿಣತಿಯ ಕಾರ್ಯಗಳಲ್ಲಿ ಗುರಿ ನಿರ್ದೇಶಿತ ತರಬೇತಿ ಆರಂಭಿಸಬಹುದು. ಶಾಲಾ ಮಕ್ಕಳಿಗೆ ಭಾಷೆಗಳನ್ನು ಕಲಿಸುವ ಪ್ರಯತ್ನಗಳನ್ನು ಭಾರತದ ವಿವಿಧ ಭಾಷೆಗಳ "ಸಹಜ ಭಾಷಾ ಸಂಶ್ಲೇಷಣೆ" (ನ್ಯಾಚುರಲ್ ಲ್ಯಾಂಗ್ವೇಜ್ ಪ್ರೊಸೆಸಿಂಗ್) ಅನ್ನು ಹೆಚ್ಚಿಸುವ ಪ್ರಯತ್ನಗಳೊಂದಿಗೆ ಸಂಯೋಜಿಸಲಾಗುವುದು.

**23.12.** ಸ್ಥಿತ್ಯಂತರ ತಾಂತ್ರಿಕತೆಗಳು ಹೊರಹೊಮ್ಮುತ್ತಿದ್ದಂತೆಯೇ ಶಾಲಾ ಶಿಕ್ಷಣ ಮತ್ತು ನಿರಂತರ ಶಿಕ್ಷಣವು ಅವುಗಳ ಸ್ಥಿತ್ಯಂತರ ಪರಿಣಾಮಗಳ ಕುರಿತು ಅರಿವು ಮೂಡಿಸುವ ಬಗ್ಗೆ ಹಾಗೂ ಸಂಬಂಧಿಸಿದ ವಿಷಯಗಳನ್ನು ಪರಿಹರಿಸುವ ಬಗ್ಗೆ ಸಾಮಾನ್ಯ ಜನತೆಯ ಅರಿವು ಹೆಚ್ಚಿಸಲು ನೆರವು ನೀಡುತ್ತವೆ. ಈ ತಾಂತ್ರಿಕತೆಗಳಿಗೆ ಸಂಬಂಧಿಸಿದಂತೆ ಮಾಹಿತಿಯುಕ್ತ ಸಾರ್ವಜನಿಕ ಸಮ್ಮತಿಯನ್ನು ಪಡೆಯಲು ಇಂತಹ ಅರಿವು ಅತ್ಯಗತ್ಯವಾಗಿರುತ್ತದೆ. ಶಾಲಾ ಮಟ್ಟದಲ್ಲಿ ಪ್ರಚಲಿತ ವಿದ್ಯಮಾನಗಳು ಹಾಗೂ ನೈತಿಕ ವಿಷಯಗಳು NETF/MHRD ಗುರುತಿಸಿದ ಸ್ಥಿತ್ಯಂತರ ತಾಂತ್ರಿಕತೆಗಳ ಚರ್ಚೆಯನ್ನೂ ಒಳಗೊಂಡಿರುತ್ತವೆ. ನಿರಂತರ ಶಿಕ್ಷಣಕ್ಕೆ ಸೂಕ್ತ ಬೋಧನಾ ಮತ್ತು ಚರ್ಚಾ ಸಾಮಗ್ರಿಗಳನ್ನು ಕೂಡ ಸಿದ್ಧಪಡಿಸಲಾಗುವುದು.

**23.13.** AI ಆಧಾರಿತ ತಾಂತ್ರಿಕತೆಗಳಿಗೆ ದತ್ತಾಂಶವು ಮುಖ್ಯ ಇಂಧನವಾಗಿರುತ್ತದೆ. ಹೀಗಾಗಿ ದತ್ತಾಂಶ ನಿರ್ವಹಣೆ ಹಾಗೂ ದತ್ತಾಂಶ ಸಂರಕ್ಷಣೆ ಇತ್ಯಾದಿಗೆ ಸಂಬಂಧಿಸಿದಂತೆ ಖಾಸಗಿತನ, ಕಾನೂನುಗಳು ಮತ್ತು ಪ್ರಮಾಣೀಕರಣದ ವಿಷಯಗಳ ಕುರಿತು ಅರಿವು ಹೆಚ್ಚಿಸುವುದು ಮಹತ್ವದ್ದಾಗಿರುತ್ತದೆ. AI ಆಧಾರಿತ ತಾಂತ್ರಿಕತೆಗಳ ಅಭಿವೃದ್ಧಿ ಹಾಗೂ ನಿಯೋಜನೆಗೆ ಸಂಬಂಧಿಸಿದ ನೈತಿಕ ವಿಷಯಗಳ ಬಗ್ಗೆ ಗಮನಸೆಳೆಯುವುದು ಕೂಡ ಅಗತ್ಯವಾಗಿರುತ್ತದೆ. ಈ ಅರಿವು ಮೂಡಿಸುವ ಪ್ರಯತ್ನಗಳಲ್ಲಿ ಶಿಕ್ಷಣವು ಬಲು ಮುಖ್ಯವಾದ ಪಾತ್ರ ವಹಿಸುತ್ತದೆ.ಸ್ವಚ್ಛ ಹಾಗೂ ಬರಿದಾಗದ ಇಂಧನಗಳು, ಜಲ ಸಂರಕ್ಷಣೆ, ಸುಸ್ಥಿರ ಕೃಷಿ, ಪರಿಸರ ಸಂರಕ್ಷಣೆ ಹಾಗೂ ಇತರ ಪರಿಸರ ಸ್ನೇಹಿ ಉಪಕ್ರಮಗಳಿಗೆ ಸಂಬಂಧಿಸಿದ ಸ್ಥಿತ್ಯಂತರ ತಾಂತ್ರಿಕತೆಗಳು ನಾವು ಬದುಕುವ, ಅಂದರೆ, ನಾವು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ರೀತಿಯಲ್ಲಿ ಬದಲಾವಣೆ ಉಂಟುಮಾಡುವ ನಿರೀಕ್ಷೆ ಇದೆ.

## 24. ಆನ್ ಲೈನ್ ಮತ್ತು ಡಿಜಿಟಲ್ ಶಿಕ್ಷಣ: ತಂತ್ರಜ್ಞಾನದ ಸಮರ್ಪಕ ಬಳಕೆಯ ಖಾತ್ರಿಗೊಳಿಸುವಿಕೆ

**24.1.** ಹೊಸ ಸನ್ನಿವೇಶಗಳಿಗೆ ಮತ್ತು ವಾಸ್ತವಗಳಿಗೆ ಹೊಸ ಉಪಕ್ರಮಗಳ ಅಗತ್ಯವಿರುತ್ತದೆ. ಇತ್ತೀಚೆಗೆ ಹೆಚ್ಚುತ್ತಿರುವ ಸೋಂಕಿನ ಪರಿಸ್ಥಿತಿಯು ಯಾವಾಗ ಸಾಂಪ್ರದಾಯಿಕ ಹಾಗೂ ಖುದ್ದು ಹಾಜರಾತಿ ಶಿಕ್ಷಣ ಸಾಧ್ಯವಿಲ್ಲವೋ ಅಂತಹ ಸಂದರ್ಭದಲ್ಲಿ ಗುಣಮಟ್ಟದ ಶಿಕ್ಷಣದ ಪರ್ಯಾಯ ಮಾದರಿಗಳೊಂದಿಗೆ ನಾವು ಸಿದ್ಧವಿರಬೇಕು ಎಂಬುದನ್ನು ಅನಿವಾರ್ಯವಾಗಿಸುತ್ತದೆ. ಇದಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಶಿಕ್ಷಣ ನೀತಿ–2020 ತಾಂತ್ರಿಕತೆಯ ಅನುಕೂಲಗಳನ್ನು ಬಳಸಿಕೊಳ್ಳುವ ಪ್ರಾಮುಖ್ಯವನ್ನು ಗುರುತಿಸುತ್ತದೆ. ಆದರೆ ಇದೇ ವೇಳೆಗೆ ಅದರ ಸಂಭಾವ್ಯ ಸಂಕಷ್ಟಗಳು ಹಾಗೂ ಅಪಾಯಗಳನ್ನೂ ಮನಗಾಣುತ್ತದೆ. ಆನ್ ಲೈನ್/ ಡಿಜಿಟಲ್ ಶಿಕ್ಷಣದ ದುಷ್ಪರಿಣಾಮಗಳಿಗೆ ಕಡಿವಾಣ ಹಾಕಿ ಅದರ ಪ್ರಯೋಜನಗಳನ್ನು ಹೇಗೆ ಪಡೆಯಬೇಕೆಂಬ ಬಗ್ಗೆ ನಿರ್ಧರಿಸಲು ಎಚ್ಚರಿಕೆಯಿಂದ ವಿನ್ಯಾಸಗೊಳಿಸಲಾದ ಹಾಗೂ ಸೂಕ್ತ ಪ್ರಮಾಣದ ಪ್ರಾಯೋಗಿಕ ಅಧ್ಯಯನಗಳನ್ನು ನಡೆಸಲು ಆದ್ಯತೆ ಕೊಡಲಾಗುತ್ತದೆ. ಮತ್ತೊಂದೆಡೆ, ಈಗಿರುವ ಡಿಜಿಟಲ್ ವೇದಿಕೆಗಳು ಹಾಗೂ ಚಾಲ್ತಿಯಲ್ಲಿರುವ ಮಾಹಿತಿ ತಂತ್ರಜ್ಞಾನ (ICT) ಆಧಾರಿತ ಶೈಕ್ಷಣಿಕ ಉಪಕ್ರಮಗಳನ್ನು ಪೂರ್ಣಪ್ರಮಾಣದಲ್ಲಿ ಬೆಳೆಸಿ ವಿಸ್ತರಿಸಬೇಕಿದೆ. ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಲಭ್ಯವಾಗಿಸುವುದಕ್ಕೆ ಸಂಬಂಧಪಟ್ಟಂತೆ ಈಗಿರುವ ಹಾಗೂ ಭವಿಷ್ಯದ ಸವಾಲುಗಳನ್ನು ಎದುರಿಸಲು ಇದು ಅತ್ಯಗತ್ಯವಾಗಿರುತ್ತದೆ.

**24.2.** ಆದಾಗ್ಯೂ, ಸಂಘಟಿತ ಪ್ರಯತ್ನಗಳ ಮೂಲಕ ಡಿಜಿಟಲ್ ಕಂದಕವನ್ನು ನಿವಾರಿಸದಿದ್ದರೆ ಆನ್ ಲೈನ್/ ಡಿಜಿಟಲ್ ಶಿಕ್ಷಣದ ಲಾಭಗಳನ್ನು ಬಳಸಿಕೊಳ್ಳಲು ಸಾಧ್ಯವಿಲ್ಲ. ಇದಕ್ಕಾಗಿ ಡಿಜಿಟಲ್ ಇಂಡಿಯಾ ಆಂದೋಲನ ಮತ್ತು ಸುಲಭ ದರದಲ್ಲಿ ಗಣಕೀಯ ಸಾಧನಗಳನ್ನು ಲಭ್ಯವಾಗಿಸುವುದು ಇದಕ್ಕೆ ಮುಖ್ಯವಾಗುತ್ತದೆ. ಆನ್ ಲೈನ್ ಮತ್ತು ಡಿಜಿಟಲ್ ಶಿಕ್ಷಣಕ್ಕೆ ತಾಂತ್ರಿಕತೆಯ ಬಳಕೆಯು ಸಂದರ್ಭದಲ್ಲಿ ಸಮಾನ ಅವಕಾಶಗಳ ಸಮಸ್ಯೆಗಳನ್ನು ಸಮರ್ಥವಾಗಿ ಪರಿಹರಿಸಬೇಕಾಗುತ್ತದೆ.

**24.3.** ಪರಿಣಾಮಕಾರಿ ಆನ್‌ಲೈನ್ ಬೋಧಕರಾಗಲು ಶಿಕ್ಷಕರಿಗೆ ಸೂಕ್ತ ತರಬೇತಿ ಮತ್ತು ಬೆಳವಣಿಗೆಯ ಅಗತ್ಯವಿದೆ. ಸಾಂಪ್ರದಾಯಿಕ ತರಗತಿಯ ಉತ್ತಮ ಬೋಧಕನು ತಾನೇತಾನಾಗಿ ಆನ್‌ಲೈನ್ ತರಗತಿಯಲ್ಲೂ ಉತ್ತಮ ಬೋಧಕನೇ ಆಗಿರುತ್ತಾನೆ ಎಂದು ಊಹೆ ಮಾಡಲಾಗದು. ಬೋಧನಾ ಕ್ರಮದಲ್ಲಿ ಬದಲಾವಣೆ ಜೊತೆಗೆ ಆನ್‌ಲೈನ್ ಮಾಪನಗಳ ಜೊತೆಗೆ ವಿಭಿನ್ನ ದೃಷ್ಟಿಕೋನ ಅಗತ್ಯವಾಗುತ್ತದೆ. ದೊಡ್ಡ ಪ್ರಮಾಣದಲ್ಲಿ ಆನ್‌ಲೈನ್ ಪರೀಕ್ಷೆಗಳನ್ನು ನಡೆಸುವುದಕ್ಕೆ ಹಲವಾರು ಸವಾಲುಗಳಿವೆ. ಆನ್‌ಲೈನ್ ವಾತಾವರಣದಲ್ಲಿ ಕೇಳಬಹುದಾದ ಪ್ರಶ್ನೆಯ ಬಗೆಗಳ ಪರಿಮಿತಿ, ನೆಟ್ ವರ್ಕ್ ನಿರ್ವಹಣೆ, ವಿದ್ಯುತ್ ವ್ಯತ್ಯಯ ಹಾಗೂ ನಿಯಮಬಾಹಿರ ಅನುಸರಣೆಗಳನ್ನು ತಡೆಯುವುದು ಇದರಲ್ಲಿ ಸೇರಿವೆ. ಪ್ರದರ್ಶಕ ಕಲೆಗಳು ಮತ್ತು ವಿಜ್ಞಾನ ಪ್ರಾಯೋಗಿಕತೆಯಂತಹ ಕೆಲವು ಕೋರ್ಸ್‌ಗಳು/ ವಿಷಯಗಳು ಆನ್‌ಲೈನ್/ ಡಿಜಿಟಲ್ ಶಿಕ್ಷಣ ಆವರಣದಲ್ಲಿ ಮಿತಿಗಳನ್ನು ಹೊಂದಿದ್ದು, ಇವನ್ನು ಅನ್ವೇಷಣಕಾರಿ ಕ್ರಮಗಳ ಮೂಲಕ ಆಂಶಿಕವಾಗಿ ಹಿಮ್ಮೆಟ್ಟಿಸಬಹುದು. ಇದರ ಜೊತೆಗೆ, ಆನ್ ಲೈನ್ ಶಿಕ್ಷಣವನ್ನು ಅನುಭವಾತ್ಮಕ ಹಾಗೂ ಚಟುವಟಿಕೆ ಆಧಾರಿತ ಕಲಿಕೆಯೊಂದಿಗೆ ಸಮ್ಮಿಶ್ರಣಗೊಳಿಸದಿದ್ದರೆ ಕಲಿಕೆಯ

ಸಾಮಾಜಿಕ, ಭಾವನಾತ್ಮಕ ಮತ್ತು ಮನೋಗತ್ಯಾತ್ಮಕ ಆಯಾಮಗಳ ಬಗ್ಗೆ ಅಗತ್ಯಗಮನವಿಲ್ಲದೆ ಅದು ಕೇವಲ ಪರದೆ ಆಧಾರಿತ ಶಿಕ್ಷಣವಾಗಿ ಪರಿಣಮಿಸುತ್ತದೆ.

**24.4.** ಡಿಜಿಟಲ್ ತಾಂತ್ರಿಕತೆಗಳು ಪ್ರವರ್ಧಮಾನಕ್ಕೆ ಬರುತ್ತಿರುವ ಹಾಗೂ ಶಾಲಾ ಹಂತದಿಂದ ಹಿಡಿದು ಪ್ರೌಢಶಾಲಾ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಬೋಧನೆ–ಕಲಿಕೆಗಾಗಿ ತಾಂತ್ರಿಕತೆಯ ಬಳಕೆಯು ಪ್ರಮುಖವಾಗಿ ಹೊರಹೊಮ್ಮುತ್ತಿರುವುದರ ಹಿನ್ನೆಲೆಯಲ್ಲಿ ಈ ನೀತಿಯು ಕೆಳಗಿನ ಪ್ರಮುಖ ಉಪಕ್ರಮಗಳನ್ನು ಶಿಫಾರಸು ಮಾಡುತ್ತದೆ.

ಎ) **ಆನ್‌ಲೈನ್ ಶಿಕ್ಷಣಕ್ಕೆ ಪ್ರಾಯೋಗಿಕ ಅಧ್ಯಯನ :** ಪ್ರಾಯೋಗಿಕ ಅಧ್ಯಯನ ಸರಣಿ ನಡೆಸುವ ಸಲುವಾಗಿ NETF, CIET, NIOS, IGNOU, IITs, NITs, ದಂತಹ ಸೂಕ್ತ ಸಂಸ್ಥೆಗಳನ್ನು ಗುರುತಿಸಲಾಗುವುದು. ಶಿಕ್ಷಣ ಕ್ರಮವನ್ನು ಆನ್‌ಲೈನ್ ಶಿಕ್ಷಣದೊಂದಿಗೆ ಸಂಯೋಜಿಸುವುದರಿಂದ ಆಗುವ ಲಾಭಗಳು, ಅದರಲ್ಲಿರಬಹುದಾದ ಋಣಾತ್ಮಕ ಅಂಶಗಳನ್ನು ಮಿತಗೊಳಿಸಬಹುದಾದ ಸಾಧ್ಯತೆಗಳು ಹಾಗೂ ಸಂಬಂಧಿಸಿದ ಇತರ ಕ್ಷೇತ್ರಗಳನ್ನು ಕುರಿತು ಇವು ಅಧ್ಯಯನ ನಡೆಸಲಿವೆ. ವಿದ್ಯಾರ್ಥಿಯು ಅಂತರ್ಜಾಲ ಸಾಧನದ ವ್ಯಸನಕ್ಕೆ ತುತ್ತಾಗುವ ಸಾಧ್ಯತೆ, ಅತ್ಯಂತ ಹೆಚ್ಚು ಆದ್ಯತೆಯ ಇ–ಪಠ್ಯದ ಮಾದರಿಗಳು ಇತ್ಯಾದಿಗಳ ಕುರಿತಂತಹ ಅಧ್ಯಯನಗಳು ಇದರಲ್ಲಿ ಸೇರುತ್ತವೆ. ಈ ಪ್ರಾಯೋಗಿಕ ಅಧ್ಯಯನಗಳ ಫಲಿತಾಂಶಗಳನ್ನು ಸಾರ್ವಜನಿಕವಾಗಿ ಪ್ರಕಟಿಸಿ ನಿರಂತರ ಸುಧಾರಣೆಗೆ ಬಳಸಲಾಗುವುದು.

ಬಿ) **ಡಿಜಿಟಲ್ ಮೂಲಸೌಕರ್ಯ :** ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮುಕ್ತವಾದ, ಅಂತರನಿರ್ವಹಣೆ ಮಾಡಬಹುದಾದ, ವಿಕಸನಶೀಲವಾದ ಸಾರ್ವಜನಿಕ ಡಿಜಿಟಲ್ ಮೂಲಸೌಕರ್ಯ ಸೃಷ್ಟಿಗಾಗಿ ಬಂಡವಾಳ ಹೂಡುವ ಅಗತ್ಯವಿದೆ. ಇದು ವಿವಿಧ ವೇದಿಕೆಗಳು ಬಳಸಿಕೊಳ್ಳಲು ಸಾಧ್ಯವಾಗುವಂತೆ ಇರಬೇಕು. ಜೊತೆಗೆ ಭಾರತಕ್ಕೆ ಅಗತ್ಯವಿರುವ ಪ್ರಮಾಣ, ವೈವಿಧ್ಯತೆ, ಸಂಕೀರ್ಣತೆ ಮತ್ತು ಅಂತಹ ಸಾಧನಗಳನ್ನು ಎಲ್ಲೆಡೆಗೆ ತಲುಪಿಸಲು ಅವು ಪರಿಹಾರಗಳನ್ನು ಸೂಚಿಸುತ್ತವೆ. ತಂತ್ರಜ್ಞಾನ ಆಧಾರಿತ ಪರಿಹಾರಗಳು ತಾಂತ್ರಿಕತೆಯ ತ್ವರಿತ ಬದಲಾವಣೆಗಳೊಂದಿಗೆ ಅಪ್ರಸ್ತುತವಾಗುವುದಿಲ್ಲ ಎಂಬುದನ್ನು ಇದು ಖಾತ್ರಿಗೊಳಿಸುತ್ತದೆ.

ಸಿ) **ಆನ್‌ಲೈನ್ ಬೋಧನಾ ವೇದಿಕೆ (ಪ್ಲ್ಯಾಟ್ ಫಾರ್ಮ್) ಮತ್ತು ಸಾಧನಗಳು:** SWAYAM, DIKSHA ದಂತಹ ಅಸ್ತಿತ್ವದಲ್ಲಿರುವ ಸೂಕ್ತ ಇ–ಕಲಿಕಾ ವೇದಿಕೆಗಳನ್ನು ಕಲಿಕಾರ್ಥಿಗಳ ಪ್ರಗತಿಯ ಅವಲೋಕನಕ್ಕಾಗಿ ಕ್ರಮಬದ್ಧವಾದ, ಬಳಕೆದಾರ ಸ್ನೇಹಿಯಾದ ಸಹಾಯಕ ಸಾಧನಗಳನ್ನು ಲಭ್ಯವಾಗಿಸಲಾಗುವುದು. ಸೋಂಕು ಮಹಾಮಾರಿಯ ಈಗಿನ ಸಂದರ್ಭವು ಆನ್‌ಲೈನ್ ತರಗತಿಗಳನ್ನು ನಡೆಸಲು ದ್ವಿ ಮುಖಿ ವಿಡಿಯೊ, ದ್ವಿ ಮುಖಿ ಆಡಿಯೊ ಸಂಪರ್ಕಗಳು ನಿಜವಾಗಿಯೂ ಅಗತ್ಯ ಎಂಬುದನ್ನು ಮನಗಾಣಿಸಿದೆ.

ಡಿ) **ಪಠ್ಯ ಸಿದ್ಧಗೊಳಿಸುವುದು, ಡಿಜಿಟಲ್ ಭಂಡಾರ ಮತ್ತು ಪ್ರಸರಣ :** ಪಠ್ಯವಸ್ತು, ಕಲಿಕಾ ಆಟಗಳು & ಅಣಕು ಕ್ರಿಯೆಗಳು (ಲರ್ನಿಂಗ್ ಗೇಮ್ಸ್ & ಸಿಮ್ಯುಲೇಷನ್ಸ್), ಉತ್ಪ್ರೇಕ್ಷಿತ ವಾಸ್ತವ ಹಾಗೂ ಮಿಥ್ಯಾ ವಾಸ್ತವ (ಆಗ್ಮೆಂಟೆಡ್ ರಿಯಾಲಿಟಿ & ವರ್ಚುಯಲ್ ರಿಯಾಲಿಟಿ) ಸೇರಿದಂತೆ ಪಠ್ಯದ ಡಿಟಿಟಲ್ ಭಂಡಾರವನ್ನು ಅಭಿವೃದ್ಧಿಪಡಿಸಲಾಗುವುದು. ಇದರ ಪರಿಣಾಮಕಾರತ್ವ ಮತ್ತು ಗುಣಮಟ್ಟದ ಕುರಿತು ಸ್ಪಷ್ಟವಾದ ಸಾರ್ವಜನಿಕ ಮಾಪನ ವ್ಯವಸ್ಥೆಯನ್ನೂ ಇದು ಒಳಗೊಂಡಿರುತ್ತದೆ. ವಿನೋದ ಆಧಾರಿತ ಕಲಿಕೆಗಾಗಿ ವಿದ್ಯಾರ್ಥಿಗಳಿಗೆ ಸೂಕ್ತವಾದ ಆಪ್‌ಗಳು, ಭಾರತೀಯ ಕಲೆ ಹಾಗೂ ಸಂಸ್ಕೃತಿಯ ಅಂಶಗಳನ್ನು ಒಳಗೊಂಡ ಗೇಮ್ ಗಳನ್ನು ಸ್ಪಷ್ಟವಾದ ನಿರ್ವಹಣಾ ಸೂಚನೆಗಳೊಂದಿಗೆ ಬಹು ಭಾಷೆಗಳಲ್ಲಿ ರೂಪಿಸಲಾಗುವುದು. ಇ–ಪಠ್ಯವನ್ನು ವಿದ್ಯಾರ್ಥಿಗಳಿಗೆ ಪ್ರಚುರಪಡಿಸುವಂತಹ ವಿಶ್ವಾಸಾರ್ಹವಾದ ಒತ್ತಾಸೆಯ ವಿಧಿವಿಧಾನದ ವ್ಯವಸ್ಥೆ ಮಾಡಲಾಗುವುದು.

ಇ) **ಡಿಜಿಟಲ್ ಅಂತರಕ್ಕೆ ಪರಿಹಾರ:** ನಮ್ಮ ದೇಶದ ಗಣನೀಯ ಸಂಖ್ಯೆಯ ಜನರಿಗೆ ಈಗಲೂ ಡಿಜಿಟಲ್ ತಾಂತ್ರಿಕ ಬಳಕೆಯ ಅವಕಾಶಗಳು ಸೀಮಿತವಾಗಿವೆ ಎಂಬುದು ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಆದ್ದರಿಂದ ಈಗಿರುವ ದೂರದರ್ಶನ, ರೇಡಿಯೋ ಮತ್ತು ಸಮುದಾಯ ರೇಡಿಯೋದಂತಹ ಸಮೂಹ ಸಂವಹನವನ್ನು ಭಿತ್ತರ ಹಾಗೂ ಪ್ರಸಾರಕ್ಕಾಗಿ ವ್ಯಾಪಕವಾಗಿ ಬಳಸಿಕೊಳ್ಳಲಾಗುವುದು. ವಿದ್ಯಾರ್ಥಿ ವೃಂದದ ವಿಭಿನ್ನ ಅಗತ್ಯಗಳನ್ನು ಗಮನದಲ್ಲಿರಿಸಿಕೊಂಡು ಇಂತಹ ಶಿಕ್ಷಣ ಕಾರ್ಯಕ್ರಮಗಳನ್ನು 24/7 ಅವಧಿಯಾದ್ಯಂತ ಲಭ್ಯವಾಗಿಸಲಾಗುತ್ತದೆ. ಎಲ್ಲಾ ಭಾರತೀಯ ಭಾಷೆಗಳಲ್ಲಿ ಪಠ್ಯ ಸಿಗುವಂತೆ ಮಾಡಲು ವಿಶೇಷ ಗಮನ ಕೊಡಲಾಗುತ್ತದೆ; ಸಾಧ್ಯವಾದಷ್ಟು ಮಟ್ಟಿಗೆ ಡಿಜಿಟಲ್ ಪಠ್ಯವು ಬೋಧಕರು ಮತ್ತು ವಿದ್ಯಾರ್ಥಿಗಳನ್ನು ಅವರ ಬೋಧನಾ ಮಾಧ್ಯಮದಲ್ಲೇ ತಲುಪಿಸಲಾಗುತ್ತದೆ.

ಎಫ್) **ವರ್ಚ್ಯುಯಲ್ ಲ್ಯಾಬ್ ಗಳು:** ಅಸ್ತಿತ್ವದಲ್ಲಿರುವ DIKSHA, SWAYAM ಮತ್ತು SWAYAM PRABHA ದಂತಹ ಅಂತರ್ಜಾಲ ವೇದಿಕೆಗಳಿಗೆ ಸಂಬಂಧಿಸಿದಂತೆ ಪ್ರಯೋಗಾಲಯಗಳನ್ನು ಸಿದ್ಧಪಡಿಸಲಾಗುವುದು. ಗುಣಮಟ್ಟದಿಂದ ಕೂಡಿದ ಪ್ರಾಯೋಗಿಕ ಮತ್ತು ಪ್ರಯೋಗಾಲಯ ಆಧಾರಿತ ಕಲಿಕಾ ಅನುಭವಗಳನ್ನು ಖುದ್ದು ಎಲ್ಲಾ ವಿದ್ಯಾರ್ಥಿಗಳಿಗೂ ಸಮಾನವಾಗಿ ಲಭ್ಯವಾಗಿಸುವುದು ಇದರ ಉದ್ದೇಶವಾಗಿರುತ್ತದೆ. ಮುಂಚಿತವಾಗಿಯೇ ಪಠ್ಯವನ್ನು ಲೋಡ್ ಮಾಡಲಾಗಿರುವ ಟ್ಯಾಬ್ಲೆಟ್ ನಂತಹ ಸೂಕ್ತ ಡಿಜಿಟಲ್ ಸಾಧನಗಳ ಮೂಲಕ SEDG ಗೆ ಸೇರಿದ ವಿದ್ಯಾರ್ಥಿಗಳು ಹಾಗೂ ಬೋಧಕರಿಗೆ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗಿಸುವ ಸಾಧ್ಯತೆಗಳ ಬಗ್ಗೆ ಪರಿಗಣಿಸಿ ಅಭಿವೃದ್ಧಿಪಡಿಸಲಾಗುವುದು.

ಜಿ) **ಬೋಧಕರಿಗೆ ತರಬೇತಿ ಮತ್ತು ಪ್ರೋತ್ಸಾಹ ಕ್ರಮಗಳು:** ಶಿಕ್ಷಕರಿಗೆ ವಿದ್ಯಾರ್ಥಿ–ಕೇಂದ್ರಿತ ಬೋಧನಾ ಶಾಸ್ತ್ರದಲ್ಲಿ ಕಠಿಣ ತರಬೇತಿ ಕೊಡಲಾಗುತ್ತದೆ. ಆನ್ ಲೈನ್ ಬೋಧನೆ ವೇದಿಕೆಗಳು ಮತ್ತು ಸಾಧನಗಳನ್ನು ಬಳಸಿಕೊಂಡು ಹೇಗೆ ಉತ್ತಮ ಗುಣಮಟ್ಟದ ಆನ್ ಲೈನ್ ಪಠ್ಯವನ್ನು ಸೃಷ್ಟಿಸಬಹುದು ಎಂಬುದರ ಕುರಿತ ತರಬೇತಿಯನ್ನು ಇದು ಒಳಗೊಂಡಿರುತದೆ. ಇದರಲ್ಲಿ ಪಠ್ಯ ಹಾಗೂ ಪರಸ್ಪರರೊಂದಿಗೆ ವಿದ್ಯಾರ್ಥಿಯ ಸಕ್ರಿಯ ತೊಡಗಿಸಿಕೊಳ್ಳುವಿಕೆಗೆ ಅನುವು ಮಾಡಿಕೊಡುವಲ್ಲಿ ಬೋಧಕರ ಪಾತ್ರ ಕುರಿತು ಒತ್ತು ನೀಡಲಾಗುತ್ತದೆ.

ಎಚ್) **ಆನ್ ಲೈನ್ ಮಾಪನ ಮತ್ತು ಪರೀಕ್ಷೆಗಳು:** ಪ್ರಸ್ತಾವಿತ ರಾಷ್ಟ್ರೀಯ ಮಾಪನಾ ಕೇಂದ್ರ ಅಥವಾ PARAKH, ಶಾಲಾ ಮಂಡಳಿಗಳು, NTA ಹಾಗೂ ಇತರ ಗುರುತಿಸಲಾದ ಸಂಸ್ಥೆಗಳು ಮಾಪನ ರೂಪುರೇಷೆಗಳನ್ನು ವಿನ್ಯಾಸಗೊಳಿಸಿ ಅನುಷ್ಠಾನಗೊಳಿಸುತ್ತವೆ. ಸಾಮರ್ಥ್ಯಗಳು, ಪೋರ್ಟ್‌ಫೋಲಿಯೋ, ರುಬ್ರಿಕ್ಸ್ ಮುಂತಾದ ಪ್ರಮಾಣೀಕೃತ ಮಾಪನಗಳು ಮತ್ತು ಮಾಪನ ವಿಶ್ಲೇಷಣೆಯ ವಿನ್ಯಾಸಗಳನ್ನು ಇದು ಒಳಗೊಂಡಿರುತ್ತದೆ. ಶೈಕ್ಷಣಿಕ ತಂತ್ರಜ್ಞಾನಗಳನ್ನು ಬಳಸಿ 21ನೇ ಶತಮಾನದ ಕೌಶಲಗಳ ಬಗ್ಗೆ ಗಮನ ಕೇಂದ್ರೀಕರಿಸಿ ಮಾಪನದ ಹೊಸ ವಿಧಾನಗಳಿಗೆ ಚಾಲನೆ ನೀಡುವ ಕುರಿತು ಅಧ್ಯಯನಗಳನ್ನು ನಡೆಸಲಾಗುತ್ತದೆ.

ಐ) **ಕಲಿಕೆಯ ಸಮ್ಮಿಶ್ರ ಮಾದರಿಗಳು:** ಡಿಜಿಟಲ್ ಕಲಿಕೆ ಮತ್ತು ಶಿಕ್ಷಣವನ್ನು ಉತ್ತೇಜಿಸುವುದರ ಜೊತೆ ಜೊತೆಗೆ (ನೇರಾನೇರ) ಖುದ್ದು ಉಪಸ್ಥಿತಿ ಕಲಿಕೆಯ ಪ್ರಾಮುಖ್ಯವನ್ನೂ ಗುರುತಿಸಲಾಗುತ್ತದೆ. ಅದಕ್ಕೆ ಅನುಗುಣವಾಗಿ, ವಿವಿಧ ವಿಷಯಗಳಲ್ಲಿ ಪರಿಣಾಮಕಾರಿ ಸಮ್ಮಿಶ್ರ ಕಲಿಕೆಯ ಮಾದರಿಗಳನ್ನು ಗುರುತಿಸಲಾಗುವುದು.

ಜೆ) **ಪ್ರಮಾಣೀಕರಣಗಳನ್ನು ನಿಗದಿಗೊಳಿಸುವುದು :** ಆನ್‌ಲೈನ್/ ಡಿಜಿಟಲ್ ಶಿಕ್ಷಣದ ಬಗ್ಗೆ ಸಂಶೋಧನೆಗಳು ನಡೆಯುತ್ತಾ ಹೋದಂತೆ NETF ಮತ್ತು ಇತರ ಸೂಕ್ತ ಸಂಸ್ಥೆಗಳು ಆನ್‌ಲೈನ್/ ಡಿಜಿಟಲ್ ಬೋಧನೆ–ಕಲಿಕೆಗೆ ಪಠ್ಯ, ತಂತ್ರಜ್ಞಾನ ಮತ್ತು ಬೋಧನಾ ಶಾಸ್ತ್ರದ ಪ್ರಮಾಣೀಕರಣಗಳನ್ನು ನಿಗದಿ ಮಾಡಬಹುದು.

**24.5.** ಜಾಗತಿಕ ಗುಣಮಟ್ಟದ ಡಿಜಿಟಲ್ ಮೂಲಸೌಕರ್ಯ, ಪಠ್ಯ ಮತ್ತು ಸಾಮರ್ಥ್ಯ ನಿರ್ಮಾಣಕ್ಕೆ ನಿಯೋಜಿತ ಘಟಕ ಸ್ಥಾಪನೆ ಶಿಕ್ಷಣದಲ್ಲಿ ತಾಂತ್ರಿಕತೆಯು ಪ್ರಯಾಣವೇ ಹೊರತು ಅದೇ ತಲುಪಬೇಕಾದ ಗುರಿಯಲ್ಲ. ನೀತಿಯ ಧ್ಯೇಯಗಳನ್ನು ಅನುಷ್ಠಾನಗೊಳಿಸುವ ದಿಸೆಯಲ್ಲಿ ವಿವಿಧ ಆಸ್ಥೆದಾರರನ್ನು ಸಮನ್ವಯಗೊಳಿಸಲು ಸಾಮರ್ಥ್ಯ ಬೇಕಾಗುತ್ತದೆ. ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣ, ಇವೆರಡರ, ಇ–ಶಿಕ್ಷಣದ ಅಗತ್ಯಗಳ ಬಗ್ಗೆ ನಿಗಾ ವಹಿಸುವ ಸಲುವಾಗಿ ಡಿಜಿಟಲ್ ಮೂಲಸೌಕರ್ಯ, ಡಿಜಿಟಲ್ ಪಠ್ಯ ಮತ್ತು ಸಾಮರ್ಥ್ಯ ವೃದ್ಧಿಯನ್ನು ವ್ಯವಸ್ಥೆಗೊಳಿಸಲು ಸಚಿವಾಲಯದಲ್ಲಿ ನಿಯೋಜಿತ ಘಟಕವೊಂದನ್ನು ಸ್ಥಾಪಿಸಲಾಗುವುದು.ತಂತ್ರಜ್ಞಾನವು ಕ್ಷಿಪ್ರವಾಗಿ ಬೆಳವಣಿಗೆ ಹೊಂದುತ್ತಿದ್ದು, ಶ್ರೇಷ್ಠ ಗುಣಮಟ್ಟದ ಇ–ಕಲಿಕೆಯನ್ನು ಒದಗಿಸಬೇಕಿರುವುದರಿಂದ ಸತ್ವಯುತವಾದ ವಾತಾವರಣವನ್ನು ಉತ್ತೇಜಿಸಬೇಕಾಗಿದೆ. ಇದು ಭಾರತದ ಮುಂದಿರುವ ಗಾತ್ರ, ವೈವಿಧ್ಯತೆ, ಸಮಾನ ಅವಕಾಶಗಳ ಸವಾಲುಗಳನ್ನು ಪರಿಹರಿಸುವ ಜೊತೆಗೆ ತಾಂತ್ರಿಕತೆಯ ತ್ವರಿತ ಬೆಳವಣಿಗೆಗಳೊಟ್ಟಿಗೆ ವಿಕಸನವಾಗಬೇಕಿದೆ. ಈ ಕೇಂದ್ರವು ಆಡಳಿತ, ಶಿಕ್ಷಣ, ಶೈಕ್ಷಣಿಕ ತಂತ್ರಜ್ಞಾನ, ಡಿಜಿಟಲ್ ಬೋಧನಾ ಶಾಸ್ತ್ರ ಹಾಗೂ ಮಾಪನ, ಇ–ಆಡಳಿತ ಇತ್ಯಾದಿ ವಲಯಗಳ ತಜ್ಞರನ್ನು ಒಳಗೊಂಡಿರುತ್ತದೆ.

# ಭಾಗ – 4 : ಕಾರ್ಯಗತಗೊಳಿಸುವುದು

## 25. ಕೇಂದ್ರೀಯ ಶೈಕ್ಷಣಿಕ ಸಲಹಾ ಮಂಡಳಿಯ ಬಲವರ್ಧನೆ:

**25.1.** ಈ ನೀತಿಯು ಯಶಸ್ವಿಯಾಗಿ ಅನುಷ್ಠಾನವನ್ನು ಸಾಧಿಸಲು ಒಂದು ದೀರ್ಘಕಾಲದ–ದೃಷ್ಟಿಕೋನ ನಿರಂತರವಾಗಿ ಪರಿಣತರ ಲಭ್ಯತೆ ಮತ್ತು ಸಂಬಂಧಿ ರಾಷ್ಟ್ರೀಯ, ರಾಜ್ಯದ, ಸಾಂಸ್ಥಿಕ ಮತ್ತು ವೈಯಕ್ತಿಕ ಹಂತದವರೆಗೂ ಎಲ್ಲರ ಸಂಯೋಜಿತ ಪ್ರಯತ್ನ–ಇವುಗಳನ್ನು ಬಯಸುತ್ತದೆ. ಈ ಸಂದರ್ಭದಲ್ಲಿ, ಈ ನೀತಿಯು "ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿ [CABE]"ಯನ್ನು ಸದೃಢಗೊಳಿಸುವ ಮತ್ತು ಸಶಕ್ತಗೊಳಿಸುವ ಸಲುವಾಗಿ ಕೆಲವು ಶಿಫಾರಸ್ಸುಗಳನ್ನು ರೂಪಿಸುತ್ತಿದೆ. ಈ ಮಂಡಳಿ ಹೆಚ್ಚಿನ ಶಕ್ತಿ ಹೊಂದಿದ್ದು ಕೇವಲ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಪ್ರಗತಿಗಾಗಿ ವಿಸ್ತೃತವಾದ ಸಮಾಲೋಚನೆಯನ್ನು ಒದಗಿಸುವ ಮತ್ತು ಪರೀಕ್ಷಾ ಸಂಬಂಧೀ ವಿಷಯಗಳ ಕುರಿತಾಗಿ ಮಾತ್ರವೇ ಇರುವ ವೇದಿಕೆಯಾಗಿರುವುದಿಲ್ಲ. ಈ ರೀತಿಯಲ್ಲಿ ಪುನರ್ವಿನ್ಯಾಸಗೊಳಿಸಿರುವ ಮತ್ತು ಪುನರುಜ್ಜೀವಗೊಳಿಸಿರುವ ನವಜೀವನವನ್ನು ರೂಪಿಸಿಕೊಂಡಿರುವ, ಈ "ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿ( CABE)ಯು, ಶಿಕ್ಷಣದ ಪ್ರಗತಿಗೆ, ಸೃಷ್ಟಿ–ನಿರೂಪಣೆಗಳಿಗೆ, ಪರಿಷ್ಕರಣಗಳಿಗೆ ಹಾಗೂ ನಿರಂತರವಾಗಿ ಶಿಕ್ಷಣದ ದೃಷ್ಟಿಕೋನವನ್ನು ವಿಮರ್ಶಿಸುವ ಜವಾಬ್ದಾರಿ ನಿಭಾಯಿಸುತ್ತದೆ. ಇದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ(MHRD) ಮತ್ತು ಸಂಬಂಧಿತ ಶಿಕ್ಷಣ ಸಂಸ್ಥೆಗಳೊಂದಿಗೆ ಸಹಯೋಗವನ್ನು ಹೊಂದಿರುತ್ತದೆ. ತನ್ನ ಗುರಿಯನ್ನು ಸಾಧಿಸಲು ಸಾಂಸ್ಥಿಕ ರೂಪು–ರೇಷೆಗಳನ್ನು ರೂಪಿಸುವ ಮತ್ತು ನಿರಂತರವಾಗಿ ಪರಿಶೀಲನಗೊಳಿಸುವ ಕೆಲಸವನ್ನು ಮಾಡುತ್ತದೆ.

**25.2.** ಶಿಕ್ಷಣ ಮತ್ತು ಕಲಿಕೆಯಲ್ಲಿ ಗಮನವನ್ನು ಕೇಂದ್ರೀಕರಿಸುವಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವನ್ನು ಶಿಕ್ಷಣ ಸಚಿವಾಲಯ (MoE) ಎಂಬ ಹೆಸರಿನೊಂದಿಗೆ ಪುನರ್ ವಿನ್ಯಾಸಗೊಳಿಸುವುದು.

## 26. ಹಣಕಾಸು ನಿರ್ವಹಣೆ: ಎಲ್ಲರಿಗೂ ಲಭ್ಯವಾಗುವಂತಹ ಗುಣಮಟ್ಟದ ಶಿಕ್ಷಣ

26.1. ಈ ನೀತಿಯು ಶೈಕ್ಷಣಿಕ ಹೂಡಿಕೆಗಳನ್ನು ಗಣನೀಯವಾಗಿಯೇ ಹೆಚ್ಚಿಸುವುದಕ್ಕೆ ಪ್ರತಿಬದ್ಧತೆಯನ್ನು ಹೊಂದಿದೆ. ಏಕೆಂದರೆ ಪ್ರಸ್ತುತ ಸಮಾಜದಲ್ಲಿ ಯುವ ಸಮುದಾಯಕ್ಕೆ ಭವಿಷ್ಯದ ಸಲುವಾಗಿ ಶ್ರೇಷ್ಠ–ಗುಣಾತ್ಮಕ ಶಿಕ್ಷಣವನ್ನು ಒದಗಿಸುವುದಕ್ಕೆಂದು ಬೇರೆ ಯಾವುದೇ ಹೂಡಿಕೆಗಳು ಇರುವುದಿಲ್ಲ. ದುರ್ದೈವವಶಾತ್, ಭಾರತದಲ್ಲಿ ಶಿಕ್ಷಣದ ಸಲುವಾಗಿ ಸಾರ್ವಜನಿಕ ವೆಚ್ಚವು, ಘೋಷಿಸಲಾಗಿರುವ ಒಟ್ಟು ದೇಶೀಯ ಉತ್ಪನ್ನದ 6% ರ ಸಮೀಪಕ್ಕೂ ತಲುಪಿಲ್ಲ. ಇದು 1968 ರ ನೀತಿಯಲ್ಲಿಯೇ ಅಳವಡಿಸಲ್ಪಟ್ಟಿತ್ತು. ಅದನ್ನೆ ಮತ್ತೆ 1986 ರಲ್ಲಿ ಪುನರುಚ್ಚರಿಸಲಾಗಿತ್ತು. ಮತ್ತೊಮ್ಮೆ 1992ರ ಪುನರ್–ಪರಿಶೀಲನೆಯಲ್ಲಿ ಮತ್ತೂ ಅದನ್ನೇ ಸ್ಪಷ್ಟೀಕರಿಸಲಾಗಿತ್ತು. ಪ್ರಚಲಿತದ ಅವಧಿಯಲ್ಲಿ (ಕೇಂದ್ರದ ಹಾಗೂ ರಾಜ್ಯದ) ಶೈಕ್ಷಣಿಕ ವೆಚ್ಚವು ಸರಿಸುಮಾರು ಒಟ್ಟು ದೇಶೀಯ ಉತ್ಪನ್ನದ 4.43% ಇದೆ. (2017–18 ರ ಅಂದಾಜಿಸಲಾಗಿರುವ ವೆಚ್ಚ) ಮತ್ತು ಒಟ್ಟು ಸರ್ಕಾರಿ ಖರ್ಚಿನಲ್ಲಿ ಶೇಕಡಾ 10 ರಷ್ಟು ಮಾತ್ರ ಶಿಕ್ಷಣಕ್ಕೆ ವೆಚ್ಚ ಮಾಡಲಾಗಿದೆ. (ಆರ್ಥಿಕ ಸಮೀಕ್ಷೆ 2017–18). ಬಹುತೇಕ ಅಭಿವೃದ್ಧಿ ಹೊಂದಿದ ಅಭಿವೃದ್ಧಿಶೀಲ ದೇಶಗಳಿಗೆ ಹೋಲಿಸಿದರೆ ಇದು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಇದೆ.

**26.2.** ದೇಶದ ಆರ್ಥಿಕ ಪ್ರಗತಿ ಮತ್ತಿನ್ನಿತರ ಹಲವಾರು ಆಯಾಮಗಳಿಗೆ ಉಪಯುಕ್ತವಾಗುವ ಉತ್ಕೃಷ್ಟ ಶಿಕ್ಷಣವನ್ನು ಸಾಧಿಸುವ ಗುರಿಯನ್ನು ತಲುಪುವುದು ಅತಿ ಅವಶ್ಯ. ಇದಕ್ಕಾಗಿ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ಒಟ್ಟು ಆದಾಯದ ಶೇಕಡಾ 6 ರಷ್ಟನ್ನು ಶಿಕ್ಷಣದ ವಿಭಾಗಕ್ಕೆ ಮೀಸಲಾಗಿರಿಸುವುದನ್ನು ಆದಷ್ಟು ಬೇಗ ಸಾಧಿಸಬೇಕಾಗಿದೆ. ಭಾರತದ ಭವಿಷ್ಯದ ಆರ್ಥಿಕ ವ್ಯವಸ್ಥೆಗೆ, ಸಾಮಾಜಿಕ, ಸಾಂಸ್ಕೃತಿಕ, ಬೌದ್ಧಿಕ ಮತ್ತು ತಂತ್ರಜನ್ಯ ವಿಷಯಗಳ ಅಭಿವೃದ್ಧಿ ಮತ್ತು ಪ್ರಗತಿಗೆ ಒಂದು ಉಚ್ಛ–ಗುಣಾತ್ಮಕ ಮತ್ತು ನ್ಯಾಯಸಂಗತವಾಗಿರುವ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯು ಅತ್ಯಂತ ನಿರ್ಣಾಯಕವಾಗಿದೆ.

**26.3.** ವಿಶೇಷವಾಗಿ ಶಿಕ್ಷಣ ರಂಗದ ಹಲವು ಅಂಶಗಳಿಗೆ ಮತ್ತು ಘಟಕಗಳಿಗೆ ಧನಸಹಾಯವನ್ನು ಒದಗಿಸಲಾಗುವುದು. ವಿಶೇಷವಾಗಿ ಶಿಕ್ಷಣ ಎಲ್ಲರಿಗೂ ಮುಕ್ತವಾಗಿ ಲಭ್ಯವಾಗುವುದನ್ನು ಖಚಿತಪಡಿಸುವ, ಕಲಿಕಾ ಸಾಮಗ್ರಿಗಳ ಪೂರೈಕೆ, ಪೌಷ್ಠಿಕಾಂಶಗಳ ಪೂರೈಕೆ, ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಉತ್ತಮ ಯೋಗ–ಕ್ಷೇಮ, ಸ್ವಾಸ್ಥ್ಯ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರು ಮತ್ತು ಸಿಬ್ಬಂದಿ, ಶಿಕ್ಷಕರ ಪ್ರಗತಿ ಹಾಗೂ ಆರ್ಥಿಕವಾಗಿ–ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಮತ್ತು ಕಡೆಗಣಿಸಲ್ಪಟ್ಟವರಿಗೂ ಸಹಿತ ನ್ಯಾಯಸಂಗತ ಹಾಗೂ ಶ್ರೇಷ್ಠ–ಗುಣಮಟ್ಟದ ಶಿಕ್ಷಣವು ದೊರೆಯುವಂತೆ ಮಾಡುವ ಎಲ್ಲ ಪ್ರಮುಖ ಉಪಕ್ರಮಗಳಿಗೆ ಧನಸಹಾಯವನ್ನು ಒದಗಿಸಲಾಗುವುದು.

**26.4.** ಈ ರೀತಿಯಾಗಿ ಪ್ರಾರಂಭಿಕವಾಗಿ ಏಕಕಾಲಕ್ಕೆ ಮಾಡಲ್ಪಡುವ ವೆಚ್ಚಗಳ ಹೂಡಿಕೆಗಳಿಗೆ, ಜೊತೆಯಾಗಿ ಅದರಲ್ಲೂ ಪ್ರಮುಖವಾಗಿ ಮೂಲಭೂತ ಸೌಲಭ್ಯಗಳ ಹಾಗೂ ಸಂಪನ್ಮೂಲಗಳ ವಿಷಯದಲ್ಲಿ, ಒಂದು ಶೈಕ್ಷಣಿಕ ಸಂಸ್ಕೃತಿಯನ್ನು ರಚಿಸುವಲ್ಲಿ, ಅದರಲ್ಲೂ ದೀರ್ಘಕಾಲದವರೆಗೂ ಹಣಕಾಸಿನ ಅಗತ್ಯತೆಯನ್ನು ಹೊಂದಿರುವ ವಿಷಯದಲ್ಲಿ– ಈ ಕೆಳಕಂಡ ಪ್ರಮುಖ ಅಂಶಗಳನ್ನು ಗುರುತಿಸಲಾಗಿದೆ.

ಅ) ಉತ್ತಮ ಗುಣಮಟ್ಟದ ಪೂರ್ವ ಬಾಲ್ಯಾವಸ್ಥೆಯ ಪೋಷಣೆ ಮತ್ತು ಶಿಕ್ಷಣದ ಸಾರ್ವತ್ರಿಕ ಲಭ್ಯತೆ.

ಆ) ಬುನಾದಿ ಅಕ್ಷರ ಜ್ಞಾನ ಮತ್ತು ಗಣಿತ ಕೌಶಲ್ಯಗಳನ್ನು ಸುನಿಶ್ಚಿತಗೊಳಿಸುವುದು;

ಇ) ಸೂಕ್ತವಾಗಿರುವ ಮತ್ತು ಸಮಪರ್ಕವಾಗಿರುವ ಸಾಧನ–ಸಂಪನ್ಮೂಲಗಳ ಲಭ್ಯತೆಯನ್ನು ಹೊಂದಿರುವ ಶಾಲಾ–ಸಂಕೀರ್ಣಗಳನ್ನು ಸಮುಚ್ಚಯಗಳನ್ನು ಒದಗಿಸುವುದು

ಈ) ಆಹಾರ ಮತ್ತು ಪೌಷ್ಠಿಕಾಂಶಗಳನ್ನು ಒದಗಿಸುವುದು (ಉಪಾಹಾರ ಮತ್ತು ಮಧ್ಯಾಹ್ನದ ಊಟ);

ಉ) ಶಿಕ್ಷಕ–ತರಬೇತಿ ಮತ್ತು ಶಿಕ್ಷಕರಲ್ಲಿ ನಿರಂತರ ವೃತ್ತಿಪರ ಪ್ರಗತಿಯನ್ನು ಸಾಧಿಸಲು ಹೂಡಿಕೆ.

ಊ) ಪುನರುಜ್ಜೀವನದ ಮೂಲಕ ಮಹಾವಿದ್ಯಾಲಯಗಳು ಹಾಗು ವಿಶ್ವವಿದ್ಯಾಲಯಗಳಲ್ಲಿ ಉತ್ಕೃಷ್ಟತೆಯ ಸಾಧನೆ.

ಋ) ಸಂಶೋಧನೆಯನ್ನು ಬೆಳೆಸುವುದು.

ಎ) ತಂತ್ರಜ್ಞಾನದ ವಿಫುಲ ಬಳಕೆ ಮತ್ತು ಆನ್‌ಲೈನ್ ಶಿಕ್ಷಣ.

**26.5.** ಭಾರತದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಅತ್ಯಂತ ಕಡಿಮೆ ಪ್ರಮಾಣದ ಧನಸಹಾಯ ಒದಗಿಸುತ್ತಿದ್ದುದ್ದಷ್ಟೇ ಅಲ್ಲದೇ ಅದನ್ನೂ ಸಹಿತ ಸೂಕ್ತ ಸಮಯದಲ್ಲಿ ಜಿಲ್ಲೆಯ/ಸಂಸ್ಥೆಯ ಹಂತದಲ್ಲಿ ವಿನಿಯೋಗಿಸಿಲ್ಲ. ಗುರಿಗಳನ್ನು ಸಾಧಿಸಲು ಇದು ಅಡೆತಡೆಯನ್ನು ಉಂಟು ಮಾಡಿದೆ. ಹೀಗಾಗಿ, ಈ ರೀತಿಯಾಗಿ ಲಭ್ಯವಾಗುತ್ತಿರುವ ಅವಕಾಶಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಲು ಹಾಗೂ ಕ್ಷಮತೆಯನ್ನು ಹೆಚ್ಚಿಸುವಂತೆ ಹಣಕಾಸಿನ ಆಡಳಿತ ಹಾಗು ನಿರ್ವಹಣೆಯು ಸುಸಂಗತವಾಗಿ ಸರಳವಾಗಿ ಹಾಗೂ ನಿಗದಿಗೊಳಿಸಲಾಗಿರುವ ಸೂಕ್ತ ಸಮಯಕ್ಕೆ ಮತ್ತು ಈ ಧನಸಹಾಯವು ನಿರಂತರವಾಗಿರುವಂತೆ ಜೊತೆಗೆ ಇದರ ಪ್ರಾಮಾಣಿಕ ಸದ್ಬಳಕೆಯ ಸಲುವಾಗಿ ಬದಲಾವಣೆಯ ಮೂಲಕ ಸೂಕ್ತ ನೀತಿಗಳನ್ನು ರೂಪಿಸಬೇಕಾಗಿದೆ. ಅದಕ್ಕಾಗಿ ಆಡಳಿತಾತ್ಮಕವಾಗಿರುವ ಪ್ರಕ್ರಿಯೆಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ, ಆ ಮೂಲಕ 'ಸಾಮಾನ್ಯ ಹಣಕಾಸಿನ ನಿಯಮ' (GFR ), ಸಾರ್ವಜನಿಕ ಹಣಕಾಸು ನಿರ್ವಹಣಾ ನೀತಿ(PFMS) ಉಪಬಂಧಗಳು ಮತ್ತು ಸರಿಯಾದ ಸಮಯಕ್ಕೆ ಹಣಕಾಸಿನ ಸಹಾಯವನ್ನು ಬಿಡುಗಡೆ ಮಾಡುವ ಸಲುವಾಗಿ ರೂಪಿತಗೊಂಡು ಪರಿಚಾಲನೆಯನ್ನು ಒದಗಿಸುವ ವ್ಯವಸ್ಥೆಗಳಾಗಿವೆ. ಸರಕಾರದಿಂದ ಲಭ್ಯವಾಗುವ ಸಂಪನ್ಮೂಲಗಳನ್ನು ದಕ್ಷತೆಯಿಂದ ಉಪಯೋಗಗೊಳಿಸುವಲ್ಲಿ ಹಾಗೂ ಇಂತಹ ಧನಸಹಾಯವು ಅಲ್ಲಲ್ಲಿ ಸ್ಥಗಿತಗೊಳ್ಳುವುದನ್ನು ಇವು ತಡೆಯುತ್ತವೆ. ರಾಜ್ಯಗಳು/ ಉಚ್ಚ ಶಿಕ್ಷಣ ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಆಧರಿಸಿ ಧನ–ಸಹಾಯವನ್ನು ಒದಗಿಸುವ ವ್ಯವಸ್ಥೆಯನ್ನು ಇಲ್ಲಿ ಪರಿಕಲ್ಪಿಸಲಾಗುತ್ತಿದೆ. ಅದೇ ರೀತಿಯಲ್ಲಿ ನಿರ್ದಿಷ್ಟಗೊಳಿಸಿರುವ ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (SEDG) ಸೂಕ್ತ ಹಂಚಿಕೆಯ ಸಲುವಾಗಿ ಹಾಗೂ ಆ ಹಣಕಾಸಿನ ಸೂಕ್ತ ವಿನಿಯೋಗಗಳನ್ನು ಖಚಿತಗೊಳಿಸುವುದಕ್ಕಾಗಿ ಒಂದು ಸಮರ್ಥ ಕಾರ್ಯವಿಧಾನವನ್ನು ನಿಶ್ಚಿತಗೊಳಿಸಲಾಗುವುದು. ನೂತನವಾಗಿ ಸೂಚಿಸಲ್ಪಟ್ಟಿರುವ ಈ ನಿಯಂತ್ರಣ ವ್ಯವಸ್ಥೆಯಡಿಯಲ್ಲಿ ಸ್ಪಷ್ಟವಾದ ಜವಾಬ್ದಾರಿ ಹಂಚಿಕೆ, ಹಾಗೆಯೇ ಪಾರದರ್ಶಕವಾಗಿರುವ ಸ್ವಯಂ–ಘೋಷಣೆ ಸಂಸ್ಥೆಗಳನ್ನು ಸಶಕ್ತಗೊಳಿಸುವ ಹಾಗೂ ಸ್ವಾಯತ್ತೆಗೊಳಿಸುವ ಮತ್ತು ಅಸಾಧಾರಣ ಪ್ರತಿಭಾಪೂರ್ಣ ಅರ್ಹತಾಪೂರ್ಣ ಪರಿಣತರನ್ನು ನೇತೃತ್ವದ ಹುದ್ದೆಯಲ್ಲಿ ಆಯ್ಕೆ ನಡೆಯುತ್ತದೆ. ಇದರಿಂದಾಗಿ ಎಲ್ಲ ಪ್ರಕ್ರಿಯೆಗಳನ್ನು ಸರಳವಾಗಿ, ಶೀಘ್ರವಾಗಿ ಮತ್ತು ಪಾರದರ್ಶಕವಾಗಿ ಹಣಕಾಸಿನ ಹರಿವು ಸಾಧ್ಯವಾಗುತ್ತದೆ.

**26.6.** ಶಿಕ್ಷಣ ಕ್ಷೇತ್ರದಲ್ಲಿ ಸಮಾಜಸೇವಾ ಸಂಸ್ಥೆಗಳ ಪಾತ್ರವನ್ನು ಹೆಚ್ಚಿಸಲು ಅವಕಾಶವನ್ನು ಒದಗಿಸಲಾಗಿದೆ. ಅದರಲ್ಲೂ ವಿಶೇಷವಾಗಿ ಸಾರ್ವಜನಿಕ ಹಣಕಾಸಿನ ಸಹಾಯ–ಸಹಕಾರದ ಜೊತೆಜೊತೆಗೇ ಯಾವುದೇ ಸಾರ್ವಜನಿಕ ಸಂಸ್ಥೆಯು ಖಾಸಗಿ ಲೋಕೋಪಕಾರಿ ಸಂಸ್ಥೆಗಳಿಂದ ನಿಧಿಗಳನ್ನು ಸಂಗ್ರಹಿಸುವ ಮೂಲಕ ಶೈಕ್ಷಣಿಕ ಅವಕಾಶಗಳನ್ನು ವಿಸ್ತರಿಸಿಕೊಳ್ಳಬಹುದು.

**26.7.** ಶಿಕ್ಷಣದ ವಾಣಿಜ್ಯೀಕರಣದ ವಿಷಯದ ಕುರಿತಾಗಿ ಈ ನೀತಿಯು ಅನೇಕ ಆಯಾಮಗಳಲ್ಲಿ ವ್ಯವಹರಿಸುತ್ತಿವೆ "ಹಗುರ ಆದರೆ ಬಿಗಿಯಾದ" ನಿಬಂಧನಾ ವ್ಯವಸ್ಥೆಯಿಂದಾಗಿ ಹಣಕಾಸು ವ್ಯವಹರಣೆಯ ವಿವರಗಳ ಸಾರ್ವಜನಿಕ ಸ್ವಯಂ–ಪ್ರಕಟಣೆ, ಅನುಷ್ಠಾನ ಕ್ರಮಗಳು ಕಲಿಯಲು ರೂಪಿಸಲ್ಪಟ್ಟಿರುವ ವರ್ಗಗಳು ಮತ್ತು ಕಾರ್ಯಕ್ರಮಗಳು, ಮತ್ತು ಒಟ್ಟು ಶೈಕ್ಷಣಿಕ ಫಲಿತಾಂಶಗಳು ಸಾರ್ವಜನಿಕ ಶಿಕ್ಷಣಕ್ಕಾಗಿ ಗಣನೀಯ ಪ್ರಮಾಣದಲ್ಲಿ ಹೂಡಿಕೆ ಎಲ್ಲ ಖಾಸಗಿ ಅಥವಾ ಸರಕಾರಿ ಸಂಸ್ಥೆಗಳಲ್ಲಿ ಸುಗಮ ಆಡಳಿತಕ್ಕಾಗಿ ವ್ಯವಸ್ಥೆ ಅದೇ ರೀತಿಯಲ್ಲಿ ಯಾವುದೇ ರೀತಿಯಲ್ಲಿಯೂ ಅರ್ಹ ಹಾಗು ಹಿಂದುಳಿದ ವರ್ಗಗಳಿಗೆ (ಪಂಗಡಗಳಿಗೆ) ಯಾವುದೇ ರೀತಿಯಲ್ಲಿಯೂ ಧಕ್ಕೆ ಒದಗದ ಹಾಗೆ ಅಧಿಕ ವೆಚ್ಚವನ್ನು ಮರಳಿ ಪಡೆದುಕೊಳ್ಳಲು ಅವಕಾಶಗಳನ್ನು ಇಲ್ಲಿ ಪಡೆದುಕೊಳ್ಳಬಹುದಾಗಿದೆ.

## 27. ಅನುಷ್ಠಾನಗೊಳಿಸುವುದು:

**27.1.** ಯಾವುದೇ ನೀತಿಯ ಪರಿಣಾಮಕಾರಿತ್ವ ಅದರ ಅನುಷ್ಠಾನವನ್ನು ಆಧರಿಸಿರುತ್ತದೆ. ಇಂತಹ ಅನುಷ್ಠಾನವು ಹಲವು ವಿಧದ ಕ್ರಮಗಳು ಹಾಗೂ ಉಪಕ್ರಮಗಳನ್ನು ಬಯಸುತ್ತದೆ. ಹಲವಾರು ಮಂಡಳಿಗಳು ಸಂಯೋಜಿತ ಮತ್ತು ವ್ಯವಸ್ಥಿತ ರೀತಿಯಲ್ಲಿ ಈ ಉಪಕ್ರಮಗಳು ನಡೆಸಬೇಕಾಗುತ್ತದೆ. ಹಲವು ಮಂಡಳಿಗಳು–ಅಂದರೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ(MHRD) ಹಾಗೂ ಶಿಕ್ಷಣದ ಕೇಂದ್ರ ಸಲಹಾ–ಮಂಡಳಿ (CABE), ಕೇಂದ್ರ ಹಾಗೂ ರಾಜ್ಯ ಸರಕಾರಗಳು, ಶಿಕ್ಷಣ ಸಂಬಂಧಿತ ಸಚಿವಾಲಗಳು, ರಾಜ್ಯಗಳ ಶಿಕ್ಷಣ ವಿಭಾಗಗಳು, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA), ಶಾಲಾ ಮತ್ತು ಉಚ್ಚ ಶಿಕ್ಷಣ ನಿಯಂತ್ರಕ ಮಂಡಳಿಗಳು(NCERT), ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ರಾಜ್ಯ ಮಂಡಳಿ ( SCERT), ಶಾಲಾ ಮತ್ತು ಉಚ್ಚ ಶಿಕ್ಷಣ ಸಂಸ್ಥೆಗಳು, ನಿಗದಿತವಾಗಿರುವ ಸಮಯ ಮಿತಿಯೊಳಗೆ ಮತ್ತು ಪುನರ್–ವಿಮರ್ಶೆಯ ಯೋಜನೆಯೊಂದಿಗೆ ಈ ನೀತಿಯನ್ನು ಸಂಪೂರ್ಣ ಮನಃಪೂರ್ವಕವಾಗಿ ಹಾಗೂ ಸದುದ್ದೇಶದಿಂದ ಸುಸಂಬದ್ಧತೆಯಿಂದ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತದೆ.

**27.2.** **ಈ ಅನುಷ್ಠಾನದ ಪ್ರಕ್ರಿಯೆಯು ಈ ಕೆಳಕಂಡ ತತ್ವಗಳನ್ನು ಅನುಸರಿಸುತ್ತದೆ;**

- ಮೊದಲನೆಯದಾಗಿ ಈ ನೀತಿಯ ಭಾವ ಮತ್ತು ಉದ್ದೇಶಗಳ ಅನುಷ್ಠಾನ ಅತ್ಯಂತ ನಿರ್ಣಾಯಕವಾಗಿದೆ.

- ಎರಡನೆಯದಾಗಿ, ಹಂತ ಹಂತವಾಗಿಯೇ ಈ ನೀತಿಯನ್ನು ಅನುಷ್ಠಾನಗೊಳಿಸುವ ಉಪಕ್ರಮಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಏಕೆಂದರೆ ಈ ನೀತಿಯ ಪ್ರತಿಯೊಂದು ವಿಷಯವೂ ಹಲವಾರು ಹಂತಗಳನ್ನು ಹೊಂದಿದೆ. ಅವುಗಳಲ್ಲಿ ಪ್ರತಿ ಹಂತದಲ್ಲೂ ಪೂರ್ವಭಾವಿ ಹಂತದ ಯಶಸ್ವಿ ಅನುಷ್ಠಾನ ಅನಿವಾರ್ಯವಾಗಿರುತ್ತದೆ.

- ಮೂರನೆಯದಾಗಿ, ಈ ನೀತಿಯ ವಿಷಯಗಳಿಗೆ ಸೂಕ್ತಾನುಕ್ರಮಣಿಕೆಯ ರೀತಿಯಲ್ಲಿ ಅವುಗಳಿಗೆ ಪ್ರಾಶಸ್ತ್ಯವನ್ನು ನಿಗದಿಗೊಳಿಸುವುದು ಮುಖ್ಯವಾಗಿದೆ. ಅದೂ ಅಲ್ಲದೇ ಅತ್ಯಂತ ತುರ್ತಾಗಿ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಪ್ರಪ್ರಥಮದಲ್ಲಿಯೇ ರೂಪಿಸಬೇಕಾಗುತ್ತದೆ. ಈ ಮೂಲಕ ಒಂದು ಭದ್ರ ಬುನಾದಿಯನ್ನು ಹಾಕಿಕೊಳ್ಳಬಹುದು.

- ನಾಲ್ಕನೆಯದಾಗಿ, ಸಮಗ್ರ ಅನುಷ್ಠಾನದಲ್ಲಿಯೇ ಈ ನೀತಿಯ ಯಶಸ್ಸು ಅಡಗಿದೆ. ಏಕೆಂದರೆ, ಈ ನೀತಿಯು ಪಾಕ್ಷಿಕವಾಗಲ್ಲದೇ ಒಂದಕ್ಕೊಂದು ಬೆಸೆದ ಅಂಶಗಳನ್ನು ಹೊಂದಿದೆ, ಸಮಗ್ರವಾಗಿದೆ ಆದ್ದರಿಂದ ಪಾಕ್ಷಿಕವಾಗಲ್ಲದೇ ಪೂರ್ಣ–ಪ್ರಮಾಣದ ಅನುಷ್ಠಾನದಿಂದ ಮಾತ್ರ ಉದ್ದೇಶಿತ ಉದ್ದೇಶಗಳನ್ನು ಸಿದ್ಧಿಸಿಕೊಳ್ಳಲು ಸಾಧ್ಯ.

- ಐದನೆಯದಾಗಿ, ಶಿಕ್ಷಣವು ಒಂದು ಸಮವರ್ತೀ ವಿಷಯವಾಗಿರುವುದರಿಂದ ಅದು ಕೇಂದ್ರ ಹಾಗು ರಾಜ್ಯಗಳ ಜಂಟಿ ಉಸ್ತುವಾರಿಯಲ್ಲಿ ಯೋಜನಾಬದ್ಧ ಸಹಯೋಗಿ ಅನುಷ್ಠಾನವನ್ನು ನಿರೀಕ್ಷಿಸುತ್ತದೆ.

- ಆರನೆಯದಾಗಿ, ಈ ನೀತಿಯನ್ನು ತೃಪ್ತಿದಾಯಕವಾಗಿ ಕ್ರಿಯಾನ್ವಯಗೊಳಿಸುವುದಕ್ಕಾಗಿ ರಾಜ್ಯ ಹಾಗು ಕೇಂದ್ರ ವ್ಯವಸ್ಥೆಗಳಿಂದ ಸಮಯೋಚಿತವಾಗಿರುವ ಮಾನವ ಮೂಲ ಸೌಕರ್ಯಗಳ ಹಾಗೂ ಹಣಕಾಸಿನ ಪೂರೈಕೆಗಳು ಅತ್ಯಂತ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ.

– ಅಂತಿಮವಾಗಿ, ಈ ಎಲ್ಲ ಉಪಕ್ರಮಗಳನ್ನು ಪರಿಣಾಮಕಾರಿಯಾಗಿ ಕ್ರಿಯಾನ್ವಯದ ಖಚಿತತೆಯನ್ನು ಒದಗಿಸುವುದರ ಸಲುವಾಗಿ ಈ ಹಲವು ಆಯಾಮದ ಸಮಾಂತರ ಅನುಷ್ಠಾನದ ಹಂತಗಳ ಮಧ್ಯದಲ್ಲಿ ಸಂಪರ್ಕಕ್ಕೆ ಹಾಗೂ ಈ ಸಂಪರ್ಕದ ಪುನರ್–ವೀಕ್ಷಣೆ ಮತ್ತು ಕಾಳಜಿಪೂರ್ವಕವಾದ ವಿಶ್ಲೇಷಣೆಗಳು ಇಲ್ಲಿ ಅವಶ್ಯವಾಗಿವೆ. ಶಿಶುವಿಹಾರ/ಬಾಲವಾಡಿ/ಅಂಗನವಾಡಿಗಳ ಮೂಲಕ ಪ್ರಾರಂಭದಲ್ಲಿ ಹೂಡಿಕೆ ಮಾಡುವುದರಿಂದ ಒಂದು ಭದ್ರ ಬುನಾದಿಯನ್ನು ಖಚಿತವಾಗಿ ರೂಪಿಸುವಲ್ಲಿ ಮತ್ತು ಸುಗಮ ಪ್ರಗತಿಯನ್ನು–ಸುಸಂಗತ ಪ್ರಗತಿಯನ್ನು– ಹಾಗೂ ತದನಂತರದಲ್ಲಿ ರೂಪಿಸುವ ಕ್ರಮಗಳಿಗೂ ಹಾದಿಯನ್ನು ಸುಗಮಗೊಳಿಸುತ್ತದೆ.

**27.3.** ಈ ನೀತಿಯ ಸುಸ್ಪಷ್ಟ ಹಾಗೂ ಹಂತ ಹಂತದ ವಿಧಾನಗಳಲ್ಲಿ, ನಿಗದಿತ ಗುರಿಗಳನ್ನು ಸಿದ್ಧಿಸಿಕೊಳ್ಳುವ ಸಲುವಾಗಿ, ಈ ಮೇಲ್ಕಂಡ ತತ್ವಗಳ ಅನ್ವಯವಾಗಿ ಈ ನೀತಿಯಲ್ಲಿ ಉಲ್ಲೇಖಿಸಲ್ಪಟ್ಟಿರುವ ಯೋಜನೆಗಳನ್ನು ವಿವರಣಾತ್ಮಕವಾಗಿಯೇ ಅನುಷ್ಠಾನಗೊಳಿಸುವ ಸಲುವಾಗಿ ಕೇಂದ್ರ ಹಾಗು ರಾಜ್ಯ ಸರಕಾರಗಳ ಹಂತಗಳಲ್ಲಿ ಎರಡೂ ಕಡೆಗೆ – ವಿಷಯವಾರು ಪರಿಣತರ ಅನುಷ್ಠಾನ ಸಮಿತಿಗಳನ್ನು ಸಂಬಂಧಪಟ್ಟ ಕೇಂದ್ರ ಹಾಗು ರಾಜ್ಯ ಸರಕಾರಗಳ ಸಚಿವಾಲಯಗಳ ಸಹಕಾರ ಮತ್ತು ಸಲಹೆಯೊಡನೆ, ಅನುಷ್ಠಾನವನ್ನು ರೂಪಿಸಲಾಗುವುದು. ಈ ನೀತಿಯ ಅನುಷ್ಠಾನದ ಪ್ರಗತಿಯ ಪರಿಶೀಲನೆಯನ್ನು ವಾರ್ಷಿಕವಾಗಿ, –ಒಂದು ಜಂಟೀ ನಿರೀಕ್ಷಣೆಯಿಂದ ವಾರ್ಷಿಕವಾಗಿ ಕೈಗೊಳ್ಳುವ ಮೂಲಕ–ಆಯಾ ವಿಭಾಗಕ್ಕೆ ನಿರ್ದಿಷ್ಟಪಡಿಸಲಾಗಿರುವ ಗುರಿಗಳ ಬಗೆಗೆ ಮತ್ತು ಅದರ ಕ್ರಮಗಳ ಬಗೆಗೆ ಸಮೀಕ್ಷೆಯನ್ನು ಅದಕ್ಕಾಗಿ MHRD ಯಿಂದ ಹಾಗೂ ರಾಜ್ಯಗಳಿಂದ ಸಂರಚಿತಗೊಂಡಿರುವ ಮಂಡಳಿಯಿಂದ ಕಾರ್ಯಗತಗೊಳಿಸಿ ಮತ್ತು ಈ ಪರಿಶೀಲನೆಯನ್ನು CABE ಜೊತೆ ಹಂಚಿಕೊಳ್ಳಲಾಗುವುದು.

2030–40ರ ದಶಕದಲ್ಲಿ ಈ ನೀತಿಯು ಸಂಪೂರ್ಣವಾಗಿಯೇ ಕಾರ್ಯಾನುಷ್ಠಾನಗೊಂಡಿರುತ್ತದೆ. ಇದರೊಂದಿಗೆ ಇನ್ನೊಂದು ಸಮಗ್ರ ನಿರೀಕ್ಷಣೆಯನ್ನು ಮಾಡಲಾಗುತ್ತದೆ.

* * * * * * *